ಅಭಿನಂದನ

ಚೆನ್ನವೀರ ಕಣವಿ



ಅಭಿನಂದನ

ಡಿ. ಕಮಲಾ ಪ್ರಸಾದರಿಗೆ
ಶುಭಾಶಂಸೆಗಳು.

೨೫-೧೦-೨೦೨೧

ಚೆನ್ನವೀರ ಕಣವಿ

ಸಂವಹನ

೧೨/೧ಎ, ಈವ್ನಿಂಗ್ ಬಜ಼ಾರ್ ಹಿಂಭಾಗ

ಶಿವರಾಂಪೇಟೆ, ಮೈಸೂರು – ೫೭೦ ೦೦೧

ABHINANDANA
(A collection of articles)

by
Channaveera Kanavi

Published by
Samvahana
No. 12/1A, Behind Evening Bazaar
Shivarampet, Mysore-1. Ph : 2476019

Pages : viii+236=244
ಪುಟಗಳು : viii +೨೩೬=೨೪೪

First Impression : 2021
ಪ್ರಥಮ ಮುದ್ರಣ : ೨೦೨೧

ಆಕಾರ : 1/8 ಡೆಮ್ಮಿ

Paper Used : 70 GSM Maplitho

Price : ₹ 200/-
ಬೆಲೆ : ಇನ್ನೂರು ರೂಪಾಯಿ

ಮುದ್ರಣ
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
೧೨/೧, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ
ಮೈಸೂರು-೫೭೦೦೦೧ ದೂರವಾಣಿ : ೨೪೭೬೦೧೯

ಮೊದಲ ಮಾತು

ಇವು ಹೆಚ್ಚಾಗಿ ಅಭಿನಂದನ ಗ್ರಂಥಗಳಿಗೆ ಬರೆದ ಲೇಖನಗಳಾಗಿದ್ದರಿಂದ ಈ ಕೃತಿಗೆ 'ಅಭಿನಂದನ' ಎಂದೇ ಹೆಸರಿಡಲಾಗಿದೆ.

ಇದರಲ್ಲಿ (೧) ಅಭಿನಂದನಗ್ರಂಥಗಳಿಗಾಗಿ ಬರೆದವು, (ಇವು 'ಶುಭ ಹಾರೈಕೆ'ಯನ್ನೂ ಒಳಗೊಂಡಿವೆ) (೨) ಮುನ್ನುಡಿ-ಬೆನ್ನುಡಿಗಳು (೩) ಕೃತಿಯ ಬಗ್ಗೆ ಅನಿಸಿಕೆ -ಅಭಿಪ್ರಾಯಗಳು (೪) ಸ್ವತಂತ್ರ ಲೇಖನಗಳು ಎಂಬ ಭಾಗಗಳಿವೆ. ದೊರೆತಷ್ಟು ಇಸ್ವಿಗಳನ್ನು ಲೇಖನದ ಕೊನೆಯಲ್ಲಿ ನಮೂದಿಸಲಾಗಿದೆ.

ಈ ಸಂಗ್ರಹದಲ್ಲಿ ಹೆಚ್ಚಿನ ಲೇಖನಗಳನ್ನು ಹುಡುಕಿಕೊಟ್ಟವರು ಆತ್ಮೀಯ ಸ್ನೇಹಿತರಾದ ಡಾ. ಜಿ.ಎಂ. ಹೆಗಡೆಯವರು. ಅವರಿಗೆ ತುಂಬ ಕೃತಜ್ಞತೆಗಳು.

'ಸಂವಹನ' ಪ್ರಕಾಶನದ ಶ್ರೀ ಡಿ.ಎನ್. ಲೋಕಪ್ಪ ಅವರ ಒತ್ತಾಯದ ಮೂಲಕ ಈ ಸಂಗ್ರಹ ಇಷ್ಟು ಬೇಗ ಬೆಳಕು ಕಾಣುವಂತಾಯಿತು. ಅವರ ಆಭಾರವನ್ನು ನಾನೆಂದೂ ಮರೆಯಲಾರೆ.

ಸುಂದರವಾಗಿ ಮುದ್ರಣ ಮಾಡಿದ ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಅವರಿಗೂ, ರಕ್ಷಾಪುಟ ವಿನ್ಯಾಸಗೈದ ಶ್ರೀ ಸಂದೇಶ್ ಅವರಿಗೂ ನನ್ನ ವಂದನೆಗಳು.

'ಚೆಂಬೆಳಕು' **ಚೆನ್ನವೀರ ಕಣವಿ**

ಕಲ್ಯಾಣನಗರ

ಧಾರವಾಡ -೫೮೦೦೦೭

ಪರಿವಿಡಿ

ಅಭಿನಂದನ

ಭಾಗ ೧

ಅಭಿನಂದನ ಗ್ರಂಥಕ್ಕೆ ಬರೆದ ಲೇಖನಗಳು

ಕನ್ನಡವನ್ನು ಜೀವಂತವಾಗಿ ಬದುಕಿದವರು

ನನ್ನ ಆತ್ಮೀಯ ಸ್ನೇಹಿತರಲ್ಲಿ ಒಬ್ಬರಾದ ಡಾ. ಹಾ.ಮಾ. ನಾಯಕರನ್ನು ಭೆಟ್ಟಿಯಾದಾಗ ನಾನು ಸಾಮಾನ್ಯವಾಗಿ 'ಮತ್ತೇನ್ ನಡೆಸೀರಿ?' ಎಂದು ಮಾತಿಗಾರಂಭಿಸುವುದುಂಟು. 'ಏಽಽನು ಇಲ್ಲಾಽ ಸ್ವಾಮಿ' ಎಂದು ಸ್ವಲ್ಪ ಸ್ವರವೆಳೆದು ತುಂಬು ಮೊಗದಲ್ಲಿ ದುಂಡಾದ ಮೆಲುನಗೆಯನ್ನು ಅವರು ಮೂಡಿಸುತ್ತಾರೆ. ಮಾಡಿದೆನೆಂಬುದು ಮನದಲ್ಲಿ ಹೊಳೆಯದಿದ್ದರೆ ಇಂಥ ಪ್ರಸನ್ನತೆಯೊಂದು ಲಭಿಸಬಹುದೆಂದು ತೋರುತ್ತದೆ.

ಹಾರೋಗದ್ದೆ ಮಾನಪ್ಪ ನಾಯಕರ ಹೆಸರು ಅದು ಹೇಗೊ ನಮ್ಮ ಹಳ್ಳಿಯ ಕಮ್ಮಾರ ಮಾನಪ್ಪನನ್ನು ನನ್ನ ಒಳಗಣ್ಣಿನೆದುರು ನಿಲ್ಲಿಸುತ್ತದೆ. ನಾನು ಚಿಕ್ಕವನಿದ್ದಾಗ ಅವನ ಕುಲುಮೆಯ ಕೆಲಸವನ್ನು ಬೆರಗಿಂದ ನೋಡುತ್ತಿದ್ದೆ. ನನ್ನ 'ಭಾವಜೀವಿ' ಕಾವ್ಯದಲ್ಲಿ ಅವನು ಕಾಣಿಸಿಕೊಂಡಿದ್ದಾನೆ:

ಕಮ್ಮಾರ ಮಾನಪ್ಪ ಕೆಂಗುಲಿಮೆ ತಿದಿಯೊತ್ತೆ
ಕಬ್ಬಿಣವು ಕೆಂಗೆಂಡದಂತಾಗಿರೆ-
ಅಡಿಗಲ್ಲ ಮೇಲಿರಿಸಿ ದೊಡ್ಡ ಸುತ್ತಿಗೆ ಪೆಟ್ಟು
ಹಾಕುತಿರೆ ಸುತ್ತೆಲ್ಲ ಕಿಡಿಸೂಸಿರೆ,
ಅಬ್ಬಬ್ಬ ಕಬ್ಬಿಣವ ಮೇಣದಂದದಿ ಮಿದ್ದೆ
ಆಜಾನುಬಾಹುಗಿಹುದಾವ ಚದುರು?

ಎಂದು ಅಚ್ಚರಿಗೊಳ್ಳುತ್ತಿದ್ದೆ. ನಾಯಕರ ಕಾರ್ಯೋತ್ಸಾಹ, ಕಾರ್ಯದಕ್ಷತೆ ಹಾಗೂ ಕಾರ್ಯಕ್ಷಮತೆಗಳನ್ನು ಕಂಡಾಗ ನಾನು ಅದೇ ಬಗೆಯ ಮುಗ್ಧತೆಗೆ ಒಳಗಾಗುವುದುಂಟು. ಅಕಾಡಮಿ ಅಥವಾ ಅಧ್ಯಯನ ಸಂಸ್ಥೆಗಳ ಕಾರ್ಯಕಲಾಪಗಳೇ ಇರಲಿ, ಅವರು ಕೈ ಹಾಕಿದ ಸಾಹಿತ್ಯಿಕ ಸಭೆ ಸಮಾರಂಭಗಳೇ ಇರಲಿ, ಅವರಿಗೆ ಪ್ರಿಯವಾದ ಗ್ರಂಥ ಪ್ರಕಟನೆಯೇ ಆಗಿರಲಿ ಅಲ್ಲೆಲ್ಲ ಒಂದು ಶಿಸ್ತು, ಸಮಯ ನಿಷ್ಠೆ, ಅಚ್ಚುಕಟ್ಟು ಒಡಮೂಡಿ ಅವರದೇ ಆದ ಸೌಜನ್ಯದಿಂದ ಮೆರುಗು ಪಡೆದುಕೊಂಡುಬಿಡುತ್ತವೆ. ನಾಲ್ಕು ಸಾಲಿನ ಪತ್ರವೇ ಇರಲಿ, ಇಲ್ಲವೆ ನಾಲ್ಕು ಮಾತು ಆಡುವದಿರಲಿ ಅವರ ಈ ಒಪ್ಪ ಓರಣಕ್ಕೆ ಎಂದೂ ವ್ಯತ್ಯವಾಗಿರುವುದನ್ನು ನಾನು ಕಂಡಿಲ್ಲ.

'ಕನ್ನಡವನ್ನು ಕಟ್ಟುವ ಕೆಲಸ'ದಲ್ಲಿ ಅವರು ಯಾರಿಗೂ ಹಿಂದಿಲ್ಲವಾದರೂ

ಸಮೂಹ ಸನ್ನಿಯಿಂದ ದೂರವಿರಲು ಬಯಸುತ್ತಾರೆ. ಯಾವುದೇ ಕ್ಷೇತ್ರದಲ್ಲಿ ಕನ್ನಡಕ್ಕೆ ಧಕ್ಕೆಯೊದಗುವ ಪ್ರಸಂಗ ಬಂದಾಗ ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸಿ ಆ ಬಗ್ಗೆ ಮುನ್ನೆಚ್ಚರಿಕೆ ನೀಡುವುದಕ್ಕೂ ಅವರು ಮರೆಯುವುದಿಲ್ಲ. ಅಭಿಮಾನವನ್ನು ಸ್ವಪ್ರಜ್ಞೆ, ಆತ್ಮವಿಶ್ವಾಸ ಹಾಗೂ ಆತ್ಮಗೌರವದ ಕುರುಹಾಗಿ ಕಂಡುಕೊಳ್ಳುವ ನಾಯಕರಂಥವರಿಗೆ ಕನ್ನಡವನ್ನು ಜೀವಂತವಾಗಿ ಬದುಕುವುದು ಸಾಧ್ಯವಾಗಬಹುದು.

ಪ್ರಬಂಧವಿರಲಿ, ವ್ಯಕ್ತಿಚಿತ್ರವಾಗಿರಲಿ, ಸಾರ್ವಜನಿಕ ಶಿಕ್ಷಣವನ್ನು ದೃಷ್ಟಿಯಲ್ಲಿಟ್ಟುಕೊಂಡರೂ ಸೃಜನಕ್ಕೆ ಸಮೀಪವಾದ ಅಂಕಣ ಬರಹವಿರಲಿ, ಕನ್ನಡದಲ್ಲಿ ತಮ್ಮದೇ ಆದ ಹೃದ್ಯಶೈಲಿಯನ್ನು ಸಾಧಿಸಿದ ಶ್ರೇಯಸ್ಸು ಅವರದಾಗಿದೆ.

ಅರುವತ್ತರ ಅರಳು-ಮರಳು, ವರಕವಿಯ ದೃಷ್ಟಿಯಲ್ಲಿ "ಮರಮರಳಿ ಅರಳಿ, ಸ್ಫುಟವಾಗಿ ಭಾವಶುದ್ಧಗೊಳ್ಳುವ" ಪ್ರಕ್ರಿಯೆಯಾಗಿದೆ. ನಾಯಕರ ವಿಷಯದಲ್ಲಿಯೂ ಅದು ನಿಜವಾಗಲಿ ಎಂದು ಹಾರೈಸುತ್ತೇನೆ. ಪುಸ್ತಕ ಪ್ರಪಂಚದ ಸುಖವನ್ನು ಕನ್ನಡ ಓದುಗರೊಡನೆ ಯಥೇಚ್ಛವಾಗಿ ಹಂಚಿಕೊಂಡಿರುವ ವ್ಯಕ್ತಿಗೆ ಪ್ರೀತಿಯ ಕಾಣಿಕೆಯಾಗಿ ಒಂದು ಪುಸ್ತಕವನ್ನು ಒಪ್ಪಿಸುತ್ತಿರುವುದು ಅದೆಷ್ಟು ಔಚಿತ್ಯಪೂರ್ಣ!

'ನಮ್ಮ ನಾಯಕರು'

೧೯೯೮

ಸುಮಧುರ ವ್ಯಕ್ತಿತ್ವಕ್ಕೆ ಶುಭ ಹಾರೈಕೆ

ಡಾ. ಆರ್. ಲಕ್ಷ್ಮೀನಾರಾಯಣ ಅವರ ಸಂಪರ್ಕ ನನಗೆ ಒದಗಿದ್ದು, ಅವರು ಧಾರಾವಾಡದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಕಛೇರಿಯಲ್ಲಿ 'ಜಂಟಿ ನಿರ್ದೇಶಕ'ರಾಗಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ. ಮೊದಲ ಭೆಟ್ಟಿಯಲ್ಲಿಯೇ ನನ್ನನ್ನು ಆಕರ್ಷಿಸಿದ್ದು ಅವರ ಮೃದು ವ್ಯಕ್ತಿತ್ವ ಹಾಗೂ ವಿನಯಭೂಷಿತವಾದ ವಿದ್ವತ್ತು. ಶೈಕ್ಷಣಿಕ ಸುಧಾರಣೆಯಲ್ಲಿ ಅವರಿಗಿದ್ದ ಆಸಕ್ತಿ, ಕನ್ನಡಪರ ಕಾಳಜಿ ಮತ್ತು ಕಾರ್ಯಶೀಲ ಪ್ರವೃತ್ತಿಯಿಂದಾಗಿ ಅವರು ಬಹುಬೇಗ ಧಾರವಾಡದ ಸಾಂಸ್ಕೃತಿಕ ವಾತಾವರಣದಲ್ಲಿ ಒಂದಾಗಿ ಬಿಟ್ಟರು; ನನಗೂ ಆತ್ಮೀಯರಾದರು.

ತಮ್ಮ ವ್ಯಾಪ್ತಿಯಲ್ಲಿದ್ದ ಏಳು ಜಿಲ್ಲೆಗಳ ಕಾಲೇಜುಗಳನ್ನು ಸಂದರ್ಶಿಸಿ ಅಲ್ಲಿಯ ಆಡಳಿತ, ಲಭ್ಯವಿರುವ ಸೌಕರ್ಯಗಳು, ಅಧ್ಯಾಪಕರ ಪರಿಚಯ, ಬೋಧನಾಕ್ರಮ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಪರಿಚಯ ಪಡೆದು ಉತ್ತಮ ಗುಣಮಟ್ಟದ ಬಗ್ಗೆ ಸಾಧ್ಯವಿದ್ದಷ್ಟು ಸಲಹೆ ಸೂಚನೆಗಳನ್ನು ನೀಡುತ್ತಿದ್ದರೆಂದು, ಕೆಲವು ಅಧ್ಯಾಪಕರು ನನಗೆ ಹೇಳಿದ್ದುಂಟು. ಲಕ್ಷ್ಮೀನಾರಾಯಣರವರು ಧಾರವಾಡಕ್ಕೆ ಆಗಮಿಸಿದ್ದು ಕರ್ನಾಟಕ ಸುವರ್ಣಮಹೋತ್ಸವದ ಸಂದರ್ಭವಾಗಿದ್ದರಿಂದ, ಎಲ್ಲಾ ಕಾಲೇಜುಗಳಲ್ಲಿ ನಾಡಿನ ಸಾಹಿತ್ಯ, ಕಲೆ, ಇತಿಹಾಸ, ಆರ್ಥಿಕ ಸ್ಥಿತಿ-ಗತಿ, ಏಕೀಕರಣಕ್ಕಾಗಿ ದುಡಿದ ಮಹನೀಯರು, ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು, ಕನ್ನಡ ಮತ್ತು ಜಾಗತೀಕರಣ ಇತ್ಯಾದಿ ಹಲವಾರು ವಿಷಯಗಳನ್ನು ಕುರಿತು ಉಪನ್ಯಾಸ, ಚರ್ಚೆ-ಸಂವಾದಗಳನ್ನು ಏರ್ಪಡಿಸಿ, ಅಧ್ಯಾಪಕ ವರ್ಗ ಹಾಗೂ ವಿದ್ಯಾರ್ಥಿ ಸಮುದಾಯದಲ್ಲಿ ಹೊಸಸಂಚಲನವನ್ನು ಉಂಟು ಮಾಡಿದರು. ಇಂಥ ಕೆಲವು ಕಾರ್ಯಕ್ಷಮತೆಯ ಪ್ರತ್ಯಕ್ಷ ದರ್ಶನ ಪಡೆದು ಸಂತೋಷಪಟ್ಟಿದ್ದೇನೆ. ಭಾಷಣ, ಭಾವಗೀತೆ, ಪ್ರಬಂಧ ರಚನೆಗೆ ಸಂಬಂಧಪಟ್ಟಂತೆ ಸ್ಪರ್ಧೆಗಳನ್ನೇರ್ಪಡಿಸಿ ವಿದ್ಯಾರ್ಥಿಗಳನ್ನು ಉತ್ಸವದಲ್ಲಿ ಪಾಲ್ಗೊಳ್ಳುವಂತೆ ಮಾಡಿದ್ದರಿಂದ ಒಂದು ಬಗೆಯ ಉತ್ಸಾಹದ ವಾತಾವರಣ ಆಯಾ ಕಾಲೇಜುಗಳಲ್ಲಿ ನಿರ್ಮಾಣವಾದದ್ದನ್ನು ನಾನು ಕಂಡಿದ್ದೇನೆ.

ಡಾ. ಲಕ್ಷ್ಮೀನಾರಾಯಣ ಅವರ ವ್ಯಕ್ತಿತ್ವದ ಒಂದು ಪ್ರಮುಖ ಮುಖ ಕನ್ನಡ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆ. ಮಾಸ್ತಿಯವರನ್ನು ಕುರಿತು ಅವರು ಬರೆದ ಚಿಕ್ಕ ಹಾಗೂ ಚೊಕ್ಕ ಪುಸ್ತಕ, ಅವರ ಸಮಗ್ರ ಪರಿಚಯವನ್ನೊದಗಿಸುವ ಒಂದು

ಒಳ್ಳೆಯ ಪ್ರಯತ್ನ. ಹಾಗೆಯೇ ಅನುವಾದದಲ್ಲಿಯೂ (ಕಥೆ, ಕವಿತೆ, ನಾಟಕ) ಆಸ್ಥೆವಹಿಸಿ ಕೈಪಳಗಿಸಿಕೊಂಡಿದ್ದಾರೆ. ಈ ದಿಸೆಯಲ್ಲಿ 'ಕನ್ನಡ ವಕ್ರೋಕ್ತಿಜೀವಿತ' ಅವರ ಹೆಸರನ್ನು ಚಿರಸ್ಮರಣೀಯಗೊಳಿಸಿದ ಕೃತಿಯಾಗಿದೆ. ಘನವಿದ್ವಾಂಸರಾದ ಡಾ. ಕೆ. ಕೃಷ್ಣಮೂರ್ತಿಯವರು ಸಂಸ್ಕೃತದ ಮಹತ್ವದ ಕಾವ್ಯಮೀಮಾಂಸೆ ಗ್ರಂಥಗಳನ್ನು ಇಡಿಯಾಗಿ ಅನುವಾದ ಮಾಡಿದ್ದುಂಟು. ಅವುಗಳಲ್ಲಿ ಹಲವಾರು ಮಹತ್ವದ ಕೃತಿಗಳನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಪ್ರಕಟಿಸುವ ಸದವಕಾಶವನ್ನು ನಿರ್ದೇಶಕನಾಗಿದ್ದ ನನಗೆ ಒದಗಿಸಿದ್ದನ್ನು ನಾನು ಮರೆಯುವಂತಿಲ್ಲ. 'ವಕ್ರೋಕ್ತಿ ಜೀವಿತ' ಮಾತ್ರ ಇಂಗ್ಲೀಷ್ ಆವೃತ್ತಿಯಲ್ಲಿಯೇ ಉಳಿದುಕೊಂಡಿತ್ತು. ಆರ್. ಲಕ್ಷ್ಮೀನಾರಾಯಣರು ಆ ಕೊರತೆಯನ್ನು ವಿದ್ವತ್‌ಪೂರ್ಣವಾದ ಪ್ರಸ್ತಾವನೆಯೊಂದಿಗೆ ಇನ್ನಿಲ್ಲದಂತೆ ತುಂಬಿಕೊಟ್ಟರು. "ದಿವಂಗತ ಡಾ. ಕೆ. ಕೃಷ್ಣಮೂರ್ತಿಯವರ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸುವುದರ ಜೊತೆಗೆ ಕನ್ನಡದ ಕಾವ್ಯ ಚಿಂತನೆಗೆ ಅತ್ಯಗತ್ಯವಾದ ಆಕರ ಗ್ರಂಥವೊಂದನ್ನು ಒದಗಿಸಿದ್ದಾರೆ" ಎಂದು ಆರ್. ಲಕ್ಷ್ಮೀನಾರಾಯಣ ಅವರ ಈ ವಿದ್ವತ್‌ಸಾಹಸವನ್ನು ಡಾ. ಜಿ.ಎಸ್. ಶಿವರುದ್ರಪ್ಪನವರು ಪ್ರಶಂಸಿಸಿದ್ದಾರೆ. ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಿಗೆ ಈ ಕೃತಿ ಭಾಜನವಾಗಿರುವುದು ಯಥೋಚಿತವಾಗಿದೆ. ಈ ಬಗ್ಗೆ ಧಾರಾವಾಡದಲ್ಲಿ ನಡೆದ ಅಭಿನಂದನಾ ಸಮಾರಂಭ ಹಾಗೂ ಬೀಳ್ಕೊಡುವ ಸಮಾರಂಭ - ಎರಡರಲ್ಲೂ ನಾನು ಪಾಲ್ಗೊಳ್ಳುವಂತಾದುದು ಒಂದು ವಿಶೇಷ ಅನುಭವವಾಗಿ ಡಾ. ಆರ್. ಲಕ್ಷ್ಮೀನಾರಾಯಣರ ಸಮಧುರ ವ್ಯಕ್ತಿತ್ವ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿದೆ.

ಶ್ರೀಯುತರು ತಮ್ಮ ಬದುಕಿನ ಅರವತ್ತು ವಸಂತಗಳನ್ನು ಪೂರೈಸುತ್ತಿರುವ ಸಂದರ್ಭದಲ್ಲಿ, ಅವರ ವಿದ್ಯಾರ್ಥಿ ಬಳಗ, ಸ್ನೇಹಿತರು ಹಾಗೂ ಸಹೋದ್ಯೋಗಿಗಳು ಅಭಿನಂದನಾ ಗ್ರಂಥದ ಮೂಲಕ 'ಗುರುಗೌರವ'ಸಲ್ಲಿಸುತ್ತಿರುವುದು ತುಂಬ ಸಂತೋಷದ ಸಂಗತಿ, ಅದಕ್ಕಾಗಿ ಅವರೆಲ್ಲರನ್ನೂ ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಆತ್ಮೀಯರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರಿಗೆ ಭಗವಂತನು ಆರೋಗ್ಯ ಭಾಗ್ಯದೊಂದಿಗೆ ನೆಮ್ಮದಿಯ ಜೀವನವನ್ನು ನೀಡಿ ಅವರಿಂದ ಇನ್ನೂ ಉತ್ತಮೋತ್ತಮ ಕೃತಿಗಳು ರಚನೆಗೊಂಡು ಕನ್ನಡಸಾಹಿತ್ಯದ ಸಂಪತ್ತನ್ನು ಹೆಚ್ಚಿಸುವಂತೆ ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

'ಸಂಪ್ರೀತಿ'- ಡಾ. ಆರ್. ಲಕ್ಷ್ಮೀನಾರಾಯಣ ಅಭಿನಂದನ ಗ್ರಂಥ ೨೦೧೧

ಜಾನಪದ ದೀಪಾರಾಧನೆ

ಜಾನಪದ ದೀಪಾರಾಧನೆ ಎಂಬ ಕಲ್ಪನೆಯೇ ಸಾಂಸ್ಕೃತಿಕವಾಗಿ ಭವ್ಯಮನೋಹರವಾದದ್ದು. ಈ ಆರಾಧನೆಯಲ್ಲಿ ನನ್ನ ಕೈಗೂ ಒಂದು ದೀಪ ಕೊಟ್ಟಿದ್ದೀರಿ. ಅದಕ್ಕಾಗಿ ಹೊನ್ನಾವರದ ಜಾನಪದ ಪ್ರಕಾಶನ ಹಾಗೂ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಅಧ್ಯಕ್ಷರಿಗೆ ನನ್ನ ಕೃತಜ್ಞತೆಗಳು.

ಶ್ರೀಮತಿ ಶಾಂತಿ ನಾಯಕರು ಮುಖ್ಯವಾಗಿ ಜಾನಪದಕ್ಕೆ ಸಂಬಂಧಪಟ್ಟಂತೆ ವೈವಿಧ್ಯಪೂರ್ಣ ಕೃತಿಗಳನ್ನು ಹೊರತಂದಿದ್ದಾರೆ. ದಂಪತಿಗಳಿಬ್ಬರೂ ಜಾನಪದದಲ್ಲಿ ವಿಶೇಷ ಆಸಕ್ತಿಯಿರುವುದರಿಂದ ಅದರ ಪ್ರಸಾರಕ್ಕಾಗಿ ೨೩ ವರ್ಷಗಳ ಹಿಂದೆಯೇ 'ಜಾನಪದ ಪ್ರಕಾಶನ' ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ ಈವರೆಗೆ ಸುಮಾರು ನಲ್ವತ್ತು ಗ್ರಂಥಗಳನ್ನು ಹೊರತಂದಿದ್ದಾರೆ. ಹೀಗೆ ತಮ್ಮ ಆಸಕ್ತಿಯನ್ನೇ ಒಂದು ಸಂಸ್ಥೆಯಾಗಿ ರೂಪುಗೊಳಿಸಿ, ಅದನ್ನೇ ತಮ್ಮ ಜೀವನಧ್ಯೇಯವನ್ನಾಗಿಸಿಕೊಂಡು ಕಾರ್ಯನಿರತರಾದ ಜನ ಈ ಭಾಗದಲ್ಲಿ ಕಡಿಮೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಗೇ ಕರ್ನಾಟಕದಲ್ಲಿ ಜಾನಪದವನ್ನು ಜೀವದಂತೆ ಹಚ್ಚಿಕೊಂಡವರು ಡಾ. ಎನ್. ಆರ್. ನಾಯಕ ಹಾಗೂ ಶಾಂತಿ ನಾಯಕ ದಂಪತಿಗಳು.

ಇವರು ಸಂಗ್ರಹಿಸಿದ ಜಾನಪದ ಸಾಮಗ್ರಿ - ಗೀತ, ಕಥೆ, ಗಾದೆ, ಒಗಟು, ನಂಬಿಕೆ, ಸಂಪ್ರದಾಯ, ರಂಗೋಲಿ, ಕಲೆ, ಕಸುಬು, ಅಡಿಗೆ, ವೈದ್ಯಕೀಯ, ಕ್ರೀಡೆ ಹೀಗೆ ಸುಮಾರು ಇಪ್ಪತ್ತು ಸಾವಿರ ಪುಟಗಳಾಗುವಷ್ಟಿದೆಯೆಂದರೆ ನಂಬಬೇಕು. ಯಾರಿಗೇತರಲಿ ಜೀವ, ಅವರವರಿಗದುವೆ ಹಬ್ಬ.

ಇವರ ಕಾರ್ಯ ಇಲ್ಲಿಗೇ ನಿಲ್ಲಲಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ಇನ್ನೊಂದು ಬಗೆಯ ಯೋಜನೆ ಕೈಕೊಂಡರು. ೧೯೮೩ ರಿಂದ ಜಾನಪದ ದೀಪಾರಾಧನೆಯೆನ್ನುವ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡು ನಾಡಿನ ಒಳಗೂ ಹೊರಗೂ ಇಪ್ಪತ್ಮೂರು ದೀಪಾರಾಧನೆಯ ಕಾರ್ಯಕ್ರಮಗಳನ್ನು ಸಂಘಟಿಸಿ, ಹಲವಾರು ಜಾನಪದ ವಿದ್ವಾಂಸರನ್ನು, ಕಲಾವಿದರನ್ನು ಸನ್ಮಾನಿಸಿ, ಗೌರವಿಸಿ, ಕಲಾಮೇಳಗಳನ್ನು ಸಂಘಟಿಸಿ ಜಾನಪದ ಸಾಹಿತ್ಯ, ಕಲೆ, ಸಂಸ್ಕೃತಿಯ ಪ್ರಸಾರ ಕಾರ್ಯ ನಡೆಸುತ್ತಿರುವುದು ನಿಜವಾಗಿಯೂ ವೈಯಕ್ತಿಕ ನೆಲೆಯಲ್ಲಿ ಒಂದು ಅದ್ಭುತವಾದ ಸಾಧನೆಯೆಂದೇ ಹೇಳಬೇಕು. ಇದು ಉತ್ತರ ಕನ್ನಡ ಜಿಲ್ಲೆಗೆ ಮಾತ್ರವಲ್ಲ, ಉತ್ತರ ಕರ್ನಾಟಕಕ್ಕೇ

ಹೆಮ್ಮೆಯ ಸಂಗತಿ. ಇಂದು ಇಲ್ಲಿ ನಡೆಯುತ್ತಿರುವುದು ಅಂಥ ಒಂದು ಮಾದರಿ ಕಾರ್ಯಕ್ರಮ.

ಪರಕೀಯ ಸಂಸ್ಕೃತಿಯ ದಾಳಿಯ ಬಿರುಗಾಳಿ ಬಲವಾಗಿ ಬೀಸುತ್ತಿದ್ದರೂ ಡಾ. ನಾಯಕರಂಥವರ ಪ್ರಯತ್ನದಿಂದ ಈ ದೀಪ ಆರದಂತೆ ಬೆಳಗುತ್ತ ಬಂದಿದೆ. ಇದು ಉಳಿಯಲಿಕ್ಕೆ ಮುಖ್ಯ ಕಾರಣ ಕೃಷಿ ಮೂಲವಾದ ಭಾರತೀಯ ಸಂಸ್ಕೃತಿ. ಪ್ರಣತಿ-ಹಣತೆ ಈ ನೆಲದ ಮಣ್ಣಿನಿಂದ ಮಾಡಿದ್ದು; ಬತ್ತಿ, ಈ ನೆಲದಲ್ಲಿ ಬೆಳೆದ ಹತ್ತಿ, ಎಣ್ಣೆ ಇಲ್ಲಿ ಬೆಳೆದ ಸೇಂಗಾ. ಇದನ್ನು ನಾವು ತಿದ್ದಬಹುದು, ತೀಡಬಹುದು, ಬೆಳೆಸಬಹುದು. ಅದು ನಮ್ಮ ರೀತಿ ನೀತಿಗಳನ್ನೇ ಅವಲಂಬಿಸಿದೆ. ಆದರೆ ಈ ಪ್ರಶಾಂತತೆ ವಿದ್ಯುದ್ದೀಪಕ್ಕಿಲ್ಲ. ವಿದ್ಯುಚ್ಛಕ್ತಿ ಕೈಕೊಟ್ಟರೆ ಬಲ್ಬಿಗೆ ಬೆಳಕೇ ಇಲ್ಲ. ವಿದ್ಯುದ್ದೀಪ ನಾಗರಿಕತೆಯ ಬೆಳವಣಿಗೆಯನ್ನು ಸೂಚಿಸಿದರೆ, ಹಣತೆ ಸಂಸ್ಕೃತಿಯ ನಾಗರಿಕತೆಯ ಬೆಳವಣಿಗೆಯನ್ನು ಸೂಚಿಸಿದರೆ, ಹಣತೆ ಸಂಸ್ಕೃತಿಯ ಕುರುಹಾಗಿದೆ. ಮನೆ ತುಂಬ ವಿದ್ಯುದ್ದೀಪಗಳಿದ್ದರೂ ದೇವರ ಕೋಣೆಯಲ್ಲಿ ಮಾತ್ರ ನಂದಾದೀಪ. ನಾಯಕ ದಂಪತಿಗಳಿಗೆ ಸಲ್ಲಿಸಿದ ಅಭಿನಂದನ ಗ್ರಂಥದ ಹೆಸರೇ 'ದೀಪಾರಾಧನೆ' ಇದು ಶ್ಲಾಘನೀಯವಾದದ್ದು.

ಜಾನಪದ ದೀಪಾರಾಧನೆಯಂಥ ಅರ್ಥಪೂರ್ಣವಾದ ಪರಿಕಲ್ಪನೆಯ ಮೂಲಕ ಹೊಸ ಬಗೆಯ ಕಾರ್ಯಕ್ರಮವನ್ನು ನಡೆಸಿಕೊಂಡು ಬಂದಿರುವ ಡಾ. ಎನ್. ಆರ್. ನಾಯಕ ದಂಪತಿಗಳನ್ನು ಮತ್ತೊಮ್ಮೆ ಹಾರ್ದಿಕವಾಗಿ ಅಭಿನಂದಿಸಿ, ಇದರ ಅಂಗವಾಗಿ ಸಂಯೋಜಿಸಿದ ವಿಚಾರ ಸಂಕಿರಣ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳೆಲ್ಲ ಯಶಸ್ವಿಯಾಗಿ ನೆರವೇರಲೆಂದು ಹಾರೈಸುತ್ತೇನೆ.

ಮರುದಿಬ್ಬಣ : ಡಾ. ಎನ್.ಆರ್. ನಾಯಕ
ಅಭಿನಂದನ ಗ್ರಂಥ ಸಂ. ಡಾ. ಜಿ.ಎಸ್. ಭಟ್ಟ
ಜಾನಪದ ಪ್ರಕಾಶನ ಹೊನ್ನಾವರ ಮೇ ೨೦೧೦

ಸಜ್ಜನ ರಾಜಕಾರಣಿ - ಸಾಧನೆಗಳ ಗಣಿ

'ಸಜ್ಜನರು ಅನುಸರಿಸುವ ಮಾರ್ಗವನ್ನ ಪೂರ್ತಿಯಾಗಿ ಅನುಸರಿಸಲು ಶಕ್ಯವಿಲ್ಲದವರು ತಮ್ಮ ಕೈಲಾದಷ್ಟಾದರು ಅನುಸರಿಸಬೇಕು. ಏಕೆಂದರೆ 'ಸರಿಯಾದ ದಾರಿಯಲ್ಲಿದ್ದವನು ವಿನಾಶವನ್ನು ಹೊಂದುವುದಿಲ್ಲ' ಎಂದು ಸುಭಾಷಿತ ಹೇಳುತ್ತದೆ. ದೇಶದ ಇಂದಿನ ಸಂದರ್ಭದಲ್ಲಿ ರಾಜಕೀಯ ಪಕ್ಷ ಅಥವಾ ವ್ಯಕ್ತಿಗಳನ್ನು ಬೆಂಬಲಿಸಲು ಅಥವಾ ಬಿಡಲು ಇದು ಉತ್ತಮ ಮಾರ್ಗದರ್ಶಕ ತತ್ವವಾಗಿದೆ ಎಂದು ಅನಿಸುತ್ತದೆ. ಪ್ರಾಮಾಣಿಕ ಮತ್ತು ಸಜ್ಜನ ವ್ಯಕ್ತಿಗಳಿಂದ ಕೂಡಿದ, ಜನರ ಹಿತವನ್ನೇ ಸಾಧಿಸುವ ಸಜ್ಜನ ರಾಜಕೀಯ ಪಕ್ಷವಂತು ಇಂದು ಎಲ್ಲಿಯೂ ಕಣ್ಣಿಗೆ ಬೀಳುತ್ತಿಲ್ಲ. ರಾಜಕೀಯದಲ್ಲಿ ಸಂಪೂರ್ಣ ಪ್ರಾಮಾಣಿಕ ನಡತೆಯ ವ್ಯಕ್ತಿಗಳು ಸಿಗುವುದಿಲ್ಲ. ಆದರೆ ಇದ್ದುದರಲ್ಲಿಯೇ ಪ್ರಾಮಾಣಿಕ ಹಾಗೂ ಗುಣವಂತ ವ್ಯಕ್ತಿಗಳನ್ನು ಗುರುತಿಸುವುದು ಕಷ್ಟವೇನೂ ಅಲ್ಲ. ಇಂದಿನ ರಾಜಕೀಯದಲ್ಲಿ ಹಾಗೆ ಚಾರಿತ್ರ್ಯವಂತರಾಗಿ, ಗುಣವಂತರಾಗಿ, ನಿರಂತರ ತಮ್ಮನ್ನು ಜನಸೇವೆಯಲ್ಲಿ ತೊಡಗಿಸಿಕೊಂಡ ವ್ಯಕ್ತಿಗಳಲ್ಲಿ ಶ್ರೀ ವೀರಣ್ಣ ಮತ್ತಿಕಟ್ಟಿಯವರೂ ಒಬ್ಬರು.

ಬಿ.ಎಸ್.ಸಿ. ಎಲ್.ಎಲ್.ಬಿ ಪದವೀಧರಾದ ಮತ್ತಿಕಟ್ಟಿಯವರು ಧಾರವಾಡ-ಹುಬ್ಬಳ್ಳಿಯ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ವಾತಾವರಣದಲ್ಲಿ ಉಸಿರಾಡಿದವರು. ವಿದ್ಯಾರ್ಥಿ ಮುಖಂಡರಾಗಿ ಬೆಳೆದು, ಸಾಕಷ್ಟು ಏಳು-ಬೀಳುಗಳನ್ನು ದಾಟಿ, ಕೃಷಿಕ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು, ಕಾಂಗ್ರೆಸ್ ಪಕ್ಷದ ಮೂಲಕ ರಾಜಕೀಯವನ್ನು ಪ್ರವೇಶಿಸಿ ಇಂದಿಗೂ ಅದಕ್ಕೆ ನಿಷ್ಠರಾಗಿ ಉಳಿದದ್ದನ್ನು ನೋಡಿದರೆ, ರಾಜಕಾರಣದಲ್ಲಿ ಗಾಂಧೀಜಿಯವರೇ ಅವರಿಗೆ ಆದರ್ಶವೆಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ಲೋಹಿಯಾ ತತ್ವವನ್ನೂ ಅವರು ಅರ್ಥಮಾಡಿಕೊಂಡಿದ್ದರಿಂದ ಪಕ್ಷಾಂತರದಿಂದ ಒದಗುವ ಆಶೆ ಆಮಿಷಗಳಿಗೆ ಬಲಿಯಾಗದೆ ಗ್ರಾಮೀಣ ಅಭ್ಯುದಯದಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡುದನ್ನು ಕಾಣುತ್ತೇವೆ. ಯುವಶಕ್ತಿಯ ಸಂಕೇತವಾಗಿ ಧಾರವಾಡ ಜಿಲ್ಲಾ ಯುವಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಕರ್ನಾಟಕ ವಿಧಾನಸಭಾ ಸದಸ್ಯರಾಗಿ ರೈತಪರ ಹೋರಾಟವನ್ನು ಮುಂದುವರಿಸುತ್ತಲೇ ಬಹಳ ಕಾಲ ಕರ್ನಾಟಕ ಪ್ರದೇಶ ಕಿಸಾನ್ ಕಾಂಗ್ರೆಸ್ ಅಧ್ಯಕ್ಷರಾಗಿ ರೈತಪರ ಸುಧಾರಣೆಗಳನ್ನು ಕಾರ್ಯರೂಪದಲ್ಲಿ ತರುವಲ್ಲಿ ಪ್ರಮುಖ ಪಾತ್ರವಹಿಸಲು ಅವರಿಗೆ ಸಾಧ್ಯವಾಯಿತು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವ ಹೊಣೆಗೆ ರಾಷ್ಟ್ರನಾಯಕರು ಅವರ ಕಾರ್ಯದಕ್ಷತೆಯಲ್ಲಿ

ಇಟ್ಟ ಭರವಸೆಯೇ ಕಾರಣವೆಂದರೆ ತಪ್ಪಾಗದು. ಅವರ ಸಾಧನೆಗಳೇ ಅವರ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಸಾರಿ ಹೇಳುತ್ತವೆ.

ತಮ್ಮ ಸಾರ್ವಜನಿಕ ಜೀವನದಲ್ಲಿ ಇದುವರೆಗೆ ಅನೇಕ ಸಂಘ ಸಂಸ್ಥೆಗಳಲ್ಲಿ ಸೇವೆಗೈದ, ಅಧಿಕಾರ ಸೂತ್ರಗಳನ್ನು ಹಿಡಿದು ನಿಸ್ವಾರ್ಥತೆಯಿಂದ ಜನೋಪಕಾರಿ ಕಾರ್ಯಗಳನ್ನು ಮಾಡಿದ ಅನುಭವವೇ ಅವರನ್ನು ಇಂದಿಗೂ ಕೈಹಿಡಿದು ಯಶಸ್ವಿಯಾಗಿ ಮುನ್ನಡೆಸಿದೆ. ವಿಧಾನ ಪರಿಷತ್ ಸದಸ್ಯರಾದ ಅವರು ವಿಧಾನಪರಿಷತ್ತಿನ ಸಭಾಪತಿಯಾಗಿ ಅವಿರೋಧ ಆಯ್ಕೆಯಾಗಿ, ಸದನದ ಉನ್ನತ ಸಂಪ್ರದಾಯಗಳನ್ನು ಎತ್ತಿ ಹಿಡಿದು ಎಲ್ಲ ಪಕ್ಷಗಳ ಮೆಚ್ಚುಗೆಗೆ ಪಾತ್ರರಾದುದು ಎಲ್ಲರಿಗು ಗೊತ್ತಿರುವ ಸಂಗತಿಯೇ ಆಗಿದೆ. ಇದೀಗ ವಿಧಾನಪರಿಷತ್ತಿಗೆ ಅವಿರೋಧವಾಗಿ ಆಯ್ಕೆಗೊಂಡು ಅಭಿಮಾನಿಗಳ ಸಂತಸವನ್ನು ಹೆಚ್ಚಿಸಿದ್ದಾರೆ. ವಿದೇಶ ಪ್ರವಾಸದ ವಿಪುಲವಾದ ಅನುಭವ ಅವರ ದೃಷ್ಟಿಯನ್ನು ಇನ್ನಷ್ಟು ವಿಶಾಲಗೊಳಿಸಿರಲು ಸಾಕು.

"ರಾಜಕಾರಣಿಗಳು ಆದರ್ಶ ಯೋಗ್ಯರಲ್ಲ. ನಮ್ಮ ಮೇಲೆ ಕಣ್ಣಿಡಿ" ಎಂದು ಇನ್ನೊಬ್ಬ ಸಜ್ಜನ ರಾಜಕಾರಣಿ ಶ್ರೀ ಎಂ.ಪಿ. ಪ್ರಕಾಶ್ ಅವರು ಒಂದು ಸಂದರ್ಭದಲ್ಲಿ ಹೇಳಿದ್ದುಂಟು. ಅದೇ ಬಗೆಯ ಸಾತ್ವಿಕತೆ ಹಾಗೂ ಪಾರದರ್ಶಕ ವ್ಯಕ್ತಿತ್ವ ವೀರಣ್ಣ ಮತ್ತಿಕಟ್ಟಿಯವರದೂ ಆಗಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ಇವರು ನಿಶ್ಚಿತ ಪಕ್ಷದಿಂದ ತಮ್ಮನ್ನು ಗುರುತಿಸಿಕೊಂಡಿದ್ದರೂ ಸರ್ವಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೌಶಲ್ಯ ಇವರಿಗೆ ಸಾಧಿಸಿದೆ. 'ರಾಜಕೀಯವೆಂಬುದು ಲಕ್ಷೋಪಲಕ್ಷ ಮಂದಿಯ ಇಷ್ಟಾನಿಷ್ಟಗಳ, ಹಿತಾಹಿತಗಳ ಸಂಗಾತ' ಎಂದಿದ್ದಾರೆ ಡಿ.ವಿ.ಜಿ.ಯವರು. ಸಾರ್ವಜನಿಕ ಮನುಷ್ಯರಲ್ಲಿರಬೇಕಾದ ಮೊದಲನೆಯ ಅರ್ಹತೆ ನ್ಯಾಯವೆಂಬುದರ - ಹಿತವೆಂಬುದರ ಸ್ವರೂಪಜ್ಞಾನವೇ. ಡಿ.ವಿ.ಜಿಯವರು ಮುಂದುವರಿದು ಹೇಳುತ್ತಾರೆ: "ರಾಜಕೀಯ ದುರ್ವಿಕಾರಕವಾಗಿದ್ದರೂ ಅದು ಆತ್ಮ ಸಂಸ್ಕಾರಕ್ಕೆ ಸಾಧಕ" ಎಂದು. ಯಾಕೆಂದರೆ ಅದು ನಮ್ಮನ್ನು ನಾನಾ ಸಂಕಟಗಳಲ್ಲಿ ಸಿಕ್ಕಿಸಿ ನೀತಿ ಪರೀಕ್ಷೆ ನಡೆಸುತ್ತದೆ. ಆ ಪರೀಕ್ಷೆಯಲ್ಲಿ ಉತ್ತೀರ್ಣನಾದವನೇ ನಿಜವಾದ ಅರ್ಥದಲ್ಲಿ ಸುಸಂಸ್ಕೃತ."

ಶ್ರೀ ವೀರಣ್ಣನವರು ಅಂಥ ಸುಸಂಸ್ಕೃತದಲ್ಲಿ ಒಬ್ಬರಾಗುವ ಭರವಸೆಯನ್ನು ಹುಟ್ಟಿಸುವ ಸಜ್ಜನ ರಾಜಕಾರಣಿಯಾಗಿದ್ದಾರೆ. ದೇಶದ ಸಮಸ್ಯೆಗಳನ್ನು ಬಿಡಿಸುವ ಕಾತರ, ದಕ್ಷತೆ, ನಿಸ್ವಾರ್ಥತೆ, ಚಾರಿತ್ರ್ಯ, ಜನತೆಯ ವಿಶ್ವಾಸ ಇವೆಲ್ಲ ಗೌಣವಾಗಿರುವ ಇಂದಿನ ಸಂದರ್ಭದಲ್ಲಿ ಮತ್ತಿಕಟ್ಟಿಯಂಥವರು ಆಶಾಕಿರಣವಾಗಿ ತೋರಿದರೆ ಆಶ್ಚರ್ಯವಿಲ್ಲ. ೬೩ರ ವಯಸ್ಸಿನಲ್ಲಿಯೂ ೨೬ರ ಉತ್ಸಾಹ ಹಾಗೂ ಕ್ರಿಯಾಶೀಲತೆಯುಳ್ಳ ಅವರ ಭವಿಷ್ಯಕ್ಕೆ ಎಲ್ಲ ಶುಭಗಳೂ ಒದಗಲಿ ಎಂದು ಹಾರೈಸುತ್ತೇನೆ.

'ಚಿನ್ನದಗಟ್ಟಿ ಮತ್ತಿಕಟ್ಟಿ' ಅಭಿನಂದನ ಗ್ರಂಥ ೨೦೧೧

'ಪರಿಸರ ಮಿತ್ರಶಾಲೆ' ಪ್ರಶಸ್ತಿ ಪ್ರದಾನ

ಯಾವ ಋತುವಿನೊಳಿಂತು ಕನಸು ಕಂಡಳೊ ಪೃಥಿವಿ
ಆಶೆ-ಬೀಜಗಳೆನಿತೊ ಮಡಿಲೊಳಿರಿಸಿ
ಮಳೆಯ ರೂಪದಿ ಮುಗಿಲು ಮುತ್ತಿಡಲು ಮತ್ತೇರಿ
ಹೊತ್ತು ನಿಂತಿಹಳಮಿತ ವೃಕ್ಷರಾಶಿ.
ಮಾವು ಬೇವೂ ತೆಂಗು ಕೌಂಗು ನೇರಿಳೆ ಹಲಸು
ಹುಣಿಸೆ ಹುಲುಗಲ ತಾಳೆ ಬಾಳೆಯಂತೆ
ಮಾಧವಿ ತಮಾಲ ಮಾಲತಿ ಹೊಂಗೆ ಶ್ರೀಗಂಧ
ಸೀತಾಳಿ ಬಕುಳ ಸಂಪಿಗೆಗಳಂತೆ!

ನಾನು ೧೯೫೨ರಲ್ಲಿ ಬರೆದ ಈ ಕವಿತೆ ನನ್ನ 'ಆಕಾಶಬುಟ್ಟಿ' ಕವನ ಸಂಗ್ರಹದಲ್ಲಿ (೧೯೫೪) 'ಪಥಿಕ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದೆ. ಆಸ್ಥೆ ಇದ್ದವರು ಇಡೀ ಕವಿತೆಯನ್ನು ಓದಿ ಪರಿಸರ ಅಥವಾ ಪ್ರಕೃತಿಯ ಬಗ್ಗೆ ನನಗೆ ಮೊದಲಿನಿಂದಲೂ ಇರುವ ಪ್ರಜ್ಞೆಯನ್ನು ಅರಿತುಕೊಳ್ಳಬಹುದು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಧಾರವಾಡ ಜಿಲ್ಲೆಯಲ್ಲಿ ಪರಿಸರ ಸ್ನೇಹಿ ಶಾಲೆಗಳನ್ನು ಆಯ್ಕೆ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡು, ಅಂಥ ಶಾಲೆಗಳನ್ನು ಆಯ್ಕೆ ಮಾಡಿ, ಆ ಬಗೆಗಿನ ವಿವರಗಳನ್ನು ಸಚಿತ್ರವಾಗಿ ಮುದ್ರಿಸಿ ಪುಸ್ತಕ ರೂಪದಲ್ಲಿ ತರುತ್ತಿರುವುದು ಅತ್ಯಂತ ಉಪಯುಕ್ತವಾದ ಕಾರ್ಯವಾಗಿದೆ. ಅದಕ್ಕಾಗಿ ಮಂಡಳಿಯನ್ನು, ಉಪಸಮಿತಿಯ ಸದಸ್ಯ ಮಂಡಳಿಯನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಇಂದು ಅಭಿವೃದ್ಧಿಯ ಹೆಸರಿನಲ್ಲಿ ಮನಬಲ್ಲಂತೆ ಪರಿಸರನಾಶಗೈಯುತ್ತಿರುವ ಮಹನೀಯರಿಗೆ ಇಡಿಯ ಮನುಕುಲಕ್ಕೇ ಇದರಿಂದ ದೊಡ್ಡಗಂಡಾಂತರ ಕಾದಿರುವ ಕಲ್ಪನೆಯೇ ಇರದಿರುವುದು ಶೋಚನೀಯ. ಕ್ಷಣಕ್ಷಣಕ್ಕೂ ನಾವದನ್ನು ಅನುಭವಿಸುತ್ತಲೇ ಇದ್ದೇವೆ. ಈ ಭೂಮಿಯ ಬಗ್ಗೆ ನಮಗಿರುವ ಭಾವನಾತ್ಮಕ ಭಾವನೆಗಳನ್ನು ಇವರು ಕಡಿದು ಹಾಕುತ್ತಿದ್ದಾರೆ. ಅದನ್ನು ಕೇವಲ ಉಪಭೋಗದ ವಸ್ತುವನ್ನಾಗಿ, ತಮಗೊದಗುವ ವೈಯಕ್ತಿಕ ಪ್ರಯೋಜನವೇ ಪ್ರಧಾನವಾಗಿ ವ್ಯವಹರಿಸುತ್ತಿದ್ದಾರೆ. ತನ್ನ ಅಂತಶ್ಶಕ್ತಿಯಿಂದ ನಮಗೆ ದಾನ ಮಾಡುತ್ತಿರುವ ಅರಣ್ಯ ಮತ್ತು ಸಸ್ಯ ಸಂಪತ್ತನ್ನು ಕೊಳ್ಳೆ ಹೊಡೆದು ನಿಸರ್ಗದ ಸಮತೋಲನವನ್ನೇ

ಏರುಪೇರಾಗಿಸುತ್ತಿರುವುದನ್ನು ಕಣ್ಣಾರೆ ಕಾಣುತ್ತಿದ್ದೇವೆ. ಈ ದುರವಸ್ಥೆಯಿಂದ ತಮ್ಮ ಆಹಾರ, ನೀರು, ಗಾಳಿ ಎಲ್ಲವೂ ಕಲುಷಿತವಾಗಿ ಜನಸಾಮಾನ್ಯರ ಜೀವನ ಅಸಹನೀಯವಾಗಿ ಪರಿಣಮಿಸಿದೆ. ಜನತೆಯಲ್ಲಿ ಪ್ರಕೃತಿ ಪ್ರೇಮವನ್ನು ಬಲಗೊಳಿಸುವುದರಿಂದ, ಆ ಬಗ್ಗೆ ಅವರ ಅರಿವನ್ನು ಜಾಗೃತಗೊಳಿಸುವುದರಿಂದ ಮಾತ್ರ ನಮ್ಮನ್ನು ಕಾಪಾಡಿಕೊಳ್ಳುವದು ಸಾಧ್ಯ.

ಈಗಾಗಲೇ ಹಣಗಳಿಕೆಯೇ ತಮ್ಮ ಜೀವನದ ಪರಮೋದ್ದೇಶವೆಂದು ಭಾವಿಸಿರುವ ದೊಡ್ಡವರನ್ನು ತಿದ್ದುವದು ಕಷ್ಟ. ಆದರೆ ಸಹಜವಾಗಿಯೇ ಗಿಡ, ಮರ, ಹೂವು, ಹಣ್ಣು, ಹಕ್ಕಿಪಿಕ್ಕಿಗಳನ್ನೂ ಜುಳುಜುಳು ಹರಿಯುವ ನೀರನ್ನೂ, ಹಳ್ಳ-ಹೊಳೆಗಳನ್ನೂ ಪ್ರೀತಿಸುವ ಎಳೆಯರಲ್ಲಿ ಪರಿಸರ ಪ್ರೇಮವನ್ನು ಬಲಗೊಳಿಸುವದು, ಅದಕ್ಕೆ ತಕ್ಕ ಉತ್ತೇಜನವನ್ನು ನೀಡುವದು ಅವಶ್ಯವಾಗಿದೆ. ನಿಸರ್ಗ ಪ್ರೀತಿ ಹಾಗೂ ಅದರ ಸುಖಾನುಭವ ಅವರಲ್ಲಿ ನಿರಂತರವಾಗಿ ಉಳಿಯುವಂತೆ ನೋಡಿಕೊಳ್ಳುವದು ಶಿಕ್ಷಕರ ಆದ್ಯ ಕರ್ತವ್ಯವಾಗಿದೆ. ಇದಕ್ಕೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳೇ ತಕ್ಕ ವೇದಿಕೆಗಳು. ಪರಿಸರದ ವಿಶಾಲ ಕಲ್ಪನೆಯನ್ನು ಅವರಿಗೆ ಇನ್ನಷ್ಟು ಮನದಟ್ಟು ಮಾಡಿಕೊಡಬೇಕು. ಇದು ಶಾಲಾ ಶಿಕ್ಷಣದಲ್ಲಿ ಕಡ್ಡಾಯದ ವಿಷಯವಾಗಬೇಕು. ಈ ಪರಿಸರ ಪ್ರೀತಿಯೇ ಮನುಷ್ಯ ಪ್ರೀತಿಯಾಗಿ, ದೇಶಪ್ರೇಮವಾಗಿ ವಿಕಾಸ ಹೊಂದಬಲ್ಲದು.

ಈಗ ಕೈಕೊಂಡಿರುವ ಪರಿಸರಮಿತ್ರ ಶಾಲೆ ಪ್ರಶಸ್ತಿ ಕಾರ್ಯಕ್ರಮವನ್ನು ಕರ್ನಾಟಕದ ಎಲ್ಲ ಜಿಲ್ಲೆಗಳಿಗೂ ಅನ್ವಯಿಸಿ, ಅಂಥ ಶಾಲೆಗಳಿಗೆ ಸರಕಾರ ಎಲ್ಲ ಬಗೆಯ ಸೌಕರ್ಯಗಳನ್ನು ಒದಗಿಸಬೇಕು. ಈ ಪುಸ್ತಕದ ಪ್ರತಿಗಳನ್ನು ರಾಜ್ಯದ ಎಲ್ಲ ಶಾಲೆಗಳಿಗೂ ತಲುಪಿಸುವ ವ್ಯವಸ್ಥೆಯನ್ನು ಶಿಕ್ಷಣ ಇಲಾಖೆ ತಕ್ಷಣ ಕೈಕೊಳ್ಳಬೇಕೆಂದು ಸೂಚಿಸಬಯಸುತ್ತೇನೆ.

ನಾನು ಪ್ರಾರಂಭದಲ್ಲಿ ಉದಾಹರಿಸಿದ ನನ್ನ ಕವಿತೆಯ ಕೊನೆಯ ನುಡಿಯನ್ನು ಇಲ್ಲಿ ಉಲ್ಲೇಖಿಸಬಹುದು:

ಪ್ರಕೃತಿ ತನ್ನೆದೆಯ ಮಧುವಾಟಿಕೆಯ ತೆರೆದಿರಲು
ಅದನು ತಣಿಹೀರದೆಯೆ ಸಾಗಬಹುದೆ?
ಯಾರಿಗೀ ಸುಂದರತೆ? ಯಾರಿಗೀ ಪರವಶತೆ?
ಯಾರ ಸುಖಕೀ ಸೃಷ್ಟಿ ನಿನಗಲ್ಲದೆ?

೨೧-೨-೨೦೧೩

'ಚೈತ್ರಾಂಗಣ'ದ ನರಸಿಂಹ ಪರಾಂಜಪೆ

ಶ್ರೀ ನರಸಿಂಹ ಪರಾಂಜಪೆಯವರು ಬರೆದ ಒಂದು ಕವಿತೆಯ ಹೆಸರು 'ಬಂಗಾರದಂಥಾ ಧಾರ್ವಾಡಾ'. ಇದು ಅವರ 'ಅಂತರಂಗದ ಮಾತು' (೨೦೦೬) ಸಂಗ್ರಹದಲ್ಲಿದೆ. ಇಂಥ ಬಂಗಾರದಂಥ ಊರಲ್ಲಿ ಶಿರಸಿಯ ಅಡಿಕೆಯ ಸಿಂಗಾರದಂತೆ ಅವರಿದ್ದಾರೆ ಎಂದರೆ ಅತೀಶಯೋಕ್ತಿಯಾಗದು. ಉತ್ತರ ಕನ್ನಡ ಜಿಲ್ಲೆಗೂ ಧಾರವಾಡಕ್ಕೂ ಎಂದಿನಿಂದಲೂ ಇರುವ ನಂಟೇ ಅಂಥದ್ದು. ಮಲಪ್ರಭಾ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆಗಳಲ್ಲಿ ಎಂಜನಿಯರ್ ಆಗಿ ಕೆಲಸ ಮಾಡಿ ನಿವೃತ್ತರಾಗಿ ಅವರು ಧಾರವಾಡದಲ್ಲಿಯೇ ನೆಲೆಸಿದ್ದಾರೆ. ಆ ನದಿಗಳು ಉತ್ತರ ಕರ್ನಾಟಕದ ಜೀವನದಿಗಳಾಗಿರುವಂತೆಯೇ ಕಾವ್ಯವೂ ಅವರ 'ಜೀವನಿಧಿ' (೨೦೧೧)ಯಾಗಿ ಜೀವನದುದ್ದಕ್ಕೂ ಹರಿಯುತ್ತ ಬಂದಿದೆ.

ಕಳೆದ ನಾಲ್ಕು ದಶಕಗಳಲ್ಲಿ ಪರಾಂಜಪೆಯವರು ಹದಿನೈದು ಕವನ ಸಂಗ್ರಹಗಳನ್ನು ಪ್ರಕಟಿಸಿ ತಮ್ಮ ಕಾವ್ಯಾಸಕ್ತಿಯನ್ನೂ ಪ್ರೀತಿಯನ್ನೂ ವ್ಯಕ್ತಪಡಿಸಿದ್ದಾರೆ. ಬೇಂದ್ರೆ, ಪುತಿನ, ಶಿವರುದ್ರಪ್ಪನವರಂಥ ಹಿರಿಯ ಕವಿಗಳು ಇವರ ಸಂಗ್ರಹಗಳಿಗೆ ಮುನ್ನುಡಿ ಬರೆದು ಮೆಚ್ಚುಗೆ ಮಾತುಗಳನ್ನಾಡಿದ್ದಾರೆ. ಮೂವತ್ತು ವರುಷಗಳ ಹಿಂದೆ 'ಬೆಳ್ಳಿತೇರು' ಬಂದಾಗ, 'ಕವಿಯ ಮನೋಧರ್ಮಕ್ಕೆ ತಕ್ಕ ನಡಿಗೆಯಲ್ಲಿ ಸಾಗಿರುವ 'ಬೆಳ್ಳಿತೇರು' ತನ್ನ ಜೋಲಿಯನ್ನು ತಾನೇ ಕಾಯ್ದುಕೊಳ್ಳುತ್ತ ಸುತ್ತಲೂ ಸೊಬಗನ್ನು ಬೀರುವಂತಾಗಲಿ' ಎಂದು ನಾನೂ ಹಾರೈಸಿದ್ದುಂಟು. ನಿಸರ್ಗ ಹಾಗೂ ಮನುಷ್ಯ ಸಂಬಂಧವನ್ನು ಮರೆಯದೇ ನಯ, ವಿನಯ, ಸ್ನೇಹ, ಜೀವನದ ಸಂತೋಷಗಳನ್ನು ಚಿತ್ರಕಶಕ್ತಿಯಿಂದ ಅವರು ತಮ್ಮ ಕಾವ್ಯದ ಮೂಲಕ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ.

ಘಾಣೇಕರ ಅವರ ಸಮಾಜ ಪುಸ್ತಕಾಲಯದಲ್ಲಿ ಅವರನ್ನು ನಾನು ಮೊದಲು ನೋಡಿದ್ದೆಂದು ನೆನಪು. ಅವರ ಕಾವ್ಯದ ಪ್ರಕಾಶಕರೂ ಅವರೇ. ಹುಬ್ಬಳ್ಳಿಯ ಸಾಹಿತ್ಯ ಸಮ್ಮೇಳನದ (೧೯೮೦) ಕವಿಗೋಷ್ಠಿಯನ್ನೊಳಗೊಂಡು ಮೊನ್ನಿನ 'ಶಿವರುದ್ರಪ್ಪನವರ ಸ್ಮರಣೆ'ಯವರೆಗೆ (ಜೂನ್ ೨೦೧೪) ಅನೇಕ ಕವಿಗೋಷ್ಠಿಗಳಲ್ಲಿ ಅವರು ಭಾಗವಹಿಸಿದ್ದುಂಟು. ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಸ್ವಂತ ಕವಿತೆಯ ಓದು' ಎಂಬ ವಿಶಿಷ್ಟ ಕಾರ್ಯಕ್ರಮದ ಕವಿಬಳಗದಲ್ಲಿಯೂ ಅವರಿದ್ದಾರೆ. ಗುಲಬರ್ಗಾ ಎಂಜನಿಯರಿಂಗ್ ಕಾಲೇಜಿನಲ್ಲಿ ಓದುತ್ತಿರುವಾಗಲೇ ಅವರು ಕನ್ನಡ ಸಂಘದ

ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರಲ್ಲದೆ ಅಲ್ಲಿ ಕನ್ನಡ ವಾಚನಾಲಯದ ಸ್ಥಾಪನೆಗೂ ಕಾರಣರಾದರು. ಹಾಗೆಯೇ ಆಲಮಟ್ಟಿಯಲ್ಲಿ ಕೆಲಸ ಮಾಡುತ್ತಿರುವಾಗ ಅಲ್ಲಿಯೇ ಹರ್ಡೇಕರ ಮಂಜಪ್ಪ ಕನ್ನಡ ಸಾಹಿತ್ಯ ವೇದಿಕೆಯ ಅಧ್ಯಕ್ಷರಾಗಿ ಹಲವಾರು ಸಾಹಿತ್ಯಿಕ ಚಟುವಟಿಕೆಗಳನ್ನು ನೆರವೇರಿಸಿ ಮಂಜಪ್ಪನವರ ಸಾಹಿತ್ಯ ಮತ್ತು ಸಾಮಾಜಿಕ ಸೇವೆಯ ನೆನಪು ಮರುಕಳಿಸುವಂತೆ ಮಾಡಿದರು.

ನಿವೃತ್ತರಾದ ಮೇಲೆ ಧಾರವಾಡದ ಸಾಧನಕೇರಿಯ ಪ್ರಶಾಂತ ನಗರದ ತಮ್ಮ 'ಚೈತ್ರ'ದ ಮಹಡಿಯ ಹಾಲಿನಲ್ಲಿ 'ಅನ್ವೇಷಣಕೂಟ'ದ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ, ಅರ್ಥಪೂರ್ಣವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಅದಕ್ಕನುಗುಣವಾಗಿ ಸ್ನೇಹಿತರ ಬಳಗವನ್ನು ಶ್ರೋತೃವರ್ಗವನ್ನು ನಿರ್ಮಿಸಿಕೊಂಡ ಶ್ರೇಯಸ್ಸು ಅವರದಾಗಿದೆ.

ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟಿನ ಸದಸ್ಯರಾಗಿ ಪರಾಂಜಪೆಯವರು ಅದರ ವಿವಿಧ ಚಟುವಟಿಕೆಗಳಲ್ಲಿ ನಿರಂತರ ಕ್ರಿಯಾಶೀಲಾಗಿರುವುದನ್ನು ಕಾಣಬಹುದು. ವಹಿಸಿಕೊಟ್ಟ ಕಾರ್ಯವನ್ನು ಅತ್ಯಂತ ದಕ್ಷತೆಯಿಂದ ಅವರು ನಿರ್ವಹಿಸಬಲ್ಲರು, 'ವಂದನಾರ್ಪಣೆ'ಯನ್ನು ಕೂಡಾ. ಅಲ್ಲಿಯೂ ಅದೇ ಅಚ್ಚುಕಟ್ಟು, ಅದೇ ನಿಷ್ಠೆ. ಅವರಂತೆ ವೃತ್ತಿ ಪ್ರವೃತ್ತಿ ನಿವೃತ್ತಿಗಳಲ್ಲಿ ಸಾಮರಸ್ಯವನ್ನು ಕಂಡುಕೊಂಡವರು ತೀರ ವಿರಳ. ಧಾರವಾಡದ ಪ್ರಮುಖ ಸಭೆ ಸಮಾರಂಭಗಳ ಶ್ರೋತೃವರ್ಗಕ್ಕೆ ಅವರ ಹಸನ್ಮುಖ ಚಿರಪರಿಚಿತ.

ಸಕಲಕೂ ಜೀವನಿಧಿ
ತುಂಬಿಟ್ಟ ಕರುಣಾಂಬುಧಿ.
ನೆಲೆಯ ವಿಸ್ತರಿಸೀತೆ
ನನ್ನಂತರಂಗ ಪರಿಧಿ?

'ಜೀವನಿಧಿ' ಕವಿತೆಯಲ್ಲಿ ವ್ಯಕ್ತಗೊಂಡ ಅವರ ಆಶೆ-ಆಶಯಗಳು ಅವರ ಬದುಕು ಬರೆಹಗಳಲ್ಲಿ ಈಡೇರುವಂತಾಗಲಿ, ಹಾಗೆಯೇ ಎಪ್ಪತ್ತರ ಮುಂದಿನ ವಸಂತಗಳು ಅವರ ಸ್ವಭಾವಕ್ಕೆ ತಕ್ಕಂತೆ ಹರ್ಷದಾಯಕವಾಗಲಿ ಎಂದು ಹಾರೈಸುತ್ತೇನೆ.

'ಚೈತ್ರಾಂಗಣ' ಅಭಿನಂದನ ಗ್ರಂಥದಿಂದ ೨೦೧೪

ಸಿ.ವಿ. ವೇಣುಗೋಪಾಲ : ನಾನು ಕಂಡಂತೆ

ನನ್ನ ಆತ್ಮೀಯ ಸ್ನೇಹಿತರಲ್ಲಿ ಒಬ್ಬರಾದ ಡಾ. ಸಿ.ವಿ. ವೇಣುಗೋಪಾಲರನ್ನು ಕಂಡಾಗಲೆಲ್ಲ ಪಂಪನ 'ಹಿತಮಿತ ಮೃದು ವಚನಂ' ಎಂಬ ನುಡಿ ನೆನಪಿಗೆ ಬರುತ್ತದೆ. ಸ್ನೇಹಿತರೊಡನೆ ಸಂಭಾಷಣೆಯಲ್ಲಿ ತೊಡಗಿರಲಿ, ಸಾರ್ವಜನಿಕವಾಗಿ ಭಾಷಣ ಮಾಡುತ್ತಿರಲಿ, ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿರಲಿ- ಎಲ್ಲ ಸಂದರ್ಭಗಳಲ್ಲೂ ವೇಣುಗೋಪಾಲ ಇದೇ ರೀತಿ ವರ್ತಿಸುವುದನ್ನು ನಾನು ಕಂಡಿದ್ದೇನೆ ಮತ್ತು ಕೇಳಿದ್ದೇನೆ. ಸೌಮ್ಯಸ್ವಭಾವದ ಈ ವ್ಯಕ್ತಿ ನಸುಬಾಗಿ, ಮೆಲು ನಡೆಯಲ್ಲಿ ಸಾಗಿರುವಾಗ ಯಾರಾದರೂ ಪರಿಚಿತರು ಭೆಟ್ಟಿಯಾದರೆ ಮುಖದಲ್ಲಿ ಮೆಲುನಗೆ ಸಹಜವಾಗಿ ಮೂಡುವದುಂಟು. ಸ್ನೇಹಿತರಾಗಿದ್ದರಂತೂ ಅವರ ಜೊತೆ ಅಕೃತಕವಾದ ಆತ್ಮೀಯ ಮಾತುಕತೆಗೆ ಮೊದಲಾಗುತ್ತದೆ. ಸಹಜತೆ, ಸರಳತೆ, ಸ್ನೇಹಪರತೆ ಅವರ ವ್ಯಕ್ತಿತ್ವಕ್ಕೆ ಹೆಚ್ಚಿನ ಮೆರುಗನ್ನು ತಂದಿವೆ.

ಡಾ. ವೇಣುಗೋಪಾಲ ಹುಬ್ಬಳ್ಳಿಯ ಕಾಡಸಿದ್ದೇಶ್ವರ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗಿನಿಂದಲೂ ನನಗೆ ಪರಿಚಿತರು. ನಮ್ಮ ಪರಸ್ಪರ ಸಾಹಿತ್ಯ ಪ್ರೀತಿ ಈ ಪರಿಚಯವನ್ನು ಸ್ನೇಹವಾಗಿ ಪರಿವರ್ತಿಸಿತೆಂದು ಬೇರೆ ಹೇಳಬೇಕಿಲ್ಲ. ಕಾಲೇಜಿನ ಪ್ರಾಚಾರ್ಯರಾಗಿದ್ದ ಹಿರಿಯ ಕವಿ ಡಾ. ಡಿ.ಎಸ್. ಕರ್ಕಿಯವರು ವೇಣುಗೋಪಾಲರ ಬಗ್ಗೆ ಪ್ರೀತಿ, ಅಭಿಮಾನದಿಂದ ಕೂಡಿದ ಬಹಳ ಒಳ್ಳೆಯ ಮಾತುಗಳನ್ನು ನನ್ನೆದುರು ಆಗಾಗ ವ್ಯಕ್ತಪಡಿಸುತ್ತಿದ್ದುದುಂಟು. ಕರ್ನಾಟಕ ವಿಶ್ವವಿದ್ಯಾಲಯದ ಇಂಗ್ಲಿಷ್ ಸ್ನಾತಕೋತ್ತರ ವಿಭಾಗಕ್ಕೆ ಬಂದ ಮೇಲಂತು ಅವರು ನನಗೆ ಇನ್ನಿಷ್ಟು ಸಮೀಪವಾದರು. ಈ ಪೂರ್ವದಲ್ಲಿಯೇ ಅವರು ವಿಭಾಗದ ಮುಖ್ಯಸ್ಥರಾದ ಡಾ. ಎಂ.ಕೆ. ನಾಯಕರ ಮಾರ್ಗದರ್ಶನದಲ್ಲಿ 'Indian Short story in English- a Critical Survey' ಎಂಬ ಸಂಪ್ರಬಂಧ ಬರೆದು ಪಿಎಚ್.ಡಿ. ಪದವಿಯನ್ನು ಪಡೆದಿದ್ದರು. ಈ ವಿಷಯದಲ್ಲಿ ಇದು ಮೊಟ್ಟ ಮೊದಲನೆಯ ಸಂಶೋಧನೆಯೆಂದು ಇಂಗ್ಲಿಷ್ ಸಾಹಿತ್ಯವಿಮರ್ಶಕರು ಅಬಿಪ್ರಾಯ ಪಟ್ಟಿದ್ದನ್ನು ನಾನು ಕೇಳಿದ್ದೆ. ಈ ಮೊದಲು ಭಾರತೀಯ ಸಣ್ಣ ಕತೆಗಾರರನ್ನು ಕುರಿತು ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟವಾಗುತ್ತಿದ್ದ ಜರ್ನಲ್‌ದಲ್ಲಿ (Humanities) ವೇಣುಗೋಪಾಲ ಕೆಲವು ಲೇಖನಗಳನ್ನು ಬರೆದಿದ್ದರು. ಕನ್ನಡ ಮತ್ತು ಭಾರತೀಯ ಸಾಹಿತ್ಯ-ಸಂದರ್ಭದ ದೃಷ್ಟಿಯಿಂದ ಈ

ಸಂಪ್ರಬಂಧ ಕನ್ನಡದಲ್ಲಿ ಅನುವಾದಗೊಂಡು ಪ್ರಕಟವಾಗುವದು ಅವಶ್ಯವೆಂದು ನನಗೆ ತೋರುತ್ತದೆ.

ಡಾ. ವೇಣುಗೋಪಾಲ ತಮ್ಮ ವಿದ್ವತ್ತನ್ನು ವಿನಾಕಾರಣ ಪ್ರದರ್ಶನಗೊಳಿಸು ವಂಥವರಲ್ಲ. ಅದು ವ್ಯಕ್ತವಾಗುವದು ಚರ್ಚೆಗಳಲ್ಲಿ, ಗೋಷ್ಠಿಯ ಭಾಷಣಗಳಲ್ಲಿ, ವಿದ್ಯಾರ್ಥಿ-ಸಂಶೋಧಕರ ಮಾರ್ಗದರ್ಶನದಲ್ಲಿ. ಹದಿನೈದು ಜನ ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪಡೆದುಕೊಂಡದ್ದು ಗಮನಾರ್ಹವಾಗಿದೆ. ಇಂಗ್ಲಿಷ್ ವಿಭಾಗದಲ್ಲಿ ಉಪನ್ಯಾಸಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಇವರು ಪದೋನ್ನತಿ ಪಡೆದದ್ದು ಅರ್ಹತೆಯ ಮೇಲೆಯೇ ಎಂದು ಬೇರೆ ಹೇಳಬೇಕಿಲ್ಲ. ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಮಂಡಳಿಗಳಾದ ಅಕಾಡೆಮಿಕ್ ಕೌನ್ಸಿಲ್, ಸಿನೇಟ್, ಸಿಂಡಿಕೇಟುಗಳ ಸದಸ್ಯರಾಗಿಯೂ ಇವರು ಸೇವೆ ಸಲ್ಲಿಸಿದ್ದುಂಟು. ವಿಶ್ವವಿದ್ಯಾಲಯದ ಜರ್ನಲ್ (Humanities) ವಾರ್ತಾಪತ್ರ 'News Buletin'ಗಳ ಸಂಪಾದಕರಾಗಿಯೂ ಹೊಣೆಗಾರಿಕೆಯಿಂದ ಅವರು ಕೆಲಸ ಮಾಡಿದ್ದನ್ನು ಮರೆಯುವಂತಿಲ್ಲ. ತಮಗೆ ವಹಿಸಿಕೊಟ್ಟ ವಿಶ್ವವಿದ್ಯಾಲಯದ ಯಾವುದೇ ಕೆಲಸವನ್ನು ವೇಣುಗೋಪಾಲ ಚೊಕ್ಕಟವಾಗಿ ನಿರ್ವಹಿಸುತ್ತಿದ್ದುದನ್ನು ಪ್ರಸಾರಾಂಗದ ನಿರ್ದೇಶಕನಾಗಿ ನಾನು ಗಮನಿಸುತ್ತ ಬಂದಿದ್ದೇನೆ. ಪಾಠ ಪ್ರವಚನಗಳಿಗೆ ಮಾತ್ರ ಅವರ ಪ್ರತಿಭೆ ಮೀಸಲಾಗಿರಲಿಲ್ಲ ಎಂಬುದೂ ಅವರ ವ್ಯಕ್ತಿತ್ವದ ಒಡೆದು ಕಾಣುವ ಅಂಶವಾಗಿದೆ.

ಕೋಲಾರದ ಸ್ವಾತಂತ್ರ್ಯಹೋರಾಟಗಾರರ ಮನೆತನದಲ್ಲಿ ಜನಿಸಿದ ಡಾ. ವೇಣುಗೋಪಾಲರಿಗೆ ಇಂದಿಗೂ ದೇಶದ ವಿದ್ಯಮಾನಗಳಲ್ಲಿ ತೀವ್ರವಾದ ಆಸಕ್ತಿ ಹಾಗೂ ಕಾಳಜಿಗಳಿವೆ(ಡಿ.ವಿ.ಜಿ., ಮಾಸ್ತಿ, ಎಲ್. ಬಸವರಾಜು ಮೊದಲಾದ ಕನ್ನಡ ಸಾಹಿತ್ಯದ ದಿಗ್ಗಜರು ಕೋಲಾರ ಜಿಲ್ಲೆಯವರಾಗಿರುವುದನ್ನು ಇಲ್ಲಿ ಸ್ಮರಿಸಬಹುದು.) ಇವರ ಮನೆತನದ ಹಿನ್ನೆಲೆ ಹಾಗೂ ಅಭ್ಯಾಸ ಪ್ರವೃತ್ತಿಯಿಂದಾಗಿ ಇವರು ಪೂರ್ಣ ಗಾಂಧೀವಾದಿಯಾಗಿ ಪರಿಣಮಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಯಾವುದನ್ನು ಸಮಗ್ರವಾಗಿ ಅಧ್ಯಯನ ಮಾಡದೆ, ವಿವೇಚನೆಯಿಲ್ಲದೆ ಮೇಲ್ನೋಟದಿಂದ ಮಾತ್ರ ಇವರು ತಮ್ಮ ಅಭಿಪ್ರಾಯ ಸೂಚಿಸುವುದನ್ನು ನಾನು ಕಂಡಿಲ್ಲ. ಮಹಾತ್ಮಾಗಾಂಧಿ ಯವರ ತತ್ವ-ವಿಚಾರಗಳಿಗೂ ಇದು ಅನ್ವಯಿಸುತ್ತದೆ. ಈ ವಿಷಯದಲ್ಲಿ ಅವರಿಗಿರುವ ಬದ್ಧತೆಯನ್ನು ಪ್ರಶ್ನಿಸುವಂತಿಲ್ಲ. ಅಂತೆಯೇ ವಿಶ್ವವಿದ್ಯಾಲಯದ 'ಗಾಂಧಿ ಅಧ್ಯಯನ ಪೀಠ'ದ ಚಟುವಟಿಕೆಗಳಲ್ಲಿ ಅವರು ಆಸ್ಥೆಯಿಂದ ಭಾಗವಹಿಸುತ್ತಿದ್ದುದಲ್ಲದೆ ಪೀಠದ ಸಂದರ್ಶಕ ಬೋಧನೆಯಲ್ಲಿಯೂ ಅವರ ಪಾಲು ಸಾಕಷ್ಟಿದೆ. ಹಾಗೆಯೇ 'ಡಾ.

ಅಂಬೇಡ್ಕರ್ ಅಧ್ಯಯನ ವಿಭಾಗ'ಕ್ಕೂ ಕೂಡ. ಧಾರವಾಡದ 'ಗಾಂಧಿ ಶಾಂತಿ ಪ್ರತಿಷ್ಠಾನ' ಇವರ ಚಿಂತನೆ ಹಾಗೂ ಕ್ರಿಯಾಶೀಲತೆಯ ಪ್ರಯೋಜನವನ್ನು ವಿವಿಧ ರೀತಿಯಲ್ಲಿ ಪಡೆದಿರುವುದನ್ನು ಕಾಣಬಹುದು. ವೇಣುಗೋಪಾಲ ಅದರ ಆಡಳಿತ ಮಂಡಳಿಯ ಸದಸ್ಯರಾಗಿದ್ದರಲ್ಲದೆ ಎರಡು ವರ್ಷ ಕೇಂದ್ರದ ಅಧ್ಯಕ್ಷರೂ ಆಗಿದ್ದರು. ಯುವ ವೇದಿಕೆಯ ಸಂಚಾಲಕರಾಗಿ ಶಾಲೆಗಳಿಗೆ ಗಾಂಧೀ ವಿಚಾರಗಳು ಕಾರ್ಯಕ್ರಮದ ಯಶಸ್ಸಿನ ಬಹುಪಾಲು ಇವರಿಗೆ ಸಲ್ಲುತ್ತದೆ.

ಡಾ. ವೇಣುಗೋಪಾಲ ಮೈಸೂರು-ಬೆಂಗಳೂರು ಭಾಗದಿಂದ ಬಂದವರಾದರೂ ಹಾಗೆ ಗುರುತು ಹತ್ತದಷ್ಟು ಉತ್ತರ ಕರ್ನಾಟಕದವರೇ ಆಗಿದ್ದಾರೆ. ಅಷ್ಟರಮಟ್ಟಿಗೆ ಇಲ್ಲಿಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಜ್ಞೆಯಲ್ಲಿ ಒಂದಾಗಿ ಅವಳಿನಗರದ ಸಾಂಸ್ಕೃತಿಕ ಕ್ಷೇತ್ರದ ಅವಿಭಾಜ್ಯ ಅಂಗವಾಗಿ ಬಿಟ್ಟಿದ್ದಾರೆ. ಧಾರವಾಡ ಆಕಾಶವಾಣಿಯಲ್ಲಿ ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಅವರು ಅನೇಕ ಭಾಷಣಗಳನ್ನು ಮಾಡಿದ್ದುಂಟು. ವಿದ್ಯಾವಂತರಂತೆಯೇ ಸಾಮಾನ್ಯ ಶ್ರೋತೃಗಳಿಗೂ ತಲುಪುವಂತೆ ಅವರು ಸ್ವಾರಸ್ಯವಾಗಿ ಮಾತಾಡಬಲ್ಲರು. ಅವು ಆಕಾಶವಾಣಿ ಭಾಷಣಗಳಿಗೆ ಒಂದು ಮಾದರಿಯಾಗಿಯೂ ಪರಿಣಮಿಸಿರುವುದುಂಟು. ಪ್ರೊ. ಆರ್ಮಾಂಡೊ ಮೆನೆಜಿಸ್ ಅವರ 'Lighter than Air' ಎಂಬ ಇಂಥ ಭಾಷಣಗಳ ಸಂಗ್ರಹ ಈ ಸಂದರ್ಭದಲ್ಲಿ ನೆನಪಾಗುತ್ತದೆ.

ಡಾ. ವೇಣುಗೋಪಾಲರ ಆಯ್ದ ಆಕಾಶವಾಣಿ ಭಾಷಣಗಳ ಸಂಗ್ರಹವೊಂದು ಅಭಿನಂದನದ ಈ ಸಂದರ್ಭದಲ್ಲಿ ಪ್ರಕಟವಾಗುವದು ಔಚಿತ್ಯಪೂರ್ಣವೆನಿಸುತ್ತದೆ. ಡಾ. ವೇಣುಗೋಪಾಲರು ಆರೋಗ್ಯವಂತರಾಗಿ ನಮ್ಮ ನಡುವೆ ನೂರ್ಕಾಲ ಬಾಳಲೆಂದು ಹೃತ್ಪೂರ್ವಕ ಹಾರೈಸುತ್ತೇನೆ.

'ವೇಣುಗೋಪಾಲ ಅಭಿನಂದನ' ೨೦೧೫

ಬೆಳ್ಳಿ ತೇರಿನ ದಾರಿಯಲ್ಲಿ ಶ್ರೀ ವೀರಣ್ಣ ಚರಂತಿಮಠರು

ವಾಣಿಜ್ಯ ಕೇಂದ್ರವಾಗಿ ರೂಪುಗೊಳ್ಳುತ್ತಿದ್ದ ಬಾಗಲಕೋಟೆಯನ್ನು ಜ್ಞಾನದ ಕೋಟೆಯ ಬಾಗಿಲನ್ನಾಗಿ ಪರಿವರ್ತಿಸಿದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ, ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ತನ್ನ ಶತಮಾನದ ಸುದೀರ್ಘ ಹಾಗೂ ಸಾರ್ಥಕ ಇತಿಹಾಸವನ್ನು ದಾಖಲಿಸಿ ಆಗಲೇ ಕೆಲ ವರ್ಷಗಳು ಸಂದಿವೆ. ಪ್ರಾರಂಭದಲ್ಲಿ ಸಂಘವು ಒಂದೊಂದಾಗಿ ಶಿಕ್ಷಣ ಸಂಸ್ಥೆಗಳನ್ನು ತೆರೆಯುತ್ತ ಬಂದು ೧೯೪೪ರಲ್ಲಿ ಬಸವೇಶ್ವರ ಕಾಲೇಜು ಸ್ಥಾಪಿಸಿದ್ದು ಒಂದು ಚರಿತ್ರಾರ್ಹ ಘಟನೆಯಾಗಿದೆ. ಉತ್ತರ ಕರ್ನಾಟಕದಲ್ಲಿ ಧಾರವಾಡದ ಕರ್ನಾಟಕ ಕಾಲೇಜು (ಸರಕಾರಿ), ಬೆಳಗಾವಿಯ ಲಿಂಗರಾಜ ಕಾಲೇಜು (ಖಾಸಗಿ) ಎರಡೇ ಉನ್ನತ ಶಿಕ್ಷಣ ಸಂಸ್ಥೆಗಳಿದ್ದ ಸಂದರ್ಭದಲ್ಲಿ, ಬಸವೇಶ್ವರ ಕಾಲೇಜಿನ ಸ್ಥಾಪನೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಎಂಥ ದೊಡ್ಡ ವರವಾಗಿ ಪರಿಣಮಿಸಿತೆಂಬುದನ್ನು ಊಹಿಸಿಯೇ ತಿಳಿಯಬಹುದು.

ಸಂಘದ ಬೆಳವಣಿಗೆಯಲ್ಲಿ ಅನೇಕ ಬಗೆಯ ಅಡೆತಡೆಗಳು ಎದುರಾದದ್ದುಂಟು. ಆದರೆ ಬ.ವೀ.ವಿ. ಸಂಘದ ಸದಸ್ಯರು ಪರಸ್ಪರ ಸಹಕಾರ ಹಾಗೂ ನಿಸ್ವಾರ್ಥ ಬುದ್ಧಿಯಿಂದ, ಪಟ್ಟು ಬಿಡದ ಹೋರಾಟದಿಂದ ಅವನ್ನೆಲ್ಲ ನಿವಾರಿಸಿಕೊಂಡು, ತಮಗಿಂತಲೂ ಸಂಸ್ಥೆ ದೊಡ್ಡದು ಎಂದು ಭಾವಿಸಿ ಮುಂದುವರಿದಿದ್ದರಿಂದ ಇಡೀ ಒಂದು ಜನಾಂಗದ ಭವಿಷ್ಯವನ್ನು ಶೈಕ್ಷಣಿಕವಾಗಿ ರೂಪಿಸುವದು ಅದಕ್ಕೆ ಸಾಧ್ಯವಾಯಿತು. ಈ ಸಂಘಕ್ಕೆ ಮಾರ್ಗದರ್ಶನ ಮಾಡುತ್ತ ಬಂದ ಗುರುಗಳಿಂದ, ಸಮಾಜಮುಖಿಯಾಗಿ ಚಿಂತನೆ ಮಾಡಿದ ಮಠಾಧೀಶರಿಂದ ಜನತೆಯಲ್ಲಿ ಶಿಕ್ಷಣ ಸಂಸ್ಕೃತಿಯ ಪ್ರಜ್ಞೆ ಜಾಗೃತಗೊಳ್ಳಲು ಕಾರಣವಾಯಿತು.

ಸಂಘದ ಪದಾಧಿಕಾರಿಗಳ ಹುದ್ದೆಗೆ ಒಮ್ಮೆಯೂ ಚುನಾವಣೆ ನಡೆಯದೆ, ಎಲ್ಲವೂ ಒಮ್ಮತದಿಂದಲೆ ನಡೆದು ಬಂದುದು, ನಮ್ಮ ನಾಡಿನ ಸಂಘಸಂಸ್ಥೆಗಳ ಇತಿಹಾಸದಲ್ಲಿ ಅಪೂರ್ವಘಟನೆಯಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ. ಅಂತೆಯೇ ಸುಮಾರು ನಾಲ್ವತ್ತು ಶಿಕ್ಷಣ ಸಂಸ್ಥೆಗಳನ್ನು ಕಾಲಾನುಕ್ರಮದಲ್ಲಿ ಕಟ್ಟಿ, ಸದೃಢವಾಗಿ ಬೆಳೆಸುವದು ಹಿರಿಯ ತಲೆಮಾರಿನ ಹಿತೈಷಿಗಳಿಗೆ ಸಾಧ್ಯವಾಯಿತು. ಈ ಘಟ್ಟದಲ್ಲಿ, ಈ ಹಿರಿಯರು ಕಂಡ ಕನಸುಗಳನ್ನು ಮೂರ್ತಗೊಳಿಸಲು ಸಂಘಕ್ಕೆ ಒಬ್ಬ ಸಮರ್ಥ ಯುವನಾಯಕನ ಆವಶ್ಯಕತೆ ಕಂಡು ಬಂದುದು ಸಹಜವಾಗಿದೆ, ಹತ್ತು ವರ್ಷಗಳಿಂದಲೂ ಸಂಘದ

ಸದಸ್ಯನಾಗಿ, ಅದರ ವಿವಿಧ ಹುದ್ದೆಗಳಲ್ಲಿ ಉತ್ಸಾಹದಿಂದ ದುಡಿದು ಪಳಗಿದ, ಶಿಕ್ಷಣ ಪ್ರೇಮಿಯಾದ ವೀರಣ್ಣ ಚರಂತಿಮಠರ ಕಡೆಗೆ ಎಲ್ಲರ ದೃಷ್ಟಿ ಹರಿದದ್ದರಲ್ಲಿ ಆಶ್ಚರ್ಯವಿಲ್ಲ. ಶ್ರೀ ವೀರಣ್ಣ, ೧೯೯೧ ಜನವರಿಯಿಂದ ಕಾರ್ಯಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಗೊಂಡುದು ಸಂಘದ ದೃಷ್ಟಿಯಿಂದ ಒಂದು ಶುಭ ಮುಹೂರ್ತವೆಂದೇ ಹೇಳಬಹುದು. ಚರಂತಿಮಠರು ಅಂದಿನಿಂದಲೇ ಕಾರ್ಯಪ್ರವರ್ತರಾಗಿ, ಹಿರಿಯರು ಕಂಡ ಕನಸುಗಳನ್ನು ಮೂರ್ತಗೊಳಿಸಿದ್ದಲ್ಲದೆ ತಾವು ಸ್ವತಃ ಕಂಡ ಹೊಸ ಕನಸುಗಳನ್ನು ಅವಿಶ್ರಾಂತ ಶ್ರಮದಿಂದ ನನಸಾಗಿ ಈಡೇರಿಸುತ್ತ ಬಂದರು. ಹೀಗಾಗಿ ಕಳೆದ ೨೫ ವರ್ಷಗಳಲ್ಲಿ ಬ.ವೀ.ವಿ. ಸಂಘದ ಅಭ್ಯುದಯದ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ತೆರೆದ ಶ್ರೇಯಸ್ಸು ಅವರದಾಯಿತು.

ತಮ್ಮ ನಡೆ-ನುಡಿಗಳ ಸಾಮರಸ್ಯದಿಂದ, ಸಂಘಟನಾ ಸಾಮರ್ಥ್ಯದಿಂದ ದಕ್ಷತೆ-ದೂರದೃಷ್ಟಿಯಿಂದ, ತೀವ್ರ ಕಾರ್ಯಾಚರಣೆಯಿಂದ ಚರಂತಿಮಠರು ಸಾಧಿಸಿದ ಅದ್ಭುತವಾದ ಕಾರ್ಯಗಳು ಅವರ ವ್ಯಕ್ತಿತ್ವದ ಹಲವು ಮುಖಗಳನ್ನು ಜನತೆಗೆ ಪಾರದರ್ಶಕವಾಗಿ ಪರಿಚಯಿಸಿದವು. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪೂರ್ವ ಪ್ರಾಥಮಿಕದಿಂದ ಹಿಡಿದು ತಾಂತ್ರಿಕ ಹಾಗೂ ವೈದ್ಯಕೀಯ ಕಾಲೇಜುಗಳವರೆಗೆ ಮೊದಲಿಗಿಂತ ಸುಮಾರು ಅರುವತ್ತಕ್ಕೂ ಮಿಕ್ಕಿ ವಿವಿಧ ಬಗೆಯ ಶಿಕ್ಷಣ ಸಂಸ್ಥೆಗಳನ್ನು ಎಲ್ಲ ಮೂಲ ಸೌಕರ್ಯಗಳೊಂದಿಗೆ ಅಸ್ತಿತ್ವದಲ್ಲಿ ತಂದು, ವ್ಯವಸ್ಥಿತವಾದ ರೀತಿಯಲ್ಲಿ ನಡೆಸಿರುವುದು ಸಣ್ಣ ಮಾತಲ್ಲ. ಗ್ರಾಮೀಣ ಪ್ರದೇಶಗಳಲ್ಲಿಯೂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದರ ಜೊತೆಗೆ ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳುವುದರ ಕಡೆಗೆ ಅವರು ವಿಶೇಷ ಗಮನವಿತ್ತದ್ದು ಇಲ್ಲಿ ಸ್ಮರಣೀಯ. ಈ ಎಲ್ಲ ಅಭಿವೃದ್ಧಿಯ ಹಿಂದೆ ಕಾರ್ಯ ನಿರ್ವಾಹಕ ಮಂಡಳಿಯ ಸದಸ್ಯರ ಹಾಗೂ ಗೌರವ ಕಾರ್ಯದರ್ಶಿಗಳ ಅದ್ಭುತ ಸಹಕಾರವಿದ್ದುದನ್ನು ಸ್ಮರಿಸಲೇಬೇಕು.

ಶ್ರೀ ಚರಂತಿಮಠರು ೨೦೦೪ರಲ್ಲಿ ಬಾಗಲಕೋಟೆಯ ಶಾಸಕರಾಗಿ ಆಯ್ಕೆಯಾದುದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಇದರಿಂದ ಅವರ ಸಾಮಾಜಿಕ ಕಾಳಜಿಗೆ ಹೊಸ ರೆಕ್ಕೆ ಮೂಡಿದಂತಾಯಿತು. ಹಿಂದೆ ಎಷ್ಟೋ ವರ್ಷಗಳಿಂದ ಆಗದಿದ್ದ ಅಭಿವೃದ್ಧಿಪರ ಕೆಲಸಗಳು ಈ ಅವಧಿಯಲ್ಲಿ ನೆರವೇರುತ್ತ ಬಂದವು. ಬಾಗಲಕೋಟ ವಿಧಾನಸಭಾ ಕ್ಷೇತ್ರದಾದ್ಯಂತ ರಸ್ತೆ ನಿರ್ಮಾಣ, ಕೆರೆಗಳ ನಿರ್ಮಾಣ, ವಿದ್ಯುತ್ ಸರಬರಾಜು, ಶೈಕ್ಷಣಿಕ ಸೌಲಭ್ಯಗಳು, ಆರೋಗ್ಯ ಯೋಜನೆಗಳು, ಮಕ್ಕಳ, ರೈತರ

ಮತ್ತು ಮಹಿಳಾ ಕಲ್ಯಾಣ-ಸರಕಾರದ ವಿವಿಧ ಯೋಜನೆಗಳು ಅನುಷ್ಠಾನಗೊಳ್ಳುತ್ತ ಬಂದುದನ್ನು ಇಲ್ಲಿ ಉಲ್ಲೇಖಿಸಬಹುದು.

ಸಂಘದ ಆರ್ಥಿಕ ಬೆಳವಣಿಗೆಯೊಂದಿಗೆ ಸಾಂಸ್ಕೃತಿಕವಾಗಿಯೂ ಅದನ್ನು ಮುಂದೆ ತಂದದ್ದು ವೀರಣ್ಣನವರ ವಿಶೇಷ ಕೊಡುಗೆಯಾಗಿದೆ. ಬ.ವೀ.ವಿ. ಸಂಘ ಅನೇಕ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ವೇದಿಕೆಯಾಗಿ ಅವುಗಳನ್ನು ಪ್ರೋತ್ಸಾಹಿಸಿರುವುದಲ್ಲದೆ ಕೆಲವು ಸಲ ನೇತೃತ್ವವನ್ನು ವಹಿಸಿದೆ. ಶ್ರೀಮತಿ ಶಾಂತಾದೇವಿ ಮಾಳವಾಡರು ಅಧ್ಯಕ್ಷತೆ ವಹಿಸಿದ ೬೮ನೇ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನ, ಅ.ಭಾ. ಶರಣ ಸಾಹಿತ್ಯ ಪರಿಷತ್ತಿನ ೭ನೇ ಸಮ್ಮೇಳನ, ಪೂಜ್ಯ ಮಹಾಂತ ಸ್ವಾಮಿಗಳವರ ಅಮೃತ ಮಹೋತ್ಸವ, ಮಧುರಚೆನ್ನ, ಸಿಂಪಿ ಲಿಂಗಣ್ಣನವರ ಜನ್ಮ ಶತಮಾನೋತ್ಸವ (೨೦೦೨) ಇವೇ ಮೊದಲಾದವನ್ನು ಇಲ್ಲಿ ಹೆಸರಿಸಬಹುದು. ಕೆಲವು ಸಮಾರಂಭಗಳಲ್ಲಿ ನಾನು ಕೂಡ ಭಾಗವಹಿಸಿದ್ದು ಚರಂತಿಮಠರ ಅಚ್ಚುಕಟ್ಟುತನ, ಆದರಾತಿಥ್ಯಗಳನ್ನು ಪ್ರತ್ಯಕ್ಷ ಅನುಭವಿಸಿದ್ದೇನೆ. ನನ್ನ ಜೊತೆಗಿದ್ದ ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಎಚ್.ಎಸ್. ರಾಘವೇಂದ್ರರಾವ್, ಪ್ರೊ. ಚಿ. ಶ್ರೀನಿವಾಸ ರಾಜು, ಡಾ. ಗುರುಲಿಂಗ ಕಾಪಸೆ ಮೊದಲಾದ ಖ್ಯಾತ ಸಾಹಿತಿಗಳೂ ನಿಜವಾದ ಅರ್ಥಪೂರ್ಣ ಕಾರ್ಯಕ್ರಮಗಳೆಂದು ಇವನ್ನು ಪ್ರಶಂಸಿಸಿದ್ದುಂಟು. ಜನಸಾಮಾನ್ಯರ ಸಾಹಿತ್ಯಾಭಿರುಚಿ ಮತ್ತು ಸಂಸ್ಕೃತಿ ಪ್ರೀತಿಗೆ ಸಭಿಕರಿಂದ ಕಿಕ್ಕಿರಿದು ತುಂಬಿದ್ದ ಈ ಸಭೆಗಳೇ ಸಾಕ್ಷಿ. ಶ್ರೀ ವೀರಣ್ಣ ಅವರ ಕಾರ್ಯಶೈಲಿಯೇ ಅಂತಹದು.

ಬಾಗಲಕೋಟೆ ಹಾಗೂ ನವನಗರದ ನಡುವಿನ ವಿಶಾಲ ಜಾಗ ಪ್ರೇಕ್ಷಣೀಯ ಸ್ಥಳವಾಗಿರುವದೇ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಅದಕ್ಕೆ ಸಂಬಂಧಿಸಿದ ಇತರ ಸುಂದರ ಕಟ್ಟಡಗಳಿಂದ ಸುತ್ತು ಮುತ್ತಿನ ಈ ಎಲ್ಲ ದೃಶ್ಯಗಳ ಸೌಂದರ್ಯವನ್ನು ಸವಿಯಬೇಕಾದರೆ ಎತ್ತರದಲ್ಲಿ ಕಟ್ಟಿರುವ ಅತಿಥಿಗೃಹದಲ್ಲಿ ನಿಂತು ನೋಡಬೇಕು. ಸಂಘದ ಕಾರ್ಯಕ್ರಮವೊಂದಕ್ಕೆ ನಾವು ಹೋದಾಗ (ಜೊತೆಗೆ ಡಾ. ಕಾಪಸೆಯವರಿದ್ದರು) ನಮಗೆ ಇಲ್ಲಿಯೇ ಉಳಿದುಕೊಳ್ಳುವ ವ್ಯವಸ್ಥೆಯಾಗಿದ್ದುದರಿಂದ ಅದನ್ನು ಪ್ರತ್ಯಕ್ಷ ಅನುಭವಿಸುವ ಸುಯೋಗ ಒದಗಿತ್ತು ಅತಿಥಿ ಗೃಹಕ್ಕೆ ಈ ಸ್ಥಳವನ್ನು ಆಯ್ಕೆ ಮಾಡಿದ ಶ್ರೀ ವೀರಣ್ಣನವರ ಹಾಗೂ ಅವರ ಸಂಗಡಿಗರ ಸೌಂದರ್ಯ ದೃಷ್ಟಿಯನ್ನು ಮೆಚ್ಚಲೇಬೇಕು.

ಶ್ರೀ ವೀರಣ್ಣನವರದು ಸರಳವಾದ ನಿರಾಡಂಬರ ವ್ಯಕ್ತಿತ್ವ. ಅವರ ಮಾತು ಮತ್ತು ಕೃತಿಗಳೆಲ್ಲವೂ ನೇರ ಹಾಗೂ ಸಹಜ, ಭ.ವೀ.ವಿ. ಸಂಘದ ಆಡಳಿತಾಧಿಕಾರಿಯಾಗಿ ಕಳೆದ ೨೪ ವರ್ಷಗಳಿಂದ ಅವರ ನಿಕಟ ಸಂಪರ್ಕದಲ್ಲಿರುವ ಪ್ರೊ. ಎನ್.ಜಿ. ಕರೂರ

ಅವರಂಥ ಸಜ್ಜನರು ಕಂಡುಕೊಂಡ ಚರಂತಿಮಠರ ವಿಶಿಷ್ಟ ಗುಣಗಳನ್ನು ಇಲ್ಲಿ ಉಲ್ಲೇಖಿಸಲೇಬೇಕು: "ಬಹು ದೊಡ್ಡ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಅವರು ಒಂದು ದುಡ್ಡೂ ದುರುಪಯೋಗವಾಗದಂತೆ ಎಚ್ಚರವಹಿಸುತ್ತಾರೆ. ಸಂಘದ ಕಾರ್ಯಾಧ್ಯಕ್ಷರಾದರೂ ತಮ್ಮ ಮನೆಗೆ ಸಂಘದ ವೆಚ್ಚದಲ್ಲಿ ದೂರವಾಣಿ ಸಂಪರ್ಕ ಪಡೆದಿಲ್ಲ. ಸ್ವಂತ ಕೆಲಸಕ್ಕಾಗಿ ಸಂಘದ ವಾಹನವನ್ನು ಹಾಗೂ ಮತ್ತಿತರ ಸೌಲಭ್ಯಗಳನ್ನು ಅವರೆಂದೂ ಬಳಸುವದಿಲ್ಲ...... ದುಂದು ವೆಚ್ಚ ಅವರಿಂದ ಗಾವುದ ದೂರ..... ಒಳ್ಳೆಯದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆ. ಕೆಟ್ಟದ್ದನ್ನು ಕಠೋರವಾಗಿ ಖಂಡಿಸುತ್ತಾರೆ." ಇಂದಿನ ದಿನಮಾನದಲ್ಲಿ ಇಂಥದು ತೀರ ಅಪರೂಪ. ಅಂತೆಯೇ ಸಂಘದ ಶತಮಾನೋತ್ಸವದ ಹೊತ್ತಿಗೆ ಅಷ್ಟೇ ಸಂಖ್ಯೆಯ ಶಿಕ್ಷಣ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ಸ್ಥಾಪಿಸುವ ಸಂಕಲ್ಪ ಅವರಿಂದ ಈಡೇರಿತು. ವೀರಣ್ಣ ಚರಂತಿಮಠರಂಥ ಪ್ರಾಮಾಣಿಕ, ಕ್ರಿಯಾಶೀಲ ವ್ಯಕ್ತಿಯನ್ನು ಕಾರ್ಯಾಧ್ಯಕ್ಷರನ್ನಾಗಿ ಪಡೆದ ಬಾಗಲಕೋಟೆಯ ಬ.ವೀ.ವಿ. ಸಂಘದ ಭಾಗ್ಯವೆಂದೇ ಹೇಳಬೇಕು.

ಬೆಳ್ಳಿ ತೇರಿನ ದಾರಿಯಲ್ಲಿ ಸಾಗಿರುವ ಶ್ರೀ ವೀರಣ್ಣ ಚರಂತಿಮಠ ಅವರಿಗೆ ಇದೀಗ ಐವತ್ತು ವಸಂತಗಳ ಸಂಭ್ರಮ. ಸಂಘದ ಕಾರ್ಯಾಧ್ಯಕ್ಷತೆ ಮಾತ್ರವಲ್ಲ, ಯಾವುದೇ ಹೆಚ್ಚಿನ ಜವಾಬ್ದಾರಿಯ ಕೆಲಸ ಕೊಟ್ಟರೂ ಅದನ್ನು ಬಂಗಾರದ ಪಾಜೆಗಟ್ಟೆಗೆ ಮುಟ್ಟಿಸುವ ಸಾಮರ್ಥ್ಯವನ್ನು ಅವರು ಪಡೆದಿದ್ದಾರೆ. ಇಂಥ ವ್ಯಕ್ತಿಗಳಿಂದಲೇ ಸಮಾಜ ಹಾಗೂ ನಾಡು ಸರ್ವಾಂಗ ಸುಂದರವಾಗಿ ಬೆಳೆಯಬಲ್ಲದು. ಶುಬಸ್ತೇ ಪಂಥಾನಃ

'ಬೆಳ್ಳಿ ಬೆಡಗು' (ಅಭಿನಂದನ ಗ್ರಂಥ)
೨೦೧೬

ಡಾ. ಎಸ್.ಪಿ. ಪಾಟೀಲ : ನಾನು ಕಂಡಂತೆ

ತಮ್ಮ ಮೂವತ್ತು ವರುಷಗಳ ಧಾರವಾಡದ ವಾಸ್ತವ್ಯದಲ್ಲಿ ಹದಿನೆಂಟು ವರ್ಷ ಕಲ್ಯಾಣನಗರದಲ್ಲಿ, ನಮ್ಮ ಮನೆಯ ಸಮೀಪದಲ್ಲಿಯೇ ಕಳೆದ ಡಾ. ಎಸ್.ಪಿ. ಪಾಟೀಲರ ನಿಷ್ಕಳಂಕ ಮುಗುಳುನಗೆಯನ್ನು ಮರೆಯುವಂತಿಲ್ಲ. ಬೆಳಗಿನ ವಿಹಾರದಲ್ಲಿ ನಾವು ಆಗಾಗ ಭೆಟ್ಟಿಯಾಗುತ್ತಿದ್ದರೂ ಪರಸ್ಪರ ಮನೆಗಳಲ್ಲಿಯೂ ಕೂಡುತ್ತಿದ್ದೆವು. ಕನ್ನಡ ಜೈನ ಸಾಹಿತ್ಯ, ಮರಾಠಿ ಸಾಹಿತ್ಯ, ಮಿರ್ಜಿ ಅಣ್ಣಾರಾಯರ ಬರವಣಿಗೆ, ಡಾ. ರಂ.ಶ್ರೀ. ಮುಗಳಿಯವರ ಕೆಲಸ ಕಾರ್ಯಗಳ ನಿಯಮಿತ ರೀತಿ ನೀತಿ ಇತ್ಯಾದಿ ನಮ್ಮ ಮಾತುಕತೆಯ ವಿಷಯವಾಗಿರುತ್ತಿದ್ದವು. ಡಾ. ಮುಗಳಿಯವರು ಸಾಂಗಲಿ ವಿಲಿಂಗ್ಡನ್ ಕಾಲೇಜಿನ ಉಪಪ್ರಾಚಾರ್ಯರಾಗಿದ್ದಾಗ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವಕ್ಕೆ ನಾನು ಬಂದುದನ್ನೂ, ಪ್ರಾಚಾರ್ಯರಾದಾಗ ಅವರ ಸನ್ಮಾನ ಸಮಾರಂಭಕ್ಕೆ ಡಾ. ಡಿ.ಎಸ್. ಕರ್ಕಿಯವರು ಆಗಮಿಸಿದ್ದನ್ನೂ ಪಾಟೀಲರು ನೆನಪಿಸಿಕೊಳ್ಳುತ್ತಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ಪ್ರಸಾರೋಪನ್ಯಾಸ ಶಿಬಿರವೊಂದನ್ನು ಶೇಡಬಾಳದಲ್ಲಿ ನಾನು ಏರ್ಪಡಿಸಿದಾಗ ಅವರು ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿದ್ದರಂತೆ.

ಶೇಡಬಾಳದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ಸಾಂಗಲಿ ವಿಲಿಂಗ್ಡನ್ ಕಾಲೇಜಿನಲ್ಲಿ ಉಚ್ಚ ಶಿಕ್ಷಣ ಪಡೆದ ಪಾಟೀಲರು ಮಿರ್ಜಿ ಅಣ್ಣಾರಾಯರ ಹಾಗೂ ಡಾ. ಮುಗಳಿಯವರ ಸಂಪರ್ಕದಿಂದ ಕನ್ನಡ ಸಾಹಿತ್ಯದ ಓದು-ಬರವಣಿಗೆಯಲ್ಲಿ ಮೊದಲಿನಿಂದಲೂ ಆಸ್ಥೆಯನ್ನು ಬೆಳೆಸಿಕೊಂಡಿದ್ದರು. ಬಿ.ಎ.ದಲ್ಲಿ ಇಂಗ್ಲೀಷ್, ಮೇಜರ್, ಕನ್ನಡ ಮೈನರ್ ಹಾಗೂ ಎಂ.ಎ.ದಲ್ಲಿ ಕನ್ನಡ ಮೇಜರ್, ಇಂಗ್ಲೀಷ್ ಮೈನರ್ ಅವರು ತೆಗೆದುಕೊಂಡದ್ದು ಒಂದು ದೃಷ್ಟಿಯಿಂದ ಒಳ್ಳೆಯದೇ ಆಯಿತು. ಖ್ಯಾತ ವಿಮರ್ಶಕರಾದದ ಡಾ. ಎಂ.ಬಿ. ಹಾತಗಣಂಗಲೇಕರ ಇವರಿಗೆ ಕಾಲೇಜಿನಲ್ಲಿ ಇಂಗ್ಲೀಷ್ ಬೋಧಿಸುತ್ತಿದ್ದರಂತೆ. ಅವರು ಹಿಂದೆ ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಅವರ ಪ್ರಭಾವವೂ ಪಾಟೀಲರ ಮೇಲಾಗಿತ್ತು. ಕಾಲೇಜ್ ಪತ್ರಿಕೆಗೆ ಅವರೇ ಸಂಪಾದಕರಾಗಿದ್ದಾಗ ಮುಗಳಿಯವರು ಆ ಪತ್ರಿಕೆಗೆ ಕನ್ನಡ ಪ್ರತಿನಿಧಿಯಾಗಿ ಪಾಟೀಲರನ್ನು ನೇಮಿಸಿದ್ದುಂಟು.

ಪ್ರೊ. ಹಾತಗಣಕಲೇಕರ ಎಂದೊಡನೆ ಒಂದು ಘಟನೆ ನೆನಪಾಗುತ್ತದೆ. ಡಾ.

ಜಿ.ಎಸ್. ಶಿವರುದ್ರಪ್ಪನವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಬೆಳಗಾವಿಯಲ್ಲಿ 'ಕನ್ನಡ-ಮರಾಠಿ ಬಾಂಧವ್ಯ' ಕುರಿತು ವಿಚಾರ ಸಂಕಿರಣವೊಂದನ್ನು ಏರ್ಪಡಿಸಿದ್ದರು. ಪ್ರೊ. ಹಾತಗಣಗಲೇಕರ ತಮ್ಮ ಉದ್ಘಾಟನ ಭಾಷಣವನ್ನು ಇಂಗ್ಲೀಷನಲ್ಲಿ ಪ್ರಾರಂಭಿಸಿದಾಗ ಕೆಲ ಮರಾಠಿ ಭಾಷಿಕರು, ಉದ್ಘಾಟಕರು ಮರಾಠಿ ಸಾಹಿತಿಗಳಾಗಿದ್ದರಿಂದ ಮರಾಠಿಯಲ್ಲಿಯೇ ಮಾತನಾಡಬೇಕೆಂದು ವಾದಿಸಿ ಸ್ವಲ್ಪ ಗೊಂದಲಕ್ಕೆ ಕಾರಣರಾದರು. ಆದರೆ ಉದ್ಘಾಟಕರು ಯಾವ ಸಂಕುಚಿತತೆಗೂ ಎಡೆಗೊಡದೆ ಇಂಗ್ಲೀಷನಲ್ಲಿಯೇ ತಮ್ಮ ಭಾಷಣ ಮಾಡಿ ಮುಗಿಸಿದರು. ಮರುದಿನ ನಡೆದ ಕವಿಗೋಷ್ಠಿಗೆ ನಾನು ಉದ್ಘಾಟಕನಾಗಿ ಡಾ. ನೇಮಾಡೆಯವರು ಅಧ್ಯಕ್ಷರಾಗಿದ್ದರು. ಕನ್ನಡ ಕವಿಗಳು ಕನ್ನಡದಲ್ಲಿ, ಮರಾಠಿ ಕವಿಗಳು ಮರಾಠಿಯಲ್ಲಿ ಕಾವ್ಯವಾಚನ ಮಾಡಿದ್ದರಿಂದ ಈ ಪ್ರಶ್ನೆ ಉದ್ಭವಿಸಲಿಲ್ಲ. ಮೊದಲೇ ಯೋಚಿಸಿದಂತೆ ಮರಾಠಿ ಕವಿತೆಗಳ ಕನ್ನಡ ಅನುವಾದವನ್ನು ಪ್ರಸ್ತುತಪಡಿಸಲಾಯಿತು. ಡಾ. ಪಾಟೀಲರಿಗೆ ಇಂಥ ಸಂದರ್ಭಗಳು ಬಹುಶಃ ನೆನಪಿಗೆ ಬಾರದಿರಲಿಕ್ಕಿಲ್ಲ. ಯಾಕೆಂದರೆ ಕಾಲೇಜಿನಲ್ಲಿ ಮರಾಠಿ ಭಾಷೆಯ ವಿದ್ಯಾರ್ಥಿಗಳ ಸ್ನೇಹ ಸಂಪರ್ಕ ಹಾಗೂ ಪರಿಸರದ ಪ್ರಭಾವದಿಂದಾಗಿ, ಮರಾಠಿಯಲ್ಲಿ ಪಾಟೀಲರ ಆಸಕ್ತಿ ಸಹಜವಾಗಿಯೇ ಕೈಗೂಡಿತ್ತು. ಎಷ್ಟರಮಟ್ಟಿಗೆ ಎಂದರೆ, ಕೆಲವು ಮರಾಠಿ ಸಾಹಿತ್ಯ ಕೃತಿಗಳನ್ನು ಕನ್ನಡದಲ್ಲಿ ಇವರು ಸೊಗಸಾಗಿ ಅನುವಾದಿಸಿದ್ದರು. ಅಲ್ಲದೆ ಉಭಯ ಭಾಷಾ ಬಾಂಧವ್ಯ ಕಾರ್ಯಕ್ಕಾಗಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಇವರಿಗೆ 'ಆನಂದಕಂದ ಪ್ರಶಸ್ತಿ' (೨೦೦೪) ನೀಡಿ ಗೌರವಿಸಿತು. ಇದೇ ಸೇವೆಗಾಗಿ ಮುಂಬಯಿ ಕರ್ನಾಟಕ ಸಂಘದ ಶ್ರೀ ವರದರಾಜ ಆದ್ಯ ಪ್ರಶಸ್ತಿಗೂ ಅವರು ಭಾಜನರಾಗಿದ್ದರು.

೧೯೬೯ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಜೈನ ಸಾಹಿತ್ಯ ವಿಭಾಗದಲ್ಲಿ ಸಹಾಯಕ ಸಂಶೋಧಕರಾಗಿ ಕೆಲಸ ಪ್ರಾರಂಭಿಸಿದ ಪಾಟೀಲರು ಮುಂದೆ ಕನ್ನಡ ಉಪನ್ಯಾಸಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಹಂತ ಹಂತವಾಗಿ ಮೇಲೇರಿ ವೃತ್ತಿಯ ಕೊನೆಯಲ್ಲಿ ಜೈನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ ನಿವೃತ್ತರಾದರು. ಈ ಮಧ್ಯದಲ್ಲಿಯೇ 'ಚಾವುಂಡರಾಯ ಪುರಾಣ: ಸಾಹಿತ್ಯಿಕ, ತಾತ್ವಿಕ ಅಧ್ಯಯನ' ಕುರಿತು ಸಂಪ್ರಬಂಧ ಬರೆದು (೧೯೮೫) ಪಿಎಚ್.ಡಿ. ಪದವಿ ಪಡೆದಿದ್ದರು.

ವಿಶ್ವವಿದ್ಯಾಲಯದಲ್ಲಿ ಜೈನಪೀಠ ಸ್ಥಾಪನೆಯ ಪ್ರಯತ್ನ ಪ್ರಾರಂಭವಾದಾಗಿನಿಂದ ಡಾ. ಟಿ.ಜಿ. ಕಲಘಟಗಿ, ನ್ಯಾಯಮೂರ್ತಿ ಟಿ.ಕೆ. ತುಕೋಳ, ಶ್ರೀ ವೀರೇಂದ್ರ ಹೆಗ್ಗಡೆ, ಶ್ರೀ ಜೆ.ಪಿ. ಜವಳಿ ಅವರಂಥ ಹಿರಿಯರ ಒಡನಾಟವೂ ಪಾಟೀಲರಿಗೆ ಬಹಳಷ್ಟು ಕಲಿಸಿತು. ಜೈನಶಾಸ್ತ್ರ ವಿಭಾಗದ ಜವಾಬುದಾರಿಯಿಂದ ಮದ್ರಾಸ ವಿಶ್ವವಿದ್ಯಾಲಯ,

ಉತ್ತರ ಭಾರತದ ಉದಯಪುರ, ಜಬಲಪುರ, ಜಯಪುರ, ದಿಲ್ಲಿ ವಿಶ್ವವಿದ್ಯಾಲಯಗಳ ಸಂಪರ್ಕ, ಅಲ್ಲಿಯ ವಿದ್ವಾಂಸರ ಪರಿಚಯ ಲಾಭವೂ ಇವರಿಗೆ ಲಭಿಸಿತು. ಇಂಗ್ಲೀಷನೊಂದಿಗೆ ಹಿಂದಿ ಭಾಷೆಗೂ ಅನುವು ದೊರೆಯಿತು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜೈನಪೀಠದ ಮೊದಲ ಸಂಯೋಜಕರಾಗಿದ್ದ ಡಾ. ಬಿ.ಕೆ. ಖಡಬಡಿಯವರ ಮೂಲಕ ರಾಷ್ಟ್ರಮಟ್ಟದ ವಿದ್ವಾಂಸರಾದ ಡಾ. ಜಗದೀಶಚಂದ್ರ ಜೈನ, ಡಾ. ರಾಜಾರಾಮ ಜೈನ, ಡಾ. ಪ್ರೇಮ ಸುಮನ ಜೈನ, ಅವರಿಂದ ವಿದ್ವತ್ತಿನ ವಿಶಾಲತೆ, ಅಧ್ಯಯನಶೀಲತೆಗಳ ಪ್ರಯೋಜನ ಪಡೆದರು. ದಿಲ್ಲಿಯಲ್ಲಿರುವ ರಾಷ್ಟ್ರಸಂತ ವಿದ್ಯಾನಂದಜಿ ಮಹಾರಾಜರು ಶೇಡಬಾಳದವರು. ಬಾಲ್ಯದಿಂದಲೂ ಪಾಟೀಲರಿಗೆ ಪರಿಚಿತರು. ಧರ್ಮ ಮತ್ತು ಸಾಹಿತ್ಯಕ್ಕೆ ಅವರ ಕೊಡುಗೆ ಕುರಿತು ಕ.ವಿ.ವಿ. ಜೈನಶಾಸ್ತ್ರ ವಿಭಾಗದ ಒಬ್ಬ ವಿದ್ಯಾರ್ಥಿಯ ಮೂಲಕ ಪಿಎಚ್.ಡಿ.ಯನ್ನು ಮಾಡಿಸಿದರು. ಅವರ ಹಿಂದಿ ಕೃತಿಗಳನ್ನು ಕನ್ನಡದಲ್ಲಿ ಅನುವಾದಿಸಿದರು. ಗುರುಕುಲ ಶಿಕ್ಷಣ ಪ್ರವರ್ತಕರಾದ ಗುರುದೇವ ಸಮಂತಭದ್ರ ಮಹಾರಾಜರು, ಬಾಹುಬಲಿ ಅವರ ಸಂಪರ್ಕದಿಂದಾಗಿ ಕನ್ನಡ 'ಸನ್ಮತಿ' ಮಾಸ ಪತ್ರಿಕೆಯ ಸಂಪಾದಕರಾಗಿ ಸಮಾಜದ ಎಲ್ಲ ವರ್ಗದ ಜನರ ಮೆಚ್ಚುಗೆಯನ್ನು ಪಾಟೀಲರು ಸಂಪಾದಿಸಿದರು.

ದಕ್ಷಿಣ ಭಾರತ ಜೈನಸಭೆಯ ಕನ್ನಡ ಮಾಸಪತ್ರಿಕೆ 'ಪ್ರಗತಿ ಮತ್ತು ಜಿನವಿಜಯ'ದ ಸಂಪಾದಕರೂ ಆಗಿ ಡಾ. ವಿಲಾಸ ಸಂಗ್ವಿ ಗೌರವ ಸಂಚಿಕೆಯನ್ನು ೨೦೦೭ರಲ್ಲಿ ಹೊರತಂದು ಒಳ್ಳೆಯ ಕೆಲಸ ಮಾಡಿದರು. ಜೈನ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಪರಂಪರೆ, ಸಮಾಜಶಾಸ್ತ್ರ, ಶಾಹೂ ಅಧ್ಯಯನ ಕ್ಷೇತ್ರಗಳಿಗೆ ಅಪೂರ್ವ ಕೊಡುಗೆ ನೀಡಿದವರು ಡಾ. ವಿಲಾಸ ಆದಿನಾಥ ಸಂಗವಿಯವರು. ನಾನು ಧಾರವಾಡದ ಕರ್ನಾಟಕ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೇ ಡಾ. ಸಂಗವಿಯವರು ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಪ್ರಮುಖರಾಗಿ ನೇಮಕಗೊಂಡು ಒಂಬತ್ತು ವರ್ಷ ಕೆಲಸ ಮಾಡಿ, ನಂತರ ಕೊಲ್ಲಾಪುರದ ರಾಜಾರಾಮ ಕಾಲೇಜಿಗೆ ಹೋದರು. ಅವರ ಮಾತೃಭಾಷೆ ಮರಾಠಿಯಾಗಿದ್ದರೂ ಕನ್ನಡವನ್ನು ಓದಿ ಅರ್ಥ ಮಾಡಿಕೊಳ್ಳಬಲ್ಲವರಾಗಿದ್ದರು.

ಶ್ರವಣಬೆಳಗೊಳದ ಭಟ್ಟಾರಕ ಕರ್ಮಯೋಗಿ ಚಾರುಕೀರ್ತಿ ಸ್ವಾಮೀಜಿ, ಅವರು ಪಾಟೀಲರ ಬಗ್ಗೆ ಆತ್ಮೀಯ ಭಾವವನ್ನಿರಿಸಿಕೊಂಡಿದ್ದವರು ಸ್ವತಃ ಸಾಹಿತ್ಯ ಸಂಸ್ಕೃತಿಯ ಬಗ್ಗೆ ಕಾಳಜಿಯುಳ್ಳವರು. ಅದರಿಂದಾಗಿ ಶ್ರೀ ಕ್ಷೇತ್ರದ ಸಾಹಿತ್ಯಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದ್ದರಲ್ಲದೆ ಗ್ರಂಥ ಪ್ರಕಟನೆಯ ವಿಷಯದಲ್ಲಿಯೂ ಪ್ರೋತ್ಸಾಹಿಸಿದರು. ೨೦೦೯ರಲ್ಲಿ ಬೆಂಗಳೂರಲ್ಲಿ ಜರುಗಿದ ಅಖಿಲ ಕರ್ನಾಟಕ ಜೈನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ನೀಡಿ ಇವರನ್ನು ಗೌರವಿಸಿದರು.

ಐನಾಪೂರದ ಆಚಾರ್ಯ ಶ್ರೀ ಕುಂಥುಸಾಗರ ಮಹಾರಾಜರ ಅದ್ಭುತವಾದ ಜೀವನ, ಕನ್ನಡಿಗರಿಗೇ ಪರಿಚಯವಿಲ್ಲದಂತಿರುವ ಸಂದರ್ಭದಲ್ಲಿ ಅವರ ಸಮಗ್ರ ಕೃತಿಗಳನ್ನು ಸಂಪಾದಿಸುವಂತೆ ಪಾಟೀಲರಿಗೆ ಪ್ರೇರಣೆ ನೀಡಿದ್ದಲ್ಲದೆ ತಮ್ಮ ಮಠದ ಜೈನ ಅಧ್ಯಯನ ಸಂಸ್ಥೆಯಿಂದ ಅವುಗಳನ್ನು ಪ್ರಕಟಿಸಿದರು (೨೦೧೫).

ಹೀಗೆ, ತಮಗೆ ಒದಗಿದ ಎಲ್ಲ ಸದವಕಾಶಗಳನ್ನು ವಿದ್ವತ್ತಿನ ಆಳ, ವಿಸ್ತಾರಕ್ಕೆ ಉಪಯೋಗಿಸಿಕೊಂಡ ಪಾಟೀಲರು ಸಂಪೂರ್ಣ ನಿಗರ್ವಿಗಳು. ಪ್ರತಿಭೆಯೊಂದಿಗೆ ಪಾಂಡಿತ್ಯ, ಅದರೊಂದಿಗೆ ಸಾಹಿತ್ಯ ಸಾಧನೆ ಒಂದರಿಂದೊಂದು ನೆರವಾಗಿ ಅನೇಕ ಮಹತ್ವದ ಕೃತಿಗಳನ್ನು ಅವರು ರಚಿಸುವಂತಾಯಿತು. ಅವುಗಳಲ್ಲಿ ೨೯ ಸ್ವತಂತ್ರ ಗ್ರಂಥಗಳಾಗಿದ್ದರೆ ೧೮ ಅನುವಾದಿತ ಕೃತಿಗಳಾಗಿವೆ. ಕೆಲವು ಸಂಪಾದಿತ ಗ್ರಂಥಗಳೂ ಇವೆ. ಹಲವಾರು ಸಮ್ಮೇಳನಗಳ ವಿಚಾರ ಸಂಕಿರಣಗಳಲ್ಲಿ, ಕಮ್ಮಟಗಳಲ್ಲಿ, ದತ್ತಿ ಉಪನ್ಯಾಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅವೆಲ್ಲಕ್ಕೂ ಒಳ್ಳೆಯ ಕೊಡುಗೆ ನೀಡಿದವರು. ಇಷ್ಟೊಂದು ವ್ಯಾಪಕವಾಗಿ ಸಾಹಿತ್ಯ ಸಂಸ್ಕೃತಿಗೆ ಸೇವೆ ಗೈದ ಡಾ. ಎಸ್. ಪಿ. ಪಾಟೀಲರು ಅನೇಕ ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳಿಗೆ ಭಾಜನರಾಗಿರುವಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಹಿಂದೆ, ನಾನು ಕಾಗವಾಡ ಕಾಲೇಜಿನ ವಾರ್ಷಿಕ ಸ್ನೇಹ-ಸಮ್ಮೇಳನಕ್ಕೆ ಡಾ. ಗುರುಲಿಂಗ ಕಾಪಸೆಯವರೊಂದಿಗೆ ಬರುವುದನ್ನು ತಿಳಿದುಕೊಂಡ ಪಾಟೀಲರು, ಮರುದಿನ ನಮ್ಮಿಬ್ಬರನ್ನು ಶೇಡಬಾಳಕ್ಕೆ ಕರೆದುಕೊಂಡು ಹೋದರು. ಅಲ್ಲಿಯ ಸನ್ಮತಿ ವಿದ್ಯಾಲಯದಲ್ಲಿ ನಮಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಿ ಊರಿನ ವತಿಯಿಂದ ಪ್ರೀತಿ ಗೌರವಗಳನ್ನು ವ್ಯಕ್ತಪಡಿಸಿದರು. ಅವರಿಂದ ಮಿರ್ಜಿ ಅಣ್ಣಾರಾಯರ ಶೇಡಬಾಳನ್ನು ನಾವು ಮತ್ತೊಮ್ಮೆ ನೋಡುವಂತಾಯಿತು. ಪಾಟೀಲರು ಈಗ ಸಾಂಗಲಿ ನಿವಾಸಿಗಳಾಗಿದ್ದರೂ ನಮ್ಮ ಸ್ನೇಹ ಸಂಬಂಧಕ್ಕೆ ಎಳ್ಳಷ್ಟೂ ಚ್ಯುತಿ ಬಂದಿಲ್ಲ. ಎಪ್ಪತ್ತೈದು ವಸಂತಗಳನ್ನು ಕಂಡಿರುವ ಅವರು ಕನ್ನಡ ಸಾಹಿತ್ಯಕ್ಕೆ ಇನ್ನೂ ಮಹತ್ವಪೂರ್ಣ ಸೇವೆ ಸಲ್ಲಿಸುವಂತೆ ಭಗವಂತನು ಅವರಿಗೆ ಆಯುರಾರೋಗ್ಯ ಭಾಗ್ಯವನ್ನು ಕರುಣಿಸಲೆಂದು ಹಾರೈಸುತ್ತೇನೆ.

ಸ್ನೇಹ ಸೇತು : ಡಾ. ಎಸ್.ಪಿ. ಪಾಟೀಲ
ಅಮೃತ ಮಹೋತ್ಸವ ಅಭಿನಂದನ ಗ್ರಂಥ
ಸಂಪಾದಕರು : ಡಾ. ಪಿ.ಜಿ. ಕೆಂಪಣ್ಣವರ, ವೈಶಾಲಿ ಪ್ರಕಾಶನ,
ಧಾರವಾಡ - ೨೦೧೬

ವಿದ್ಯಾವಿನಯ ಸಂಪನ್ನರಾದ ಡಾ. ಎಸ್. ವಿದ್ಯಾಶಂಕರ

ಡಾ. ಎಸ್. ವಿದ್ಯಾಶಂಕರ ಅವರು ಕರ್ನಾಟಕ ವಿಶ್ವವಿದ್ಯಾಲಯದಿಂದಲೇ ಎಂ.ಎ. (೧೯೬೬) ಪಾಸಾಗಿದ್ದರೂ ಆಗ ಅವರ ಜೊತೆಗೆ ನನಗೆ ಹೆಚ್ಚು ಸಂಪರ್ಕ ಬಂದಿರಲಿಲ್ಲ. ಮಿತ್ರರಾದ ಡಾ. ಗುರುಲಿಂಗ ಕಾಪಸೆಯವರು ಎಂ.ಎ.ದಲ್ಲಿ ತಮ್ಮ ಸಹಪಾಠಿಯಾಗಿದ್ದ ಅವರ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಿದ್ದರು. ಅವರು ತಮ್ಮ ಪಿಎಚ್.ಡಿ. ಪದವಿಯನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಪಡೆದರೂ ಧಾರವಾಡದ ನಂಟು ಅವರಿಗೆ ಇದ್ದೇ ಇತ್ತು. ಡಾ. ಜಿ.ಎಸ್. ಶಿವರುದ್ರಪ್ಪನವರು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿದ್ದಾಗ ಒಳ್ಳೊಳ್ಳೆ ಅಧ್ಯಾಪಕರ ಪಡೆಯೊಂದು ಅವರ ಜೊತೆಗಿದ್ದು, ಜಿ.ಎಸ್.ಎಸ್. ಕೈಕೊಳ್ಳುವ ಹೊಸ ಹೊಸ ಯೋಜನೆಗಳ ನಿರ್ವಹಣೆಯಲ್ಲಿ ನೆರವಾಗುತ್ತಿದ್ದುದನ್ನು ನಾನು ನೋಡಿದ್ದೇನೆ, ಅವರಲ್ಲಿ ಡಾ.ಎಸ್. ವಿದ್ಯಾಶಂಕರ ಅವರೂ ಒಬ್ಬರಾಗಿರುತ್ತಿದ್ದರು.

ಡಾ. ಜಿ.ಎಸ್. ಶಿವರುದ್ರಪ್ಪನವರ ಅಭಿನಂದನ ಗ್ರಂಥ ('ಸ್ನೇಹ ಕಾರ್ತೀಕ')ದ ಸಂದರ್ಭದಲ್ಲಿ (೧೯೭೫-೭೬) ಡಾ. ವಿದ್ಯಾಶಂಕರ ಅವರು ನನಗೆ ಒಂದೆರಡು ಪತ್ರಗಳನ್ನು ಬರೆದದ್ದೂ ಉಂಟು. ನನ್ನ ಲೇಖನ ತಲುಪಿದ ಬಗ್ಗೆ ತಿಳಿಸುತ್ತ, "ನಮ್ಮಲ್ಲಿ ಬಂದಿರುವ ಲೇಖನಗಳಿಗಿಂತ ನಿಮ್ಮ ಲೇಖನ ಬೇರೆಯಾಗಿದೆ. ನಾವು ಅಪೇಕ್ಷಿಸುತ್ತಿದ್ದುದೂ ಈ ಬಗೆಯ ಸ್ವತಂತ್ರ ಆಲೋಚನೆಯುಳ್ಳ ಲೇಖನವನ್ನೇ" ಎಂದಿದ್ದರು. ಸಂಪಾದಕರಲ್ಲಿ ಒಬ್ಬರಾಗಿದ್ದ ಅವರ ವಿಮರ್ಶಾತ್ಮಕ ನುಡಿಯಿಂದ ನನಗೆ ಸಮಾಧಾನವಾಗಿತ್ತು. ಅಭಿನಂದನ ಗ್ರಂಥಕ್ಕೆ ಒಂದು ಒಳ್ಳೆಯ ಹೆಸರು ಸೂಚಿಸಲು ಡಾ. ಕಾಳೇಗೌಡ ನಾಗವಾರ ಅವರು ಪತ್ರ ಬರೆದುದಕ್ಕೆ 'ಸ್ನೇಹ ಕಾರ್ತೀಕ' ಎಂಬ ಹೆಸರನ್ನು ಸೂಚಿಸಿ, ಆ ಹೆಸರಿನ ಸಾನೆಟ್ ಒಂದನ್ನೂ ಬರೆದು ಕಳಿಸಿದ್ದೆ. ಅದಕ್ಕೆ ಡಾ. ವಿದ್ಯಾಶಂಕರ ಅವರು ಮತ್ತೆ ಪತ್ರ ಬರೆದು, "ಒಳ್ಳೆಯ ಹೆಸರು ಸೂಚಿಸಿ ಸಹಕರಿಸಿದ್ದಕ್ಕೆ ಕೃತಜ್ಞತೆ ತಿಳಿಸಲು ನನ್ನ ಮಾತಿಗೆ ಕಸುವು ಸಾಲದು.....ಅದೇ ಹೆಸರಿನ ಸುಂದರವಾದ ಸಾನೆಟ್ ಒಂದನ್ನು ಕಳುಹಿಸಿರುವಿರಿ. ಅಭಿನಂದನ ಗ್ರಂಥದಲ್ಲಿ ಅದನ್ನೂ ಬಳಸಿಕೊಂಡಿರುವೆವು" ಎಂದು ತಮ್ಮ ಮೆಚ್ಚುಗೆ ಸೂಚಿಸಿದ್ದರು.

ಬಹಳ ವರ್ಷಗಳ ಹಿಂದಿನ ಈ ಘಟನೆ ನೆನಪಾಗಲು ಕಾರಣ, ಡಾ. ಎಸ್. ವಿದ್ಯಾಶಂಕರ ಅವರ ಸಂಸ್ಮರಣ ಸಂಪುಟಕ್ಕೆ 'ವಿದ್ಯಾರತ್ನ' ಎಂಬ ಅನ್ವರ್ಥಕ ಹೆಸರನ್ನು

ಸಂಪಾದಕರು ಇಡಲು ನಿರ್ಧರಿಸಿದ್ದು. ಈ ಗ್ರಂಥದ ಸಂಪಾದಕರು ನನ್ನ ಆತ್ಮೀಯ ಸ್ನೇಹಿತರು. ಅವರ ಮೊದಲ ಪತ್ರಕ್ಕೆ ನನ್ನ ಅನಾರೋಗ್ಯದ ನಿಮಿತ್ತ ಉತ್ತರ ಬರೆದಿದ್ದೆನೋ ಇಲ್ಲವೋ ನೆನಪಿಲ್ಲ. ಈಗ ಮತ್ತೆ ಅವರ ಪತ್ರ ಬಂದಿದೆ. ಲೇಖನ ಬರೆಯಲು ಒಂದಿಷ್ಟು ಅವಧಿಯನ್ನು ವಿಸ್ತರಿಸಲಾಗಿದೆ. ಆದ್ದರಿಂದ ಈ ಕೆಲವು ಮಾತುಗಳಲ್ಲಿ ಡಾ. ಎಸ್. ವಿದ್ಯಾಶಂಕರ ಅವರನ್ನು ಸ್ಮರಿಸಿಕೊಳ್ಳುತ್ತಿದ್ದೇನೆ.

ಡಾ. ವಿದ್ಯಾಶಂಕರ ಅವರು ವಿದ್ಯಾವಿನಯ ಸಂಪನ್ನರು. ಉತ್ತಮ ದರ್ಜೆಯ ವಿದ್ವಾಂಸರು. ಕನ್ನಡ ಅಧ್ಯಯನ ಕೇಂದ್ರದ ಶ್ರೇಷ್ಠ ಪ್ರಾಧ್ಯಾಪಕರಲ್ಲಿ ಒಬ್ಬರಾಗಿ ಬೋಧನೆಯಲ್ಲಿಯೂ ಬರವಣಿಗೆಯಲ್ಲಿಯೂ ಮಿಗಿಲಾದ ಕೆಲಸ ಮಾಡಿದವರು. ಎಷ್ಟೋ ಪ್ರಾಚೀನ ಕನ್ನಡ ಕಾವ್ಯಗಳನ್ನೂ ಮತ್ತು ವಚನ ಸಾಹಿತ್ಯವನ್ನೂ ಆಳವಾಗಿ ಅಧ್ಯಯನ ಮಾಡಿ ಅವುಗಳ ಸಂಪಾದನೆಯ ಕೆಲಸವನ್ನು ಶಾಸ್ತ್ರೀಯವಾಗಿ ಅಚ್ಚುಕಟ್ಟಾಗಿ ಮಾಡಿದ್ದಾರೆ. ವಿದ್ವತ್‌ಪೂರ್ಣವಾದ ಕೃತಿಗಳನ್ನು ರಚಿಸಿ ಅನೇಕ ಬಹುಮಾನಗಳನ್ನೂ ಪ್ರಶಸ್ತಿಗಳನ್ನೂ ಪಡೆದವರಾಗಿದ್ದಾರೆ. ಕೊನೆಗಾಲದಲ್ಲಿ ವೀರಶೈವ ಸಾಹಿತ್ಯ ಚರಿತ್ರೆಯನ್ನು ನಾಲ್ಕು ಸಂಪುಟಗಳಲ್ಲಿ ಆಮೂಲಾಗ್ರವಾಗಿ ಪ್ರಕಟಿಸಿದ್ದು ಕನ್ನಡ ಸಾಹಿತ್ಯಕ್ಕೆ ಅವರ ದೊಡ್ಡ ಕೊಡುಗೆ ಎನಿಸಿದೆ.

ನಿವೃತ್ತರಾದ ಮೇಲೆ ವಿದ್ಯಾಶಂಕರ 'ಸ್ವಪ್ನಲೋಕ' ಎಂಬ ಸಾಂಸ್ಕೃತಿಕ ಮಾಸಪತ್ರಿಕೆಯ ಸಂಪಾದಕ, ಪ್ರಕಾಶಕರಾಗಿ ಎಂಟು ವರ್ಷ ನಿರಂತರ ಪತ್ರಿಕೋದ್ಯಮದ ಅನುಭವವನ್ನು ಪಡೆದಾಗ, ಅವರ ಸಾಹಸವನ್ನು ನೋಡಿ ಸೋಜಿಗಪಟ್ಟವರೂ ಉಂಟು. 'ಪ್ರಿಯದರ್ಶಿನಿ ಪ್ರಕಾಶನ' ಹಾಗೂ ಅನಂತರ 'ಸ್ನೇಹ ಪ್ರಕಾಶನ'ಗಳನ್ನು ಪ್ರಾರಂಭಿಸಿ ಆ ಮೂಲಕ ಅನೇಕ ಲೇಖಕರ ಗ್ರಂಥಗಳನ್ನು ಪ್ರಕಟಿಸಿದ ಶ್ರೇಯಸ್ಸು ಅವರದಾಗಿದೆ. ಅಲ್ಲದೆ ತಮ್ಮ ಮೂವತ್ತಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಿಯದರ್ಶಿನಿ ಪ್ರಕಾಶನದಿಂದಲೇ ಹೊರತಂದಿದ್ದಾರೆ. ದೇಶೀಯ ಮತ್ತು ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಸಾಹಿತ್ಯಕ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಲೇ ಎಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನೂ ನೂರಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದು ಅವರ ಲೇಖನ ಶಕ್ತಿಯನ್ನು ಸೂಚಿಸುತ್ತದೆ.

ಪ್ರೊ. ಮಾಳವಾಡರ ಆತ್ಮಕಥೆ 'ದಾರಿ ಸಾಗಿದೆ' ಕೃತಿಯನ್ನು ಪ್ರಕಟಿಸಿ, ಅದರ ಬಿಡುಗಡೆಯ ಸಮಾರಂಭಕ್ಕೆ ಧಾರವಾಡಕ್ಕೆ ಬಂದಾಗ ನಮ್ಮ ಮನೆಗೂ ಬಂದರು. ನನ್ನ ಒಂದು ಕವನ ಸಂಗ್ರಹವನ್ನು ತಮ್ಮ ಪ್ರಕಾಶನದಿಂದ ಪ್ರಕಟಿಸುವ ಅಪೇಕ್ಷೆ ವ್ಯಕ್ತಪಡಿಸಿದ್ದಲ್ಲದೆ ಶ್ರೀಮತಿ ಕಣವಿಯವರಿಗೂ ಕಥಾಸಂಗ್ರಹವೊಂದನ್ನು ಕೊಡಲು ಕೋರಿದರು. ನನ್ನ 'ಜೇನಿಯಾ' ಕವನ ಸಂಕಲನವನ್ನು ಪ್ರಕಟಿಸಿ (೧೯೯೦)ದ್ದಲ್ಲದೆ

ಮೂರು ವರುಷದನಂತರ ಶ್ರೀಮತಿ ಕಣವಿಯವರ ಕಥಾಸಂಕಲನ 'ನೀಲಿಮಾ ತೀರ'ವನ್ನು ಪ್ರಕಟಿಸಿ ತಮ್ಮ ಪ್ರೀತಿ ವಿಶ್ವಾಸವನ್ನು ವ್ಯಕ್ತಪಡಿಸಿದರು. ಪ್ರಕಾಶಕರಾಗಿ ಲೇಖಕರೊಡನೆ ಈ ರೀತಿ ಸಹೃದಯ ಸಂಬಂಧವನ್ನು ಇಟ್ಟುಕೊಂಡವರು ವಿರಳ. ನಮ್ಮ ದಾಂಪತ್ಯದ ೫೧ನೆಯ ವರ್ಷದ ಸಂದರ್ಭದಲ್ಲಿ ಶ್ರೀಮತಿ ಶಾಂತಾದೇವಿ ಕಣವಿಯವರ ಆಯ್ದ ೫೧ ಕಥೆಗಳ ಗುಚ್ಛ 'ಕಥಾಮಂಜರಿ' (೨೦೦೩)ಯನ್ನು ಪ್ರಕಟಿಸಿದ್ದಲ್ಲದೆ ಎರಡು ವರ್ಷಗಳ ನಂತರ 'ಇನ್ನೊಂದು ಸಂಪುಟ' ಎಂಬ ಹೆಸರಿನಲ್ಲಿ ೪೦ ಕಥೆಗಳನ್ನು ಪ್ರಕಟಿಸಿ ಸಮಗ್ರ ಕಥಾಸಂಕಲನಕ್ಕೆ ನಾಂದಿ ಹಾಡಿದ್ದನ್ನು ನಾವಿಬ್ಬರೂ ಮರೆಯುವಂತಿಲ್ಲ.

ಆಧುನಿಕ ಕನ್ನಡ ಸಾಹಿತ್ಯದ ಆಗುಹೋಗುಗಳಲ್ಲಿಯೂ ಅವರು ವಿಶೇಷ ಆಸಕ್ತಿ ವಹಿಸಿದ್ದರು. ಖ್ಯಾತ ವಿಮರ್ಶಕರಾದ ಡಾ. ಜಿ.ಎಸ್. ಆಮೂರ ಅವರಿಗೆ ೮೦ ತುಂಬಿದಾಗ ಡಾ. ಜಿ.ಎಂ. ಹೆಗಡೆಯವರ ಜೊತೆಗೂಡಿ 'ಸಹೃದಯ ಸಂವಾದ' (ಕನ್ನಡ ವಿಮರ್ಶೆಯ ಪರಂಪರೆ) ಎಂಬ ಅಭಿನಂದನ ಗ್ರಂಥವನ್ನು ಪರಂಪರೆಗಿಂತ ಭಿನ್ನವಾಗಿ ರೂಪಿಸಿ ಪ್ರಿಯದರ್ಶಿನಿ ಪ್ರಕಾಶನದಿಂದಲೇ (೨೦೦೫) ಪ್ರಕಟಿಸಿದರು. ಆಚಾರ್ಯ ಬಿ.ಎಂ. ಶ್ರೀಯವರಿಂದ ಹಿಡಿದು ಡಾ. ಡಿ.ಆರ್. ನಾಗರಾಜ್‌ವರೆಗಿನ ಇಪ್ಪತ್ತೆಂಟು ವಿಮರ್ಶಕರ ಸಾಧನೆ ಹಾಗೂ ವೈಶಿಷ್ಟ್ಯಗಳನ್ನು ವಿವೇಚಿಸುವ ಲೇಖನಗಳನ್ನು ಇದು ಒಳಗೊಂಡಿದೆ. "ಹಾಗೆ ನೋಡಿದರೆ ಒಂದು ಶತಮಾನದಷ್ಟು ಸುದೀರ್ಘವಾದ ಸಾಹಿತ್ಯ ವಿಮರ್ಶೆಯನ್ನು ಪ್ರತ್ಯೇಕವಾಗಿ ಬರೆಯಲು ಇದು ಸರಿಯಾದ ಕಾಲ" ಎಂದು ಈ ಗ್ರಂಥದ ಮುನ್ನುಡಿಯಲ್ಲಿ ಡಾ. ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದುಂಟು.

ಈ ಅಭಿನಂದನ ಗ್ರಂಥದ 'ನಿವೇದನೆ'ಯಲ್ಲಿ ಡಾ. ಜಿ.ಎಸ್. ಆಮೂರ ಅವರು ಡಾ. ವಿದ್ಯಾಶಂಕರ ಅವರ ನೆರವನ್ನು ಹೀಗೆ ಸ್ಮರಿಸಿದ್ದಾರೆ : "'ಅರ್ಥಲೋಕ' ಪ್ರಕಟವಾದ ನಂತರ ನನ್ನ ಹಲವಾರು ಪುಸ್ತಕಗಳನ್ನು ಡಾ. ವಿದ್ಯಾಶಂಕರ ಅವರು ಪ್ರಕಟಿಸಿ ನನಗೆ ಪ್ರಕಾಶಕರ ಕೊರತೆ ಇಲ್ಲದಂತೆ ನೋಡಿಕೊಂಡಿದ್ದಾರೆ. ಅವರ ಪ್ರೋತ್ಸಾಹವಿಲ್ಲದಿದ್ದರೆ 'ಭುವನದ ಭಾಗ್ಯ', 'ವಿರಾಟಪುರುಷ', 'ಕನ್ನಡ ಕಥಲೋಕ'ಗಳಂಥ ದೊಡ್ಡಗಾತ್ರದ ಪುಸ್ತಕಗಳನ್ನು ಹೊರತರುವದು ಖಂಡಿತವಾಗಿಯೂ ಸಾಧ್ಯವಾಗುತ್ತಿರಲಿಲ್ಲ. ಈ ಪ್ರೋತ್ಸಾಹ ಈಗಲೂ ಮುಂದುವರಿದಿದ್ದು ಆಧುನಿಕ ಕನ್ನಡ ಕಾವ್ಯವನ್ನು ಕುರಿತ ನನ್ನ ಹೊಸ ಪುಸ್ತಕ 'ಕೊರಳು ಕೊಳಲು' ಕೂಡ ಅವರ ಪ್ರಕಟಣೆಯಾಗಿಯೇ ಸದ್ಯದಲ್ಲಿ ಹೊರಬರಲಿದೆ" ಸ್ವತಃ ಲೇಖಕರಾದ ಡಾ. ವಿದ್ಯಾಶಂಕರ ಅವರು ಪ್ರಕಾಶಕರಾಗಿ ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಅಷ್ಟೇ ಮಹತ್ವದ್ದಾಗಿದೆ.

'ವಿದ್ಯಾರತ್ನ' ಸಂಸ್ಮರಣ ಗ್ರಂಥ ೨೦೧೭

ಬಸವರಾಜ ಕಟ್ಟೀಮನಿಯವರ ವ್ಯಕ್ತಿತ್ವ

(ಒಡನಾಟದ ಅನುಭವ ಕಥನ)

ಆರು ವರ್ಷಗಳ ಹಿಂದೆ ಈ ಪ್ರತಿಷ್ಠಾನದ ಉದ್ಘಾಟನಾ ಸಮಾರಂಭದಲ್ಲಿಯೂ ನಾನು ಮಾತನಾಡಿದ್ದೆ. ಈ ಪ್ರತಿಷ್ಠಾನದ ಸ್ಥಾಪನೆಗೆ ಮೂಲಕಾರಣರಾಗಿರುವ ಡಾ. ಎಂ.ಎಂ. ಕಲಬುರ್ಗಿಯವರನ್ನು ನಾವು ನೆನಪಿಸಿಕೊಳ್ಳಬೇಕು. ಈಗ 'ಕಟ್ಟೀಮನಿ ನೆನಪಿನಂಗಳ - ಅನುಭವ ಕಥನ' ಕಾರ್ಯಕ್ರಮವನ್ನು ನಾನು ಬಹಳ ಸಂತೋಷದಿಂದ ಉದ್ಘಾಟನೆ ಮಾಡಿದ್ದೇನೆ ನನ್ನ ಹಾಗೂ ಕಟ್ಟೀಮನಿಯವರ ಸ್ನೇಹ ನಲವತ್ತೈದು ವರ್ಷಗಳಷ್ಟು ಸುದೀರ್ಘವಾದುದು. ನನಗಿಂತಲೂ ಸುಮಾರು ಹತ್ತು ವರ್ಷ ಅವರು ದೊಡ್ಡವರು. ಆದರೆ, ಹಿರಿಯ-ಕಿರಿಯ ಎಂಬ ಭೇದಭಾವವಿಲ್ಲದೆ ಎಲ್ಲರಲ್ಲೂ ಸ್ನೇಹವನ್ನು ತೋರಿದವರು ಕಟ್ಟೀಮನಿಯವರು. ನನ್ನ ಅವರ ಪರಿಚಯವಾದದ್ದು ವಿಶಿಷ್ಟವಾದ ಸನ್ನಿವೇಶದಲ್ಲಿ. ೧೯೪೫ರಲ್ಲಿ ನಾನು ಹೈಸ್ಕೂಲಿನಲ್ಲಿ ಮ್ಯಾಟ್ರಿಕ್ ಓದುತ್ತಿದ್ದೆ. ಆಗಲೇ ಅವರು ಎರಡು ವರುಷಗಳಿಂದ 'ಉಷಾ' ಮಾಸಪತ್ರಿಕೆಯ ಸಂಪಾದಕರಾಗಿದ್ದರು. ನಮಗೆಲ್ಲ ಅದು ನೆಚ್ಚಿನ ಪತ್ರಿಕೆಯಾಗಿತ್ತು. ಪ್ರಗತಿಶೀಲ ಸಾಹಿತ್ಯದ ಉತ್ಕೃಷ್ಟಕಾಲವದು. 'ಉಷಾ' ಪತ್ರಿಕೆಯಲ್ಲಿ ಅನೇಕ ಪ್ರಗತಿಶೀಲ ಸಾಹಿತಿಗಳು ಬರೆಯುತ್ತಿದ್ದರು. ಅಡಿಗರ ಪ್ರಾರಂಭಿಕ ಕವಿತೆಗಳನ್ನು ನಾನು ಅಲ್ಲಿಯೇ ಓದಿದ್ದು. ಶ್ರೀರಂಗ, ಕಾರಂತ, ಅ.ನ.ಕೃ., ಪಾಪು., ಕೋಚೆ, ನಿರಂಜನ ಮೊದಲಾದವರೆಲ್ಲ ಅದರಲ್ಲಿ ಬರೆಯುತ್ತಿದ್ದರು. ೧೯೪೫ರಲ್ಲಿ 'ಉಷಾ' ವಿಶೇಷಾಂಕ ಪ್ರಕಟವಾಗುವುದು ವಿಳಂಬವಾಗಿತ್ತು. ನಾನು ಮತ್ತು ಮಿತ್ರ ಅನಾಡ ಸೇರಿ ಅದರ ಏಜೆಂಟರಾಗಿದ್ದ ಹುದ್ದಾರ ಅವರಲ್ಲಿಗೆ ಹೋಗಿ ವಿಚಾರಿಸಿದಾಗ, ಅದರ ಸಂಪಾದಕ ಬಸವರಾಜ ಕಟ್ಟೀಮನಿಯವರು ಇದೇ ತಾನೆ ಬಂದು ಹೋಗಿರುವುದಾಗಿ ಮತ್ತು ಬಾಂಬೆ ರೆಸ್ಟಾರೆಂಟಿನಲ್ಲಿರುವುದಾಗಿ ತಿಳಿಸಿದರು. ನಾವು ಅತ್ತ ಹೆಜ್ಜೆ ಹಾಕಿದೆವು. ಒಂದು ಮೂಲೆಯಲ್ಲಿ ಖಾದಿ ಶರ್ಟು, ಪೈಜಾಮ ಧರಿಸಿದ ಒಬ್ಬ ವ್ಯಕ್ತಿ ಸಿಗರೇಟು ಸೇದುತ್ತ ಕುಳಿತಿದ್ದರು. ಇವರೇ ಕಟ್ಟೀಮನಿ ಎಂದು ಊಹಿಸಿ ಮಾತಿಗೆ ತೊಡಗಿದೆವು. ಆಗ ಕಟ್ಟೀಮನಿಯವರು 'ಭಿನ್ನಾಭಿಪ್ರಾಯ ಬಂತು, ಉಷಾ ಬಿಟ್ಟು ಬಂದೆ' ಎಂದು ಶಾಕ್ ನೀಡಿದರು. ನಾನೇ ಸ್ವತಂತ್ರವಾಗಿ ಒಂದು ಪತ್ರಿಕೆ ಪ್ರಾರಂಭಿಸುವ ವಿಚಾರದಲ್ಲಿದ್ದೇನೆ ಎಂದವರು ಮುಂದೆ ೧೯೪೮ರ ಜುಲೈ ತಿಂಗಳಲ್ಲಿ 'ಸ್ವತಂತ್ರ' ಪ್ರಾರಂಭಿಸಿದರು. ಅದರ ಮೊದಲ ಸಂಚಿಕೆಯ

ಮುಖಪುಟದಲ್ಲಿ ಕುವೆಂಪು ಅವರ ಚಿತ್ರ. ಒಳಗಡೆ 'ಓ ನನ್ನ ಚೇತನ, ಆಗು ನೀ ಅನಿಕೇತನ' ಕವಿತೆ ಪ್ರಕಟವಾಗಿತ್ತು. ಅಡಿಗರ 'ಕಟ್ಟುವೆವು ನಾವು' ಕವಿತೆ ಕೂಡ ಇದೇ ಪತ್ರಿಕೆಯಲ್ಲಿ ನಂತರದ ದಿನಗಳಲ್ಲಿ ಪ್ರಕಟವಾಗಿತ್ತು. ನಾನು ಕಾಲೇಜು ಸೇರುವಷ್ಟೊತ್ತಿಗೆ ಅದರಲ್ಲಿ ನನ್ನ ಒಂದೆರಡು ಕವಿತೆಗಳು ಪ್ರಕಟಗೊಂಡಿದ್ದವು. ಈ ಪತ್ರಿಕೆ ಮೊದಲು ಬೆಂಗಳೂರಿನಿಂದ ನಂತರ ದಾವಣಗೆರೆಯಿಂದ ಬರಲಾರಂಭಿಸಿತ್ತು. ದಾವಣಗೆರೆಯಲ್ಲಿ ಕಾರ್ಮಿಕ ಚಳುವಳಿಯಲ್ಲಿ ಅವರು ತೊಡಗಿಸಿಕೊಂಡರು. ಅಲ್ಲಿಂದ ೧೯೪೮ರಲ್ಲಿ ಮತ್ತೆ ಧಾರವಾಡಕ್ಕೆ ಮರಳಿದರು. ಆಗ ಬಾಲಚಂದ್ರ ಘಾಣೇಕರ ಅವರು (ಶ್ರೀ ಮನೋಹರ ಘಾಣೇಕರ ಅವರ ತಂದೆ) ಸ್ಥಾಪಿಸಿದ್ದ 'ಸಮಾಜ' ಪತ್ರಿಕೆ ಈಗ ಶಂಭೂರಾವ ಜಠಾರ ಅವರ ಅಧೀನದಲ್ಲಿತ್ತು. ಅಲ್ಲಿ ಅವರು ಸಂಪಾದಕರಾಗಿ ಸೇರಿದರು. ಒಂದು ಸಂಚಿಕೆಯಲ್ಲಿ ಅವರು ಆರ್.ಎಸ್.ಎಸ್.ನ್ನು ಟೀಕಿಸಿ ಲೇಖನವೊಂದನ್ನು ಬರೆದದ್ದು ಅವರ ಕೆಲಸಕ್ಕೆ ಮುಳುವಾಯಿತು.

ಡಾ. ಕಣವಿಯವರು ಬಸವರಾಜ ಕಟ್ಟೀಮನಿಯವರೊಂದಿಗಿನ ತಮ್ಮ ಒಡನಾಟವನ್ನು ಮೆಲುಕು ಹಾಕುತ್ತ ಹೇಳಿದರು. "ನಾನು ಕಿತ್ತೂರು ಕೋಟೆಯನ್ನು ಮೊದಲಬಾರಿಗೆ ನೋಡಿದ್ದು ಕಟ್ಟೀಮನಿಯವರೊಂದಿಗೆ ಒಂದು ದಿನ ಅವರು ನಮ್ಮ ಮನೆಗೆ ಬುತ್ತಿ ಕಟ್ಟಿಕೊಂಡು ಬಂದು ನನ್ನನ್ನು ಕಿತ್ತೂರು ಕೋಟೆ ನೋಡಲು ಬರುವಂತೆ ಕರೆದರು. ನನಗೂ ಅದನ್ನು ನೋಡುವ ಆಸೆ ಇತ್ತು. ನಾನು ಅವರೊಂದಿಗೆ ಹೊರಟೆ. ಒಂದು ಕಡೆ ಕುಳಿತು ಕೋಟೆಯ ರೇಖಾ ಚಿತ್ರ (ಸ್ಕೆಚ್) ಬಿಡಿಸಿದರು. ನರಗುಂದದಲ್ಲಿಯೂ ಹಾಗೇ ಮಾಡಿದರು. ಮುಂದೆ 'ಪೌರುಷ ಪರೀಕ್ಷೆ', 'ನರಗುಂದ ಬಂಡಾಯ' ಕಾದಂಬರಿಗಳನ್ನು ಬರೆದಾಗ ಬಹುಶಃ ಆ ರೇಖಾಚಿತ್ರಗಳನ್ನು ಉಪಯೋಗ ಮಾಡಿರಬಹುದು. ಇನ್ನೊಮ್ಮೆ, ನಾನು ಬಿ.ಎ. ಓದುತ್ತಿರುವಾಗಿನ ಸಮಯ. ನಾನು ಅವರೊಂದಿಗೆ ರೋಣಕ್ಕೆ ನಾಡಹಬ್ಬಕ್ಕೆ ಹೋಗಿದ್ದೆ. ಅಲ್ಲಿ ಅಬ್ಬಿಗೇರಿ ವಿರುಪಾಕ್ಷಪ್ಪನವರು ತಮ್ಮ ಸಮಾಜವಾದಿ ಸ್ನೇಹಿತರೊಂದಿಗೆ 'ಪ್ರಗತಿಕೂಟ' ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದರು. ಅವರು ನಾಡಹಬ್ಬ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಅಲ್ಲಿ ಕಟ್ಟೀಮನಿಯವರು ಕರ್ನಾಟಕ ಏಕೀಕರಣದ ಕುರಿತು ಮಾತನಾಡುತ್ತ ಅಲ್ಲಿನ ರಾಜಕೀಯ ನಾಯಕರನ್ನು ಕಟುವಾಗಿ ಟೀಕಿಸಿದರು. ಪರಿಣಾಮ, ಪ್ರೇಕ್ಷಕರ ಮಧ್ಯದಿಂದ ತೂರಿಬಂದ ಒಂದೆರಡು ಕಲ್ಲುಗಳು ಟೇಬಲ್ಲಿಗೆ ಬಡಿದವು. ಇದಕ್ಕಂಜದ ಕಟ್ಟೀಮನಿಯವರು ತಾವು ಹೇಳಬೇಕಾದುದನ್ನು ಹೇಳಿಯೇ ಮಾತುಗಳನ್ನು ಮುಗಿಸಿದರು. ಇದು ಅವರ ಎದೆಗಾರಿಕೆಗೆ ಸಾಕ್ಷಿ. ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಕಟ್ಟೀಮನಿಯವರು ಸಹಿಸಿಕೊಂಡವರಲ್ಲ. ಅಂಥ ಪ್ರಸಂಗಗಳು ಎದುರಾದಾಗೆಲ್ಲ ತಕ್ಷಣ

ಲೇಖನಗಳನ್ನು ಬರೆದು ಪ್ರತಿಭಟಿಸುತ್ತಿದ್ದರು. ರಾಜಕೀಯ ಹಾಗೂ ಸಾಹಿತ್ಯಕ್ಷೇತ್ರಗಳೆರಡಕ್ಕೂ ಈ ಮಾತು ಅನ್ವಯಿಸುತ್ತದೆ. ಅನೇಕ ಸಲ ಇಂಥ ಲೇಖನಗಳನ್ನು ನನ್ನ ಮುಂದೆ ಓದುತ್ತಿದ್ದರು. ಒಮ್ಮೊಮ್ಮೆ ನಾನು ಬೇಡವೆಂದರೆ, ಅನಗತ್ಯ ಎಂದು ಹೇಳಿದರೆ ಅವುಗಳನ್ನು ಅಲ್ಲಿಯೇ ಹರಿದು ಹಾಕುತ್ತಿದ್ದರು. ಕೆಲವು ಸಲ ಯಾರನ್ನೂ ಕೇಳದೆ ತಮ್ಮ ಪ್ರತಿಕ್ರಿಯೆಗಳನ್ನು ಪ್ರಕಟಿಸುತ್ತಿದ್ದರು.

ಅವರು ಧಾರವಾಡದಲ್ಲಿ ಒಂದು ಮನೆಯನ್ನು ಕೊಂಡಿದ್ದರು. ಅದಕ್ಕೆ ಅವರು 'ಕಾದಂಬರಿ' ಎಂದು ಹೆಸರಿಟ್ಟಿದ್ದರು. ನಂತರ ಯಾವುದೋ ಸಂದರ್ಭದಲ್ಲಿ ಅದನ್ನು ಮಾರಿದರು. ಹಾಗೆ ಮಾರುವಾಗ ಯಾವುದೇ ಸ್ನೇಹಿತರನ್ನು ಕೇಳಲೇ ಇಲ್ಲ. ಆಮೇಲೆ ವಿಶ್ವವಿದ್ಯಾಲಯಕ್ಕೆ ಸಮೀಪವಿರುವ 'ನವೋದಯ ಹೌಸಿಂಗ್ ಸೊಸೈಟಿ' ಲೇಔಟ್‌ನಲ್ಲಿ ಒಂದು ನಿವೇಶನ ಖರೀದಿಸಿ ಅಲ್ಲೊಂದು ಮನೆ ಕಟ್ಟಿದರು. ಅದಕ್ಕೆ 'ಸಾಹಿತ್ಯ ಶ್ರೀ' ಎಂದು ಹೆಸರಿಟ್ಟರು. ಒಂದು ದಿನ ಯಾರಿಗೂ ಹೇಳದೆ ಅದನ್ನೂ ಮಾರಿದರು. ಕೆಲವು ದಿನ ಅದರ ಔಟ್‌ಹೌಸ್‌ದಲ್ಲಿ ವಾಸವಾಗಿದ್ದರು. ಇನ್ನೊಮ್ಮೆ ಯಾವ ಸ್ನೇಹಿತರಿಗೂ ಹೇಳದೆ ತಮ್ಮೆಲ್ಲ ಕಾದಂಬರಿಗಳ, ಕಥಾಸಂಕಲನಗಳ, ಕೃತಿಗಳ ಸ್ವಾಮ್ಯವನ್ನು ಐ.ಬಿ.ಎಚ್. ದವರಿಗೆ ನೀಡಿಬಿಟ್ಟರು. ನಾವು ಕೆಲವು ಗೆಳೆಯರು, "ಹೀಗೇಕೆ ಮಾಡಿದಿರಿ?" ಎಂದು ಕೇಳಿದರೆ, ಏನೋ ದುಡ್ಡಿನ ಅಡಚಣೆಗಾಗಿ ಮಾರಿದ್ದೇನೆ ಎಂದರು. ಮತ್ತೊಂದು ಸಂದರ್ಭ ಗೋಕಾಕ ಚಳುವಳಿಯದು. ಅದು ತುಂಬ ಜೋರಾಗಿ ನಡೆದಿತ್ತು ಅದಕ್ಕೆ ಶಂ. ಬಾ. ಜೋಶಿಯವರು, ನಂತರ ಪಾಟೀಲ ಪುಟ್ಟಪ್ಪನವರು ಅಧ್ಯಕ್ಷರಾಗಿದ್ದರು. ಪಾಪು ಅವರು ಅಧ್ಯಕ್ಷರಾಗಿದ್ದಾಗ ಅದರ ಒಂದು ಸಭೆಯಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು. ಸಭೆಯ ನಂತರ ಮನೆಗೆ ಹೋದವರೆ, ಯಾರಿಗೂ ಹೇಳದೆ ತಾನು ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಫೋನ್ ಮೂಲಕ ಪತ್ರಿಕಾ ಹೇಳಿಕೆ ನೀಡಿದರು. ಇದರಿಂದಾಗಿ ಪಾಟೀಲ ಪುಟ್ಟಪ್ಪನವರು ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಅವರೊಂದಿಗೆ ಸುದೀರ್ಘವಾಗಿ ಚರ್ಚಿಸಿ, ಅವರ ಮನವೊಲಿಸಿ ರಾಜೀನಾಮೆ ಹಿಂತೆಗೆದುಕೊಳ್ಳುವಂತೆ ಮಾಡಿದರು. ಇದೊಂದು ಪ್ರಯಾಸಕರ ಕೆಲಸವಾಗಿತ್ತು. "ದುಡುಕಿನ ಸ್ವಭಾವ ನನ್ನ ದೌರ್ಬಲ್ಯ"ಎಂದು ಅವರೇ ಒಪ್ಪಿಕೊಂಡಿದ್ದಾರೆ.

೧೯೫೫ರಲ್ಲಿ ಮೈಸೂರಿನ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕಟ್ಟೀಮನಿಯವರು ಮತ್ತು ನಾನು ಜೊತೆಯಾಗಿ ಹೋಗಿದ್ದೆವು. ಕಾರಂತರು ಆ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಮಹಾರಾಜಾ ಕಾಲೇಜಿನ ಹಾಸ್ಟೆಲ್ಲಿನಲ್ಲಿ ನಮ್ಮ ವಾಸ. ಅಲ್ಲಿ ತಲುಪಿದ ಮರುದಿನ ಬೆಳಗಿನ ಕಾಫಿ ಮುಗಿದಿತ್ತು. ಅದೇ ಆಗ

ಕಟ್ಟೀಮನಿಯವರು ಸಿಗರೇಟು ಹಚ್ಚಿದ್ದರು. ಇದ್ದಕ್ಕಿದ್ದಂತೆ ಬಾಗಿಲು ತಟ್ಟಿದ ಸದ್ದಾಯಿತು. ನಾನು ಹೋಗಿ ಬಾಗಿಲು ತೆರೆದರೆ ಆಶ್ಚರ್ಯ ಕಾದಿತ್ತು. ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿದ್ದ ಕುವೆಂಪುರವರೇ ಸ್ವತಃ ಬಾಗಿಲಲ್ಲಿ ನಿಂತಿದ್ದರು. 'ಕಾಫಿ ಆಯ್ತಾ?' ಎನ್ನುತ್ತಲೇ ಒಳಬಂದ ಕುವೆಂಪು ಅವರನ್ನು ಕಂಡ ಕಟ್ಟೀಮನಿಯವರು ಕೈಯಲ್ಲಿದ್ದ ಸಿಗರೇಟನ್ನು ಉಜ್ಜಿ ದೂರ ಎಸೆದರು. ಯಾರಿಗೂ ಕೇರ್ ಮಾಡದ ಕಟ್ಟೀಮನಿಯವರ ಅಂದಿನ ವರ್ತನೆ ಇನ್ನೂ ನನ್ನ ಕಣ್ಣಮುಂದೆ ಕಟ್ಟಿದಂತಿದೆ. ಅದೇ ಸಮ್ಮೇಳನದ ಸಂದರ್ಭದಲ್ಲಿ ತೆಗೆಸಿಕೊಂಡ ಫೋಟೋ ಕಟ್ಟೀಮನಿ ಪ್ರತಿಷ್ಠಾನದ ಮ್ಯೂಸಿಯಮ್‌ನಲ್ಲಿ ಇದೆ. ಮೈಸೂರಿನಲ್ಲಿ ನಾವು ಕೆ.ಎಸ್. ನರಸಿಂಹಸ್ವಾಮಿ, ಡಿ.ವಿ.ಜಿ., ಅ.ನ.ಕೃ., ವಿ. ಸೀತಾರಾಮಯ್ಯ ಇವರೆಲ್ಲರ ಮನೆಗೆ ಹೋಗಿಬಂದೆವು. ಅ.ನ.ಕೃ. ಅವರೊಂದಿಗೆ ಕಟ್ಟೀಮನಿಯವರಿಗೆ ವಿಶೇಷ ಸಲುಗೆಯಿತ್ತು. ಅವರ ಮನೆಯಿಂದ ಬರುವಾಗ 'ನೀವು ಯಾವಾಗ ಸಮ್ಮೇಳನದ ಅಧ್ಯಕ್ಷರಾಗುವಿರಿ?' ಎಂದು ಕೇಳಿದರು. ಆಗ ಅ.ನ.ಕೃ. ಇವರ ಹೆಗಲ ಮೇಲೆ ಕೈಹಾಕಿ, 'ನೀನು ಅಧ್ಯಕ್ಷನಾಗುವುದನ್ನು ನಾನು ನೋಡಬೇಕು' ಎಂದರು. ಮುಂದೆ ಐದಾರು ವರ್ಷಗಳ ತರುವಾಯ ಮಣಿಪಾಲ ಸಾಹಿತ್ಯ ಸಮ್ಮೇಳನಕ್ಕೆ ಅ.ನ.ಕೃ. ಅಧ್ಯಕ್ಷರಾದರು. ನಾವಿಬ್ಬರೂ ಅಲ್ಲಿಗೆ ಹೋಗಿದ್ದೆವು. ಮುಂದೆ ೧೯೮೦ರಲ್ಲಿ ಕಟ್ಟೀಮನಿಯವರು ಬೆಳಗಾವಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದಾಗ ಅದನ್ನು ನೋಡಿ ಆನಂದಿಸಲು ಅ.ನ.ಕೃ. ಇರಲಿಲ್ಲ.

ಕುಂದರನಾಡು ಸ್ವಾತಂತ್ರ್ಯ ಹೋರಾಟಕ್ಕೆ ಹೆಸರಾದುದು. ಅಲ್ಲಿನ ಸಾವಿರಾರು ಸ್ವಾತಂತ್ರ್ಯಯೋಧರು ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿದ ಇತಿಹಾಸವಿದೆ. ಮಲಾಮರಡಿ ಸಹ ಕುಂದರನಾಡಿನ ಸುಂದರ ಪರಿಸರದಲ್ಲಿರುವ ಒಂದು ಹಳ್ಳಿ. ಬಸವರಾಜ ಕಟ್ಟೀಮನಿಯವರು ಕುಂದರನಾಡಿನಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯಿಂದ ಪ್ರಭಾವಿತರಾಗಿ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಕಟ್ಟೀಮನಿಯವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ, ಒಂದು ವರ್ಷ ಹಿಂಡಲಗಾ ಜೈಲಿನಲ್ಲಿ ಕಳೆದರು. ಹೋರಾಟದ ಈ ಅನುಭವವನ್ನು ಅವರು ತಮ್ಮ 'ಮಾಡಿ ಮಡಿದವರು' ಕಾದಂಬರಿಯಲ್ಲಿ ಕಲಾತ್ಮಕವಾಗಿ ದಾಖಲಿಸಿದ್ದಾರೆ. ಅನೇಕ ವಿಮರ್ಶಕರು ಈ ಕಾದಂಬರಿಯನ್ನು ಮೆಚ್ಚಿಕೊಂಡು ಬರೆದಿದ್ದಾರೆ. ಅನಂತರ 'ಜ್ವಾಲಾಮುಖಿಯ ಮೇಲೆ', 'ಮೋಹದ ಬಲೆಯಲ್ಲಿ', 'ಹೆಂಡತಿ', 'ಮಣ್ಣು ಮತ್ತು ಹೆಣ್ಣು' ಹೀಗೆ ನಲವತ್ತು ಕಾದಂಬರಿಗಳನ್ನು ಅವರು ಬರೆದಿದ್ದಾರೆ. ಇವುಗಳಲ್ಲಿ ಬಹಳಷ್ಟು ಕಾದಂಬರಿಗಳನ್ನು ಅವರು ಮಲಾಮರಡಿಯಲ್ಲಿ ಕುಳಿತುಕೊಂಡೇ ಬರೆದಿದ್ದಾರೆ. ಮಲಾಮರಡಿಯಲ್ಲಿನ ಅವರ ಮನೆಯನ್ನು ನೋಡಿದವರಿಗೆ ಇಷ್ಟು ಇಕ್ಕಟ್ಟಿನ ಸ್ಥಳದಲ್ಲಿ ಕುಳಿತುಕೊಂಡು

ಅವರು ಇಷ್ಟೆಲ್ಲ ಕಾದಂಬರಿಗಳನ್ನು ಹೇಗೆ ಬರೆದಿದ್ದಾರೆ ಎಂದು ಆಶ್ಚರ್ಯಪಡುವಂತಿವೆ. 'ಜ್ವಾಲಾಮುಖಿಯ ಮೇಲೆ' ಕಾದಂಬರಿಯನ್ನು ಬರೆದ ಮೇಲೆ ಅವರು ಧಾರವಾಡದ ನನ್ನ ಕೋಣೆಗೆ ಬಂದರು ಮತ್ತು ಅಲ್ಲಿಂದಲೇ ಬೆಂಗಳೂರಿಗೆ ತೆರಳಿದ್ದರು. ನಮ್ಮ ಕೋಣೆಯಲ್ಲಿ ಮಂಗಳೂರಿನ ಕಡೆಯವರಾದ ಎಂ. ಮೋಹನ ಎಂಬುವವರಿದ್ದರು. ಅವರು ಎಂ.ಎ. ಓದುತ್ತಿದ್ದರು. ಅವರೊಂದಿಗೆ 'ಜ್ವಾಲಾಮುಖಿಯ ಮೇಲೆ' ಕಾದಂಬರಿಯ ಕುರಿತು ಚರ್ಚೆ ಮಾಡಿದ್ದು ನನಗಿನ್ನೂ ನೆನಪಿದೆ. ಮುಂದೆ ಆ ಕಾದಂಬರಿಯನ್ನು ಅವರು ಬೆಂಗಳೂರಿನ ಶಾರದಾ ಪ್ರಕಟಣಾಲಯಕ್ಕೆ ನೀಡಿದರು. ಅವರ ಬಹುತೇಕ ಕೃತಿಗಳನ್ನು ಶಾರದಾ ಪ್ರಕಟಣಾಲಯದವರೇ ಪ್ರಕಟಿಸಿದ್ದಾರೆ. ಕಟ್ಟೀಮನಿಯವರು ತಮ್ಮ ಕಾದಂಬರಿಗಳ ಕುರಿತು ಸ್ವವಿಮರ್ಶೆ ನಡೆಸುತ್ತಿದ್ದರು. ಅವರ 'ಕಾರವಾನ' ಕಥಾ ಸಂಕಲನ ಆ ಕಾಲದಲ್ಲಿ ಬಹಳ ಇಷ್ಟವಾದ ಕಥಾಸಂಕಲನವಾಗಿತ್ತು. ಎರಡನೆಯ ಕಥಾಸಂಕಲನ 'ಗುಲಾಬಿ ಹೂ' ಬಂತು. ಅವರ ಸ್ವವಿಮರ್ಶೆ ಎಷ್ಟು ಪ್ರಖರವಾಗಿತ್ತೆಂದರೆ, 'ಗುಲಾಬಿ ಹೂ' ಕಥಾಸಂಕಲನದ ಮುಖಪುಟದ ಮೇಲೆ 'ನಾನು ಸತ್ತ ನಂತರವೂ ಇದು ಮರುಮುದ್ರಣಗೊಳ್ಳಬಾರದು' ಎಂದು ಬರೆದಿದ್ದರು. ೧೯೬೮ರಲ್ಲಿ 'ಮಯೂರ' ಮಾಸಿಕ ಎಲ್ಲ ಹಿರಿಯ ಲೇಖಕರ ಕುರಿತು ಒಂದು ಮಾಲಿಕೆಯನ್ನು ಪ್ರಕಟಿಸಲಾರಂಭಿಸಿತು. ಈ ಮಾಲಿಕೆಯಲ್ಲಿ ನಾನು ಕಟ್ಟೀಮನಿಯವರನ್ನು ಕುರಿತು 'ಕ್ರಾಂತಿಕಾರಿ ಕಾದಂಬರಿಕಾರ' ಲೇಖನವನ್ನು ಬರೆದೆ. ಅದರಲ್ಲಿ ನಾನು ಕಟ್ಟೀಮನಿಯವರನ್ನು, ಎಲ್.ಎಸ್. ಶೇಷಗಿರಿರಾಯರನ್ನು ಉಲ್ಲೇಖಿಸಿದ್ದನ್ನು ದಾಖಲಿಸಿದ್ದೆ. ಅದನ್ನು ಓದಿದ ಶೇಷಗಿರಿರಾಯರು, ಕಟ್ಟೀಮನಿಯವರ ಔದಾರ್ಯವನ್ನು ಮೆಚ್ಚಿಕೊಂಡು, ಒಂದು ಪತ್ರವನ್ನು ಬಸವರಾಜ ಕಟ್ಟೀಮನಿಯವರಿಗೆ ಬರೆದಿದ್ದರು.

ಬೆಳಗಾವಿ ಭಾಗದಲ್ಲಿ ಕಟ್ಟೀಮನಿಯವರು ಮಾಡಿದ ರೈತ ಸಂಘಟನೆ ಬಹಳ ಮಹತ್ವದ ಘಟನೆ. ಅಂಕಲಗಿಯಲ್ಲಿ ಬೆಳಗಾವಿ ಜಿಲ್ಲಾ ರೈತ ಸಮ್ಮೇಳನವನ್ನು ಮಾಡಿದ್ದು ನನಗೆ ನೆನಪಿದೆ. ಎಸ್. ನಿಜಲಿಂಗಪ್ಪನವರು ಅದರ ಅಧ್ಯಕ್ಷರಾಗಿದ್ದರು. ಮಲಾಮರಡಿ ಊರ ಸುಧಾರಣೆಗೂ ಕೆಲವು ಕಾರ್ಯಗಳನ್ನು ಅವರು ಮಾಡಿದ್ದುಂಟು. ನಾನು ಆಗಾಗ ಅವರ ಊರಿಗೆ ಹೋಗುತ್ತಿದ್ದೆ. ಆಗ ಅವರ ತಾಯಿಯನ್ನು ನೋಡುವ ಅವಕಾಶ ಸಿಕ್ಕಿತ್ತು. ಬಹಳ ಎತ್ತರಕಾಯ ಅವರದು. ಎಂಬತ್ತು ವರ್ಷ ಬದುಕಿದ್ದವರು. ಕಟ್ಟೀಮನಿಯವರಿಗೆ ತಾಯಿಯ ಮೇಲೆ ಅಪಾರವಾದ ಪ್ರೀತಿಯಿತ್ತು. ಕಟ್ಟೀಮನಿಯವರ ವ್ಯಕ್ತಿತ್ವವನ್ನು ರೂಪಿಸಿದವರೇ ಅವರು. ಆನಂತರ ರಾಜಕೀಯಕ್ಕೆ ಬಂದರು. ೧೯೬೮ರಲ್ಲಿ ವಿಧಾನ ಪರಿಷತ್ತಿಗೆ ಅವರ ನಾಮಕರಣವಾಯಿತು. ಆಗಲೂ ಅವರು ಹಲವಾರು

ಜನರಿಗೆ ನೆರವು ನೀಡಿದರು. ಅದೇ ವರ್ಷ ಅವರ 'ಜ್ವಾಲಾಮುಖಿಯ ಮೇಲೆ' ಕಾದಂಬರಿಗೆ 'ಸೋವಿಯತ್ ಲ್ಯಾಂಡ್ ಪ್ರಶಸ್ತಿ' ಬಂತು. ೧೯೬೯ ರಿಂದ ೧೯೭೨ರವರೆಗೆ ಕರ್ನಾಟಕ ವಿಶ್ವವಿದ್ಯಾಲಯ ಸೆನೆಟ್ ಸದಸ್ಯರಾಗಿದ್ದರು. ಆಗ ಹಟ ಹಿಡಿದು ಕನ್ನಡ ಅಧ್ಯಯನ ಪೀಠಕ್ಕೆ ಸ್ವತಂತ್ರ ಕಟ್ಟಡ ನಿರ್ಮಾಣದ ಪ್ರಸ್ತಾವವನ್ನು 'ಪಾಸ್' ಮಾಡಿಸಿದರು. ಕಟ್ಟೀಮನಿಯವರು ಕಾವ್ಯಪ್ರಿಯರೂ ಆಗಿದ್ದರು. ಕವಿತೆಯಿಂದಲೇ ಅವರ ಬರವಣಿಗೆ ಪ್ರಾರಂಭವಾಗಿತ್ತು. ನೂರಾರು ಕವಿತೆಗಳನ್ನು ಬರೆದ ನಂತರ ಸಣ್ಣಕತೆ, ಕಾದಂಬರಿ ಪ್ರಕಾರಕ್ಕೆ ಹೊರಳಿದರು. ಬಳ್ಳಾರಿ ಸಾಹಿತ್ಯ ಸಮ್ಮೇಳನಕ್ಕೆ ನಾವಿಬ್ಬರೂ ಹೋಗಿದ್ದೆವು. ಡಾ. ವಿ.ಕೃ.ಗೋಕಾಕರು ಅಧ್ಯಕ್ಷರಾಗಿದ್ದರು. ಅಲ್ಲಿ ಕಟ್ಟೀಮನಿಯವರು ಯಾವ ವಿಚಾರಗೋಷ್ಠಿಗಳಲ್ಲೂ ಭಾಗವಹಿಸದೆ ಕವಿಗೋಷ್ಠಿಯಲ್ಲಿ ಭಾಗವಹಿಸಿದರು. ಆಗ ರಷ್ಯಾದವರು ಹಾರಿಸಿದ 'ಸ್ಪುಟ್ನಿಕ್' ಕುರಿತು ಕವಿತೆಯನ್ನೋದಿ ನಮ್ಮನ್ನೆಲ್ಲ ಆಶ್ಚರ್ಯಗೊಳಿಸಿದ್ದರು. ಸಮ್ಮೇಳನ ನಡೆದ ಸ್ಥಳದ (ಹಾಲ್‌ನ) ಪಕ್ಕದಲ್ಲಿಯೇ ಒಂದು ಕೊಠಡಿಯಿತ್ತು. ಅಲ್ಲಿ ಚಹಾದ ವ್ಯವಸ್ಥೆಯಿತ್ತು. ನಾವೆಲ್ಲ ಅಲ್ಲಿ ಕುಳಿತಿದ್ದೆವು. ಅಲ್ಲಿ ಬೀಚಿಯವರೂ ಇದ್ದರು. ಅನೇಕ ಹಿರಿಯ ಸಾಹಿತಿಗಳು ಸೇರಿದ್ದ ಆ ಸಂದರ್ಭದಲ್ಲಿ ಹರಟೆ, ನಗೆ ಚಟಾಕಿಗಳು, ಅವುಗಳಲ್ಲಿ ಕಟ್ಟೀಮನಿಯವರು ಚಿಮ್ಮಿಸಿದ ನಗೆಬುಗ್ಗೆಗಳನ್ನು ನಾನು ಇನ್ನೂ ನೆನಪಿಟ್ಟುಕೊಂಡಿದ್ದೇನೆ.

ಕಟ್ಟೀಮನಿಯವರು ಆ ಕಾಲದಲ್ಲಿ ನಡೆಸಿದ ಪತ್ರವ್ಯವಹಾರಗಳು ಸಾಹಿತ್ಯದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿವೆ. ಅಡಿಗರೊಂದಿಗೆ ನಡೆದ ಅವರ ಪತ್ರ ಸಂವಾದ ಇವುಗಳಲ್ಲಿ ತುಂಬ ಮುಖ್ಯವಾದುದು. ಇವುಗಳಲ್ಲಿ ಕೆಲವು 'ಕಾದಂಬರಿಕಾರನ ಕತೆ'ಯಲ್ಲಿ ದಾಖಲಾಗಿವೆ. 'ಮಂಕುತಿಮ್ಮನ ಕಗ್ಗ'ದ ಒಂದು ಪದ್ಯದೊಂದಿಗೆ ಮುಕ್ತಾಯವಾಗುವ ಈ ಕೃತಿಯನ್ನು ತಾವೆಲ್ಲ ಓದಬೇಕು. ೧೯೮೯ರಲ್ಲಿ ಕಟ್ಟೀಮನಿಯವರು ಧಾರವಾಡದಲ್ಲಿ ಇನ್ನಿಲ್ಲವಾದರು. ಅವರ ಸಮಾಧಿ ಮಲಾಮರಡಿಯಲ್ಲಿದೆ. ೧೯೯೧ರಲ್ಲಿ ನಾವು 'ಬಸವರಾಜ ಕಟ್ಟೀಮನಿ' ವೇದಿಕೆಯನ್ನು ಧಾರವಾಡದಲ್ಲಿ ಪ್ರಾರಂಭಿಸಿದೆವು. ಆಗ ಕುಲಪತಿಗಳಾಗಿದ್ದ ರಾಮೇಗೌಡರು, ಪಾಟೀಲ ಪುಟ್ಟಪ್ಪನವರು, ಹಾ.ಮಾ. ನಾಯಕರು ಭಾಗವಹಿಸಿದ್ದರು. ಕಟ್ಟೀಮನಿಯವರ ಕೃತಿಗಳ ಕುರಿತು ಚರ್ಚೆಯನ್ನು, ವಿಚಾರಪರ ಉಪನ್ಯಾಸಗಳನ್ನು ಮಾಡಿಸುತ್ತಿದ್ದೆವು.

ವೇದಿಕೆ ಮಾಡಿದ ಮಹತ್ವದ ಕೆಲಸವೆಂದರೆ, ಧಾರವಾಡದಲ್ಲಿ ಬಸವರಾಜ ಕಟ್ಟೀಮನಿ ವೃತ್ತವನ್ನು ನಗರಪಾಲಿಕೆಯ ಸಹಯೋಗದೊಂದಿಗೆ ಮಾಡಿದೆವು. ಕಟ್ಟೀಮನಿಯವರು ಮೊಮ್ಮಕ್ಕಳೊಂದಿಗೆ ಕುಳಿತುಕೊಳ್ಳುತ್ತಿದ್ದ ಕಟ್ಟೆಯಿರುವ ಸ್ಥಳದಲ್ಲಿಯೇ ಈ ವೃತ್ತ ನಿರ್ಮಾಣಗೊಂಡಿದೆ. ಮಲಾಮರಡಿಯಲ್ಲಿ ಅವರ

ಸ್ಮಾರಕವನ್ನು ಮಾಡುವುದು ಸಾಧ್ಯವಿಲ್ಲ. ಕಾರಣ, ಅವರ ಮನೆ ತುಂಬ ಚಿಕ್ಕದು ಮತ್ತು ಇಕ್ಕಟ್ಟಾಗಿರುವಂಥದು. ಅದರ ಬದಲಾಗಿ ಸಮೀಪದ ಅಂಕಲಗಿಯಲ್ಲಿ ಅವರ ಸ್ಮಾರಕ ನಿರ್ಮಾಣವಾಗಬೇಕು. ಅಲ್ಲಿ ಸುಸಜ್ಜಿತವಾದ ಸಭಾಭವನ ನಿರ್ಮಾಣವಾಗಬೇಕು ಮತ್ತು ಕರ್ನಾಟಕ ಸರಕಾರ ಈ ಕೆಲಸವನ್ನು ಮಾಡಬೇಕು ಎಂದು ನಾನು ಆಶಿಸುತ್ತೇನೆ. ಕಟ್ಟೀಮನಿಯವರ ಕುರಿತ ಸಾನೆಟ್ಟಿನೊಂದಿಗೆ ನನ್ನ ಮಾತಿಗೆ ವಿರಾಮ ಹೇಳುತ್ತೇನೆ.

ಕಟ್ಟೀಮನಿಯವರನ್ನು ನೆನೆದು

ಕೊನೆಯವರೆಗು ಕೈ ಬಿಡದೆ ಹರಿತವಾಗಿಹ ಪೆನ್ನು:
ಬಿಳಿಹಾಳೆಗಚ್ಚೊತ್ತಿ, ಬಿಚ್ಚುಗತ್ತಿಯ ನೆನಪು.
ಪದವಿಟ್ಟಳುಪದಗ್ಗಳಿಕೆ, ಸ್ವಂತಿಕೆಯ ಛಾಪು,
ಅಟ್ಟಹಾಸದಾಡಂಬರವ ಭೇದಿಸಿ, ಹೊನ್ನು -
ಹೆಣ್ಣು-ಮಣ್ಣಿನ ತೀಕ್ಷ್ಣವಾಸ್ತವ ಬದುಕ ಬಗೆದು
ನೆಲದ ಮಕ್ಕಳ ಕಷ್ಟದೊಡಲು ಕುದಿಯುವ ಭಟ್ಟಿ-
ಇಳಿಸಿ ತೆಗೆದಿಟ್ಟ ಪಾತ್ರ; ನೇರ ಜೀವನ ದೃಷ್ಟಿ.
ತಂತಾನೆ ಜಾರಿತ್ತು ಕಲೆಗೆ ಹೊಚ್ಚಿದ ಮುಸುಕು.
ಯಾವ ಪಕ್ಷವೊ? ಪಕ್ಷಪಾತವಿಲ್ಲದ ಹಾಗೆ
ಹೋರಾಟದಲಿ ನೇದ ಸ್ನೇಹದ ಕೆಂಪು ಶಾಲು-
ಆ ಹೆಗಲು, ಬಿಟ್ಟೆನೆಂದರು ಬಿಡದ ಸಿಗರೇಟು:
ವಾದ-ವಿವಾದಗಳ ಹೊಗೆ ಸುರುಳಿ ಸುರುಳಿಯಾಗಿ, ಕೊನೆಗೆ
ಉಕ್ಕುವ ನಗೆ ಮಲಾಮರಡಿಯ ಹೊಲದ ಮಣ್ಣಿನಲಿ
ಕಣ್ಣು ತುಂಬಿ ತೂಗುವ ತೆನೆ, ಜೊತೆಗೆ ತಣ್ಣನೆಯ ಗಾಳಿ.

ಒಡನಾಟದ ಅನುಭವ ಕಥನ
೨೦೧೮ನೆಯ ವರ್ಷದ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ
'ಸಮೀಕ್ಷೆ'ಯಿಂದ

ಬಂಗಾರ ತೂಕದ 'ಗುಲಗಂಜಿ'

ನಾನು ಬಿ.ಎ. ಪರೀಕ್ಷೆ ಮುಗಿಸಿಕೊಂಡು ವಿಜಾಪುರದಲ್ಲಿದ್ದ (ಈಗಿನ ವಿಜಯಪುರ) ನನ್ನ ಭಾವನವರ (ಚಂ.ಅ.ಗೋಗೇರಿ ಎ.ಡಿ.ಇ.ಆಯ್) ಮನೆಯಲ್ಲಿದ್ದು ಮೇ ತಿಂಗಳ ರಜೆಯನ್ನು ಕಳೆದೆ. ನನ್ನ ವಿದ್ಯಾಗುರುಗಳಾಗಿದ್ದ ಪ್ರೊ. ಮಾಳವಾಡರ ಅಪೇಕ್ಷೆಯ ಮೇರೆಗೆ, ಶ್ರೀ ಎಸ್.ವಿ. ಗಿಡ್ನವರ ಅವರ ಪರಿಚಯವನ್ನೂ ಮಾಡಿಕೊಂಡೆ. ಕಂದಾಯ ಇಲಾಖೆಯ ಅಧಿಕಾರಿಗಳಾಗಿದ್ದ ಗಿಡ್ನವರ, ತಮ್ಮ ಮನೆಯ ಗ್ರಂಥ ಭಂಡಾರದಿಂದ ಸಾಹಿತ್ಯಾಸಕ್ತರ ವಲಯದಲ್ಲಿ ಆಗಲೇ ಹೆಸರಾಗಿದ್ದರು. ಇದೇ ಅವಧಿಯಲ್ಲಿ ಶ್ರೀ ಮಹಾಂತ ಗುಲಗಂಜಿ ಹಾಗೂ ಅವರ ಜೊತೆಗಿದ್ದ ಸಿದ್ದಣ್ಣ ಮಸಳಿಯವರ ಪರಿಚಯವಾದದ್ದು. ಅಚ್ಚ ಬಿಳಿಯ ಖಾದಿ ಉಡುಗೆ, ತೀವ್ರವಾದ ಸಾಹಿತ್ಯಾಸಕ್ತಿ, ಸರಳತೆ ಹಾಗೂ ಸ್ನೇಹತೆಗಳಿಂದ ಗುಲಗಂಜಿಯವರು ಬಹುಬೇಗ ಆತ್ಮೀಯರಾದರು. ಸಮಾನವಯಸ್ಕರೂ ಸಮಾನ ಮನಸ್ಕರೂ ಆಗಿದ್ದ ನಮ್ಮ ಸ್ನೇಹ ಸಂಪತ್ತು ಇಂದಿಗೂ ವರ್ಧಿಸುತ್ತಲೇ ಬಂದಿದೆ. ನಾನು ವಿಜಾಪುರದಲ್ಲಿದ್ದ ಒಂದೂವರೆ ತಿಂಗಳಲ್ಲಿ ನಾವು ಪರಸ್ಪರ ಭೆಟ್ಟಿಯಾಗದ ದಿನಗಳೇ ಇರಲಿಲ್ಲವೆಂದರೂ ತಪ್ಪಾಗದು. ಆಗ ನಾವು ಮೂವರೂ ಸೇರಿ ಶ್ರೀ ನಾರಾಯಣರಾವ್ ಕುಲಕರ್ಣಿಯವರ ಸ್ಟುಡಿಯೊದಲ್ಲಿ ಫೋಟೊ ತೆಗೆಸಿಕೊಂಡದ್ದರ ಪ್ರತಿ ಇನ್ನೂ ನನ್ನ ಬಳಿಯಲ್ಲಿದೆ. ಇದರ ಶ್ರೇಯಸ್ಸು ಗುಲಗಂಜಿಯವರಿಗೇ ಸಲ್ಲಬೇಕು.

ಮಹಾಂತ ಗುಲಗಂಜಿಯವರು ಶ್ರದ್ಧಾವಂತ ಓದುಗರು. ನವೋದಯ ಸಾಹಿತ್ಯದ ಹಿರಿಯರ ಅನೇಕ ಕೃತಿಗಳನ್ನು ಅವರು ಆಗಲೇ ಓದಿಕೊಂಡಿದ್ದರಲ್ಲದೆ ಹೊಸ ಲೇಖಕರನ್ನೂ ಆಸ್ಥೆಯಿಂದ ಗಮನಿಸುತ್ತಿದ್ದರು. ಹಾಯ್‌ಸ್ಕೂಲಿನಲ್ಲಿದ್ದಾಗಲೇ ಅವರ ಸಾಹಿತ್ಯಾಸಕ್ತಿ ಗರಿಗೆದರಿತ್ತು. ವಿಜಾಪುರದ ವಿಜಯಕಾಲೇಜಿನಲ್ಲಿ ಇಂಟರಮೀಡಿಯೇಟ್ ವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದರು. ಮುಂದೆ ಜಯಕರ್ನಾಟಕ, ಪ್ರಜಾಮತ, ಅಂಕುಶ, ತರಂಗ(ಗದಗ) ಮೊದಲಾದ ನಿಯತಕಾಲಿಕೆಗಳಲ್ಲಿ ಅವರ ಲೇಖನಗಳೂ ಪ್ರಕಟಗೊಂಡವು. ಪತ್ರಿಕಾವರದಿಗಾರರಾಗಿ, ಅಂಕಣಕಾರರಾಗಿಯೂ ಅವರು ತಮ್ಮ ಕ್ಷೇತ್ರವನ್ನು ವಿಸ್ತರಿಸಿಕೊಂಡದ್ದಲ್ಲದೆ ವಚನ ಪಿತಾಮಹ ಫ.ಗು. ಹಳಕಟ್ಟಿಯವರ ಸಂಪಾದಕತ್ವದ 'ನವಕರ್ನಾಟಕ' ವಾರಪತ್ರಿಕೆಗೆ ೧೯೫೦ರಲ್ಲಿ ಕಾರ್ಯ ನಿರ್ವಹಿಸಿದ್ದನ್ನು ಮರೆಯುವಂತಿಲ್ಲ. ಹಳಕಟ್ಟಿಯವರ ಬದುಕಿನ ಕೊನೆಯ ಅವಧಿಯಲ್ಲಿ ಗುಲಗಂಜಿ

ಯವರು ಅತ್ಯಂತ ಶ್ರದ್ಧೆಯಿಂದ ಅವರ ಸೇವೆಗೈದದ್ದನ್ನು ಅನೇಕರು ಈಗಲೂ ನೆನೆಸುತ್ತಾರೆ.

ಪ್ರಾಧ್ಯಾಪಕರಾದ ಸಾಸನೂರ ಸೋದರರ ಪ್ರಭಾವವಂತೂ ಸರಿಯೆ ಇನ್ನೂ ಹಲವಾರು ಸ್ಥಳೀಯ ಸಾಹಿತಿಮಿತ್ರರೊಂದಿಗೆ ಗುಲಗಂಜಿಯವರು ಮೆಚ್ಚಿಸಿ ಮುದಗೊಂಡ ಸಾಹಿತಿಗಳ ಹಾಗೂ ಪತ್ರಕರ್ತರ ಬಳಗ ಬಹಳ ದೊಡ್ಡದು. ಹಲಸಂಗಿ ಗೆಳೆಯರ ಗುಂಪಿನ ಹಿರಿಯರು, ಬಸವರಾಜ ಕಟ್ಟೀಮನಿ, ಬೀಚಿ, ಡಾ. ಗುರುಲಿಂಗ ಕಾಪಸೆ, ಡಾ. ಎಂ.ಎಂ. ಕಲಬುರ್ಗಿ, ಗೊ.ರು. ಚೆನ್ನಬಸಪ್ಪ - ಹೀಗೇ ಪಟ್ಟಿಯನ್ನು ಬೆಳೆಸಬಹುದು. ಸ್ವತಃ ಉತ್ತಮ ಸಾಹಿತಿಯಾಗಿ, ಸಾಹಿತ್ಯಪರಿಚಾರಿಕೆಯಲ್ಲಿಯೂ ಶ್ರೇಷ್ಠರೆನಿಸಿದ ಜಿ.ಪಿ. ರಾಜರತ್ನಂ ಅವರ ಆದರ್ಶವನ್ನು ಗುಲಗಂಜಿಯವರು ಅನುಸರಿಸಿದರೆಂದು ತೋರುತ್ತದೆ. ಸಾಹಿತ್ಯ ಪರಿಚಾರಿಕೆಗೆ ಗುಲಗಂಜಿಯವರ ಮನೋಧರ್ಮ ಹೇಳಿಮಾಡಿಸಿದಂತಿತ್ತಲ್ಲದೆ ಅದು ಅವರ ಹುಟ್ಟುಗುಣವೂ ಆಗಿತ್ತು. ಓದುವ ಹವ್ಯಾಸವನ್ನೂ ಸಾಹಿತ್ಯಾಭಿರುಚಿಯನ್ನು ಜನತೆಯಲ್ಲಿ ಬೆಳೆಸಲು ೧೯೫೦ರಲ್ಲಿಯೇ 'ಆಶಾಸಾಹಿತ್ಯ ಮಂದಿರ' ಎಂಬ ಪುಸ್ತಕ ಮಳಿಗೆ ಹಾಗೂ 'ವಿವೇಕಾನಂದ ವಾಚನಾಲಯ' ವನ್ನು ವಿಜಾಪುರದಲ್ಲಿ ಪ್ರಾರಂಭಿಸಿದರು. ವಿದ್ಯಾರ್ಥಿಗಳಿಗೆ, ಲೇಖಕರಿಗೆ, ಅಧ್ಯಾಪಕರಿಗೆ 'ಆಶಾಸಾಹಿತ್ಯಮಂದಿರ' ಆಕರ್ಷಣೆಯ ಕೇಂದ್ರವಾಗಿದ್ದನ್ನು ನಾನು ಸ್ವತಃ ನೋಡಿದ್ದೇನೆ. ಸೊಲ್ಲಾಪುರ ಸಾಹಿತ್ಯ ಸಮ್ಮೇಳನದ (೧೯೫೦) ಕವಿಗೋಷ್ಠಿ ಅಧ್ಯಕ್ಷರಾಗಿದ್ದ ಮಧುರಚೆನ್ನರು ತಮ್ಮ ಭಾಷಣದಲ್ಲಿ ಇದನ್ನು ಹೆಸರಿಸಿದ್ದರೆಂದು ಡಾ. ಕಾಪಸೆಯವರು ಈಚೆಗೆ ನನಗೆ ಹೇಳಿದ್ದುಂಟು. ಇದೂ ಅಲ್ಲದೆ ನಗರ ನಾಡಹಬ್ಬ ಸಮಿತಿ, ಜಿಲ್ಲಾ ಹಾಗೂ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಶರಣ ಸಾಹಿತ್ಯ ಪರಿಷತ್ತು - ಇವೇ ಮೊದಲಾದ ಇನ್ನೂ ಹಲವಾರು ಸಾಹಿತ್ಯಿಕ, ಸಾಂಸ್ಕೃತಿಕ ಸಂಘ ಸಂಸ್ಥೆಗಳೊಂದಿಗೆ ಇವರದು ನಿಕಟ ಸಂಪರ್ಕವಿದ್ದುದಲ್ಲದೆ ಕ್ರಿಯಾಶೀಲರಾಗಿ ಅವುಗಳ ಚಟುವಟಿಕೆಗಳಲ್ಲಿಯೂ ಭಾಗವಹಿಸುತ್ತ ಬಂದವರು. ಹಲವಾರು ಅಭಿನಂದ ಗ್ರಂಥ-ಸ್ಮರಣಗ್ರಂಥಗಳ ಸಂಪಾದನೆಯಲ್ಲಿಯೂ ಇವರ ಪಾಲು ಬಹಳ ಮುಖ್ಯವಾದದ್ದು. ನಾನು ಆಗಾಗ ವಿಜಾಪುರಕ್ಕೆ ಹೋದಾಗಲೆಲ್ಲ ಗುಲಗಂಜಿಯವರನ್ನು ನೋಡದಿದ್ದರೆ ಮನಸ್ಸಿಗೆ ಸಮಾಧಾನವಿರುವುದಿಲ್ಲ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ 'ಕನ್ನಡ ನುಡಿ ತೇರು : ಜಾಗೃತಿ ಜಾಥಾ'ದ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಂಡಿಗೆ ಹೋಗುವ ಹಿಂದಿನ ದಿನ (೨೫-೭-೨೦೧೧) ನಾನು ವಿಜಾಪುರದಲ್ಲಿ ಉಳಿದುಕೊಂಡಿದ್ದೆ. ನನ್ನ ಜೊತೆಗೆ ಗೊ.ರು. ಚೆನ್ನಬಸಪ್ಪನವರೂ ಇದ್ದರು. ಅವರು ಆಗ 'ಕನ್ನಡ ಜಾನಪದ ನಿಘಂಟು'ವಿನ ಪ್ರಧಾನ

ಸಂಪಾದನ ಕಾರ್ಯದಲ್ಲಿ ತೊಡಗಿದ್ದರು. ಇದಕ್ಕೂ ಮೊದಲೇ ಕೆಲವರ್ಷಗಳಿಂದ ಗುಲಗಂಜಿಯವರು ಸ್ವಯಂಪ್ರೇರಣೆಯಿಂದ ಉತ್ತರ ಕರ್ನಾಟಕದ ಜಾನಪದ ನಿಘಂಟಿನ ರಚನೆಯಲ್ಲಿ ತೊಡಗಿದ್ದರೆಂಬುದು ಗಮನಾರ್ಹ. ಅಂದು ಸಂಜೆ ಗುಲಗಂಜಿಯವರು ನಾವಿಳಿದುಕೊಂಡಿದ್ದ ಸ್ಥಳಕ್ಕೆ ಬಂದು ಚೆನ್ನಬಸಪ್ಪನವರೊಂದಿಗೆ ಈ ವಿಷಯದ ಬಗ್ಗೆ ಚರ್ಚಿಸಿ ತಾವು ಸಂಗ್ರಹಿಸಿದ್ದ ಸಾವಿರಾರು ಜಾನಪದ ಶಬ್ದಗಳ ಹಸ್ತಪ್ರತಿಯನ್ನು ಅವರಿಗೆ ನೀಡಿದರು. ಗೊ.ರು.ಚ. ತಮ್ಮ ನಿಘಂಟು ಪ್ರಕಟವಾಗುವಾಗ 'ಬಿನ್ನಹ'ದ ಕೊನೆಯಲ್ಲಿ ಈ ವಿಷಯವನ್ನು ಸ್ಮರಿಸಿಕೊಂಡು ಗುಲಗಂಜಿಯವರ ನೆರವಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಆದರೂ ಗುಲಗಂಜಿಯವರು ಸುಮ್ಮನೆ ಕೂಡ್ರುವವರಲ್ಲ. ಸದ್ಯ ಉತ್ತರ ಕರ್ನಾಟಕ ಜಾನಪದ ಶಬ್ದಕೋಶ ರಚನೆಯಲ್ಲಿ ತೊಡಗಿರುವುದು ಈ ವಿಷಯದಲ್ಲಿ ಅವರ ಆಸಕ್ತಿಯ ದ್ಯೋತಕವಾಗಿದೆ.

ವಿಜಾಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ೧೯೬೯ರಿಂದಲೂ ನಿಕಟ ಸಂಪರ್ಕವಿಟ್ಟುಕೊಂಡು ಕಾರ್ಯದರ್ಶಿಯಾಗಿಯೂ ಕೆಲ ವರ್ಷ ಕೆಲಸ ಮಾಡಿದರು. ೧೯೯೨ರಲ್ಲಿ ಅದರ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡುದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಆ ಸಂದರ್ಭದಲ್ಲಿ ತಮ್ಮ ಕಣ್ಣೆದುರು ನಾಲ್ಕು ಗುರಿಗಳನ್ನು ಇಟ್ಟುಕೊಂಡು ಅವುಗಳನ್ನು ಅಲ್ಪಾವಧಿಯಲ್ಲಿ ಈಡೇರಿಸಿದ್ದು ಆಶ್ಚರ್ಯವನ್ನುಂಟು ಮಾಡುತ್ತದೆ. ಸರ್ವರ ಸಹಕಾರದೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಹದಿನಾಲ್ಕು ದತ್ತಿಗಳನ್ನು ಮತ್ತು ಅಮೃತ ನಿಧಿ ರೂಪದಲ್ಲಿ ಒಟ್ಟು ಎರಡು ಲಕ್ಷ ರೂಪಾಯಿ ಹಣವನ್ನು ಸಂಗ್ರಹಿಸಿ ಸಾಹಿತ್ಯ ಪರಿಷತ್ತಿಗೆ ನೀಡಿ, ಪರಿಷತ್ತನ್ನು ಆರ್ಥಿಕವಾಗಿ ಬಲಪಡಿಸುವ ತಮ್ಮ ಮೊದಲ ಉದ್ದೇಶವನ್ನು ಈಡೇರಿಸಿದರು. ಇದೇ ಅವಧಿಯಲ್ಲಿ ಅಂದರೆ ೧೯೯೨ರಲ್ಲಿ ಜಿಲ್ಲೆಯ ಖ್ಯಾತ ಸಾಹಿತಿ ಸಿಂಪಿ ಲಿಂಗಣ್ಣ ಅವರು ಕೊಪ್ಪಳದಲ್ಲಿ ಜರುಗಿದ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವಂತೆ ಪ್ರಯತ್ನಿಸಿ ತಮ್ಮ ಎರಡನೆಯ ಗುರಿಯನ್ನು ಸಫಲಗೊಳಿಸಿಕೊಂಡರು. ಮುಂದೆ ೧೯೯೫ರಲ್ಲಿ ಅವಿಭಾಜಿತ ವಿಜಾಪುರ ಜಿಲ್ಲೆಯ ಮುಧೋಳದಲ್ಲಿ ೬೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ನೆರವೇರುವಂತೆ ನೋಡಿಕೊಂಡು ತಮ್ಮ ಮೂರನೆಯ ಧ್ಯೇಯದಲ್ಲಿ ಯಶಸ್ವಿಯಾದರು. ಈ ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗಿ ಗುಲಗಂಜಿಯವರೇ ಆಗಿದ್ದರಿಂದ ಸಮ್ಮೇಳನದ ಅಂಗವಾಗಿ ನಡೆದ ಕವಿಗೋಷ್ಠಿಯ ಉದ್ಘಾಟನೆಗೆ ನಾನು ಒಪ್ಪಿಕೊಳ್ಳಲೇಬೇಕಾಯಿತು. ಸಮ್ಮೇಳನದಲ್ಲಿ ಮಧುರಚೆನ್ನರನ್ನು ಕುರಿತ ಡಾ. ಗುರುಲಿಂಗ ಕಾಪಸೆಯವರ ವಿಶೇಷೋಪನ್ಯಾಸ ಅತ್ಯಂತ ಪರಿಣಾಮಕಾರಿಯಾಗಿತ್ತು. ಗುಲಗಂಜಿಯವರ ನಾಲ್ಕನೆಯ

ಗುರಿ ಸಾಹಿತ್ಯ ಭವನದ ನಿರ್ಮಾಣವಾಗಿತ್ತು. ಸಮ್ಮೇಳನದ ಉಳಿತಾಯದ ಹಣದಿಂದ ಮುಧೋಳದಲ್ಲಿ ರನ್ನ ಕವಿ ಹೆಸರಿನಲ್ಲಿ ಭವ್ಯವಾದ ಸಾಹಿತ್ಯಭವನ ಕಂಗೊಳಿಸುವಂತಾದುದು ಇದಕ್ಕೆ ಸಾಕ್ಷಿ. ಜಿಲ್ಲಾ ಸಾಹಿತ್ಯ ಪರಿಷತ್ತಿನ ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿಯೇ ಹೀಗೆ ಸಾರ್ವಜನಿಕ ಹಿತಾಸಕ್ತಿಯಿಂದ ದುಡಿದವರು ತೀರ ವಿರಳ.

ಇಷ್ಟೆಲ್ಲ ಕಾರ್ಯಗಳನ್ನು ನಿರ್ವಹಿಸಿದಾಗಲೂ ತಮಗೆ ಹೆಸರು ಬರಬೇಕೆಂಬ ಹಂಬಲವಾಗಲಿ, ಪ್ರಶಸ್ತಿ ಪುರಸ್ಕಾರಗಳ ಅಕಾಂಕ್ಷೆಯಾಗಲಿ ಗುಲಗಂಜಿಯವರಲ್ಲಿ ಒಂದು ಗುಲಗಂಜಿಯಷ್ಟೂ ಇರಲಿಲ್ಲವೆಂದರೆ ಇಂದಿನ ತಲೆಮಾರು ನಂಬಲಿಕ್ಕಿಲ್ಲ. ಸಿಂದಗಿಯಲ್ಲಿ ಜರುಗಿದ (೨೦೧೧) ವಿಜಾಪುರ ಜಿಲ್ಲಾ ಹನ್ನೆರಡನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಇವರನ್ನು ಒತ್ತಾಯದಿಂದಲೇ ಒಪ್ಪಿಸಬೇಕಾಯಿತು. ಈ ಜಿಲ್ಲಾ ಹನ್ನೆರಡನೆಯ ಸಾಹಿತ್ಯ ಸಮ್ಮೇಳನದ ಶಾಶ್ವತ ನೆನಪಿಗಾಗಿ ಮಹಾಂತ ಗುಲಗಂಜಿಯವರು ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿಗೆ ಹನ್ನೆರಡು ಸಾವಿರ ರೂ. ಮೌಲ್ಯದ ದತ್ತಿಯನ್ನು ವೈಯಕ್ತಿಕವಾಗಿ ನೀಡುವುದರ ಮೂಲಕ ತಮ್ಮ ವೈಶಿಷ್ಟ್ಯ ವ್ಯಕ್ತಪಡಿಸಿದ್ದನ್ನು ಮರೆಯುವಂತಿಲ್ಲ.

ಶ್ರೀ ಗುಲಗಂಜಿಯವರು ಈ ವೊದಲು ಅನೇಕ ಲೇಖನಗಳನ್ನು ಬರೆದಿರುವುದುಂಟು. ಅವು ಲಲಿತಪ್ರಬಂಧ, ಏಕಾಂಕ ನಾಟಕ, ಹನಿಗವನ, ಚುಟುಕು, ಪತ್ರ ಲೇಖನ ಹಾಗೂ ಅಂಕಣ ಬರೆಹಗಳ ರೂಪದಲ್ಲಿವೆ. ನಿರಂತರ ಸಮಾಜಕಾರ್ಯ, ಶಿಕ್ಷಣ ಇಲಾಖೆಯಲ್ಲಿ ೩೫ ವರ್ಷ ದಕ್ಷ ಹಾಗೂ ನಿಷ್ಕಲಂಕ ಸೇವೆ, ಬಿಡುವಿಲ್ಲದ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳು - ಇವುಗಳ ಮಧ್ಯದಲ್ಲಿ ತಮ್ಮ ಬರೆಹಗಳನ್ನು ಗ್ರಂಥರೂಪದಲ್ಲಿ ತರುವುದರ ಕಡೆಗೆ ಅವರು ಲಕ್ಷ್ಯವಹಿಸಿದಂತಿಲ್ಲ. ಅವರ 'ಅಭಿನಂದನ ಸಮಾರಂಭ'ದ ಸಂದರ್ಭದಲ್ಲಿಯೇ ಈ ಕೆಲಸವೂ ಪೂರೈಸುವಂತೆ ಅಭಿನಂದನ ಸಮಿತಿ ನೋಡಿಕೊಳ್ಳುವದೆಂದು ಆಶಿಸುತ್ತೇನೆ.

ನಾನು ಚಿಕ್ಕವನಿದ್ದಾಗ, ನಮ್ಮ ಹಳ್ಳಿಯಲ್ಲಿ ಬಂಗಾರದ ಆಭರಣ ಮಾಡಿಕೊಡುವ ಅಕ್ಕಸಾಲಿಗ ಚಿಕ್ಕದೊಂದು ತ್ರಾಸಿನಲ್ಲಿ ಗುಲಗಂಜಿಯಿಟ್ಟು ಬಂಗಾರ ತೂಗುವದನ್ನು ನೋಡಿದ್ದು ಈ ಸಂದರ್ಭದಲ್ಲಿ ನೆನಪಾಗುತ್ತದೆ. ಶ್ರೀ ಮಹಾಂತ ಗುಲಗಂಜಿ ಎಲ್ಲ ದೃಷ್ಟಿಯಿಂದಲೂ ಬಂಗಾರ ತೂಕದ ವ್ಯಕ್ತಿ. ಆತ್ಮೀಯ ಸ್ನೇಹಿತರಾದ ಈ ಸದ್ಗೃಹಸ್ಥರು ಆಯುರಾರೋಗ್ಯ ಭಾಗ್ಯದಿಂದ ನಮ್ಮ ಮಧ್ಯ ನೂರ್ಕಾಲ ಬಾಳಲೆಂದು ಪ್ರಾರ್ಥಿಸುತ್ತೇನೆ.

'ಮಹಾಂತ ಗುಲಗಂಜಿ' ಅಭಿನಂದನ ಗ್ರಂಥ : ೨೦೧೮

ಸೌಮ್ಯ ಸುಸಂಸ್ಕೃತ ವ್ಯಕ್ತಿ ಎಸ್.ಕೆ. ಕೊಪ್ಪಾ ಅವರಿಗೆ ಶುಭ ಹಾರೈಕೆ

ಧಾರವಾಡ, ಮೈಸೂರು ಹಾಗೂ ಮಂಗಳೂರುಗಳನ್ನು ಕನ್ನಡ ನವೋದಯ ಸಾಹಿತ್ಯದ ಕೇಂದ್ರಗಳೆಂದು ಮೊದಲಿನಿಂದಲೂ ಗುರುತಿಸಲಾಗಿದೆ. ಇವುಗಳ ಜೊತೆಗೆ ಹಲಸಂಗಿಯನ್ನೂ ಸೇರಿಸಬೇಕೆಂದು ಮಧುರಚೆನ್ನರನ್ನು ಕುರಿತ ವಿಚಾರ ಸಂಕಿರಣವೊಂದರ ಉದ್ಘಾಟನೆಯ ಸಂದರ್ಭದಲ್ಲಿ ಡಾ. ಜಿ.ಎಸ್.ಎಸ್. ಹೇಳಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಾಗಲಕೋಟೆಯಲ್ಲಿ ಏರ್ಪಡಿಸಿದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದನಾಡಿನ ವಿವಿಧ ಭಾಗಗಳ ಸಾಹಿತಿಗಳನೇಕರಿಗೆ ಈ ವಿಚಾರ ಮನವರಿಕೆಯಾಗಿತ್ತು. ಇದಕ್ಕೆ ಡಾ. ಜಿ.ಎಸ್. ಶಿವರುದ್ರಪ್ಪನವರು ಕೊಟ್ಟ ಕಾರಣ ಹೀಗಿತ್ತು: "ಈ ನಾಲ್ಕನೆಯ ಕೇಂದ್ರ ಕನ್ನಡ ನವೋದಯಕ್ಕೆ 'ಅನುಭಾವ' ಕಾವ್ಯಧಾರೆಯೊಂದನ್ನು ಸೇರಿಸಿದ್ದಲ್ಲದೆ, ಜಾನಪದ ಜೀವನ ಸತ್ವವನ್ನು ತುಂಬುವ 'ಜನಪದ ಸಾಹಿತ್ಯ ಸಂಗ್ರಹ' ಹಾಗೂ ಆ ಕುರಿತ ಅಧ್ಯಯನವನ್ನು ಕನ್ನಡದ ಸಂದರ್ಭದಲ್ಲಿ ಮೊಟ್ಟಮೊದಲಿಗೆ ಪ್ರಾರಂಭಿಸಿತು. ನವೋದಯವನ್ನು ಕುರಿತು ಈ ಹೊತ್ತು ವಿಚಾರಮಾಡುವ ನಾವು ಅದರ ಬಹುಮುಖತ್ವವನ್ನು ಗುರುತಿಸಿದ್ದರೆ ತಪ್ಪಾಗುತ್ತದೆ".

ಕರ್ನಾಟಕ ಸರಕಾರ ಕನ್ನಡದ ಶ್ರೇಷ್ಠ ಸಾಹಿತಿಗಳ, ಸಂಗೀತಗಾರರ ಹಾಗೂ ಕಲಾವಿದರ ಹೆಸರಿನಲ್ಲಿ ಪ್ರತಿಷ್ಠಾನಗಳನ್ನು ಸ್ಥಾಪಿಸಿ, ಆಯಾ ಕ್ಷೇತ್ರಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು, ಗ್ರಂಥ ಪ್ರಕಾಶನ ಮತ್ತು ಪ್ರಶಸ್ತಿ ಪ್ರದಾನಗಳಿಗೆ ಅವಕಾಶ ಒದಗಿಸಿಕೊಟ್ಟುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ವಿಜಾಪುರ ಜಿಲ್ಲೆ ಇವೆಲ್ಲದರ ಜೊತೆಗೆ ಆಧ್ಯಾತ್ಮಿಕ ಕ್ಷೇತ್ರದಲ್ಲಿಯೂ ಉನ್ನತ ಸ್ಥಾನದಲ್ಲಿದ್ದರೂ ಅಲ್ಲಿ ಅಂಥ ಒಂದು ಪ್ರತಿಷ್ಠಾನವಿಲ್ಲದಿರುವುದನ್ನು ಕಂಡು ಸರಕಾರ ವಿಜಯಪುರದಲ್ಲಿ 'ಹಲಸಂಗಿ ಗೆಳೆಯರ ಪ್ರತಿಷ್ಠಾನ'ವನ್ನು ನಾಲ್ಕು ವರ್ಷಗಳ ಹಿಂದೆಯೇ ಸ್ಥಾಪಿಸಿದ್ದು ಯಥಾಯೋಗ್ಯವಾಗಿದೆ.

ಕನ್ನಡ ಸಾಹಿತ್ಯ ಪ್ರಪಂಚ ಈಗಾಗಲೆ ಅರಿತಿರುವಂತೆ ಮಧುರಚೆನ್ನರು ತಮ್ಮ ಶಿಷ್ಯ ಸ್ನೇಹಿತರಾದ ಸಿಂಪಿಲಿಂಗಣ್ಣ, ಕಾಪಸೆರೇವಪ್ಪ ಪಿ. ಧೂಲಾ ಮೊದಲಾದವರೊಡನೆ ಇಡೀ ವಿಜಾಪುರ ಜಿಲ್ಲೆಯನ್ನೇ ತಮ್ಮೆಡೆಗೆ ಆಕರ್ಷಿಸಿದರು. ಇದಕ್ಕೇ "ಹೊಸಗನ್ನಡ ಸಾಹಿತ್ಯದ ಇತಿಹಾಸವನ್ನು ಬರೆಯುವವರು ಹಲಸಂಗಿಯ ಹೆಸರನ್ನು ಮರೆಯುವಂತಿಲ್ಲ" ಎಂದು ಡಾ. ಗುರುಲಿಂಗ ಕಾಪಸೆಯವರು ಹೇಳಿದ್ದು. ಇಂಥ ಪರಂಪರೆಯ ಒಂದು

ದಾಂಗುಡಿಯಾಗಿದ್ದಾರೆ ಡಾ. ಎಸ್.ಕೆ. ಕೊಪ್ಪಾ ಅವರು.

ಎಲ್ಲ ಪ್ರತಿಷ್ಠಾನಗಳಿಗೂ ಆಯಾ ಜಿಲ್ಲಾಧಿಕಾರಿಗಳು ಹಣಕಾಸಿನ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರೂ ಅವುಗಳಿಗೆಲ್ಲ ಒಬ್ಬೊಬ್ಬ ಅಧ್ಯಕ್ಷರಿದ್ದಾರೆ. 'ಹಲಸಂಗಿ ಗೆಳೆಯರ ಪ್ರತಿಷ್ಠಾನ'ಕ್ಕೆ ಅಧ್ಯಕ್ಷರನ್ನೇ ನಿಯಮಿಸಿಲ್ಲ. ಅಧ್ಯಕ್ಷರಿಗೆ ಸದಸ್ಯರ ಸಹಕಾರದೊಂದಿಗೆ ಸ್ವತಂತ್ರವಾಗಿ ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯರೂಪದಲ್ಲಿ ತರುವ ಅಧಿಕಾರವಿದೆ. ಈ ಸಂದರ್ಭದಲ್ಲಿ ಕಾರ್ಯ ನಿರ್ವಹಣೆ ಹಾಗೂ ಸಂಘಟನೆಯ ಸಮಸ್ಯೆ ತಲೆದೋರಿದಾಗ, ಸದಸ್ಯರಾಗಿದ್ದ ಡಾ. ಎಸ್.ಕೆ. ಕೊಪ್ಪಾ ಅವರನ್ನು ಸಂಚಾಲಕರನ್ನಾಗಿ ಮಾಡಲಾಯಿತು. ಅಂದಿನಿಂದಲೂ ಈ ಪ್ರತಿಷ್ಠಾನದ ಎಲ್ಲ ಚಟುವಟಿಕೆಗಳಿಗೂ ಒಂದು ವ್ಯವಸ್ಥಿತ ರೂಪ ಬಂದು, ಡಾ. ಗುರುಲಿಂಗ ಕಾಪಸೆಯವರ ಮಾರ್ಗದರ್ಶನದಲ್ಲಿ ಸೂಕ್ತವಾಗಿ ಮುಂದುವರಿದಿವೆ. ಈ ಮೊದಲು ಮಧುರಚೆನ್ನರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ (೨೦೦೩) ಡಾ. ಎಂ.ಎಸ್. ಮದಭಾವಿಯವರ ಜೊತೆಗೂಡಿ ಡಾ. ಎಸ್.ಕೆ. ಕೊಪ್ಪಾ ಅವರು ಸಂಪಾದಿಸಿದ 'ಮಧುರಚನ್ನ-ದರ್ಶನ'ದ ಸಂಪಾದಕೀಯದಲ್ಲಿ ಮಧುರಚೆನ್ನರ ಬಗ್ಗೆ ಒಂದು ಸಾರವತ್ತಾದ ಮಾತು ಬಂದಿದೆ: "ಬದುಕಿನಲ್ಲಿ ಅವರು ಆತ್ಮಸಂಶೋಧಕರಾದರೆ ಬರವಣಿಗೆಯಲ್ಲಿ ಸಾಹಿತ್ಯ ಸಂಶೋಧಕರು" ಎಂದು. ಡಾ. ಕೊಪ್ಪಾ ಅವರ ವಿಮರ್ಶೆಯ ಸಮತೋಲನಕ್ಕೆ ಇದೊಂದು ನಿದರ್ಶನ.

ಅಧ್ಯಯನ, ಅಧ್ಯಾಪನ, ಸಂಶೋಧನ, ವಿಮರ್ಶೆ, ಸಂಪಾದನೆ ಹಾಗೂ ಸಂಘಟನೆಗಳ ಮೂಲಕ ಸಾರಭೂತವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವದು ಕಷ್ಟಸಾಧ್ಯ. ಆದರೆ ಅದನ್ನು ಸಾಧ್ಯವಾಗಿಸಿದ ಕನ್ನಡ ಅಧ್ಯಾಪಕರಲ್ಲಿ ಡಾ. ಎಸ್.ಕೆ. ಕೊಪ್ಪಾ ಅವರೂ ಒಬ್ಬರು. ವಿಶ್ವವಿದ್ಯಾಲಯ ಕೇಂದ್ರದಿಂದ ದೂರವಿರುವ ಇಂಡಿಯ ಪದವಿ ಕಾಲೇಜಿನಲ್ಲಿ ಮೂರೂವರೆ ದಶಕಗಳಿಂದಲೂ ಕನ್ನಡ ಅಧ್ಯಾಪಕರಾಗಿ ನಿವೃತ್ತರಾದವರು. ಡಾ. ಎಂ.ಎಂ. ಕಲಬುರ್ಗಿಯವರು ಹೇಳುವಂತೆ, "ನನಗೆ ತಿಳಿದಮಟ್ಟಿಗೆ ಇಂಡಿಯಲ್ಲಿ ಇರುವಷ್ಟು ಅಸಾಹಿತ್ಯಕ ವಾತಾವರಣ ಇಂಡಿಯಾದ ಯಾವ ಭಾಗದಲ್ಲಿಯೂ ಇಲ್ಲ...... ಮನಸ್ಸು ಮಾಡಿದರೆ ಎಂಥ ಅನುತ್ತೇಜಕ ವಾತಾವರಣ ದಲ್ಲಿಯೂ ಉತ್ತಮ ಕೆಲಸ ಮಾಡಬಹುದೆಂಬುದಕ್ಕೆ ನಿದರ್ಶನವೆನಿಸಿದ್ದಾರೆ" ಡಾ. ಕೊಪ್ಪಾ ಅವರು.

ಕರ್ನಾಟಕ ವಿಶ್ವವಿದ್ಯಾಲಯದಿಂದ ಉನ್ನತ ದರ್ಜೆಯಲ್ಲಿ ಎಂ.ಎ., ಡಿಪ್ಲೊಮಾ ಇನ್ ಎಪಿಗ್ರಾಫಿ, ಪಿಎಚ್.ಡಿ. ಪಡೆದ ಇವರು ಕನ್ನಡ ವಿದ್ವತ್ ಪ್ರಪಂಚಕ್ಕೆ ವಿಶೇಷ ಕೊಡುಗೆ ಸಲ್ಲಿಸಿದ ಶ್ರೇಯಸ್ಸಿಗೆ ಪಾತ್ರರಾಗಿದ್ದಾರೆ. ಕ.ವಿ.ವಿ.ಯ ಇತಿಹಾಸ ಮತ್ತು

ಪ್ರಾಚ್ಯ ಶಾಸ್ತ್ರ ವಿಭಾಗದಲ್ಲಿ ಮೂರು ವರ್ಷ ಸೇವೆ ಸಲ್ಲಿಸಿದ್ದನ್ನು ಸಫಲಗೊಳಿಸಿಕೊಂಡದ್ದನ್ನು ಇವರ ಸಂಪ್ರಬಂಧ, 'ತರ್ದವಾಡಿ ನಾಡು : ಒಂದು ಅಧ್ಯಯನ', 'ಪಂಪಪೂರ್ವದ ಕರ್ನಾಟಕ ಶಾಸನಗಳು' 'ಶಾಸನ ಸಂಕಥನ' ಮೊದಲಾದ ಕೃತಿಗಳಲ್ಲಿ ಕಾಣಬಹುದು. ತರ್ದವಾಡಿ ನಾಡಿನ ಸಮಗ್ರ ಅಧ್ಯಯನಕ್ಕೆ ಸುಮಾರು ೩೫೦ ಶಾಸನಗಳ ತಲಸ್ಪರ್ಶಿ ಅಭ್ಯಾಸ ಮಾಡಿದ್ದನ್ನು 'ಇತಿಹಾಸದ ವಿದ್ಯಾರ್ಥಿಗಳಿಗಿಂತ ಭಿನ್ನವಾದ ಆಯಾಮವನ್ನು ಈ ಅಧ್ಯಯನಕ್ಕೆ ಒದಗಿಸಿದ್ದಾರೆ' ಎಂದು ಡಾ. ಕಲ್ಬುರ್ಗಿಯವರು ಮುನ್ನುಡಿಯಲ್ಲಿ ಮೆಚ್ಚಿಕೊಂಡಿದ್ದಾರೆ. ಜೊತೆಗೆ ಕಾವ್ಯ ಮತ್ತು ಇತರ ಗ್ರಂಥಗಳನ್ನು ಆಕರಗಳಾಗಿ ಡಾ. ಕೊಪ್ಪಾ ಅವರು ಬಳಸಿಕೊಂಡಿದ್ದಾರೆ. ಈ ಗ್ರಂಥದ 'ಸಂದರ್ಭ ಸೂಚಿ', 'ಅಭ್ಯಾಸಸೂಚಿ' ಮತ್ತು 'ಪುರವಣಿಗಳು' ಇವರ ಅಧ್ಯಯನ ವ್ಯಾಪ್ತಿ ಮತ್ತು ಸಂಶೋಧನ ಶಿಸ್ತಿಗೆ ಸಾಕ್ಷಿಯಾಗಿವೆ. ಕನ್ನಡ ಸಾಹಿತ್ಯ ಹಾಗೂ ಸಂಶೋಧನ ಕ್ಷೇತ್ರಗಳಿಗೆ ಇವರು ನೀಡಿದ ಕೊಡುಗೆಯಲ್ಲಿ ಹತ್ತು ಸ್ವತಂತ್ರ ಕೃತಿಗಳು ಹಾಗೂ ಹದಿನಾರು ಸಂಪಾದಿತ ಕೃತಿಗಳು ಸೇರಿವೆ. ಕರ್ನಾಟಕ ವಿಶ್ವವಿದ್ಯಾಲಯ ಮತ್ತು ವಿಜಯಪುರದ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರಗಳ ಮೂಲಕ ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನೂ ಮಾಡುತ್ತಿದ್ದು, ಈಗಾಗಲೇ ಒಂಬತ್ತು ವಿದ್ಯಾರ್ಥಿಗಳು ಪಿಎಚ್.ಡಿ. ಪದವಿ ಪಡೆದುಕೊಂಡಿದ್ದಾರೆ. ಸಂಘ ಸಂಸ್ಥೆಗಳ ಸದಸ್ಯರಾಗಿಯೂ ಇತರ ಚಟುವಟಿಕೆಗಳಲ್ಲಿ ಭಾಗವಹಿಸುತ್ತ ಕ್ರಿಯಾಶೀಲರಾಗಿದ್ದಾರೆ.

ಇಂದಿನ ಸಂದರ್ಭದಲ್ಲಿ ಡಾ. ಎಸ್.ಕೆ. ಕೊಪ್ಪಾ ಅವರಂಥ ಸೌಮ್ಯ ಹಾಗೂ ಸುಸಂಸ್ಕೃತ ವ್ಯಕ್ತಿಗಳ ಸದ್ದಿಲ್ಲದ ಸೇವೆಯನ್ನು ನಾವು ಅವಶ್ಯವಾಗಿ ಗಮನಿಸಬೇಕು. ಇದರ ಸಂಕೇತವಾಗಿ ಅವರಿಗೆ ಅಭಿನಂದನ ಗ್ರಂಥ ನೀಡಿ ಗೌರವಿಸುತ್ತಿರುವುದು ತುಂಬ ಸಂತೋಷದ ಸಂಗತಿ. ಸಾಹಿತ್ಯಕ್ಕೆ ತನ್ಮೂಲಕ ಸಮಾಜಕ್ಕೆ ಅವರಿಂದ ಇನ್ನು ಹೆಚ್ಚಿನ ಸೇವೆ ಸಲ್ಲುವಂತಾಗಲಿ ಎಂದು ಹಾರೈಸಿ ಶುಭಕೋರುತ್ತೇನೆ.

'ಅರಿವಿನೋಟ' ಅಭಿನಂದನ ಗ್ರಂಥ : ೨೦೧೮

ಪತ್ರಿಕೆ ಅವರ ಜೀವನಧರ್ಮವಾಗಿತ್ತು

ನನಗೆ ತಿಳಿದ ಮಟ್ಟಿಗೆ ರಾಜಶೇಖರ ಕೋಟಿ ಇನ್ನೂ ಸಣ್ಣವರಿದ್ದಾಗಲೇ 'ನೇತಾಜಿ' ಪತ್ರಿಕೆಯ ಸಂಪರ್ಕಕ್ಕೆ ಬಂದಿದ್ದರು. ಅಲ್ಲಿ ಪತ್ರಿಕೆ ವ್ಯವಸಾಯದ ಬಗ್ಗೆ ಸ್ವಲ್ಪ ಮಟ್ಟಿಗೆ ಕಲಿತುಕೊಂಡರು ಅಂತ ಕಾಣಿಸುತ್ತೆ. ಆಮೇಲೆ ಪಾಟೀಲ ಪುಟ್ಟಪ್ಪನವರ 'ವಿಶ್ವವಾಣಿ', 'ಪ್ರಪಂಚ'ದ ಬಳಗ ಸೇರಿಕೊಂಡರು. ಆಗ ಪಾಪು ಸಂಸದರಾಗಿದ್ದರು. ಬಸವರಾಜ ಕಟ್ಟೀಮನಿಯವರು ಧಾರವಾಡದಲ್ಲೇ ಇದ್ದು ಪತ್ರಿಕೆಯ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರು. ಆ ಸಂದರ್ಭದಲ್ಲಿ ಕೋಟಿಯವರು 'ಪ್ರಪಂಚ' ಬಳಗವನ್ನು ಸೇರಿಕೊಂಡರು ಅಂತ ಕಾಣುತ್ತೆ. ನನಗೆ ತಿಳಿದ ಮಟ್ಟಿಗೆ ಕಟ್ಟೀಮನಿಯವರು ಕೋಟಿಯವರಿಗೆ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಲು ಕೊಟ್ಟರು. ಕೋಟಿಯವರು ಬಹಳ ಸೊಗಸಾಗಿ ಅನುವಾದ ಮಾಡಿದ್ದರಂತೆ. ಇದನ್ನು ನೋಡಿ ಕಟ್ಟೀಮನಿಯವರು "ನಿನ್ನ ಭವಿಷ್ಯ ಬಹಳ ಚೆನ್ನಾಗಿ ಆಗ್ತದೆ. ಬಹಳ ಕಷ್ಟಪಟ್ಟು ಕೆಲಸ ಮಾಡು" ಅಂತ ಹೇಳಿದ್ದರೆಂಬ ನೆನಪು ನನಗೆ.

ಅದು ೧೯೭೦ರ ದಶಕ. ದೇಶದ ಜನಜೀವನದಲ್ಲಿ ಬಹಳ ಮಹತ್ವದ ಘಟ್ಟ ರಾಜಕೀಯವಾಗಿ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮೆರೆಯುತ್ತಿದ್ದ ಸರ್ವಾಧಿಕಾರಿ ಶಕ್ತಿಯನ್ನು ವಿರೋಧಿಸಿ ಪ್ರಜಾಶಕ್ತಿ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದ ಕಾಲವಾಗಿತ್ತು. ಜಯಪ್ರಕಾಶ ನಾರಾಯಣರು ಸಮಗ್ರ ಆಂದೋಲನವನ್ನು ಶುರು ಮಾಡಿದ್ದರು. ಆ ಸಂದರ್ಭದಲ್ಲೇ ಕೋಟಿ 'ಆಂದೋಲನ' ವಾರಪತ್ರಿಕೆಯನ್ನು ಧಾರವಾಡದಲ್ಲಿ ಆರಂಭಿಸಿದ್ದರು. ಅದು ಅವರ ಬದುಕಿನ ಒಂದು ಸಂಕ್ರಮಣ ಕಾಲ. ಜಮೀನ್ದಾರರ ಕುಟುಂಬದಿಂದ ಬಂದಿದ್ದರೂ ಹೋರಾಟವನ್ನು ಮೈಗೂಡಿಸಿಕೊಂಡು ಮಾದರಿಯಾಗಿದ್ದರವರು.

ಸಮಾಜವಾದಿ ಚಳವಳಿ ಬಹಳ ಪ್ರಚಾರದಲ್ಲೂ, ಪ್ರಖರವಾಗಿಯೂ ಇದ್ದ ಕಾಲವಾಗಿತ್ತು. ಸಮಾಜವಾದಿ ಯುವಜನ ಸಭಾದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದರು. ಆಗ ಬೆಂಗಳೂರು, ಮೈಸೂರಿನಿಂದ ಎಲ್ಲ ವಿಚಾರವಾದಿಗಳೂ ಬಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಮೇಲಿಂದ ಮೇಲೆ ಸಭೆಗಳನ್ನು ನಡೆಸುತ್ತಿದ್ದರು. ಸಮಾಜವಾದಿ ಯುವಜನ ಸಭಾದಲ್ಲಿ ಕೋಟಿಯವರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು.

'ಆಂದೋಲನ' ಪತ್ರಿಕೆಯನ್ನು ಶುರು ಮಾಡಿದ್ದು ೧೯೭೭ರಲ್ಲಿ. ಮೊದಲು ವಾರಪತ್ರಿಕೆಯಾಗಿ ಶುರುವಾಗಿ ನಂತರ ಮೈಸೂರಿಗೆ ಹೋದ ಮೇಲೆ ದಿನಪತ್ರಿಕೆಯಾಯಿತು. ಯುವಜನರಿಗಾಗಿಯೇ ಆ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಶೀರ್ಷಿಕೆಯೂ

ಯುವಜನರಿಗಾಗಿ 'ಆಂದೋಲನ' ಎಂದೇ ಇತ್ತು. ಯುವಶಕ್ತಿಯಲ್ಲಿ ಬಹಳ ನಂಬಿಕೆ ಹಾಗೂ ಭರವಸೆಯನ್ನಿಟ್ಟಿದ್ದರು. ನಂತರ ತೇಜಸ್ವಿಯವರು, ಕೋಟಿ ಅವರನ್ನು ಮೈಸೂರಿಗೆ ಕರೆಸಿಕೊಂಡಾಗ, ಅವರು ಪತ್ರಿಕೆಯನ್ನೂ ಅಲ್ಲಿಗೇ ತೆಗೆದುಕೊಂಡು ಹೋದರು. ಅಲ್ಲಿ ತೇಜಸ್ವಿ, ರಾಮದಾಸ್, ಕಡಿದಾಳು ಶಾಮಣ್ಣ, ದೇವನೂರ ಮಹಾದೇವ ಮುಂತಾದ ಹಲವರು ಬಹಳ ನೆರವು ನೀಡಿ, ಬೆಂಬಲವಾಗಿ ನಿಂತರು; ಆಸರೆ ಕೊಟ್ಟರು. ಆಮೇಲೆ ದಿನಪತ್ರಿಕೆ ಮಾಡಿದರು. ಅಲ್ಲಿ ಸಮಾಜವಾದಿ ಪಕ್ಷದ ಎಲ್ಲ ಸ್ನೇಹಿತರು, ಒಟ್ಟು ಹೋರಾಟದ ಹುಚ್ಚು ಇಟ್ಟುಕೊಂಡಿದ್ದವರು ಬೆಂಬಲವಾಗಿದ್ದರು.

'ಬದಲಾವಣೆ ಆಗಬೇಕೆಂದರೆ ಅಷ್ಟಿಷ್ಟು ಬದಲಾವಣೆಯಿಂದ ಸಾಧ್ಯವಿಲ್ಲ. ಸಮಗ್ರವಾಗಿಯೇ ಆಗಬೇಕೆಂದು' ಅವರು ಬಯಸಿದ್ದರು. ಹಾಗಾಗಿ ಅವರಿಗೆ ಹೋರಾಟವೇ ಉಸಿರಾಗಿದ್ದಿತು. 'ಆಂದೋಲನ'ದ ವಿಶೇಷ ಸಂಚಿಕೆಯೊಳಗೆ ನನ್ನ 'ಅಲ್ಲ, ಮಾತು ಹೇಳುತ್ತೀನಿ' ಎಂಬ ರಾಜಕೀಯ ವಿಡಂಬನೆಯ ಕವಿತೆಯೊಂದು ಪ್ರಕಟವಾಗಿತ್ತು. ಕೋಟಿ ಅವರ ಟೀಕೆ ಕೂಡ ರಚನಾತ್ಮಕವಾಗಿರುತ್ತಿತ್ತು. ಅವರು ಬಹಳ ಎಫೆಕ್ಟಿವ್ ಆಗಿ ಕೆಲಸ ಮಾಡುತ್ತಿದ್ದರು. ಸಮಾಜವಾದಿ ಚಿಂತನೆಗೆ ಯಾವಾಗಲೂ ಬದ್ಧರಾಗಿದ್ದುಕೊಂಡೇ ಪತ್ರಿಕೆ ನಡೆಸುತ್ತಿದ್ದರು. ಪತ್ರಿಕೆಯನ್ನವರು ಉದ್ಯಮದಂತೆ ಎಂದೂ ಪರಿಗಣಿಸಿದ್ದಂತೆ ಕಂಡಿರಲಿಲ್ಲ. ಹೋರಾಟದ ಮಾಧ್ಯಮ ಎಂದುಕೊಂಡಿದ್ದರು. ಸುದೀರ್ಘವಾದ ಅನುಭವವೇ ಅವರ ಬಂಡವಾಳವಾಗಿದ್ದಿತು. ಒಂದು ಸ್ಥಳೀಯ ಪತ್ರಿಕೆಯಾಗಿದ್ದುಕೊಂಡು ಗ್ರಾಮೀಣ ಜನರ ಧ್ವನಿಯಾಗಿ, ಜನತೆಯ ಸಮಸ್ಯೆಗಳನ್ನು ಪ್ರತಿಬಿಂಬಿಸುವ ಮೂಲಕ 'ಹೋರಾಟ'ಗಳಿಗೆ ದನಿ ತುಂಬಿದರು. ಸಾಮಾಜಿಕ ಚಟುವಟಿಕೆಗಳಿಗೆ; ಚಳುವಳಿಗಳಿಗೆ ಪತ್ರಿಕೆ ಕೇಂದ್ರವಾಗಿತ್ತು. ಪ್ರಕೃತಿ ವಿಕೋಪಗಳಾಗಲಿ, ಭೂಕಂಪವಾಗಲಿ, ಸುನಾಮಿಯಾಗಲಿ, ಕಾರ್ಗಿಲ್ ಯುದ್ಧವಾಗಲಿ ಪತ್ರಿಕೆಯ ಮೂಲಕ ಹಣ ಸಂಗ್ರಹಿಸಿ ಸಂತ್ರಸ್ತರಿಗೆ ನೆರವಾಗುತ್ತಿದ್ದರು. ಅನೇಕ ಯುವ ಪತ್ರಕರ್ತರಿಗೆ ತರಬೇತಿ ನೀಡಿ, ತಯಾರು ಮಾಡಿದರು. ಜನರೂ ರಾಜ್ಯಮಟ್ಟದ ಪತ್ರಿಕೆಯಷ್ಟೆ 'ಆಂದೋಲನ'ಕ್ಕೂ ಮಹತ್ವ ಕೊಟ್ಟು ಕೊಂಡುಕೊಳ್ಳುತ್ತಿದ್ದರು.

ಒಮ್ಮೆ ನಾನು ಕೋಟಿಯವರ ಮನೆಗೆ ಹೋದಾಗ, ಆಗ ತಾನೇ ಜಪಾನ್ ಪ್ರವಾಸದಿಂದ ಹಿಂದಿರುಗಿ ಬಂದಿದ್ದರು. ಅಲ್ಲಿಂದ ಆಧುನಿಕವಾದ ದೊಡ್ಡ ಪ್ರಿಂಟಿಂಗ್ ಯಂತ್ರವನ್ನೂ ತರಿಸಿದ್ದರು. ಅಂದರೆ ಪತ್ರಿಕೆ ಆ ಮಟ್ಟದಲ್ಲಿ ಬೆಳೆದಿತ್ತು. ಯಾವುದೇ ಆಧುನಿಕತೆಯನ್ನು ಒಳಗೊಂಡರೂ ಹೋರಾಟ ಮತ್ತು ಪತ್ರಿಕೆಯೇ ಅವರ ಜೀವನ ಧರ್ಮವಾಗಿತ್ತು. ಅದಕ್ಕಾಗಿಯೇ ತಮ್ಮ ಸರ್ವ ಸಾಮರ್ಥ್ಯವನ್ನು ಅವರು ವೆಚ್ಚ ಮಾಡಿದರು.

'ಕೋಟಿ : ಓದುಗರ ಆಂದೋಲನ' ಸಂಸ್ಮರಣ ಗ್ರಂಥ, ೨೦೧೮

ನಾನು ಕಂಡಂತೆ.... ನಮ್ಮ ಲೋಕಪ್ಪ

"ನೀವಂತೂ ಈಗ ಪ್ರವಾಸ ಮಾಡುತ್ತಿಲ್ಲ. ಧಾರವಾಡಕ್ಕೆ ಬಂದಿದ್ದೆ. ನಿಮ್ಮನ್ನು ಭೆಟ್ಟಿಯಾಗಿ ಆರೋಗ್ಯ ವನ್ನು ವಿಚಾರಿಸಿ ಹೋಗೋಣ ಎಂದು ಬಂದೆ". ಕಳೆದ ತಿಂಗಳು ಶ್ರೀ ಡಿ.ಎನ್. ಲೋಕಪ್ಪ ಅವರು ನಮ್ಮ ಮನೆಗೆ ಬಂದಾಗ ಆಡಿದ ಅಂತಃಕರಣದ ಮಾತಿದು. ಅವರ ಜೊತೆಗೆ 'ಬದುಕಿನ ಸೂತ್ರಗಳು' ಗ್ರಂಥದ ಸಂಪಾದಕರಾದ ಡಾ. ಸಿ.ಪಿ. ರಾಮ್‌ಶೇಷ್ ಅವರೂ ಇದ್ದರು. ಲೋಕಪ್ಪ ಅವರು ಧಾರವಾಡ ಅಥವಾ ಹುಬ್ಬಳ್ಳಿಗೆ ಬಂದರೆ ತಪ್ಪದೆ ಮನೆಗೆ ಬಂದು ಭೆಟ್ಟಿಯಾಗುವದುಂಟು.

'ಸಂವಹನ' ಪ್ರಕಾಶನ ಕೇವಲ ಪುಸ್ತಕ ಪ್ರಕಟನೆಯನ್ನಷ್ಟೇ ಮಾಡದೆ ಅದನ್ನೊಂದು ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಳಿಸಿದ ಲೋಕಪ್ಪ ಅವರಿಗೆ ೭೦ ವಸಂತಗಳು ತುಂಬುತ್ತಿರುವ ಸಂದರ್ಭದಲ್ಲಿ ಮೈಸೂರಿನ ಗೆಳೆಯರು ಸೇರಿ ಅಭಿನಂದನ ಗ್ರಂಥವೊಂದನ್ನು ಅವರಿಗೆ ಸಮರ್ಪಿಸಲು ಯೋಚಿಸಿರುವುದು ಯಥೋಚಿತವಾಗಿದೆ.

'ಪುಸ್ತಕ ನಿಶ್ಚಯವಾಗಿಯೂ ಒಂದು ಮಾನವ ನಿರ್ಮಿತ ಪವಾಡ' ಎಂದ ರಷ್ಯದ ಮಿಖಾಯಿಲ್ ನೆನಾಷೆಲ್ ಅವರ ಮಾತನ್ನು ಡಾ. ಹಾ.ಮಾ. ನಾಯಕರು ತಮ್ಮ 'ಪ್ರಜಾವಾಣಿ'ಯ 'ಸಂಪ್ರತಿ' ಅಂಕಣವೊಂದರಲ್ಲಿ (೧೬-೨-೯೪) ಉದ್ಧರಿಸಿದ್ದಾರೆ. ಕನ್ನಡ ನಾಡಿನ ಕೆಲವು ಪ್ರಕಾಶಕರು ಆ ಪವಾಡ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವುದು ಅತ್ಯಂತ ಸಂತೋಷದ ಸಂಗತಿ. ಅಂಥವರಲ್ಲಿ ಲೋಕಪ್ಪ ಅವರೂ ಒಬ್ಬರು. ಹಾ.ಮಾ. ನಾಯಕರು ಮುಂದುವರಿದು, ಪುಸ್ತಕದ ಹೆಚ್ಚಳದ ಬಗ್ಗೆ, ಅದರ ಅನುಕೂಲದ ಬಗ್ಗೆ ಹೇಳುತ್ತಾರೆ; "ದೂರದರ್ಶನ ಸಮೂಹ ಮಾಧ್ಯಮ: ಪುಸ್ತಕ ವಾಚನ ಸ್ವಂತದ್ದು, ಖಾಸಗಿಯಾದದ್ದು, ಪುಸ್ತಕೇತರ ಮಾಧ್ಯಮಗಳೆಲ್ಲವೂ ಪರಾವಲಂಬಿಯಾಗಿರುತ್ತವೆ. ಪುಸ್ತಕಗಳೊ, ನಮ್ಮ ಸಮಯ ಮತ್ತು ದೃಷ್ಟಿಶಕ್ತಿಯನ್ನಷ್ಟೇ ಅವಲಂಬಿಸಿರುತ್ತವೆ. ಬೇಕೆನ್ನಿಸಿದಾಗ, ಬೇಕೆನ್ನಿಸಿದಲ್ಲಿ ನಾವು ನಮ್ಮ ಪುಸ್ತಕ ಓದಬಹುದು, ವಿಮಾನದಲ್ಲಾಗಲಿ, ಮರುಭೂಮಿಯಲ್ಲಾಗಲಿ ನಮಗೆ ಆ ಸೌಲಭ್ಯವಿದೆ. ಇತರ ಮಾಧ್ಯಮಗಳಿಗೆ ಇದು ಸಾಧ್ಯವಿಲ್ಲ. ಬೇರೆ ವ್ಯಕ್ತಿಗಳನ್ನೂ, ಬೇರೆ ಶಕ್ತಿಗಳನ್ನೂ ಅವು ಅವಲಂಬಿಸಿರಬೇಕಾಗುತ್ತದೆ." ನಮ್ಮ ಜ್ಞಾನದಾಹವನ್ನು ತಣಿಸುವ ಇಂಥ ಗ್ರಂಥಗಳನ್ನು ನಮಗೆ ಒದಗಿಸುವ ಪ್ರಕಾಶಕರನ್ನು, ಸಂಸ್ಕೃತಿ ಪ್ರಸಾರಕರನ್ನು ನಾವು ಮರೆಯುವಂತಿಲ್ಲ.

ಈ ಸಂದರ್ಭದಲ್ಲಿ, ಈಗ್ಗೆ ೩೮ ವರ್ಷಗಳ ಹಿಂದೆ ಲೋಕಪ್ಪನವರ ಅಣ್ಣಂದಿರಾದ

ಎನ್. ಚಂದ್ರಪ್ಪ ಅವರು ನನಗೆ ೫೦ ತುಂಬಿದಾಗ 'ಚೆಂಬೆಳಕು' ಎಂಬ ಅಭಿನಂದನ ಗ್ರಂಥವನ್ನು (ಸಂ: ಡಾ. ಜಿ.ಎಸ್. ಕಾಪಸೆ) ೧೯೮೦ರಲ್ಲಿ ಪ್ರಕಟಿಸಿದ್ದು ನೆನಪಿಗೆ ಬರುತ್ತದೆ. ಡಾ. ಜಿ.ಎಸ್. ಶಿವರುದ್ರಪ್ಪನವರು ಇದಕ್ಕೆ ಪ್ರೇರಕರಾಗಿದ್ದರೆಂದು ತೋರುತ್ತದೆ. ಧಾರವಾಡದ ಅಭಿನಂದನ ಸಮಿತಿಯವರು ಏರ್ಪಡಿಸಿದ ಸಮಾರಂಭದಲ್ಲಿ ಹಿರಿಯ ಕವಿ ಪು.ತಿ.ನ. ಅವರು ಅದನ್ನು ಬಿಡುಗಡೆಗೊಳಿಸಿದರು. ಆಗ ಪ್ರಕಾಶನಕ್ಕೆ ವಾಗ್ದೇವಿ ಎಂಟರ್‌ಪ್ರೈಸಸ್ ಎಂಬ ಹೆಸರಿತ್ತು. ಆಮೇಲೆ ವಾಗ್ದೇವಿ ಪುಸ್ತಕಗಳು ಎಂದಾಯಿತು. ೧೯೮೬ರಲ್ಲಿ ಶ್ರೀಮತಿ ಕಣವಿಯವರ 'ಅಜಗಜಾಂತರ' ಎಂಬ ಹರಟೆಗಳ ಸಂಗ್ರಹವನ್ನೂ ಚಂದ್ರಪ್ಪನವರು ಪ್ರಕಟಿಸಿದರು. ೨೦೦೬ರಲ್ಲಿ ಲೋಕಪ್ಪನವರು ಅದರ ದ್ವಿತೀಯ ಮುದ್ರಣವನ್ನು 'ಸಂವಹನ' ದಿಂದ ಹೊರತಂದರು. ಅಂದಿನಿಂದಲೂ ಲೋಕಪ್ಪನವರ ಪುಸ್ತಕ ಪ್ರೀತಿಯನ್ನು ಬಲ್ಲವನಾಗಿದ್ದೇನೆ. ಪ್ರಕಾಶನಕ್ಕೆ 'ಸಂವಹನ' ಎಂಬ ಅರ್ಥವತ್ತಾದ ಹೆಸರೂ ಬಂತು. ಅಂದಿನಿಂದ ಪುಂಖಾನುಪುಂಖವಾಗಿ ಮಹತ್ವದ ಪುಸ್ತಕಗಳೂ ಬರತೊಡಗಿದವು. ೨೦೦೬ರಲ್ಲಿ ಅದುವರೆಗೆ ಪ್ರಕಟವಾದ ನನ್ನ ೧೬ ಕವನ ಸಂಗ್ರಹಗಳನ್ನು 'ಕಣವಿ ಸಮಗ್ರ ಕಾವ್ಯ' ಎಂಬ ಶೀರ್ಷಿಕೆಯಲ್ಲಿ 'ಸಂವಹನ' ಪ್ರಕಟಿಸಿತು. ನನಗೆ ೭೫ ತುಂಬಿದಾಗ ಹೊತ್ತಿಗೆ ಸರಿಯಾಗಿ ಅದನ್ನು ಪ್ರಕಟಿಸಿದ್ದಲ್ಲದೆ, ಧಾರವಾಡದ 'ಸೃಜನ-ಚಿಂತನ ಬಳಗ' ಏರ್ಪಡಿಸಿದ 'ಕಣವಿ ಸಾಹಿತ್ಯೋತ್ಸವ'ದಲ್ಲಿ ಲೋಕಪ್ಪನವರು ಭಾಗವಹಿಸಿ ಅದರ ಬಿಡುಗಡೆಗೂ ಅಣಿಯಾದರು. ಅದೇ ಸಮಾರಂಭದಲ್ಲಿ ಧಾರವಾಡದ ಸಾಹಿತಿಗಳ ಬಳಗ ಲೋಕಪ್ಪನವರನ್ನು ಪ್ರೀತಿಯಿಂದ ಸನ್ಮಾನಿಸಿತು. ಮುಂದೆ ೨೦೦೮ರಲ್ಲಿ ನನ್ನ ಲೇಖನಗಳ ಸಂಕಲನ 'ಸದ್ಭಾವ'ವನ್ನು ಅವರೇ ಪ್ರಕಟಿಸಿದರು. ಇಷ್ಟೆಲ್ಲ ವೈಯಕ್ತಿಕ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಲು ಕಾರಣವೆಂದರೆ, 'ಸಂವಹನ' ಪ್ರಕಾಶನ ಲೇಖಕರನ್ನು ಎಷ್ಟು ಪ್ರೀತಿ ಮತ್ತು ಗೌರವಗಳಿಂದ ಕಾಣುತ್ತದೆ ಎಂಬುದಲ್ಲದೇ ಲೇಖಕರೇ ತಮ್ಮ ಜೀವಾಳವೆಂದು ಅವರು ಭಾವಿಸಿದ್ದಾರೆ.

ಲೇಖಕರ ಮತ್ತು ಪ್ರಕಾಶಕರ ಇಂಥ ಮಧುರಬಾಂಧವ್ಯದಿಂದ ಕನ್ನಡ ಸಾರಸ್ವತಲೋಕ ಸಂಪದ್ಭರಿತವಾಗಬಲ್ಲುದು. 'ಸಂವಹನ' ಪ್ರಕಟಿಸಿದ ಅನೇಕ ಕೃತಿಗಳು ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳಿಂದ ಪ್ರಶಸ್ತಿ ಪುರಸ್ಕೃತವಾದದ್ದುಂಟು. ಇವರ ಸಾಹಿತ್ಯಸೇವೆಯನ್ನು ಗಮನಿಸಿ ಕನ್ನಡ ಪುಸ್ತಕ ಪ್ರಾಧಿಕಾರ 'ಅತ್ಯುತ್ತಮ ಪ್ರಕಾಶನ' ಪ್ರಶಸ್ತಿ ನೀಡಿ ಇವರನ್ನು ಗೌರವಿಸಿದೆ. ಕಳೆದ ೩೫ ವರ್ಷಗಳಲ್ಲಿ ಸಾವಿರಕ್ಕೂ ಹೆಚ್ಚು ಮಹತ್ವದ ಗ್ರಂಥಗಳು ಲೋಕಾರ್ಪಣೆಗೊಂಡು ಓದುಗರ ಕೈಸೇರಿವೆ. ತಕ್ಕವರ ಕೈಗೆ ಹೋಗುವುದರಲ್ಲಿಯೇ ಪುಸ್ತಕಗಳ ಸಾರ್ಥಕತೆಯಿದೆ ಎಂದು ಅವರು ಬಲ್ಲವರಾಗಿದ್ದಾರೆ.

ಪುಸ್ತಕ ಪ್ರಕಾಶನವನ್ನು ಒಂದು ಉದ್ಯೋಗ ಎಂದು ಭಾವಿಸದೆ ಅದನ್ನೂ ಶ್ರದ್ಧೆಯ

ಕಾಯಕವಾಗಿ ಲೋಕಪ್ಪನವರು ಪರಿಭಾವಿಸಿ ಪುಸ್ತಕ ಸಂಸ್ಕೃತಿಯ ಪ್ರಸಾರಕ್ಕೆ ನೆರವಾಗುವ ಕಾರ್ಯದಲ್ಲಿ ತೊಡಗಿದ್ದಾರೆ. ಕನ್ನಡದಲ್ಲಿ ಇಂದು ಏನಿಲ್ಲೆಂದರೂ ಪ್ರತಿವರ್ಷ ಏಳೆಂಟು ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಅದಕ್ಕಾಗಿ ರಾಜ್ಯಕ್ಕೆ ಒಂದು ಪುಸ್ತಕ ನೀತಿಯಿರಬೇಕೆಂದು ಅವರ ಅಪೇಕ್ಷೆ ಮತ್ತು ಒತ್ತಾಯ. ಹಿಂದೆ ಕಾದಂಬರಿಗಳಷ್ಟೇ ಹೇಳಿಕೊಳ್ಳುವಂಥ ರೀತಿಯಲ್ಲಿ ಮಾರಾಟವಾಗುತ್ತಿದ್ದವು. ಕಾವ್ಯವನ್ನೂ ಕೇಳುವವರೇ ಇರಲಿಲ್ಲ. ಸಂಶೋಧನೆ, ಶಾಸ್ತ್ರಗ್ರಂಥಗಳು, ಛಂದಸ್ಸು, ವ್ಯಾಕರಣ, ಭಾಷಾಶಾಸ್ತ್ರ, ಸಾಹಿತ್ಯಚರಿತ್ರೆ, ವೈಚಾರಿಕ ಸಾಹಿತ್ಯ ಮೊದಲಾದುವನ್ನು ಅಚ್ಚುಮಾಡುವವರಿಗೆ ಧೈರ್ಯ ಬೇಕಾಗುತ್ತಿತ್ತು. ಈಗ ಇಂಥ ಪುಸ್ತಕಗಳನ್ನು ಪ್ರಕಟಿಸಲು ಕೆಲವರಾದರೂ ಮುಂದೆ ಬರುತ್ತಿದ್ದಾರೆ. ಕನ್ನಡ ನಾಡಿನ ಮಹತ್ವದ ಲೇಖಕರನ್ನೆಲ್ಲ ಅವರು ದೃಷ್ಟಿಯಲ್ಲಿಟ್ಟುಕೊಂಡಿರುವುದರಿಂದ ಲೋಕಪ್ಪನವರಿಗೆ ಇದು ಸಾಧ್ಯವಾಗಿದೆ. ಹಾಗೆಯೇ ಪ್ರತಿಭಾವಂತ ಹೊಸ ಲೇಖಕರ ಹಲವಾರು ಕೃತಿಗಳನ್ನು ಪ್ರಕಟಿಸಿ ಅವರನ್ನು ಪ್ರೋತ್ಸಾಹಿಸಿದ್ದಾರೆ. ನಮ್ಮಲ್ಲಿ ಪುಸ್ತಕಗಳನ್ನು ಯಾರೂ ಜೀವನಾವಶ್ಯಕ ವಸ್ತುವೆಂದು ಭಾವಿಸುವುದಿಲ್ಲ. ಅದಕ್ಕೆಂದೇ ಲೋಕಪ್ಪನವರು ಮನೆಮನೆಗೆ ಪುಸ್ತಕ ಹೊತ್ತು ಮಾರಾಟ ಮಾಡುತ್ತಿರುವುದೇ ಇದಕ್ಕೆ ಸಾಕ್ಷಿ. ಹಿಂದೆ ಧಾರವಾಡದ ಜಿ.ಬಿ. ಜೋಶಿಯವರು ಈ ಕೆಲಸ ಮಾಡುತ್ತಿದ್ದರು.

'ಸಂವಹನ ಸಾಂಸ್ಕೃತಿಕ ಟ್ರಸ್ಟ್' ರೂಪುಗೊಂಡಿರುವುದು ಲೋಕಪ್ಪನವರ ದೂರದೃಷ್ಟಿಯ ಸಂಕೇತವಾಗಿದೆ. ನಾಡಿನ ಕಲೆ, ಸಂಸ್ಕೃತಿ, ಪರಂಪರೆ, ಇತಿಹಾಸ, ಸಂಗೀತ, ನೃತ್ಯ - ಇವೆಲ್ಲವನ್ನೂ ಅದು ಒಳಗೊಂಡಿರುವುದು ಹಾಗೂ ಅದರ ಮೂಲಕ ಈಗಾಗಲೇ ಕೆಲವು ಚಟುವಟಿಕೆಗಳನ್ನು ಕೈಕೊಂಡಿರುವುದು ಅನುಕರಣೀಯ ಸಂಗತಿಯಾಗಿದೆ. ಇಂದಿನ ಯುವ ಲೇಖಕರಿಗೆ ಯೋಗ್ಯ ಮಾರ್ಗದರ್ಶನ ಹಾಗೂ ತರಬೇತಿ ಅಗತ್ಯವಾಗಿದೆ. ಅಂಥ ಪ್ರತಿಭೆಗಳನ್ನು ಗುರುತಿಸಲು ಸಂವಹನ ಯುವ ಲೇಖಕ ಪ್ರಶಸ್ತಿಯನ್ನು ಅದು ಪ್ರತಿವರ್ಷ ನೀಡಿ ಪ್ರೋತ್ಸಾಹಿಸುತ್ತಿರುವುದು ಗಮನಾರ್ಹ. ನಾಡಿನಾದ್ಯಂತ ಪ್ರಕಟವಾಗುತ್ತಿರುವ ಎಲ್ಲ ಪುಸ್ತಕಗಳು ಒಂದೆಡೆ ಲಭ್ಯವಾಗುವಂತೆ ಮಾಡಲು ಮೈಸೂರಿನಲ್ಲಿ ಒಂದು 'ಪುಸ್ತಕೋದ್ಯಾನ' ನಿರ್ಮಿಸಬೇಕೆಂಬ ಅವರ ಕನಸು ಬೇಗ ನನಸಾಗಲಿ ಎಂದು ಹಾರೈಸುತ್ತೇನೆ. ಮೈಸೂರಿನಂಥ ಸಾಂಸ್ಕೃತಿಕ ಕೇಂದ್ರಕ್ಕೆ ಅದು ಭೂಷಣಪ್ರಾಯವೆಂದು ಬೇರೆ ಹೇಳಬೇಕಾಗಿಲ್ಲ.

ಎಪ್ಪತ್ತರಲ್ಲಿಯೂ ಇಪ್ಪತ್ತರ ಉತ್ಸಾಹವನ್ನು ಹೊಂದಿರುವ ಲೋಕಪ್ಪನವರಿಗೆ ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ಸಾಧನೆಯ ಯೋಗವಿದೆ. ನಮ್ಮ ಭಾಷೆಗೆ, ನಮ್ಮ ಪುಸ್ತಕ ಸಂಸ್ಕೃತಿಗೆ ಮತ್ತಷ್ಟು ಬೆಲೆಯ ಮತ್ತಷ್ಟು ಸೇವೆ ಸಲ್ಲಿಸುವಂತೆ ಭಗವಂತನು ಅವರಿಗೆ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇನೆ.

'ಲೋಕಪ್ರಿಯ' ಅಭಿನಂದನ ಗ್ರಂಥ : ೨೦೧೮

ಸಾಹಿತ್ಯದಿಂದ ಶಕ್ತಿ ಹಾಗೂ ಸಾಂತ್ವನ ಪಡೆದ ಮಂದಾಕಿನಿ ಪುರೋಹಿತ

ಜೀವನದ ಎಂಥ ಪರಿಸ್ಥಿತಿಯಲ್ಲಿಯೂ ಧೈರ್ಯಗುಂದದೆ ಸಾಹಿತ್ಯದ ಆಸಕ್ತಿ ಮತ್ತು ಬರವಣಿಗೆಯಿಂದಲೇ ಶಕ್ತಿಯನ್ನು ಸಾಂತ್ವನವನ್ನು ಪಡೆದು, ಬೆಳೆಯುತ್ತ ಬಂದ ಲೇಖಕಿಯರಲ್ಲಿ ಡಾ. ಮಂದಾಕಿನಿ ಪುರೋಹಿತರೂ ಒಬ್ಬರು. ಧಾರವಾಡದ ಕಲ್ಯಾಣನಗರದಲ್ಲಿ ಪ್ರಾರಂಭದ ಒಂದೆರಡು ವರ್ಷ ಅವರು ವಾಸವಾಗಿದ್ದರು. ಅಂದಿನಿಂದಲೂ ಸೌಮ್ಯ ಸ್ವಭಾವದ ಅವರ ಸಾಹಿತ್ಯಾಸಕ್ತಿಯನ್ನು ಸಾಹಿತ್ಯಿಕ ಚಟುವಟಿಕೆಗಳನ್ನೂ ಗಮನಿಸುತ್ತ ಬಂದಿದ್ದೇನೆ. ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾದ ಧಾರವಾಡದಲ್ಲಿಯೇ ಅವರ ಶಿಕ್ಷಣ ಕೊನೆ ಮುಟ್ಟಿದರೂ ಕುಮಾರವ್ಯಾಸನ ಕೋಳಿವಾಡದ ಗ್ರಾಮೀಣ ಸಂಸ್ಕೃತಿಗೂ ಅವರು ಹೊರತಾಗಿಲ್ಲ. ಈ ಎರಡೂ ಪರಿಸರಗಳು ಡಾ. ಮಂದಾಕಿನಿಯವರ ಸಾಹಿತ್ಯಿಕ ವ್ಯಕ್ತಿತ್ವವನ್ನು ಪರಿಪೋಷಿಸಿಕೊಂಡು ಬಂದಿವೆಯೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಅವರ ಕೃತಿಗಳಲ್ಲೊಂದಾದ 'ಸಾಹಿತ್ಯ ಬಿಲ್ವ'ಕ್ಕೆ ನಾನು ಬರೆದ ಬೆನ್ನುಡಿಯಲ್ಲಿ ಈ ಮಾತುಗಳಿವೆ: "ಶ್ರೀಮತಿ ಎಂ.ಕೆ. ಇಂದಿರಾ ಅವರ ಕಾದಂಬರಿಗಳನ್ನು ಕುರಿತ ಸಂಶೋಧನ ಪ್ರಬಂಧದಿಂದ ವಾಚಕರಿಗೆ ಪರಿಚಿತರಾಗಿರುವ ಡಾ. ಮಂದಾಕಿನಿ ಪುರೋಹಿತ ಅವರು ತಮ್ಮ ಸಾಹಿತ್ಯದ ಅಭ್ಯಾಸವನ್ನು ಆಸ್ಥೆಯಿಂದ ಮುಂದುವರೆಸಿ ಕೊಂಡು ಬಂದುದರ ಫಲ ಈ 'ಸಾಹಿತ್ಯಬಿಲ್ವ'. ಕಳೆದ ೧೦-೧೨ ವರ್ಷಗಳಿಂದ ಅವರು ಬರೆಯುತ್ತ ಬಂದಿರುವ ಲೇಖನ. ವಿಮರ್ಶೆ, ವ್ಯಕ್ತಿ ಪರಿಚಯಗಳನ್ನು ಈ ಸಂಗ್ರಹದಲ್ಲಿ ಕೊಡಲಾಗಿದೆ." ಮೊದಲ ಭಾಗದ ಲೇಖನಗಳಲ್ಲಿ ವಿಮರ್ಶಾತ್ಮಕ ಲೇಖನಗಳು ಹೆಚ್ಚಾಗಿದ್ದು ಕಥೆ-ಕಾದಂಬರಿಗಳ ವಿವೇಚನೆಯಲ್ಲಿ ಲೇಖಕಿಯ ಹೆಚ್ಚಿನ ಒಲವನ್ನು ಹಾಗೂ ಸ್ವಂತಿಕೆಯನ್ನು ಗುರುತಿಸಬಹುದು. 'ಚದುರಂಗರ ಮೂರು ಕಾದಂಬರಿಗಳು' ಇದಕ್ಕೊಂದು ನಿದರ್ಶನ. ಎರಡನೆಯ ಭಾಗದಲ್ಲಿಯ ಬರವಣಿಗೆ ವೈವಿಧ್ಯಪೂರ್ಣ ವಾಗಿದ್ದರೂ ಪತ್ರಿಕಾವಿಮರ್ಶೆಯ ಮಿತಿಗೆ ಒಳಪಟ್ಟಿರುವುದರಿಂದ ಅವು ಅನಿವಾರ್ಯ ವಾಗಿ ಪರಿಚಯಾತ್ಮಕವಾಗಿವೆ. ಮೂರನೆಯ ಭಾಗದಲ್ಲಿ ಸಾಹಿತಿಗಳೊಡನೆ ತಮಗಿರುವ ಸಂಪರ್ಕವನ್ನು ಬಳಸಿಕೊಂಡು ಅವರ ವ್ಯಕ್ತಿತ್ವದ ಕೆಲವು ಮುಖಗಳನ್ನು ಆತ್ಮೀಯವಾಗಿ ಚಿತ್ರಿಸಲು ಪ್ರಯತ್ನಿಸಲಾಗಿದೆ. ಎಂ.ಕೆ. ಇಂದಿರಾ, ಶಾಂತಾದೇವಿ ಮಾಳವಾಡ, ಡಾ. ಸರೋಜಿನಿ ಶಿಂತ್ರಿ, ಶ್ರೀ ವರದರಾಜ ಹುಯಿಲಗೋಳ ಮೊದಲಾದವು ಹೆಚ್ಚು

ವಿವರಗಳನ್ನು ಒಳಗೊಂಡು ಮಹತ್ವದವೆನಿಸಿವೆ." ಇದನ್ನು ಇಡಿಯಾಗಿ ಇಲ್ಲಿ ಉದ್ಧರಿಸಿರುವ ಉದ್ದೇಶ, ಅವರ ಮುಂದಿನ ಕೃತಿಗಳಲ್ಲಿಯೂ ಇಂಥದೇ ವಸ್ತು ವಿಶೇಷಗಳಲ್ಲಿ ಅವರು ಸಾಧಿಸಿದ ಮೇಲ್ಮೆಯನ್ನು ಎತ್ತಿ ಹೇಳುವುದೇ ಆಗಿದೆ.

ಧಾರವಾಡ, ಹುಬ್ಬಳ್ಳಿ, ಶಿರಸಿ ಮೊದಲಾದ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆಯ ಅವಕಾಶಕ್ಕಾಗಿ ಇವರು ಅಲೆದಾಡಬೇಕಾಗಿ ಬಂದರೂ ಆ ತೊಂದರೆಗಳನ್ನೆಲ್ಲ ಇವರು ಸಹಿಸಿಕೊಂಡು ಮುನ್ನಡೆದರು. ಧಾರವಾಡದ ಶ್ರೀ ಸತ್ಯಸಾಯಿ ಗೃಹವಿಜ್ಞಾನ ಮಹಿಳಾ ವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕಿಯಾಗಿ ೧೫ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇ ಎಲ್ಲಕ್ಕೂ ಹೆಚ್ಚಿನ ಅವಧಿಯೆಂದು ಹೇಳಬಹುದು. ಆ ಅವಧಿಯಲ್ಲಿಯೇ ಅವರಿಗೆ ಹೆಚ್ಚು ಬರೆಯಲು ಸಾಧ್ಯವಾಯಿತು.

'ಚಂದ್ರಕ್ಕನ ಹಾಡುಗಳು' (ಸಂಪ್ರದಾಯದ ಹಾಡುಗಳು) ಸಂಪಾದನೆಯೊಂದಿಗೆ ಪ್ರಾರಂಭವಾದ (೧೯೮೭) ಇವರ ಕೃತಿಗಳ ಪ್ರಕಟಣೆ ಇಂದಿಗೂ ಮುಂದುವರಿದಿದೆ. ಇವುಗಳಲ್ಲಿ 'ಮಂದಾರ' ಹಾಗೂ 'ಚೈತ್ರಾಂಗಣ' ಎರಡೂ ಅಭಿನಂದನ ಗ್ರಂಥಗಳು. 'ಮಂದಾರ'ವು ಡಾ. ವರದರಾಜ ಹುಯಿಲಗೋಳರ ಜೀವನ ಹಾಗೂ ಕೃತಿಗಳ ಸಮೀಕ್ಷೆಯಾದರೆ, ಇನ್ನೊಂದು ಕವಿ ಪರಾಂಜಪೆಯವರಿಗೆ ಸಂಬಂಧಪಟ್ಟದ್ದು. ಒಬ್ಬರು ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಭಿರುಚಿ ಹೆಚ್ಚಿಸಲು ಕಾರಣರಾಗಿದ್ದರೆ, ಇನ್ನೊಬ್ಬರು ತಮ್ಮ ಮನೆಯ ಅಂಗಣವನ್ನೇ 'ಅನ್ವೇಷಣಕೂಟ'ದಂಥ ಸಾಹಿತ್ಯ ಸಮಾಲೋಚನೆಗೆ ಮೀಸಲಿಟ್ಟವರು. ಅದಕ್ಕಾಗಿ ಇಬ್ಬರೂ ಅಭಿನಂದನಾರ್ಹರು. ಜಾನಪದ ಆಸಕ್ತಿ ಮೊದಲಿನಿಂದಲೂ ಇವರು ಮೈಗೂಡಿಸಿಕೊಂಡದ್ದು. ಉಡುಪಿಯ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದಿಂದ ಪ್ರಕಟವಾದ 'ತುಳುನಾಡಿನ ಜಾನಪದ ಅಧ್ಯಯನ'ದ ವರದಿಯೂ ಇದೇ ಗುಂಪಿಗೆ ಸೇರಿದ್ದು. ಕಿರುಹೊತ್ತಿಗೆಗಳಲ್ಲಿ 'ಇಂಚರ' ಕೊಳಲುವಾದಕ ವೆಂಕಟೇಶ ಗೋಡಖಿಂಡಿಯವರ ಸಾಧನೆಯನ್ನು ಚಿತ್ರಿಸಿದ್ದರೆ, 'ಜಾನಪದ ಸಾಹಿತ್ಯದಲ್ಲಿ ಮಹಿಳಾ ಪ್ರತಿಭಟನೆ', 'ಭಾರತೀಯ ಸಂತರು ಮತ್ತು ಕನಕದಾಸರು' ಕಿರುಹೊತ್ತಿಗೆಗಳನ್ನೂ ಇಲ್ಲಿ ಹೆಸರಿಸಬಹುದು. ಸ್ವಂತ ಅಧ್ಯಯನದ ಪ್ರಬಂಧಗಳ ಸಂಕಲನ 'ಸಾಹಿತ್ಯ ಸಿರಿಗಂಧ' ಕೃತಿಯಲ್ಲಿ ತನ್ನತನವನ್ನು ಪ್ರಸ್ಥಾಪಿಸಿದ್ದು ಒಡೆದುಕಾಣುತ್ತದೆ.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತನ್ನು ಹಿಡಿದುಕೊಂಡು, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರೆಗೂ ಹಲವಾರು ಸಂಘ-ಸಂಸ್ಥೆಗಳ ನಿಕಟ ಸಂಪರ್ಕ ಇವರಿಗಿದೆ. ಉತ್ತರ ಕರ್ನಾಟಕದ ಲೇಖಕಿಯರ ಸಂಘ ಧಾರವಾಡ-ಹುಬ್ಬಳ್ಳಿ ಇದರ ಕಾರ್ಯದರ್ಶಿ, ಕಾರ್ಯಾಧ್ಯಕ್ಷೆ, ಅಧ್ಯಕ್ಷೆಯಾಗಿಯೂ ಇವರು ಕಾರ್ಯನಿರ್ವಹಿಸಿದ್ದು

ಇವರ ಜನಪ್ರಿಯತೆಗೆ ಸಾಕ್ಷಿ. ಇದಲ್ಲದೆ, ಹಲವಾರು ಕಡೆಗಳಲ್ಲಿಯೂ ನಡೆದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಅಭ್ಯಾಸಪೂರ್ಣವಾದ ಪ್ರಬಂಧಗಳನ್ನು ಮಂಡಿಸಿದ್ದೂ ಉಂಟು. ಅನೇಕ ಲೇಖಕಿಯರ ಸಾಹಿತ್ಯ ಸಾಧನೆಗಳನ್ನು ಕುರಿತು ಸಂಪ್ರಬಂಧಗಳನ್ನು ಬರೆಯಲು ಮಾರ್ಗದರ್ಶನ ಮಾಡಿದ್ದು ಮಹತ್ವದ್ದಾಗಿದೆ.

ಹೀಗೆ ವಿವಿಧ ಬಗೆಯ ಸಾಹಿತ್ಯಾಸಕ್ತಿಗಳಿಂದ ಕೂಡಿ, ಬರವಣಿಗೆಯನ್ನು ನಿರಂತರ ಮುಂದುವರೆಸಿಕೊಂಡು ಬಂದಿರುವ ಡಾ. ಮಂದಾಕಿನಿ ಪುರೋಹಿತ ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಅವರ ಸಾಹಿತ್ಯಿಕ ಸಾಧನೆಗಳನ್ನು ಗುರುತಿಸಿ 'ಸ್ನೇಹಕುಂಜ'ದ ಸದಸ್ಯರು ಅವರಿಗೆ ಸ್ನೇಹದ ಕಾಣಿಕೆಯಾಗಿ ಒಂದು ಅಭಿನಂದನ ಗ್ರಂಥವನ್ನು ಸಲ್ಲಿಸಲಿರುವುದು ಅತ್ಯಂತ ಸಂತೋಷದ ಸಂಗತಿ. ಈ ಸಂದರ್ಭದಲ್ಲಿ ಡಾ. ಮಂದಾಕಿನಿ ಪುರೋಹಿತ ಅವರಿಗೆ ಎಲ್ಲ ಶುಭಗಳನ್ನೂ ಕೋರುತ್ತೇನೆ.

'ಮಂದಾಕಿನಿ'

ಡಾ. ಮಂದಾಕಿನಿ ಪುರೋಹಿತ ಅಭಿನಂದನ ಗ್ರಂಥ : ೨೦೧೮

ಆಕಸ್ಮಿಕ ಸಾವಿಗೆ ನಿಸರ್ಗದ ಉತ್ತರ

ದಿನಾಂಕ ೧೧ನೇ ಮೇ ೨೦೧೮

ಈ ವರ್ಷದ ಅಡ್ಡಮಳೆಯ ಸಿಡಿಲಿನ ಆಘಾತದಿಂದಲೂ ಹೆಚ್ಚಿನ ಆಘಾತವನ್ನು ಡಾ. ಗಿರಡ್ಡಿ ಗೋವಿಂದರಾಜರ ಆಕಸ್ಮಿಕ ನಿಧನದಿಂದ ಕನ್ನಡ ಸಾಹಿತ್ಯಲೋಕ ಅನುಭವಿಸಿತೆಂದರೆ ಅತಿಶಯೋಕ್ತಿಯಾಗದು. ಸಂಜೆ ಏಳೆಂಟು ಗಂಟೆಗೆ ಈ ಸುದ್ದಿ ತಿಳಿದೊಡನೆ ಅವರ ಸ್ನೇಹಿತರೂ ಧಾರವಾಡದ ಸಾಹಿತಿಗಳ ಬಳಗವೂ ಮಾಧ್ಯಮದವರೂ- ಎಲ್ಲರೂ ದಿಗ್ಭ್ರಮೆಗೊಂಡು ಅವರ ಮನೆಗೆ ನುಗ್ಗಿ ಶೋಕತಪ್ತರಾದುದು ಸಹಜವೇ ಆಗಿದೆ. ಮರುದಿನ ಚುನಾವಣೆಯಿದ್ದರೂ ಮುಂಜಾನೆ ಹನ್ನೊಂದೂವರೆಯವರೆಗೂ ಅವರ ಮನೆಯ ಅಂಗಳದಲ್ಲಿ ಜನ ಕಾದು, ಅಬ್ಬೀಗೇರಿಗೆ ಗಿರಡ್ಡಿಯವರ ಕೀರ್ತಿಶರೀರವನ್ನು ಬೀಳ್ಕೊಂಡ ದೃಶ್ಯವನ್ನು ಎಂದೂ ಮರೆಯುವಂತಿಲ್ಲ. ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದ ಒಂದು ಸಾಲು ನನ್ನ ಕಣ್ಣಿಮುಂದೆ ಕಟ್ಟಿದಂತಾಯಿತು: 'ಪುರದ ಪುಣ್ಯಂ ಪುರುಷ ರೂಪಿಂದ ಪೋಗುತಿದೆ'. ಅಂದು ಸಂಜೆ ಅಬ್ಬೀಗೇರಿಯ ಮಸಣವಾಟಿಯಲ್ಲಿ ಅಂತ್ಯಕ್ರಿಯೆ ಮುಗಿಯುವ ಹೊತ್ತಿಗೆ ಭಯಂಕರ ಬಿರುಗಾಳಿ ಬೀಸಿ ಅಲ್ಲೋಲ ಕಲ್ಲೋಲಗೈದುದನ್ನು ಗೆಳೆಯರು ನನ್ನೆದುರು ಹೇಳಿದರು. ಗಿರಡ್ಡಿಯವರ ಆಕಸ್ಮಿಕ ನಿಧನ ನಿಸರ್ಗಕ್ಕೂ ಎಷ್ಟೊಂದು ಸಂತಾಪದಾಯಕವಾಗಿತ್ತು, ಎಂಬುದಕ್ಕೆ ಇದು ಸಂಕೇತವೂ ಆಗಿರಬಹುದು.

ಡಾ. ಗಿರಡ್ಡಿಯವರು ಕರ್ನಾಟಕ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ನನಗೆ ಪರಿಚಿತರು. ಅವರು ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗ (೧೯೬೩) ಮಾಳಮಡ್ಡಿಯ ಲೋಕೂರ ಬಿಲ್ಡಿಂಗಿನ ಹಿಂದಿನ ಕೋಣೆಯಲ್ಲಿ ಇರುತ್ತಿದ್ದರು. ಇಂದಿಗೂ ಧಾರವಾಡದಲ್ಲಿ ಪಾರಂಪರಿಕ ಕಟ್ಟಡವಾಗಿ ಉಳಿದ ಕೆಲವೇ ಕೆಲವು ಬಂಗ್ಲೆಗಳಲ್ಲಿ ಅದೂ ಒಂದು. ಗಿರಡ್ಡಿಯವರ ಆ ಕೋಣೆಯಲ್ಲಿ ಅವರ ಸಾಹಿತ್ಯಾಸಕ್ತ ಗೆಳೆಯರು ಆಗಾಗ ಕೂಡಿ ಸಾಹಿತ್ಯಿಕ ಚರ್ಚೆಯಲ್ಲಿ ತೊಡಗುತ್ತಿದ್ದರೆಂದು ತೋರುತ್ತದೆ. ನಾನೂ ಒಂದೆರಡು ಸಲ ಆಮಂತ್ರಿತವಾಗಿ ಅಲ್ಲಿಗೆ ಹೋಗಿದ್ದೆ. ನನ್ನ ವಿದ್ಯಾರ್ಥಿ ಜೀವನದ 'ಕಾವ್ಯಾನುಭವಮಂಟಪ'ದ ನೆನಪು ನನಗಾಯಿತು. ಆಗಲೇ ಗಿರಡ್ಡಿಯವರು ನನ್ನ 'ಭಾವಜೀವಿ' ಕಾವ್ಯದ ವಿಮರ್ಶಾಲೇಖನವನ್ನು 'ಜಯಕರ್ನಾಟಕ'ದಲ್ಲಿ ಪ್ರಕಟಿಸಿದ್ದರು. ಆಗಲೇ ಅವರ ವಸ್ತುನಿಷ್ಠ ವಿಮರ್ಶೆಯ ಲಕ್ಷಣಗಳನ್ನೂ ಗುರುತಿಸಿದ್ದೆ.

ಈಗ, ಅವರ ವಿಮರ್ಶಕ ವ್ಯಕ್ತಿತ್ವವೇ ಹೆಚ್ಚು ಮಹತ್ವದ್ದಾಗಿ ನಮಗೆ ಕಾಣಿಸಿದರೂ ಕಾವ್ಯರಚನೆಯಿಂದಲೇ ಅವರ ಸಾಹಿತ್ಯವ್ಯವಸಾಯ ಪ್ರಾರಂಭವಾದದ್ದು. ಇನ್ನೂ ಹಾಯ್‌ಸ್ಕೂಲ್ ವಿದ್ಯಾರ್ಥಿಯಿದ್ದಾಗಲೇ 'ಶಾರದಾಲಹರಿ' ಎಂಬ ನೀಳ್ಗತೆಯನ್ನು ಅವರು ಪ್ರಕಟಿಸಿದ್ದರು (೧೯೫೬). ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗ 'ರಸವಂತಿ' ಕವನ ಸಂಕಲನ ಗೋಕಾಕರ ಮುನ್ನುಡಿಯೊಂದಿಗೆ ಪ್ರಕಟವಾಗಿತ್ತು (೧೯೬೧). ನನ್ನಿಂದಲೂ 'ನಲ್ನುಡಿ'ಯನ್ನು ಬರೆಸಿದ್ದರು. 'ಮರ್ಲಿನ್ ಮನ್ರೋ' ನವ್ಯಧ್ವನಿಯನ್ನೊಳಗೊಂಡ ಮೂರನೆಯ ಸಂಕಲನ (೧೯೭೮). ಕಾವ್ಯರಚನೆಯನ್ನು ಮೂರಕ್ಕೇ ಮುಕ್ತಾಯಗೊಳಿಸಿ ಗಿರಡ್ಡಿಯವರು ವಿಮರ್ಶಕರಾಗುವ ಸಂದರ್ಭ ಅನಿವಾರ್ಯವಾಯಿತು. 'ಸಂಕ್ರಮಣ' ಪತ್ರಿಕೆಯೂ ಇದಕ್ಕೆ ಒತ್ತಾಸೆಯಾಯಿತು.

ಜೊತೆಜೊತೆಗೆ ಅತ್ಯುತ್ತಮ ಸಣ್ಣಕಥೆಗಳನ್ನು ಬರೆದರು. ಹಾಗೆಯೇ ಸೊಗಸಾದ ಪ್ರಬಂಧ. ವ್ಯಕ್ತಿಚಿತ್ರಗಳೂ ಬಂದವು. ಬಾಲ್ಯದಿಂದಲೂ ನಾಟಕದ ಬಗೆಗಿನ ಅವರ ಪ್ರೀತಿ ಗುಲ್ಬರ್ಗಾದಲ್ಲಿ 'ರಂಗಮಾಧ್ಯಮ'ವಾಗಿ ರೂಪುಗೊಂಡಿತು. ಹೀಗೆ ಗಿರಡ್ಡಿಯವರ ಪ್ರತಿಭೆ ಕಾವ್ಯದಲ್ಲಿ ಮಿನುಗಿ, ಸಣ್ಣಕಥೆಯಲ್ಲಿ ಹೆಚ್ಚಿನ ಮೆರುಗನ್ನು ಪಡೆದುಕೊಂಡು, ವಿಮರ್ಶೆಯಲ್ಲಿ ಅತ್ಯಂತ ಪಕ್ವವಾಗಿ ಕನ್ನಡದ ಪ್ರಥಮ ಪಂಕ್ತಿಯ ವಿಮರ್ಶಕರೆನಿಸಿಕೊಂಡರು.

೨೦೦೧ರಲ್ಲಿ ಅವರಿಗೆ ೬೨ ವರ್ಷವಾದಾಗ ೬೨ ಲೇಖನಗಳನ್ನು ಒಳಗೊಂಡ 'ತಲಸ್ಪರ್ಶಿ' ಅಭಿನಂದನ ಗ್ರಂಥವನ್ನು ಅವರಿಗೆ ಸಲ್ಲಿಸಿ ಗೌರವಿಸಲಾಯಿತು. ಅದರ ಸಂಪಾದಕರಲ್ಲಿ ಒಬ್ಬರಾದ (ಇನ್ನೊಬ್ಬರು ಡಾ. ಮನು ಬಳಿಗಾರ) ಡಾ. ಜಿ.ಎಂ. ಹೆಗಡೆಯವರು ಆ ಗ್ರಂಥಕ್ಕೆ ಹೆಸರನ್ನು ಸೂಚಿಸಲು ನನ್ನನ್ನು ಕೇಳಿದಾಗ 'ತಲಸ್ಪರ್ಶಿ' ಎಂದೇ ಹೇಳಿದೆ. 'ತಾವು ಬರೆಯುವ ವಿಮರ್ಶೆ ಕನ್ನಡವಾಗುವಂತೆ ಅವರು ನೋಡಿಕೊಂಡರು' ಎಂದು ಕುರ್ತಕೋಟಿಯವರು ಪ್ರಶಂಸಿಸಿದ್ದಾರೆ. ಕನ್ನಡ ಸಾಹಿತ್ಯದ ಜೀವಸ್ವರಗಳಿಗೆ ಗಿರಡ್ಡಿಯವರು ತಮ್ಮ ಕಿವಿಗಳನ್ನು ತೆರೆದಿಟ್ಟರು ಎಂಬ ಮಾತೂ ಇದೆ.

ಕನ್ನಡ ಸಾಹಿತ್ಯದಲ್ಲಿ ಅತ್ಯುತ್ತಮವಾದದ್ದೆಲ್ಲವೂ ಅವರಿಗೆ ಬೇಕು. ಅದೆಲ್ಲವನ್ನೂ ಗುರುತಿಸುವ ಸೂಕ್ಷ್ಮಗ್ರಹಣಶಕ್ತಿಯೂ ಅವರಿಗಿತ್ತು. ಅವರ ಸಂಘಟನ ಶಕ್ತಿಗೆ ಇದು ಬಲವನ್ನು ತಂದುಕೊಟ್ಟಿತು. 'ಧಾರವಾಡ ಸಾಹಿತ್ಯ ಸಂಭ್ರಮ'ದ ಮುಖ್ಯ ರೂವಾರಿಯೂ ಆದರು. ಕನ್ನಡದ ಒಳ್ಳೊಳ್ಳೆ ಲೇಖಕರೆಲ್ಲ ಅವರ ಮಿತ್ರರೇ ಆಗಿದ್ದರಿಂದ ಅವರ ಮಾತನ್ನು ಯಾರೂ ಮೀರುತ್ತಿರಲಿಲ್ಲ. ವರ್ಷದಿಂದ ವರ್ಷಕ್ಕೆ ಆರು ಸಂಭ್ರಮಗಳೂ ಯಶಸ್ವಿಯಾಗುತ್ತಲೇ ಬಂದವು. ಇದನ್ನು ನಿಲ್ಲಿಸಬಾರದೆಂದೇ ಅನೇಕರ ಅಭಿಪ್ರಾಯ.

ಅವರ ಸ್ಥಾನವನ್ನು ತುಂಬಲು ಪ್ರೊ. ರಾಘವೇಂದ್ರ ಪಾಟೀಲ ಅವರನ್ನು ಬಿನ್ನವಿಸಲಾಗಿದೆ. ಮುಂದಿನ ವರ್ಷದ 'ಧಾರವಾಡ ಸಾಹಿತ್ಯ ಸಂಭ್ರಮ'ವನ್ನು ಡಾ. ಗಿರಡ್ಡಿಯರಿಗೆ ಅರ್ಪಿಸಬೇಕೆಂದು ಎಲ್ಲರ ಬಯಕೆಯಾಗಿದೆ.

ಈ ಸಂದರ್ಭದಲ್ಲಿ ಹೊಸ ಸರಕಾರಕ್ಕೆ ಈ ಸಭೆಯ ಮೂಲಕ ಎರಡು ಬಿನ್ನಹಗಳನ್ನು ಸೂಚಿಸಬಯಸುತ್ತೇನೆ. ಒಂದು, 'ಧಾರವಾಡ ಸಾಹಿತ್ಯ ಸಂಭ್ರಮ'ಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಸಾಕಷ್ಟು ಧನಸಹಾಯವನ್ನು ಒದಗಿಸಿ, ಸಾಹಿತ್ಯ-ಸಂಸ್ಕೃತಿ ಸಂವರ್ಧನೆಗೆ ನೆರವಾಗಬೇಕು. ಎರಡು, ಡಾ. ಗಿರಡ್ಡಿಯವರ ಸಮಗ್ರ ಸೃಜನ ಹಾಗೂ ವಿಮರ್ಶೆಯ ಎರಡು ಸಂಪುಟಗಳು ಬಹಳ ವರ್ಷಗಳ ಹಿಂದೆಯೇ ಪ್ರಕಟವಾಗಿ ಪ್ರತಿಗಳು ಈಗ ಲಭ್ಯವಿರುವುದಿಲ್ಲ. ಈ ಮಧ್ಯೆ ಪ್ರಕಟವಾಗಿರುವ ಸೃಜನ ಮತ್ತು ವಿಮರ್ಶಾ ಕೃತಿಗಳನ್ನು ಒಳಗೊಂಡಂತೆ ಸಮಗ್ರ ಸಂಪುಟಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ಒದಗುವಂತೆ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟಿಸಬೇಕು.

ಡಾ. ಗಿರಡ್ಡಿ ಗೋವಿಂದರಾಜರಿಗೆ ವೈಯಕ್ತಿಕವಾಗಿ ಮತ್ತು 'ಧಾರವಾಡ ಸಾಹಿತ್ಯ ಸಂಭ್ರಮ ಟ್ರಸ್ಟ್' ವತಿಯಿಂದ ಹೃತ್ಪೂರ್ವಕ ನುಡಿ-ನಮನಗಳನ್ನು ಸಲ್ಲಿಸುತ್ತೇನೆ.

ನಮ್ಮ ಗಿರಡ್ಡಿ ಸರ್ :

ಡಾ. ಗಿರಡ್ಡಿ ಗೋವಿಂದರಾಜರಿಗೆ ನುಡಿನಮನ

ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು : ೨೦೧೮

ಬೆಳ್ಳಿ ಚೂರು

ಕಾಗೆಯೊಂದು
ಕಾ ಎಂದು
ಅಲ್ಲಿ ಹಾರಿ ಇಲ್ಲಿ ಹಾರಿ
ತಂದಿತ್ತೊಂದು ಮಾಂಸಚೂರು
ಇಳಿಯಲಿಲ್ಲ ಕಾಗೆ ಕೆಳಗೆ
ನುಂಗಲಿಲ್ಲ ಮಾಂಸ ಒಳಗೆ
ಆ ಚೂರುಪಾರು
ಮೂಳೆನೋಡಿ
ರಾಶಿ ರಾಶಿ ಕಾಗೆ ಸೇರಿ
ಕಾ, ಕಾ, ಎಂದಿತು.
ಮೊದಲ ಕಾಗೆ ಹಾರಿಹಾರಿ
ಅತ್ತ ಇತ್ತ ನೋಡಿ ನೋಡಿ
ಮೂಳೆಚೂರು ಕೆಡವಿತು
ಮುತ್ತಿತ್ತೆಲ್ಲಾ ಕಾಗೆ ಬಂದು
ಆ ತುಂಡು ಮೂಳೆ ಹಿಡಿಯಲು
ನಮ್ಮ ಕಾಗೆ ಮೇಲೆ ನೋಡಿ
ಹೀಗೆ ಅಂದುಕೊಂಡಿತು :
ಮೂಳೆ ಚೂರು ಬಿದ್ದರೇನು
ಕಂಡೆನೆಲ್ಲಾ ಸೂರು ತುಂಬಾ
ಸಾಸಿರಾರು ಬೆಳ್ಳಿ ಚೂರು.

[ಭಾಗವತ ಪುರಾಣದ ಒಂದು ಕಥೆ]

ವಿಲಿಯಂ ಅವರು ಸಾಗರದಲ್ಲಿ ಸಾಹಿತ್ಯ ಸಂಸ್ಕೃತಿ ಹಾಗೂ ವಿವಿಧ ಸಾಮಾಜಿಕ ಸಂಘಟನೆಗಳಲ್ಲಿ ತಮ್ಮನ್ನು ಸದಾ ತೊಡಗಿಸಿಕೊಂಡಿರುವ ಅಪರೂಪದ ವ್ಯಕ್ತಿ. ಡಾ. ನಾ. ಡಿಸೋಜ ಅವರಂಥ ಹಿರಿಯರ ಮಾರ್ಗದರ್ಶನದಲ್ಲಿ ಡಾ. ಸರ್ಫ್ರಾಜ್ ಚಂದ್ರಗುತ್ತಿ, ಶ್ರೀ ಎಸ್.ಎಂ. ಗಣಪತಿಯವರಂಥ ಗೆಳೆಯರ ಜೊತೆಗೆ ಹಲವಾರು ಚಟುವಟಿಕೆಗಳಲ್ಲಿ ಸಾಗರವನ್ನು ಸಾರ್ವಜನಿಕವಾಗಿ ಭಾಗವಹಿಸುವ ಕಾರ್ಯದಲ್ಲಿ ಮಗ್ನರಾಗಿರುವವರು, ಕ್ರಿಯಾಶೀಲರು. ಕೆಲವರ್ಷಗಳ ಹಿಂದೆ 'ಒಡನಾಟ'ದ ಒಂದು

ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿದ್ದೂ ಉಂಟು. ಸಾಮಾನ್ಯವಾಗಿ ಕರ್ನಾಟಕದ ಎಲ್ಲ ಭಾಗದ ಹಿರಿ-ಕಿರಿಯ ಸಾಹಿತಿಗಳು ಸಾಗರಕ್ಕೆ ಬಂದು ಇವರೆಲ್ಲರ 'ಒಡನಾಟ'ದ ಸೌಖ್ಯವನ್ನು ಸವಿದವರೇ ಎಂದರೆ ತಪ್ಪಾಗದು.

ವಿಲಿಯಂ ಅವರು ಹಲವು ಬಗೆಯ ಕೃತಿಗಳನ್ನು ಪ್ರಕಟಿಸಿರುವರಲ್ಲದೆ ಮಹತ್ವದ ಅಭಿನಂದನ ಗ್ರಂಥಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಅವರು ಸಂಪಾದಿಸಿದ 'ಕ್ರಿಸ್ತಕಾವ್ಯ' ಕನ್ನಡದಲ್ಲಿ ಅದ್ವಿತೀಯವಾದದ್ದು. ಕ್ರಿಸ್ತನ ಬಗ್ಗೆ ಕನ್ನಡ ಮನಸ್ಸು ಕಾವ್ಯರೂಪದಲ್ಲಿ ಹೇಗೆ ಪ್ರತಿಸ್ಪಂದಿಸಿದೆ ಎನ್ನುವುದನ್ನು ಸಂಶೋಧನಾತ್ಮಕವಾಗಿ ಕಟ್ಟಿಕೊಟ್ಟ ಮಹತ್ವದ ಕೃತಿಯಿದು.

ಎಪ್ಪತ್ತೈದು ವಸಂತಗಳನ್ನು ಕಂಡ ವಿಲಿಯಂ ಅವರಿಗೆ ಸ್ನೇಹಿತರೆಲ್ಲ ಸೇರಿ ಅಭಿನಂದನ ಗ್ರಂಥವೊಂದನ್ನು ನೀಡಲಿರುವುದು ಅತ್ಯಂತ ಸಂತೋಷದ ಸಂಗತಿ. ಈ ಸಂದರ್ಭದಲ್ಲಿ ಅವರಿಗೆ ಎಲ್ಲ ಶುಭಗಳನ್ನು ಕೋರುತ್ತೇನೆ.

ಅವರ ಆಯ್ದ ಕೆಲವು ಕವನಗಳನ್ನು ಕುರಿತು ವಿಶ್ಲೇಷಣಾತ್ಮಕ ಲೇಖನಗಳನ್ನು ಈ ಅಭಿನಂದನ ಗ್ರಂಥದಲ್ಲಿ ಸೇರಿಸಬೇಕೆಂದಿರುವುದು ಒಳ್ಳೆಯ ವಿಚಾರ. ನನ್ನ ಈ ಲೇಖನ ವಿಲಿಯಂ ಅವರ 'ಬೆಳ್ಳಿಚುಕ್ಕಿ' ಎಂಬ ಕವಿತೆಯನ್ನು ಕುರಿತು ವಿವೇಚನೆಯನ್ನೊಳಗೊಂಡಿದೆ.

'ಬೆಳ್ಳಿಚುಕ್ಕಿ ಮತ್ತು ಇತರ ಕವನಗಳು' ಎಂಬ ಕವನಸಂಗ್ರಹದ 'ಬೆಳ್ಳಿಚುಕ್ಕಿ' ಕವಿತೆ ಒಂದು ವಿಶಿಷ್ಟ ಹೊಳಹನ್ನು ಒಳಗೊಂಡ ರಚನೆಯಾಗಿದೆ. ಅವರ ಬೇರೆ ಕೆಲವು ಕವಿತೆಗಳಲ್ಲಿಯಂತೆ ಇಲ್ಲಿಯೂ ಕ್ರೈಸ್ತಸಂವೇದನೆ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಹುದು. ಬೈಬಲ್‌ದಲ್ಲಿ ಬರುವ ಒಂದು ಸಾಮಿತಿ (ದೃಷ್ಟಾಂತ, ಸಾದೃಶ್ಯ) ನಿರೂಪಿಸುವಂತೆ ಮನುಷ್ಯ ರೊಟ್ಟಿ ತಿಂದು ಮಾತ್ರ ಬದುಕುವುದೇ ಬದುಕಲ್ಲ. ಜೀವನಕ್ಕೆ ರೊಟ್ಟಿಗಿಂತ ಇನ್ನೂ ಮಹತ್ವವಾದದ್ದು ಅಧ್ಯಾತ್ಮಚೇತನ (Divine spirit) ಬದುಕಿನಾಚೆಗಿನ ವಿಚಾರವನ್ನು ಮನುಷ್ಯ ಮಾಡಬೇಕಾದ ಅವಶ್ಯಕತೆಯಿದೆ.

ಈ ಕವಿತೆಯಲ್ಲಿ ಬರುವ ಕಾಗೆ ತಾನು ಹೆಕ್ಕಿದ ಮೂಳೆಯನ್ನು ಭೂಮಿಗೆ ಕೆಡವಿ ಆಕಾಶದ ಕಡೆಗೆ ನೋಡಿ ಅಲ್ಲಿರುವ ಹಲವು ಬೆಳ್ಳಿ ನಕ್ಷತ್ರಗಳನ್ನು ಕಂಡು ಸಂತೋಷಿಸುತ್ತದೆ. ಆದರೆ ಉಳಿದ ಕಾಗೆಗಳು ಭೂಮಿಯ ಮೇಲೆ ಬಿದ್ದ ಎಲುಬಿನ ಅಥವಾ ಮಾಂಸದ ತುಂಡಿಗಾಗಿ ಆಶೆಪಟ್ಟು ಕಿರುಚಾಡತೊಡಗುತ್ತವೆ. ಭೂಮಿಯ ಮೇಲೆ ಬದುಕುವ ಮನುಷ್ಯರು ಕೇವಲ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಮಾತ್ರ ಯೋಚಿಸದೆ ದೇವರ ಸಾಮ್ರಾಜ್ಯವನ್ನು ಕಾಣುವ ಪ್ರಯತ್ನ ಮಾಡುವುದು ಅವಶ್ಯಕ. ಜೀವನ ಎಂದರೆ ಕೇವಲ ರೊಟ್ಟಿಗಾಗಿ ಹೋರಾಟವಲ್ಲ. ಯಾವ ಮನುಷ್ಯ

ಮಹತ್ವಾಕಾಂಕ್ಷೆಯಿಂದ ಬದುಕುತ್ತಾನೋ ಅವನಿಗೆ ಬೆಳ್ಳಿಚೂರಿನ ದರ್ಶನವಾಗುತ್ತದೆ. ಇಲ್ಲದಿದ್ದರೆ ಕಾಗೆಗಳು ಕಂಡ ಎಲುಬಿನ ತುಂಡು ಮಾತ್ರ ಸಿಗುತ್ತದೆ.

ವಿಲಿಯಂ ಅವರು ಭಾವಿಸಿದಂತೆ ಭಾಗವತ ಪುರಾಣದಲ್ಲಿ ಈ ಕಥೆಯಿಲ್ಲ. ಇಂತಹದೇ ಇನ್ನೊಂದು ಕಥೆಯನ್ನು ಬಾಲ್ಯದಲ್ಲಿ ಅವರು ಓದಿದ್ದರೆಂದು ಸ್ನೇಹಿತರಾದ ಡಾ. ಜಿ.ಎಂ. ಹೆಗಡೆಯವರು ನನ್ನೊಡನೆ ಹೇಳಿದರು. ಭಾಗವತ ಕೂಡ ಒಂದು ರೂಪಕವೆಂದು ವಿಲಿಯಂ ಅವರ ಗ್ರಹಿಕೆ. ಬೈಬಲ್ಲಾಗಲಿ, ಭಾಗವತವೇ ಆಗಲಿ, ಜಗತ್ತಿನ ಎಲ್ಲ ದಿವ್ಯ ಗ್ರಂಥದಲ್ಲಿ ಬರುವ ಸಾಮತಿಗಳು ನಮ್ಮ ಜೀವನದ ತಿಳುವಳಿಕೆಯನ್ನು ಉದಾತ್ತವಾದ ರೀತಿಯಲ್ಲಿ ಹೆಚ್ಚಿಸುವಂಥವೇ ಎಂಬುದನ್ನು ವಿಲಿಯಂ ಅವರು ಈ ಕವಿತೆಯ ಮೂಲಕ ಧ್ವನಿಸಲು ಹೊರಟಿದ್ದಾರೆಂದು ಅನಿಸುತ್ತದೆ. ನಾವು ಬದುಕುತ್ತಿರುವ ಈ ನೆಲದಿಂದ ವಿಶಾಲವಾದ ಆಕಾಶದತ್ತ ನೋಡಿ ದಿವ್ಯತೆಯ ಅನುಭೂತಿ ಪಡೆಯುವುದು ಈ ಕವಿತೆಯ ಮುಖ್ಯ ಆಶಯವಾಗಿದೆ.

ಮೂಳೆ ಚೂರು ಬಿದ್ದರೇನು
ಕಂಡೆನೆಲ್ಲಾ ಸೂರು ತುಂಬಾ
ಸಾಸಿರಾರು ಬೆಳ್ಳಿಚೂರು

ಎನ್ನುವಲ್ಲಿ ಈ ಆಶಯ ತನ್ನ ಅಭಿವ್ಯಕ್ತಿ ಪಡೆದಿದೆ.

ಈ ಕವಿತೆಯ ಛಂದಸ್ಸು ಕೂಡ ಕಾಗೆಯ ಸ್ವಭಾವಕ್ಕೆ ತಕ್ಕಂತೆ ಅದನ್ನು ಅಭಿನಯಿಸಿ ತೊಡಿಸುವಂತಿದೆ:

ಕಾಗೆಯೊಂದು
ಕಾ ಎಂದು
ಅಲ್ಲಿ ಹಾರಿ ಇಲ್ಲಿ ಹಾರಿ
ತಂದಿತೊಂದು ಮಾಂಸ ಚೂರು.

ಇಲ್ಲಿಯ ಮೂರು ಮಾತ್ರೆಯ ಗಣಗಳು ಕಾಗೆಯ ಹಾರಾಟಕ್ಕೆ ಪುಟಕೊಟ್ಟಂತಿದೆ.

ಈ ಕವನ ಸಂಗ್ರಹಕ್ಕೆ ಮುನ್ನುಡಿ ಬರೆದ ಕೆ.ವಿ. ಅಕ್ಷರ ಅವರು ಒಂದು ಮಾತು ಹೇಳಿದ್ದಾರೆ: "ವಿಲಿಯಂ ಅವರಿಗೆ ಒಂದೊಂದು ಕಾವ್ಯ ಘಟನೆಯೂ ಆದ ಕ್ಷಣಕ್ಕೆ ಕಾಣಿಸುವ ಹೊಳಹಷ್ಟೇ ಆಗಿ ನಿಲ್ಲುತ್ತದೆ. ಅದನ್ನು ವಿಸ್ತರಿಸುವ ಆಕಾಂಕ್ಷೆಯನ್ನು ಈ ಕವಿ ತೋರಿಸುವುದೇ ಇಲ್ಲ." ಬಹುಶಃ ಈ ಕವಿತೆಯ ಉದ್ದೇಶವೂ ಅಷ್ಟೇ ಇರಬಹುದು. ಆದರೂ ಇಂಥಲ್ಲಿ 'ಅವರ ವ್ಯಕ್ತಿತ್ವದ ಒಂದು ಚಹರೆ'ಯನ್ನು ಗುರುತಿಸುವುದನ್ನು ಮುನ್ನುಡಿಕಾರರು ಮರೆತಿಲ್ಲ.

'ಒಡನಾಡಿ' ಅಭಿನಂದನ ಗ್ರಂಥ : ೨೦೧೯

ವಚನ ಸಾಹಿತ್ಯ ಕ್ಷೇತ್ರದ ಅಪೂರ್ವ ಸಾಧನೆ

ನಮ್ಮ ನಾಡಿನ ಪ್ರಖ್ಯಾತ ಭಾಷಾ ವಿಜ್ಞಾನಿಗಳಲ್ಲಿ ಹಾಗೂ ಸಂಶೋಧಕ ವಿದ್ವಾಂಸರಲ್ಲಿ ಒಬ್ಬರಾದ ಡಾ. ಸಂಗಮೇಶ ಸವದತ್ತಿಮಠ ಅವರು ಯಾವುದೇ ಸದ್ದು ಗದ್ದಲವಿಲ್ಲದೆ ದೊಡ್ಡ ಸಾಹಿತ್ಯಿಕ ಯೋಜನೆಗಳನ್ನು ಕೈಕೊಂಡು ಶ್ರದ್ಧೆಯಿಂದ ಪೂರೈಸುವ ವಿದ್ಯಾವಿನಯ ಸಂಪನ್ನರು. ಕಳೆದ ಐದು ದಶಕಗಳಿಂದ ಕನ್ನಡ ಸಾರಸ್ವತಲೋಕಕ್ಕೆ ಅವರು ಗೈದ ವಿಶಿಷ್ಟ ಸೇವೆಯನ್ನು ನೆನೆದು 'ಸಂಪನ್ನ' ಎಂಬ ಹೆಸರಿನ ಅಭಿನಂದನ ಗ್ರಂಥವನ್ನು ಅರ್ಪಿಸಲಿರುವುದು ಯಥೋಚಿತವಾಗಿದೆ.

ಕಳೆದ ವರ್ಷ ಪ್ರಕಟವಾದ 'ಹೊಸ ಕನ್ನಡ ಭಾಷಾವ್ಯಾಸಂಗ'ದ 'ಮುಮ್ಮಾತು'ವಿನಲ್ಲಿ ಇದು ತಮ್ಮ ವಯಸ್ಸಿನ ೭೫ನೇ ವರ್ಷದ ೧೨೧ ನೆಯ ಕೃತಿ ಎಂಬ ಸೂಚನೆಯಿದೆ. ಈ ಕೃತಿಶ್ರೇಣಿ ಭಾಷಾವಿಜ್ಞಾನ, ಸಂಶೋಧನೆ, ಸಂಪಾದನೆಯಂಥ ಕೃತಿಗಳಲ್ಲದೆ ಜಾನಪದ, ಸೃಜನ, ವಿಮರ್ಶೆ, ವ್ಯಕ್ತಿಚಿತ್ರ, ಜೀವನಚರಿತ್ರೆ ಮುಂತಾದ ಕೃತಿಗಳನ್ನೂ ಅದು ಒಳಗೊಂಡಿದೆ. ಇದು ಅವರ ವಿವಿಧ ಆಸಕ್ತಿಗಳ ದ್ಯೋತಕವೂ ಆಗಿದೆ.

ಸುಮಾರು ನಾಲ್ಕು ದಶಕಗಳ ಹಿಂದೆಯೇ ಪ್ರಕಟವಾದ 'ಕನ್ನಡ ಭಾಷಾ ವ್ಯಾಸಂಗ' ವಿದ್ಯಾರ್ಥಿಗಳಿಗೆ ಮತ್ತು ಆಸಕ್ತ ಓದುಗರಿಗೆ ಸರಳವಾಗಿ ಮನಮುಟ್ಟುವ ಗ್ರಂಥವಾದ್ದರಿಂದ ಹತ್ತು ಆವೃತ್ತಿಗಳನ್ನು, ಇಪ್ಪತ್ತು ಮುದ್ರಣಗಳನ್ನು ಕಂಡುಕೊಂಡು ಐತಿಹಾಸಿಕ ದಾಖಲೆ ಎನಿಸಿದೆ. ಭಾಷಾ ವಿಷಯದಲ್ಲಿ ಆಧುನಿಕ ಮತ್ತು ಪಾರಂಪರಿಕ ವಿಚಾರಗಳನ್ನು ಒಟ್ಟೊಟ್ಟಿಗೇ ಇಟ್ಟು ಪರಿಶೀಲಿಸಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ. ಇದು ಬಹಳ ಹಿಂದೆಯೇ ರಚನೆಗೊಂಡ ಕೃತಿಯಾದ್ದರಿಂದ ಕೆಲವು ಭಾಗಗಳನ್ನು ಪರಿಷ್ಕರಿಸಿ, ಕೆಲವು ಹೊಸ ಅಂಶಗಳನ್ನು ಸೇರಿಸಿ ಇದೀಗ 'ಹೊಸ ಕನ್ನಡ ಭಾಷಾ ವ್ಯಾಸಂಗ'ವಾಗಿ ರೂಪುಗೊಂಡು ಕಳೆದ ವರ್ಷವೆ ಓದುಗರ ಕೈಸೇರಿದೆ.

ವಚನಸಾಹಿತ್ಯದ ಅಭ್ಯಾಸಿಗಳು ಅಂತೆಯೇ ಬಹಳ ಜನ ವಿದ್ವಾಂಸರು ಮೆಚ್ಚಿಕೊಂಡ ಇವರ 'ವರ್ಣನಾತ್ಮಕ ವಚನ ಪದಕೋಶ'ದ ಪರಿಷ್ಕೃತ ಮತ್ತು ವಿಸ್ತೃತ ದ್ವಿತೀಯ ಆವೃತ್ತಿ ೨೦೧೧ರಲ್ಲಿಯೇ ಪ್ರಕಟಗೊಂಡಿದೆ. ಡಾ. ಸವದತ್ತಿಮಠರ ಭಾಷಾವಿಜ್ಞಾನ ಪರಿಣತಿ ಹಾಗೂ ವಚನ ಸಾಹಿತ್ಯದ ಆಳವಾದ ಅಧ್ಯಯನ ಈ ಕೃತಿಗೆ ಪ್ರೇರಣೆಯಾಗಿರುವಂತೆ ತೋರುತ್ತದೆ. ಅಲ್ಲದೆ, ವಚನ ಸಾಹಿತ್ಯದ ಅಧ್ಯಯನಕ್ಕೆ ಉಪಯುಕ್ತವಾದ ಹೊಸತೇನನ್ನಾದರೂ ಕೊಡಬೇಕು ಎಂಬ ತುಡಿತವೂ

ಕಾರಣವಾಗಿರಬಹುದು. 'ಹಾಗೆ ನೋಡಿದರೆ ಈ ಪ್ರಯತ್ನ ಕನ್ನಡದಲ್ಲಿ ಮೊದಲನೆಯದು' ಎಂದು ನಿಘಂಟುತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯನವರಿಂದ ಪ್ರಶಂಸಿಸಲ್ಪಟ್ಟ ಕೃತಿಯಿದು. ಡಾ. ಸವದತ್ತಿಮಠರೇ ಹೇಳಿದಂತೆ ವಚನಗಳಲ್ಲಿನ ಶಬ್ದಗಳ ಅರ್ಥ ನೋಡಲು ಸರಳ, ಸುಲಭ. ಆದರೆ ಎಷ್ಟೋ ಕಡೆಗಳಲ್ಲಿ ಅದು ವಿಶಿಷ್ಟ ಹಾಗೂ ಸಂಕೀರ್ಣ. ಅದಕ್ಕಾಗಿ ತಾತ್ವಿಕವಾಗಿ ಬೇರೆ ಬೇರೆ ಸಂದರ್ಭಗಳೊಂದಿಗೆ ಹಾಗೂ ಭಾಷೆಯ ದೃಷ್ಟಿಯಿಂದಲೂ ಆ ಶಬ್ದಗಳನ್ನು ಅರ್ಥೈಸಬೇಕಾಗುತ್ತದೆ. ಅಂಥ ವಿವರಣೆಗಳನ್ನೆಲ್ಲ ಒಳಗೊಂಡ ಪದಾರ್ಥಕೋಶವಿದು. ಆದ್ದರಿಂದಲೇ ಇದನ್ನು 'ಸಂಕ್ಷಿಪ್ತ ವಿಶ್ವಕೋಶಾತ್ಮಕ ನಿಘಂಟು' ಎಂದು ಲೇಖಕರು ಕರೆದಿರುವಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಇಂಥ ಯೋಜನೆ ಹಮ್ಮಿಕೊಂಡಾಗ ಅನ್ಯಭಾಷಾಜ್ಞಾನ-ಅದರಲ್ಲೂ ಸಂಸ್ಕೃತ ಮತ್ತು ಪ್ರಾಕೃತ ಭಾಷಾಜ್ಞಾನ-ಅವಶ್ಯವಾಗಿ ಬೇಕಾಗುತ್ತದೆ. ಅದನ್ನು ಕೈವಶ ಮಾಡಿಕೊಂಡಿದ್ದರಿಂದಲೇ ಡಾ. ಸವದತ್ತಿಮಠರಿಗೆ ಇದು ಸಾಧ್ಯವಾಗಿದೆ. ಶಿವಶರಣರ ಸಾವಿರಾರು ವಚನಗಳನ್ನು ತಲಸ್ಪರ್ಶಿಯಾಗಿ ಅಭ್ಯಸಿಸಿ, ಅದಕ್ಕೆ ಹೊಂದುವಂಥ ವಚನಗಳ ಭಾವಾರ್ಥವನ್ನು ವಿಶದಪಡಿಸಿದಾಗಲೂ ಈ ಪದಕೋಶ ಪರಿಪೂರ್ಣವೆಂದು ಲೇಖಕರು ಭಾವಿಸಿಲ್ಲ. ಈ ದಿಸೆಯಲ್ಲಿ ಇನ್ನೂ ಕೆಲಸವಾಗಬೇಕೆಂಬ ಕಾಳಜಿ ಅವರದಾಗಿದೆ.

ಈ ಗ್ರಂಥದ ಅನುಬಂಧಗಳು ಕೂಡ ಅಷ್ಟೇ ಮಹತ್ವಪೂರ್ಣವಾಗಿ ಕೋಶದ ಮಹತ್ವವನ್ನು ಹೆಚ್ಚಿಸಿವೆ. ವಿಶಿಷ್ಟ ಪದಗಳ ಅರ್ಥ, ವಚನಕಾರರ ವಿವರಣೆ, ಅಲ್ಲಮ, ಮಹಾಮನೆ, ಸ್ಥಾವರ-ಜಂಗಮ, ಸಾಂಖ್ಯಯೋಗ - ಇತ್ಯಾದಿ ಪದಗಳ ಸಮಗ್ರ ವಿವರಣೆ, ಎಲ್ಲ ವಚನಕಾರರ ಜೊತೆಗೆ ಅಜ್ಞಾತವಚನಕಾರರ ಅಂಕಿತಗಳು, ವಚನಕಾರರ ಸಂಕ್ಷಿಪ್ತಪರಿಚಯ, ವಚನಗಳಲ್ಲಿ ಬರುವ ಸಾಂದರ್ಭಿಕ, ಪೌರಾಣಿಕ ಘಟನೆಗಳ ಹಾಗೂ ವ್ಯಕ್ತಿಗಳ ವಿವರಗಳು ಶೈವ ಪ್ರಭೇದಗಳು, ವಚನಗಳಲ್ಲಿನ ಆಯ್ದ ವಿಶಿಷ್ಟ ಪದಸ್ಮೃತಿ, ಆಯ್ದ ವೃತ್ತಿಪದಗಳ ಪಟ್ಟಿ, - ಹೀಗೆ ಇವೆಲ್ಲ ಪದಕೋಶದ ಮೌಲಿಕತೆಯನ್ನು ಹೆಚ್ಚಿಸುವ ವೈಜ್ಞಾನಿಕ ಅಂಶಗಳು. ವಚನಗಳ ಸಾಮಾಜಿಕ ವಿಚಾರಗಳಿಗಿಂತ ಧರ್ಮ, ತತ್ವ, ಸಿದ್ಧಾಂತಗಳ ಅಧ್ಯಯನ ಮಹತ್ವದ್ದೆಂದು ಡಾ. ಸವದತ್ತಿಮಠರ ಧೋರಣೆಯಾದರೂ ಅವುಗಳ ಸಾಮಾಜಿಕತೆಯನ್ನು ಕಡೆಗಣಿಸಿಲ್ಲ.

'ವರ್ಣನಾತ್ಮಕ ವಚನ ಪದಕೋಶ'ದಂಥ ಕೃತಿ ವಿಷಯ ಸಂಪುಟ'ಗಳಿಗೆ ಪ್ರೇರಣೆ ಒದಗಿಸಿರಬಹುದು. ಯಾಕೆಂದರೆ ಅವರೇ ಹೇಳಿದಂತೆ ವಚನಗಳ ಅಧ್ಯಯನ ಸಂಶೋಧನೆ ಒಂದು ನಿರಂತರ ನಡೆಯುವ ಜ್ಞಾನದಾಸೋಹದ ಕಾರ್ಯ. 'ವಚನಗಳು ಶಿವಶರಣರ ಅನುಭಾವದ ಬಿಡಿಮುತ್ತುಗಳು' ಎಂದಿರುವ ಅವರು ಮುಂದುವರಿದು

'ಹೇಗೆ ಮುತ್ತಿನ ಮಾಲೆಗೆ ಒಂದು ಆಕಾರವೋ ಹಾಗೆ ವಚನಗಳ ಭಾವ, ಅಂತರಾತ್ಮ ಅರಿಯಬೇಕಾಗಿದ್ದರೆ ಅವುಗಳನ್ನು ವಿಷಯಾನುಗುಣವಾಗಿ ಹೊಂದಿಸಿಕೊಂಡು ಅಧ್ಯಯನ ಮಾಡಬೇಕು. ವಚನಗಳು ಸಮಷ್ಟಿ ಪ್ರಜ್ಞಾಪಾತಗಳಿಗೆ ಮಾತ್ರ ಅರ್ಥವಾಗುವಂಥವು' ಎಂದಿರುವುದು ಸಮಂಜಸವಾಗಿದೆ. ಎಂತಲೇ ವಚನಗಳ ಸಮಗ್ರ ಅಧ್ಯಯನಕ್ಕೆ 'ವಿಷಯ ವಚನ ಸಂಪುಟ' ಮಾಲೆ ತುಂಬ ಉಪಯುಕ್ತವಾಗಿದೆ. ಇದು ಈ ಸಂಪುಟಗಳ ಆಶಯ ಕೂಡ. ಇಲ್ಲಿನ ವಿಷಯಗಳನ್ನು ಹೀಗೆ ಶೋಧಿಸುತ್ತ ಹೊರಟಾಗ ಸುಮಾರು ಆರುನೂರಕ್ಕೂ ಹೆಚ್ಚು ಸಂಖ್ಯೆಯ ವಿಷಯ ಶೀರ್ಷಿಕೆಗಳು ಅವರಿಗೆ ದೊರೆತವು. ಅವುಗಳಲ್ಲಿ ಕೆಲವನ್ನು ತಮ್ಮ ಪ್ರಸ್ತಾವನೆಯಲ್ಲಿ (ಬೆಳಕಿಂಡಿ) ಹೆಸರಿಸಿದ್ದಾರೆ. ವಚನಗಳ ರಾಶಿಯಲ್ಲಿ ಈ ವಿಷಯಗಳನ್ನು ಹುಡುಕುವ ಕಾರ್ಯವನ್ನು ಅವರು ಯಶಸ್ವಿಯಾಗಿ ನಿರ್ವಹಿಸಿದ್ದಾರೆಂದೇ ಹೇಳಬಹುದು.

ವಚನಗಳ ಅಕಾರಾದಿಯನ್ನು ಕೊಡುವಲ್ಲಿ, ಕಠಿಣ ಶಬ್ದಕೋಶವನ್ನು ನೀಡುವಲ್ಲಿ ಇಂಥ ಸಂಪುಟಗಳನ್ನು ಸಂಪಾದಿಸುವಲ್ಲಿ ಗ್ರಂಥ ಸಂಪಾದನೆಯ ಎಲ್ಲ ಶಿಸ್ತನ್ನು, ನಿಯಮಗಳನ್ನು ತಪ್ಪದೆ ಪಾಲಿಸಿರುವುದು ಕಂಡುಬರುತ್ತದೆ. ವಚನಗಳ ಭಾಷೆಯನ್ನು ನಡುಗನ್ನಡ ಮತ್ತು ಹೊಸಗನ್ನಡ, ಹೆಚ್ಚು ಮಾರ್ಗ ಮತ್ತು ಕಡಿಮೆ ದೇಶಿ ಇವುಗಳ ಗಂಭೀರ ಮಿಶ್ರಣವೆಂದು ಸರಿಯಾಗಿ ಗುರುತಿಸಲಾಗಿದೆ. ಅದೇ ರೀತಿ ವಚನಗಳ ಶಿಲ್ಪ, ಛಂದಸ್ಸನ್ನು, ಶಬ್ದರಚನಾ ಲಕ್ಷಣಗಳನ್ನು ಗುರುತಿಸುವಲ್ಲಿಯೂ ಕಾಣಬಹುದು.

'ವಿಷಯ ವಚನ ಸಂಪುಟ' ಮಾಲೆಯ ೧೫ನೆಯ ಸಂಪುಟವನ್ನು 'ವಚನ ವಿಷಯ ವಿವರಣ ಸಂಪುಟ'ವೆಂದು ಕರೆಯಲಾಗಿದ್ದು ಇದು ಹಿಂದಿನ ಸಂಪುಟಗಳಲ್ಲಿನ ವಿಷಯ ವಿವರಣಗಳ ಸಂಕಲನ ಸಂಪುಟವಾಗಿದೆ. ಆದ್ದರಿಂದಲೇ ಸಂಪಾದಕರು 'ವಚನಸಾಹಿತ್ಯವನ್ನು ಅಧ್ಯಯನ ಮಾಡಬೇಕೆನ್ನುವವರಿಗೆ ರೆಡಿಮೇಡ ಸಾಮಗ್ರಿ ಇಲ್ಲಿ ದೊರೆಯುತ್ತದೆ' ಎಂದಿರುವುದು, "ಈವರೆಗೆ ಯಾರೂ ಮಾಡದ ಇಂಥ ಕಠಿಣ ಕಾರ್ಯವನ್ನು ಡಾ. ಸಂಗಮೇಶ ಸವದತ್ತಿಮಠ ಅವರು ಏಕಾಂಗಿಯಾಗಿ ಮಾಡುವುದರ ಮೂಲಕ ನಮ್ಮ ನಾಡಿಗೆ, ಶರಣರಿಗೆ ಬಹು ಅಮೂಲ್ಯವಾದ ಕಾಣಿಕೆಯನ್ನು ಸಲ್ಲಿಸಿದ್ದಾರೆಂದು ಹೇಳಬಹುದು" ಎಂದು ಇವುಗಳ ಪ್ರಕಟನೆಗೆ ಮೂಲ ಕಾರಣಕರ್ತರಾದ ಹಾರಕೂಡ ಹಿರೇಮಠದ ಪೂಜ್ಯ ಡಾ. ಚೆನ್ನವೀರ ಶಿವಾಚಾರ್ಯ ಸ್ವಾಮಿಗಳು ಅಭಿಪ್ರಾಯಪಟ್ಟಿರುವುದು ಸಹಜವಾಗಿದೆ. ಹಾಗೆಯೇ ಇಂಥ ಅಪೂರ್ವ ಕೊಡುಗೆಗೆ ಪ್ರೇರಕರಾದ ಪೂಜ್ಯಶ್ರೀಗಳಿಗೆ ಕನ್ನಡಿಗರು ಕೃತಜ್ಞರಾಗಿದ್ದಾರೆ.

ಡಾ. ಸವದತ್ತಿಮಠರ ಸಮಾಜೋಧಾರ್ಮಿಕ, ವೈಚಾರಿಕ ಲೇಖನ ಸಂಕಲನ 'ವಿಲೋಕನ' ನಾಲ್ಕು ವರ್ಷಗಳ ಹಿಂದೆಯೇ ಪ್ರಕಟವಾಗಿದ್ದು, ಇದು ನಾಲ್ಕು

ವಿಭಾಗಗಳನ್ನೊಳಗೊಂಡಿದೆ. 'ವೀರಶೈವ ವಿಲೋಕನ' ವಿಭಾಗದ ಹಲವಾರು ಲೇಖನಗಳು ಈ ಬಗ್ಗೆ ಇನ್ನೂ ಚರ್ಚಿಸಬೇಕಾದ ಅಂಶಗಳನ್ನು ಒಳಗೊಂಡಿವೆ. ಅವುಗಳ ಬಗ್ಗೆ ಸಂವಾದ ಮುಂದುವರಿಯಬಹುದಾಗಿದೆ.

೭೫ ವರ್ಷ ತುಂಬಿದ ಈ ಇಳಿವಯಸ್ಸಿನಲ್ಲೂ ಇಷ್ಟೊಂದು ಕ್ರಿಯಾಶೀಲರಾಗಿ ಹೊಸ ಹೊಸ ಯೋಜನೆಗಳನ್ನು ಸಂಶೋಧಿಸುವುದರಲ್ಲಿ ತೊಡಗಿರುವ ಡಾ. ಸಂಗಮೇಶ ಸವದತ್ತಿಮಠರು ಆರೋಗ್ಯವಂತರಾಗಿ ನಮ್ಮ ಮಧ್ಯ ನೂರ್ಕಾಲ ಬಾಳಲಿ ಎಂದು ಹೃತ್ಪೂರ್ವಕ ಹಾರೈಸುತ್ತೇನೆ. ಈಶಾವಾಸ್ಯೋಪನಿಷತ್ತು ನುಡಿದಂತೆ 'ಕರ್ವನ್ನೇವೇಹ ಕರ್ಮಾಣಿ ಜಿ ಜೀವಿಷೇತ್ ಶತಂ ಸಮಾಃ'

'ಸಂಪನ್ನ' : ಅಭಿನಂದನ ಗ್ರಂಥ : ೨೦೧೯

'ಕನ್ನಡದ ಸ್ವಾಮಿ' ಮತ್ತು 'ಕನ್ನಡದ ಮಠ'

ನಾನು ಹಿಂದೊಮ್ಮೆ ಚಿಕ್ಕೋಡಿ ಮಠದಲ್ಲೋ ಅಥವಾ ಚಿಂಚಣಿ ಮಠದಲ್ಲೋ ಮಾತನಾಡುವಾಗ, "ಧೋತರ ಅಥವಾ ಸೀರೆಗೆ ದಡಿ ಗಟ್ಟಿಮುಟ್ಟಾಗಿದ್ದರೆ ಒಳಗೂ ಅದು ಗಟ್ಟಿಮುಟ್ಟಾಗಿರುತ್ತದೆ. ಹಾಗೆ ನಾಡಿನ ಗಡಿ ಗಟ್ಟಿಯಾಗಿದ್ದರೆ ಒಳಗಿನ ಪ್ರದೇಶಗಳೂ ಗಟ್ಟಿಯಾಗಿರುತ್ತವೆ" ಎಂದು ಹೇಳಿದ್ದೆ. ಈ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆಯ, ಚಿಕ್ಕೋಡಿ ತಾಲೂಕಿನ ಚಿಂಚಣಿಗ್ರಾಮದ ಸಿದ್ಧಸಂಸ್ಥಾನ ಮಠದ 'ಗಡಿ ಕನ್ನಡಿಗರ ಬಳಗ' ಹಾಗೂ 'ಕನ್ನಡ ಜಾಗೃತಿ ಪುಸ್ತಕ ಮಾಲೆ' ತನ್ನ ಕಾರ್ಯವನ್ನು ಅತ್ಯಂತ ಶ್ರದ್ಧೆಯಿಂದ ಮಾಡಿಕೊಂಡು ಬರುತ್ತಿದೆ. ಅದರ ದಶಮಾನೋತ್ಸವ ಆಚರಿಸುವ ಸಂದರ್ಭದಲ್ಲಿ (೨೦೦೮) ಪ್ರಕಟಿಸಿದ 'ಸಿರಿಗನ್ನಡದ ತೇರು' ಎಂಬ ಗ್ರಂಥಕ್ಕೆ, 'ಭುವನೇಶ್ವರಿ ದೇವಿ ರಥವನೇರಿದಳು' ಎನ್ನುವ ಲೇಖನ ಬರೆದಿದ್ದೆ. ಅದರಲ್ಲಿ ಈ ಮುಂದಿನ ಮಾತುಗಳಿವೆ:

"...... ಯಾವ ಬೀದಿ ಕೂಗಿನ ಘೋಷಣೆಯೂ ಇಲ್ಲದೆ, ರಚನಾತ್ಮಕವಾದ ರೀತಿಯಲ್ಲಿ ಕನ್ನಡಪರ ಕಾರ್ಯಕ್ರಮಗಳನ್ನು ರೂಪಿಸಿ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಜನಜಾಗೃತಿಯನ್ನುಂಟುಮಾಡಿ, ಜನಮನದ ಪರಿವರ್ತನೆಗೆ ಕಾರಣರಾದ ಸತ್ವಶಾಲಿ ವ್ಯಕ್ತಿಯೊಬ್ಬರು ಆ ಭಾಗದಲ್ಲಿ, ಕನ್ನಡದ ದೀಕ್ಷೆ ತೊಟ್ಟಿರುವುದು, ಉತ್ತರ ಗಡಿನಾಡ ಕನ್ನಡಿಗರ ಭಾಗ್ಯವೆಂದೇ ಹೇಳಬಹುದು. ಮಠದ ಪೀಠಾಧಿಪತಿಗಳಾದ ಶ್ರೀ ಅಲ್ಲಮಪ್ರಭು ಸ್ವಾಮೀಜಿಯವರು ಜನರ ದೃಷ್ಟಿಯಲ್ಲಿ 'ಕನ್ನಡದ ಸ್ವಾಮಿ'ಯಾಗಿ, ಮಠ 'ಕನ್ನಡದ ಮಠ'ವಾಗಿ ಜನರ ಪ್ರೀತಿ, ವಿಶ್ವಾಸ, ಅಭಿಮಾನಗಳಿಗೆ ಪಾತ್ರವಾಗಿರುವುದು ಒಂದು ದಶಕದ ಮಹತ್ ಸಾಧನೆಗೆ ಸಾಕ್ಷಿಯಾಗಿದೆ. "ಈಗ, ಶ್ರೀ ಅಲ್ಲಮಪ್ರಭು ಸ್ವಾಮೀಜಿಯವರ ಷಷ್ಟ್ಯಬ್ದಿ ಸಮಾರಂಭ ನೆರವೇರುತ್ತಿರುವುದು, ಇಡೀ ಕನ್ನಡನಾಡು ಸಂತೋಷಪಡತಕ್ಕ ಸಂಗತಿಯಾಗಿದೆ."

ಗಡಿಯಾಚೆಯ ಮರಾಠಿಗರಲ್ಲಿಯೂ ತಿಳಿವಳಿಕೆಯನ್ನು ಮೂಡಿಸಿ, ಗಡಿಯೀಚೆಯ ಹಳ್ಳಿಹಳ್ಳಿಗಳಲ್ಲಿಯೂ ಪ್ರವಾಸ ಮಾಡಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಕಂಪನ್ನು ಹರಡುತ್ತ, ಕನ್ನಡ ನೆಲ-ಜಲ-ಭಾಷೆಯ ಸಮಸ್ಯೆಗಳ ಬಗ್ಗೆ, ನಾಡಿನ ಬೇರೆ ಬೇರೆ ಭಾಗದ ಸಾಹಿತಿಗಳನ್ನೂ ತಜ್ಞರನ್ನೂ ಆಮಂತ್ರಿಸಿ, ಅವರಿಂದ ಉಪನ್ಯಾಸ ಕೊಡಿಸಿ, ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ಒಂದು ಮಾದರಿಯಾಗಿ

ನಿಂತಿದೆ.

ಶ್ರೀಮಠದ ಆಶ್ರಯದಲ್ಲಿರುವ ಜನಕಲ್ಯಾಣ ಸಂಸ್ಥೆ 'ಕನ್ನಡ ಜಾಗೃತಿ ಗ್ರಂಥಮಾಲೆ'ಯನ್ನು ಪ್ರಾರಂಭಿಸಿ, ಇದುವರೆಗೆ ೪೨ ಗ್ರಂಥಗಳನ್ನು ಪ್ರಕಟಿಸಿ, ಕನ್ನಡಪರ ಚಿಂತನೆಗೆ, ಸಂಸ್ಕೃತಿ ವಿವೇಚನೆಗೆ, ನಾಡಿನ ಅಭಿವೃದ್ಧಿಯ ಯೋಜನೆಗೆ ವೈಚಾರಿಕವಾಗಿ ಎಡೆಗೊಟ್ಟಿರುವುದು ಈ ಮಾಲೆಯ ವೈಶಿಷ್ಟ್ಯವಾಗಿದೆ. ಇವುಗಳಲ್ಲಿ ರಾ.ಚಿಂ. ಢೇರೆಯವರು ಮೂಲ ಮರಾಠಿಯಲ್ಲಿ ರಚಿಸಿದ 'ನಾಥ ಸಂಪ್ರದಾಯ' 'ದತ್ತ ಸಂಪ್ರದಾಯದ ಇತಿಹಾಸ', 'ಕರವೀರ ನಿವಾಸಿನಿ ಶ್ರೀ ಮಹಾಲಕ್ಷ್ಮಿ', ಡಾ. ಸುಹಾಸಿನಿ ಇರ್ಲೆಕರ ಅವರ 'ಸಂತಕವಿ-ಕವಯಿತ್ರಿಯರು : ಒಂದು ಆಂತರಿಕ ಸಂಬಂಧ'- ಇಂಥ ಅಮೂಲ್ಯ ಕೃತಿಗಳಿವೆ. ಕನ್ನಡದಲ್ಲಿ ಡಾ. ಎಂ.ಎಂ. ಕಲಬುರ್ಗಿ ಅವರು ಬರೆದ 'ಸೀಮಾತೀತ' ಗ್ರಂಥದ ಮರಾಠಿ ಅನುವಾದವೂ ಇದೆ. ಶ್ರೀಶೈಲ ಮಠಪತಿಯವರು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಎಂ.ಫಿಲ್. ಪ್ರಬಂಧ 'ಕನ್ನಡ ಜಾಗೃತಿ ಕೇಂದ್ರ ಚಿಂಚಣಿ ಮಠ' ಎಂಬ ವಿವೇಚನೆಯನ್ನು ಒಳಗೊಂಡಿರುವುದು ಈ ಮಠದ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಇತ್ತೀಚೆ ೨೦೨೦ರಲ್ಲಿ ಪ್ರಕಟವಾದ 'ಸುಪ್ರೀಮ್ ಅಂಗಳದಿಂದ ಗಡಿ ಸಮಸ್ಯೆಯ ಪಕ್ಷಿ ನೋಟ' ಎಂಬ ರಾಘವೇಂದ್ರ ಜೋಶಿಯವರ ಗ್ರಂಥದಲ್ಲಿ ಅಂಕಿ ಅಂಶಗಳು, ಸನ್ನಿವೇಶಗಳು ಸತ್ಯವಾಗಿದ್ದು, ಈ ಪುಸ್ತಕವನ್ನು ಪಠ್ಯಪುಸ್ತಕವನ್ನಾಗಿ ಪರಿಗಣಿಸ ಬಹುದೆಂದು ಇದಕ್ಕೆ ಮುನ್ನುಡಿ ಬರೆದ ಶ್ರೀ ಕೆ.ಎನ್. ಬೆಂಗೇರಿಯವರು ಹೇಳಿದ್ದಾರೆ. ಶ್ರೀ ರಾಘವೇಂದ್ರ ಜೋಶಿಯವರು ಕರ್ನಾಟಕ-ಮಹಾರಾಷ್ಟ್ರ ಗಡಿವಿವಾದ ವಿಷಯದಲ್ಲಿ ಆದ್ಯಂತವಾಗಿ ಅಭ್ಯಾಸ ಮಾಡಿದವರು. ಕನ್ನಡ ಜಾಗೃತಿ ಪುಸ್ತಕ ಮಾಲೆಯಲ್ಲಿ ಈ ಪುಸ್ತಕ ಹೊರಬರುತ್ತಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ, "ಗಡಿಯಲ್ಲಿನ ಕನ್ನಡದ ಯೋಗಕ್ಷೇಮ ಮತ್ತು ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡುವದೇ ಶ್ರೀಮಠದ ಹಾಗೂ ಗಡಿ ಕನ್ನಡಿಗರ ಬಳಗದ ಕಾಯಕವಾಗಿದೆ" ಎಂದು ಪ್ರಕಾಶಕರು ಪ್ರಾರಂಭದಿಂದಲೂ ಹೇಳುತ್ತಲೇ ಬಂದಿದ್ದಾರೆ.

ಗದುಗಿನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಪೂಜ್ಯ ಶ್ರೀ ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಆತ್ಮೀಯ ಶಿಷ್ಯ ಬಳಗದಲ್ಲಿ ಒಬ್ಬರೂ, ಹಾಗೂ ಹಿರೇಮಲ್ಲೂರು ಈಶ್ವರನ್ ಪದವಿಪೂರ್ವ ಕಾಲೇಜು, ಕಲ್ಯಾಣನಗರ, ಧಾರವಾಡ ಇದರ ಪ್ರಾಚಾರ್ಯರೂ ಆದ ಪ್ರೊ. ಶಶಿಧರ ತೋಡಕರ ಅವರು, ಶ್ರೀ ರಾಘವೇಂದ್ರ ಜೋಶಿಯವರು ಈ ಗ್ರಂಥಕ್ಕೆ ಗ್ರಂಥದಾಸೋಹಿಗಳಾಗಿರುವುದು ಸಂತೋಷದ ಸಂಗತಿ. ಅಲ್ಲದೆ, ತೋಂಟದಾರ್ಯ ಶ್ರೀಗಳ ನೆನಪಿನಲ್ಲಿ ಪ್ರತಿವರ್ಷ

ಒಂದು ಮಹತ್ವದ ಕೃತಿಯನ್ನು ಪ್ರಕಟಿಸಲು ದಾಸೋಹ ಸೇವೆ ಸಲ್ಲಿಸುತ್ತಿರುವುದಂತೂ ಚಿಂಚಣಿ ಮಠದ ಮೇಲಿನ ಅವರ ಭಕ್ತಿ-ಶ್ರದ್ಧೆ-ಗೌರವಕ್ಕೆ ಸಾಕ್ಷಿಯಾಗಿದೆ.

ಕನ್ನಡ ಜಾಗೃತಿ ಗ್ರಂಥ ಮಾಲೆಯ ದಶಮಾನೋತ್ಸವ ಸಂದರ್ಭದಲ್ಲಿ ಪ್ರಕಟವಾದ 'ಸಿರಿಗನ್ನಡದ ತೇರು' ಗ್ರಂಥದಲ್ಲಿಯ ನನ್ನ ಲೇಖನದ ಕೊನೆಯಲ್ಲಿ ಹೇಳಿದ ಮಾತನ್ನು ಇಲ್ಲಿ ಪುನಃ ಹೇಳಬಹುದು ಎಂದುಕೊಂಡಿದ್ದೇನೆ:

".....'ಕನ್ನಡದ ಭುವನೇಶ್ವರಿ' ಎಂದರೆ, ಯಾವುದೇ ಸಂಕುಚಿತ ಭಾವನೆಗೆ ಎಡೆಗೊಡದೆ, ಕನ್ನಡ ನಾಡಿನಲ್ಲಿ ಬಾಳಿ ಬದುಕುತ್ತಿರುವ ಎಲ್ಲರ ಹೃದಯೇಶ್ವರಿ, ಜಾತಿ, ಮತ, ಪಂಥವನ್ನು ಮೀರಿದ ನಾಡಿನ ಸರ್ವಶಕ್ತಿಯ ಸಂಕೇತ ಎಂದು ಭಾವಿಸಬೇಕು. 'ಭುವನೇಶ್ವರಿ' ಎಂದೊಡನೆ 'ಶ್ರೀ'ಯವರ ಕವಿತೆಯ ಸಾಲುಗಳು ನೆನಪಾಗುತ್ತವೆ:

ಭುವನೇಶ್ವರಿದೇವಿ ರಥವನೇರಿದಳು
ಕೂಗಿದರು ಎಲ್ಲರೂ ಒಕ್ಕೊರಲ್-
ತಾಯ್ ಬಿಜಯ ಮಾಡುವಳು ದಾರಿ ಬಿಡಿ, ದಾರಿ ಬಿಡಿ
ಅಡ್ಡ ಬಾರದಿರಿ
ಭಾರತಾಂಬೆಯ ಹಿರಿಯ ಹೆಣ್ಮಗಳೆ, ದಾರಿ ತೋರುವ ಹಿರಿಯ ಸೊಡರೆ
ಬಾಳಮ್ಮ ಬಾಳು!

ಕರ್ನಾಟಕಮಾತೆ ಕುವೆಂಪು ಅವರಿಗೆ 'ಭಾರತ ಜನನಿಯ ತನುಜಾತೆ'ಯಾಗಿದ್ದರೆ, ಅವರ ಗುರುಗಳಾದ ಬಿ.ಎಂ. ಶ್ರೀಯವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, 'ಭಾರತಾಂಬೆಯ ಹಿರಿಯ ಹೆಣ್ಮಗಳೆ' ಎಂದು ಉದ್ಗರಿಸುತ್ತಾರೆ.

ಶ್ರೀ ಅಲ್ಲಮಪ್ರಭು ಸ್ವಾಮೀಜಿಯವರ ಷಷ್ಠ್ಯಬ್ದಿ - ೨೦೨೧

'ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾಗಿ' ಗ್ರಂಥಕ್ಕೆ ಶುಭ ಹಾರೈಕೆ

೨೫-೧೧-೨೦೧೭! ಕರ್ನಾಟಕ ಕಾಲೇಜಿನ ಇತಿಹಾಸದಲ್ಲಿಯೇ ಅದೊಂದು ಅವ್ಮೃತಪ್ರಾಯವಾದ ಗಳಿಗೆ. ಉತ್ತರಾಭಿಮುಖವಾದ ಸುಂದರವಾದ ವಿಶಾಲ ವೇದಿಕೆಯಲ್ಲಿ ಕಾಲೇಜಿನ ಶತಮಾನೋತ್ಸವ ಸಮಾರಂಭದ ಉದ್ಘಾಟನೆ, ಕಾಲೇಜಿನ ಹಿಂದಿನ ವಿದ್ಯಾರ್ಥಿಗಳಾದ ಸರ್ವಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಶಾಂತನಗೌಡರು ತಾವು ಕಲಿತ ಕಾಲೇಜಿನ ಶತಮಾನೋತ್ಸವ ಸಮಾರಂಭ ಉದ್ಘಾಟನೆಯನ್ನು ಸಂಭ್ರಮದಿಂದ ಮಾಡಿದರು. ರಾಜ್ಯದ ಶಿಕ್ಷಣಮಂತ್ರಿಗಳಾದ ಶ್ರೀ ಬಸವರಾಜ ರಾಯರೆಡ್ಡಿ, ಶಾಸಕರಾದ ಶ್ರೀ ಅರವಿಂದ ಬೆಲ್ಲದ, ಶ್ರೀ ಸಂಕನೂರ, ವೇದಿಕೆಯ ಮೇಲೆ ಆಸೀನರಾದ ಅವಳಿನಗರದ ಪ್ರಮುಖ ಸಾಹಿತಿಗಳು, ವಿಜ್ಞಾನಿಗಳು, ಪತ್ರಕರ್ತರು, ಕುಲಪತಿಗಳು - ಎಲ್ಲರೂ ಕಾಲೇಜಿನ ಹಿಂದಿನ ವಿದ್ಯಾರ್ಥಿಗಳೇ. ಬಾಹ್ಯಾಕಾಶ ವಿಜ್ಞಾನಿ ಶ್ರೀ ಕಿರಣಕುಮಾರ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸಮಾರಂಭಕ್ಕೆ ವಿಶೇಷ ಮೆರುಗು ತಂದಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಪ್ರಮೋದ ಗಾಯಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಅತ್ಯಂತ ಔಚಿತ್ಯಪೂರ್ಣವೇ ಸರಿ.

ಎಲ್ಲರ ಮನಸ್ಸಿನಲ್ಲಿಯೂ ಹಿಂದಿನ ಕಾಲೇಜು ದಿನಗಳ ಸವಿ ನೆನಪುಗಳೇ ತುಂಬಿಕೊಂಡಿದ್ದವು. ಅಂದು ಮಾತನಾಡಿದವರೆಲ್ಲರೂ ಪ್ರಾರಂಭದಲ್ಲಿ, ಕಾಲೇಜಿನಲ್ಲಿದ್ದ ತಮ್ಮ ಮಧುರ ನೆನಪುಗಳನ್ನೇ ಮೆಲುಕು ಹಾಕಿದರು. ಅಂದು ಸಾಯಂಕಾಲ ದೇದೀಪ್ಯಮಾನವಾದ ವಿದ್ಯುತ್ ದೀಪಾಲಂಕಾರದಲ್ಲಿ ಪ್ರಸಿದ್ಧ ಸಂಗೀತಜ್ಞರಾದ ಸಂಗೀತಾ ಕಟ್ಟಿ, ಜಾನಪದ ಹಾಡುಗಾರರಾದ ಬಸಲಿಂಗಯ್ಯ ಹಿರೇಮಠ ಹಾಗೂ ಪದ್ಮಶ್ರೀ ವೆಂಕಟೇಶಕುಮಾರ ಅವರ ಸಂಗೀತದ ಅಲೆ ಇಡೀ ಧಾರವಾಡವನ್ನೇ ಗುಂಗು ಹಿಡಿಸಿತು.

ಉದ್ಘಾಟನೆಯ ಸಮಾರಂಭದಲ್ಲಿ ಮೊದಲನೆಯದಾಗಿ, ೧೯೧೭ರಲ್ಲಿ ಅಂದಿನ ಮುಂಬಯಿ ಪ್ರಾಂತದ ಗವ್ಹರ್ನರ್ ಆಗಿದ್ದ ಜಾರ್ಜ ಲಾಯ್ಡ್, ಕರ್ನಾಟಕ ಕಾಲೇಜಿನ ಕಟ್ಟಡಕ್ಕೆಂದು ಶಂಕುಸ್ಥಾಪನೆ ಮಾಡಿದ್ದ ಅಡಿಗಲ್ಲನ್ನು ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಕೇಂದ್ರದಿಂದ ಕಾಲೇಜಿನ ಆವರಣದಲ್ಲಿ ತಂದು ಪುನರ್ ಪ್ರತಿಷ್ಠಾನ ಮಾಡಿದ್ದರ ಉದ್ಘಾಟನೆ, ಕಾಲೇಜಿನ ಮಿಸೆಲೆನಿ 'ನಿನಾದ'ದಲ್ಲಿ ಪ್ರಕಟವಾಗಿದ್ದ ಕಾಲೇಜು

ಕುರಿತಾದ ಕವಿತೆಗಳ ಸಂಕಲನ 'ಕೆಸಿಡಿಕಾವ್ಯ'ದ ಬಿಡುಗಡೆ, ಶತಮಾನೋತ್ಸವದ ಸ್ಮರಣೆಯಲ್ಲಿ ನಿರ್ಮಿಸಬೇಕೆಂದಿರುವ ಸೌಧದ ಶಿಲಾನ್ಯಾಸ, ಕೆಸಿಡಿಯ ನೂರರ ನೆನಪಿಗೆ ಕಾಲೇಜಿನ ಅಂಗಳದ ಈಶಾನ್ಯ ಭಾಗದಲ್ಲಿ ಅಶ್ವತ್ಥ ವೃಕ್ಷವನ್ನು ನೆಡುವುದು, ನೂರು ವರುಷದ ಸಾಧನೆಯ ಕುರುಹಾಗಿ ನೂರ ಬಲೂನುಗಳನ್ನು ನೀಲ ಗಗನದಲ್ಲಿ ಹಾರಿಬಿಡುವುದು - ಇವೇ ಮೊದಲಾದ ಕಾರ್ಯಕ್ರಮಗಳು ಇದನ್ನೆಲ್ಲ ವೇದಿಕೆಯ ಮೇಲೆ ಉಪಸ್ಥಿತನಿದ್ದು ನಾನು ಕಂಡು ಧನ್ಯತೆ ಪಡೆದೆ.

"ಸಮಾರಂಭದ ಎಲ್ಲ ಕಲಾಪಗಳಲ್ಲಿ ನನಗೆ ಯಾವುದು ಇಷ್ಟವಾಯಿತು?" ಎಂದು ತಮ್ಮನ್ನೇ ಕೇಳಿಕೊಂಡ ಪ್ರಾಚಾರ್ಯೆ ಡಾ. ರಾಜೇಶ್ವರಿಯವರು ಅದಕ್ಕೆ ಉತ್ತರವನ್ನೂ ಅವರೇ ಕೊಟ್ಟಿದ್ದಾರೆ. "ಯಜಮಾನರು (ಡಾ. ಮಹೇಶ್ವರಯ್ಯ ಕುಲಪತಿಗಳು, ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ) ಸಮಾರಂಭಕ್ಕೆ ಬಂದುದರಿಂದ ಹಿಡಿದು ಅನೇಕ ದೃಶ್ಯಾವಳಿಗಳು ಮನದ ಮುಂದೆ ಬರತೊಡಗಿದವು. ಕೊನೆಗೆ ಸ್ಥಿರವಾಗಿ ನಿಂತ ಚಿತ್ರವೆಂದರೆ - ೧೦೦ ಅಂಕಿ ಹೊತ್ತು ನೂರು ಬಲೂನುಗಳನ್ನು ಗಗನದಲ್ಲಿ ಹಾರಿಸಿದ ದೃಶ್ಯ" ಎಂದು ಕವಯಿತ್ರಿಯಾಗಿ ಡಾ. ರಾಜೇಶ್ವರಿಯವರು ಉಲ್ಲೇಖಿಸಿದ್ದು ಗಮನಾರ್ಹ. ಇದೂ ಅಲ್ಲದೆ, ಇಡೀ ವರ್ಷ ಶತಮಾನೋತ್ಸವದ ವಿವಿಧ ಕಾರ್ಯಕ್ರಮಗಳನ್ನು ಕಾಲೇಜಿನ ಸುತ್ತು ಮುತ್ತು ಅನೇಕ ಕಡೆಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳೊಂದಿಗೆ ಸಾರ್ವಜನಿಕರೂ ನೋಡಿ ಆನಂದಪಟ್ಟರು. ಇವೆಲ್ಲ ಕಾರ್ಯಕ್ರಮಗಳ ಹಿಂದೆ ಪ್ರಾಚಾರ್ಯೆ ಡಾ. ರಾಜೇಶ್ವರಿ ಮಹೇಶ್ವರಯ್ಯ ಅವರನ್ನು ಒಳಗೊಂಡು ಕಾಲೇಜಿನ (ಕಲಾ-ವಿಜ್ಞಾನ ಎರಡೂ) ವಿವಿಧ ಅಧ್ಯಾಪಕ-ಅಧ್ಯಾಪಕಿಯರ ಒಂದು ಟೀಮು ಅತ್ಯಂತ ಕ್ರಿಯಾಶೀಲವಾಗಿ ನಿರಂತರ ಪ್ರಯತ್ನಿಸಿದ್ದನ್ನು ಈ ಗ್ರಂಥದ ಬರವಣಿಗೆಯ ಮೂಲಕ ಅರಿಯಬಹುದು. ಅಲ್ಲದೆ, ಕ.ವಿ.ವಿ. ಕುಲಪತಿಗಳಾದ ಡಾ. ಪ್ರಮೋದ ಗಾಯಿಯವರ ಸತತವಾದ ಪ್ರೋತ್ಸಾಹವಂತೂ ಹಿನ್ನೆಲೆಯಲ್ಲಿ ಇದ್ದೇ ಇತ್ತು.

ಈ ಗ್ರಂಥದ ಆಂತರ್ಯದಲ್ಲಿ 'ನಾನು ಕೆಸಿಡಿಯೊಳಗೋ.... ಕೆಸಿಡಿ ನನ್ನೊಳಗೋ' ಮುಂತಾದ ೪೫ ಅಧ್ಯಾಯಗಳಲ್ಲಿ ಶತಮಾನೋತ್ಸವದ ವರ್ಷದುದ್ದಕ್ಕೂ ನೆರವೇರಿದ ವಿವಿಧ ಕಾರ್ಯಕ್ರಮಗಳ ಬೇರೆಬೇರೆ ಆಯಾಮಗಳ ಚಿತ್ರಣವಿದೆ. ಅನುಭವದ ರಸವತ್ತಾದ ನಿರೂಪಣೆಯಿದೆ. ಪರಸ್ಪರ ಸಹಕಾರದಿಂದ ಏನನ್ನಾದರೂ ಸಾಧಿಸಬಹುದು ಎಂಬ ಛಲವಿದೆ.

ಅನುಬಂಧದಲ್ಲಿ 'ಸಾಹಿತ್ಯ ಕ್ಷೇತ್ರಕ್ಕೆ ಕರ್ನಾಟಕ ಕಾಲೇಜಿನ ಕೊಡುಗೆ' ಎಂಬ ಲೇಖನವೂ ಇದೆ. ಶತಮಾನೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಪ್ರಾಚಾರ್ಯೆ

ಡಾ. ರಾಜೇಶ್ವರಿಯವರ ಚೇತೋಹಾರಿಯಾದ ಪ್ರಾಸ್ತಾವಿಕ ಭಾಷಣವೂ ಇದೆ. ಅವರದೇ ಆದ '೭೦ನೆಯ ಸ್ವಾತಂತ್ರ್ಯೋತ್ಸವದ ಸಂದೇಶ' '೬೩ನೆಯ ರಾಜ್ಯೋತ್ಸವದ ಸಂದೇಶ'- ಎರಡನ್ನೂ ಅನುಬಂಧ ಒಳಗೊಂಡಿದೆ. 'ಬಾಕಿ ಉಳಿದ ಕೆಲಸಗಳು' ಅಧ್ಯಾಯದಲ್ಲಿ ಲೇಖಕಿಯು ಬದುಕಿನ ಅತ್ಯುತ್ತಮ ಕ್ರಮದ ಬಗ್ಗೆ ಹೀಗೆ ಹೇಳಿದ್ದಾರೆ: "ಒಳ್ಳೆಯ ನಾಳೆಗಾಗಿ ಕನಸುಗಳನ್ನು ಕಟ್ಟಿಕೊಳ್ಳುತ್ತಾ ಆಯೋಜಿಸುತ್ತಾ ಬದುಕಿನ ಕೊನೆಯ ಕ್ಷಣದವರೆಗೂ ಸಾಗಬೇಕಾದ ಕ್ರಮವೇ ಅತ್ಯುತ್ತಮ ಕ್ರಮ. ನಾಳೆಯನ್ನು ಕಾಣುತ್ತೇವೆಯೊ ಇಲ್ಲವೋ ಎಂಬ ಅನಿಶ್ಚಿತತೆಯನ್ನು ಎದೆಯಲ್ಲಿಟ್ಟುಕೊಂಡೇ ಇಂದಿನ ದಿನವನ್ನು ಒಂದು ಅವಕಾಶವೆಂಬಂತೆ ಬದುಕುವದೇ ಬದುಕಿನ ಶ್ರೇಷ್ಠ ರೀತಿ ಎಂದು ನನಗನಿಸಿದೆ. ಅದಕ್ಕೆಂದೇ ನನಗೆ ದೊರೆತ ಒಂದು ವರ್ಷ ಐದು ತಿಂಗಳುಗಳ ಪ್ರಾಚಾರ್ಯಗಿರಿಯ ಅವಧಿಯಲ್ಲಿ ಒಂದು ದಿನವನ್ನೂ ವೇಸ್ಟ್ ಮಾಡದೆ ನನ್ನ ಶಕ್ತಿಮೀರಿ ಕೆಲಸ ಮಾಡಿ ಕಾಲೇಜಿನ ಸಾವಿರಾರು ವಿದ್ಯಾರ್ಥಿಗಳನ್ನು ಸಂಬಾಳಿಸುತ್ತ ನಿತ್ಯದ ಕರ್ತವ್ಯಗಳೊಡನೆ ಶತಮಾನೋತ್ಸವದ ವರ್ಷವನ್ನು ಅರ್ಥಪೂರ್ಣವಾಗಿಸುವಲ್ಲಿ ಶ್ರಮಪಟ್ಟದ್ದು, ಈಗ ಹೊರಳಿ ನಿಂತು ನೋಡಿದಾಗ ಸಾರ್ಥಕ್ಯದ ಭಾವ ಮೂಡಿಸುತ್ತದೆ."

ಕೊನೆಯಲ್ಲಿ ತಾವೇ ರಚಿಸಿದ, ಕಾಲೇಜನ್ನು ಕುರಿತ ೧೫ ಕವಿತೆಗಳನ್ನು ಕೂಡ ಮುಡಿಸಿದ್ದಾರೆ. ಕರ್ನಾಟಕ ಕಾಲೇಜಿನಂಥ ಉಚ್ಚ ಶಿಕ್ಷಣ ಸಂಸ್ಥೆಯ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಕವಿತೆಗಳನ್ನು ಬರೆದ ಶ್ರೇಯಸ್ಸು ಕೂಡ ಅವರದೇ. ಅವರಿಗೂ ಕಾಲೇಜಿಗೂ ಇರುವ ಬಾಂಧವ್ಯ, ನಿಷ್ಠೆ ಈ ಕವಿತೆಗಳಲ್ಲಿ ಸುಂದರವಾಗಿ ಅಭಿವ್ಯಕ್ತಿಗೊಂಡಿದೆ. ಪ್ರೊ. ರೇಖಾ ಶೆಟ್ಟರ ಅವರ 'The legacy of Southern Maratha Railways' ಎಂಬ ಕಾಲೇಜಿನ ಕಟ್ಟಡಗಳ ಕುರಿತಾದ ಮಹತ್ವದ ಕಲಾತ್ಮಕ ಅಂಶಗಳನ್ನೊಳಗೊಂಡ ಸಚಿತ್ರವಾದ ಲೇಖನವಿರುವದು ಗ್ರಂಥದ ಸಮಗ್ರತೆಯನ್ನು ಕಾಪಾಡಿಕೊಂಡಿದೆ.

೨೦೮ ಪುಟಗಳ ಈ ಹೊತ್ತಿಗೆ, ಶತಮಾನೋತ್ಸವದ ಕಾರ್ಯ ಕಲಾಪಗಳ ನೆಪದಲ್ಲಿ, ಕರ್ನಾಟಕ ಕಾಲೇಜಿನ ಸಮಗ್ರ ಚಿತ್ರವನ್ನು ಕಣ್ಣಮುಂದೆ ಕಟ್ಟುತ್ತದೆ. "ನನ್ನ ನಡಿಗೆಯಲ್ಲಿ ದೃಢತೆಯನ್ನೂ, ಮಾತಿನಲ್ಲಿ ಸ್ಪಷ್ಟತೆಯನ್ನೂ ತರುತ್ತಾ ಕಾಲೇಜು ನನ್ನನ್ನು ರೂಪಿಸಿತು" ಎಂಬ ಅವರ ನುಡಿ ಸಾರ್ಥಕವಾಗಿದೆ. ಐದು ವರ್ಷ ಈ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿನಿಯಾಗಿ, ೩೬ ವರ್ಷ, ಒಂದು ತಿಂಗಳು, ೧೭ ದಿನಗಳನ್ನು ಕಾಲೇಜಿನ ಅಧ್ಯಾಪಕಿಯಾಗಿ, "ಹೀಗೆ ಸುಮಾರು ೪೨ ವರ್ಷಗಳ ಕಾಲ ಇದರ ಸಾತತ್ಯ ಹೊಂದಿದ್ದೇನೆ; ಸಖ್ಯ ಬೆಳೆಸಿಕೊಂಡಿದ್ದೇನೆ" ಎಂದು 'ನನ್ನನುಡಿ'ಯಲ್ಲಿ ಲೇಖಕಿ

ಹೇಳಿಕೊಂಡಿದ್ದುಂಟು. ಅಂತೆಯೇ ಆ ಸಖ್ಯದ ಹಲವಾರು ಆಯಾಮಗಳನ್ನು ಈ ಗ್ರಂಥದಲ್ಲಿ ವರ್ಣರಂಜಿತವಾಗಿ ಚಿತ್ರಿಸಲಾಗಿದೆ.

ಅಲ್ಲಲ್ಲಿ ಕೆಲವೆಡೆ ಪುನರುಕ್ತಿಯಿದ್ದರೂ ಶೈಲಿ ಕೊನೆಯವರೆಗೂ ಸಹಜವಾಗಿ, ಸತ್ವಪೂರ್ಣವಾಗಿ ಲಾಲಿತ್ಯದಿಂದ ಕೂಡಿದೆ. ಅದು ಅಲ್ಲಲ್ಲಿ ಕಾವ್ಯಾತ್ಮಕವಾಗಿಯೂ ಆಗಿದೆ ಎಂಬುದಕ್ಕೆ 'ಪಕ್ಷಿಗಳ ಕಲರವ.... ಮಕ್ಕಳ ಗುನುಗುನು' ಅಧ್ಯಾಯದಿಂದ ಈ ವಾಕ್ಯಖಂಡವನ್ನು ಗಮನಿಸಬಹುದು: "ನನಗೆ ವಿಚಿತ್ರವೆನಿಸಿದ್ದು ಪಕ್ಷಿಗಳ ನಿಜವಾದ ಸಮಯ ಪ್ರಜ್ಞೆ. ಕರಾರುವಾಕ್ಕಾಗಿ ಅವುಗಳ ಬೆಳಗಿನ ಧ್ವನಿಗಳನ್ನು ನಾನು ಗುರುತಿಸಬಲ್ಲವಳಾಗಿದ್ದೇನೆ. ಸಮಯ ಕುರಿತಂತೆ ಅಷ್ಟೊಂದು ನಿಖರತೆ ಅವುಗಳಲ್ಲಿದ್ದುದು ಆಶ್ಚರ್ಯವಾದರೂ ಸಂತಸದ ಸಂಗತಿಯಾಗಿತ್ತು. ಹಕ್ಕಿಗಳ ಬೆಳಗಿನ ಕಲರವ ಕರಗುತ್ತಾ ಹೋಗಿ ಮತ್ತೆ ಸಂಜೆ ಬೇರೆ ಬೇರೆ ದಿಕ್ಕಿನಿಂದ ಹಾರುತ್ತಾ ಹಾಡುತ್ತಾ ಬಂದು ಸುತ್ತಲೂ ಇರುವ ಆಲದ, ಮಾವಿನ, ಬೇವಿನ ದೊಡ್ಡ ದೊಡ್ಡ ಮರಗಳಲ್ಲಿನ ತಮ್ಮ ಗೂಡುಗಳನ್ನು ಸೇರಿ ಹೋಗುತ್ತಿದ್ದವು. ಅಳಿಲುಗಳಂತೂ ವರಾಂಡದ ಅಕ್ಕಪಕ್ಕದಲ್ಲಿನ bottle flower ಗಿಡಗಳನ್ನು ತಮ್ಮ ಆವಾಸ ಸ್ಥಾನವಾಗಿ ಮಾಡಿಕೊಂಡಿದ್ದವು".

'ಕರ್ನಾಟಕ ಕಾಲೇಜಿನ ಪ್ರಾಚಾರ್ಯೆಯಾಗಿ' ಗ್ರಂಥಕ್ಕೆ ನನ್ನಿಂದ ಮುನ್ನುಡಿಯನ್ನೇ ಡಾ. ರಾಜೇಶ್ವರಿ ಮಹೇಶ್ವರಯ್ಯ ಅವರು ಬಯಸಿದ್ದರು. ನನ್ನ ಅನಾರೋಗ್ಯದ ಕಾರಣ ಅದು ಸಾಧ್ಯವಾಗಲಿಲ್ಲ. ಅದಕ್ಕಾಗಿಯೇ ಈ 'ಶುಭ ಹಾರೈಕೆ'.

'ಕರ್ನಾಟಕ ಕಾಲೇಜಿನ ಪ್ರಾಚಾರ್ಯೆಯಾಗಿ' ಗ್ರಂಥ : ೨೦೨೦

ಎಚ್.ಎಸ್. ಪಾಟೀಲ : ಸಾಂಸ್ಕೃತಿಕ ಕಾಳಜಿಯ ಕ್ರಿಯಾಶೀಲ ವ್ಯಕ್ತಿತ್ವ

ಬಹಳ ವರ್ಷಗಳ ಹಿಂದೆಯೇ ಅಲ್ಲಮಪ್ರಭು ಬೆಟ್ಟದೂರರ ಮೂಲಕ ಎಚ್.ಎಸ್. ಪಾಟೀಲರ ಪರಿಚಯ ನನಗಾದದ್ದು. ಅಂದಿನಿಂದ ಇಂದಿನವರೆಗೂ ಪರಸ್ಪರ ಸ್ನೇಹ-ಆದರ-ವಿಶ್ವಾಸಗಳು ಬೆಳೆಯುತ್ತಲೇ ಬಂದಿವೆ. ಅಲ್ಲಮಪ್ರಭುವಲ್ಲದೆ ಗವಿಸಿದ್ಧ ಬಳ್ಳಾರಿ, ಕೆ.ಬಿ. ಬ್ಯಾಳಿ, ವೀರಪ್ಪ ಗೋರುಂಟ್ಲಿ ಮೊದಲಾದ ಕೊಪ್ಪಳ ಭಾಗದ ಅನೇಕ ಕವಿಗಳೂ, ಲೇಖಕರೂ ಅವರ ಬಳಗದಲ್ಲಿದ್ದರು. ಅವರೆಲ್ಲ ಕೇವಲ ಲೇಖಕರಾಗಿರಲಿಲ್ಲ, ಜನಪರ ಹೋರಾಟಗಾರರೂ ಆಗಿದ್ದರು. ಅವರೆಲ್ಲರ ಬೆಳವಣಿಗೆ ಪಾಟೀಲರ ಸಂತೋಷವನ್ನು ಹೆಚ್ಚಿಸಿತ್ತು ಎಂಬುದನ್ನು ನಾನು ಗುರುತಿಸಿದ್ದೆ. ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಜನಪರ ಹೋರಾಟ - ಹೀಗೆ ಹಲವು ಕ್ಷೇತ್ರಗಳಲ್ಲಿ ಪಾಟೀಲರು ಅತ್ಯಂತ ಕ್ರಿಯಾಶೀಲರಾಗಿ ಕೆಲಸ ಮಾಡುತ್ತ ಆ ಭಾಗದ ಸರ್ವತೋಮುಖ ಏಳಿಗೆಯೇ ತಮ್ಮ ಜೀವನದ ಗುರಿ ಎಂಬಂತೆ ದುಡಿದು ಹಣ್ಣಾದವರು. ಮಹತ್ವದ ಸಾಹಿತ್ಯಿಕ ಸಮಾರಂಭಗಳು ಎಲ್ಲಿಯೇ ನಡೆಯಲಿ ಅವರು ತಪ್ಪಿಸಿಕೊಂಡವರಲ್ಲ. ಇತ್ತೀಚೆಗೆ ನಾನು ಅವರನ್ನು ಭೆಟ್ಟಿಯಾದದ್ದು ಧಾರವಾಡ ಸಾಹಿತ್ಯ ಸಂಭ್ರಮದಲ್ಲಿ. ಅಲ್ಲಮ ಪ್ರಭು ಬೆಟ್ಟದೂರು ಅವರ ಜೊತೆಗಿದ್ದರೆಂಬುದನ್ನು ಬೇರೆ ಹೇಳಬೇಕಿಲ್ಲ.

ಪ್ರೌಢಶಾಲಾ ಶಿಕ್ಷಕರಾಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದ ಪಾಟೀಲರು ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ, ಬೇರೆ ಬೇರೆ ಹಂತಗಳಲ್ಲಿ ನಾಲ್ಕು ದಶಕಕ್ಕೂ ಮಿಕ್ಕಿ ಶಿಕ್ಷಣ ರಂಗದಲ್ಲಿ ಸೇವೆ ಸಲ್ಲಿಸಿ, ಅಧ್ಯಯನ ಅಧ್ಯಾಪನ ಎರಡರಲ್ಲಿಯೂ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಾದವರು. ತಾವು ಕೆಲಸ ಮಾಡಿದ ಶಿಕ್ಷಣ ಸಂಸ್ಥೆಗಳನ್ನು ದಕ್ಷತೆ, ಶಿಸ್ತುಬದ್ಧತೆಗಳಿಂದ ಮುಂದೆ ತಂದರು. ಕೊಪ್ಪಳ ಜಿಲ್ಲಾ ರಚನಾ ಹೋರಾಟ ಹಾಗೂ ಹೈದರಾಬಾದ ಕರ್ನಾಟಕಕ್ಕೆ ಸಂವಿಧಾನದ ಪ್ರಕಾರ ವಿಶೇಷ ಸ್ಥಾನಮಾನ ದೊರಕಿಸಲು ನಡೆಸಿದ ಹೋರಾಟಗಳಲ್ಲಂತೂ ಪಾಟೀಲರು ಬಹಳ ಮುಖ್ಯ ಪಾತ್ರ ವಹಿಸಿದ್ದನ್ನು ಎಲ್ಲರೂ ಬಲ್ಲರು. ಹಾಗೆ ಕೈಕೊಂಡ ಹೋರಾಟಗಳೆಲ್ಲವು ಗಳಲ್ಲಿಯೂ ಸಂಗಾತಿಗಳೊಂದಿಗೆ ವಿಜಯಶಾಲಿಗಳಾಗಿಯೇ ಹೊರಬಂದರು.

ತಮ್ಮ ಜಿಲ್ಲೆಯ ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ಅವರು ಭಿನ್ನವಾಗಿ ಬಗೆಯದೆ ಎಲ್ಲವನ್ನೂ ಅಖಂಡವಾಗಿಯೇ ಪರಿಭಾವಿಸಿ ಸಂಘಟನೆಗೆ ತೊಡಗುವದು ಅವರ ಮಾರ್ಗ. ಕೆಲ ವಿಷಯಗಳನ್ನು ಕುರಿತು

ನನ್ನೊಡನೆ ಚರ್ಚಿಸುವಾಗ ಅವರ ವಿಸ್ತಾರವಾದ ಓದು, ಆಳವಾದ ಅಧ್ಯಯನ ಹಾಗೂ ಸಾಂಸ್ಕೃತಿಕ ಕಾಳಜಿಗಳನ್ನು ನಾನು ಗುರುತಿಸಿದ್ದೇನೆ. ೧೯೯೩ರಲ್ಲಿ ಕೊಪ್ಪಳದಂಥ ತಾಲೂಕು ಸ್ಥಳದಲ್ಲಿ ೬೨ನೆಯ ಅ.ಭಾ.ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಿಂಪಿಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಸಿದ ಸಂಘಟನಾಶಕ್ತಿ ಅವರದು. ಅಂಥ ಯಾವ ಸೌಕರ್ಯಗಳೂ ಇಲ್ಲದಿರುವ ಸಂದರ್ಭದಲ್ಲಿ, ಸಮ್ಮೇಳನದಲ್ಲಿ ಭಾಗವಹಿಸಿದ ಅನೇಕ ಸಾಹಿತಿಗಳನ್ನು ಅಲ್ಲಿಯ ಕೆಲವು ಸಾಹಿತ್ಯಾಸಕ್ತರು ತಮ್ಮ ತಮ್ಮ ಮನೆಯ ಅತಿಥಿಗಳನ್ನಾಗಿ ನೋಡಿಕೊಂಡಿದ್ದು ಮರೆಯುವಂಥ ಸಂಗತಿಯಲ್ಲ. ಸಮ್ಮೇಳನದ ಕಾರ್ಯದರ್ಶಿಗಳಾದ ಪಾಟೀಲರು ಈ ಮೂಲಕ ಕಾರ್ಯಕರ್ತರ ಪಡೆಯೊಂದನ್ನು ನಿರ್ಮಿಸಿದ್ದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಶ್ರೀ ಎಚ್.ಎಸ್. ಪಾಟೀಲರು ತಮ್ಮ ಈ ಬಗೆಯ ಚಟುವಟಿಕೆಗಳ ನಡುವೆ ಬರವಣಿಗೆಯನ್ನು ಎಂದೂ ಕೈಬಿಟ್ಟವರಲ್ಲ. ಅವರ ಹದಿಮೂರು ಸ್ವತಂತ್ರ ಕೃತಿಗಳಲ್ಲಿ ಯಾವುದನ್ನೂ ತೆಗೆದು ಹಾಕುವಂತೆಯೇ ಇಲ್ಲ. ಸಂಪಾದಿತ ಕೃತಿಗಳೂ ಅಷ್ಟೇ ಮಹತ್ವದವು. ಸಾಹಿತ್ಯ, ಇತಿಹಾಸ, ಕಲೆ, ರಂಗಭೂಮಿಯನ್ನೂ ಒಳಗೊಳ್ಳುತ್ತದೆ ಅವರ ಆಸಕ್ತಿ. ಈ ದಿಸೆಯಲ್ಲಿ, ಕನಕದಾಸರು, ಪಂ.ನಾಗಭೂಷಣ ಶಾಸ್ತ್ರಿಗಳು ಕವಿ ಗವಿಸಿದ್ಧ ಬಳ್ಳಾರಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಗವಿಸಿದ್ದೇಶ್ವರ ಮಠ, ಕಿನ್ನಾಳ ಕಲೆ, ಕೊಪ್ಪಳ ಜಿಲ್ಲೆಯ ರಂಗಭೂಮಿ, ರೆಹೆಮಾನವ್ವ ಕಲ್ಮನಿ ಮೊದಲಾದ ಕೃತಿಗಳನ್ನು ಇಲ್ಲಿ ಹೆಸರಿಸಬಹುದು. 'ಕೊಪ್ಪಳ ಜಿಲ್ಲೆಯ ಸಾಹಿತ್ಯ ಸಂಸ್ಕೃತಿ ಪರಂಪರೆ' ಯಂಥ ಕೃತಿ ಒಂದು ಆಕರ ಗ್ರಂಥವೆಂಬ ಮಾನ್ಯತೆಯನ್ನು ಪಡೆದಿದೆ. ಗವಿದೀಪ್ತಿ, ತಿರುಳ್ಗನ್ನಡ, ವಿಮೋಚನೆ, ಕೊಪ್ಪಳ ಜಿಲ್ಲಾದರ್ಶನ, ಆನೆಗೊಂದಿ ಅವಲೋಕನ, ಕೊಪಣಸಿರಿ- ಮೊದಲಾದ ಸಂಪಾದಿತ ಕೃತಿಗಳು ಸಮಗ್ರ ಮಾಹಿತಿಯೊಂದಿಗೆ ಸಾಂಸ್ಕೃತಿಕ ಮಹತ್ವವನ್ನೂ ಪಡೆದುಕೊಂಡಿವೆ. ಅನೇಕ ಸಭೆ ಸಮಾರಂಭಗಳಲ್ಲಿ, ವಿಚಾರ ಸಂಕಿರಣ ಮುಂತಾದವುಗಳಲ್ಲಿ ಭಾಗವಹಿಸಿ ಉಪನ್ಯಾಸ ನೀಡುವುದರೊಂದಿಗೆ ಅವರು ಪ್ರಬಂಧಗಳನ್ನೂ ಮಂಡಿಸಿದ್ದಾರೆ. ಇವೆಲ್ಲದರ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲಾ ತಿರುಳ್ಗನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಕೊಪ್ಪಳ ಜಿಲ್ಲಾ ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಯ ಗೌರವ ಪಾಟೀಲರಿಗೆ ದೊರೆತದ್ದು ಸಹಜವೇ ಆಗಿದೆ. ಕಳೆದ ವರ್ಷವೇ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಡಾ. ಶರಣಬಸಪ್ಪ ಕೋಲ್ಕಾರ ಅವರು ಎಚ್.ಎಸ್. ಪಾಟೀಲರ ವ್ಯಕ್ತಿತ್ವವನ್ನು

'ಕರಸಿರಿ'ಯಲ್ಲಿ ಗುರುತಿಸಿದ್ದು ಯಥೋಚಿತವಾಗಿದೆ: "ಕೊಪ್ಪಳದ ಸಾಹಿತ್ಯಬಳಗದ ಹಿರಿಯ ಜೀವನ ಶ್ರೀಯುತ ಎಚ್.ಎಸ್. ಪಾಟೀಲರು ಶಿಕ್ಷಣ ತಜ್ಞ, ಬರಹಗಾರ, ರಂಗಾಸಕ್ತ, ಸಂಶೋಧಕ, ಸಾಹಿತಿ, ವಿಚಾರವಾದಿ, ಅನುಭವಿ - ಹೀಗೆ ವೈವಿಧ್ಯಮಯ ವ್ಯಕ್ತಿತ್ವ. ಕೇವಲ ತಾವಷ್ಟೇ ಅಲ್ಲ, ತಮ್ಮ ಜೊತೆ ಯುವ ಬರಹಗಾರರನ್ನು ಬೆಳೆಸುವ ಸಾಂಸ್ಕೃತಿಕ ಕಾಳಜಿ ಮತ್ತು ಹೃದಯ ವೈಶಾಲ್ಯತೆ ಅವರದು".

೭೫ ಸಾರ್ಥಕ ವಸಂತಗಳನ್ನು ಕಂಡ ಶ್ರೀ ಎಚ್.ಎಸ್. ಪಾಟೀಲರಿಗೆ ಕೊಪ್ಪಳ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ಅಭಿನಂದನ ಗ್ರಂಥ'ವನ್ನು ನೀಡಿ ಗೌರವಿಸುತ್ತಿರುವುದು ಅತ್ಯಂತ ಸಂತೋಷದ ಸಂಗತಿ. ಶ್ರೀ ಪಾಟೀಲರು ಆರೋಗ್ಯ ದೃಢಕಾಯರಾಗಿ ನೆಮ್ಮದಿಯಿಂದ ಬಹುಕಾಲ ನಮ್ಮ ಮಧ್ಯದಲ್ಲಿದ್ದು ಯುವ ಜನಾಂಗದ ಸ್ಫೂರ್ತಿಯಾಗಿ ಬಾಳಲಿ ಎಂದು ಮನಃಪೂರ್ವಕ ಹಾರೈಸುತ್ತೇನೆ.

ಅಭಿನಂದನ ಗ್ರಂಥಕ್ಕೆ ಬರೆದ ಲೇಖನ : ೨೦೨೦

ಶಾಂತಾ ಇಮ್ರಾಪುರ : ಒಂದು ಪ್ರಮುಖ 'ಮಹಿಳಾ ಧ್ವನಿ'

ಕನ್ನಡ ಸಾಹಿತ್ಯದ ಪರಂಪರೆಯನ್ನು ಆಳವಾಗಿ ಅಧ್ಯಯನ ಮಾಡಿ ಅದರ ಸತ್ವವನ್ನು ಅರಗಿಸಿಕೊಂಡ ಡಾ. ಶಾಂತಾ ಇಮ್ರಾಪುರ ಅವರದು ಬಹುಮುಖ ಪ್ರತಿಭೆ. ಅಧ್ಯಯನ, ಅಧ್ಯಾಪನ, ಆಡಳಿತ, ಸಾಹಿತ್ಯ ವ್ಯವಸಾಯ ಸಂಘಟನೆ - ಯಾವುದನ್ನೇ ತೆಗೆದುಕೊಂಡರೂ ವಿದ್ಯಾರ್ಥಿದೆಸೆಯಲ್ಲಿ ಪಡೆದ ಪ್ರಥಮ ಶ್ರೇಣಿಯ ಮುಂದುವರಿಕೆಯಾಗಿಯೇ ತೋರುತ್ತವೆ. ಕಾಣದ ರೀತಿಯಲ್ಲಿ ಕಾರ್ಯೋನ್ಮುಖವಾಗುವ ಶ್ರದ್ಧೆ ಅವರ ವ್ಯಕ್ತಿತ್ವದ ಒಂದು ಮಹತ್ವದ ಲಕ್ಷಣವಾಗಿದೆ. ಅಪಾರವಾದ ಆತ್ಮವಿಶ್ವಾಸದಿಂದ, ತಾಳ್ಮೆಯಿಂದ ಎಲ್ಲರನ್ನೂ ಕಟ್ಟಿಕೊಂಡು ಮುಂದುವರಿಯುವದೇ ಅವರ ಗುರಿ; ಸದ್ದಿಲ್ಲದ ಸಾಧನೆಯೇ ಅದರ ದಾರಿ. ತಮ್ಮ ಜೊತೆಯಲ್ಲಿ ಇತರರನ್ನೂ ಬೆಳೆಸುವ ಪ್ರವೃತ್ತಿಯಿಂದಾಗಿಯೇ ಅನೇಕ ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಸಂಶೋಧನೆಗೆ ಅವರು ಮಾರ್ಗದರ್ಶನ ನೀಡುತ್ತಿರುವುದು, ಪ್ರಾಚೀನ, ಅರ್ವಾಚೀನವೆನ್ನದೆ ಯಾವುದೇ ಕೃತಿ ಹಾಗೂ ವಿಷಯದ ಬಗ್ಗೆ ಅವರು ವಿದ್ವತ್ಪೂರ್ಣವಾಗಿ ಮಾತನಾಡಬಲ್ಲರು ಹಾಗೂ ಬರೆಯಬಲ್ಲರು.

ಹತ್ತು ವರುಷಗಳ ಹಿಂದೆ, ಅವರ 'ನಿರ್ಭಯದ ನಿಲವು' ಕೃತಿಗೆ ಬೆನ್ನುಡಿಯಾಗಿ ಕೆಲವು ಮಾತು ಬರೆದಿದ್ದೆ:

"ಅಕ್ಕಮಹಾದೇವಿ ಕುರಿತ ಸಮಗ್ರ ವಿವೇಚನೆಯ ಮಹಾಪ್ರಬಂಧ, ಅದಕ್ಕೆ ಪೂರಕವೆನ್ನುವಂತೆ ಪ್ರಕಟವಾದ 'ಧರ್ಮ-ಮಹಿಳೆ ಮತ್ತು ಸಮಾಜ' ಹಾಗೂ ಮಹಿಳಾವಾದಿ ಓದಿನ ಕ್ರಮದಿಂದ ರೂಪುಗೊಂಡ ಚಿಂತನೆಗಳು 'ಮಹಿಳೆ-ಸಾಹಿತ್ಯ-ಸಂಸ್ಕೃತಿ'ಯಂಥ ಗಮನಾರ್ಹ ಕೃತಿಗಳನ್ನು ನೀಡಿದ ಡಾ. ಶಾಂತಾ ಇಮ್ರಾಪುರ ಅವರ ವಚನ ಸಾಹಿತ್ಯದ ಆಳವಾದ ಅಧ್ಯಯನ ಹಾಗೂ ಅವರ ಸ್ತ್ರೀಪರ ಚಿಂತನೆಯ ಮುಂದಿನ ಮಜಲನ್ನು ಪ್ರಸ್ತುತ ಕೃತಿಯಲ್ಲಿ ಕಾಣಬಹುದು.

ಯಾವುದೇ ವಿಷಯವನ್ನು ಎತ್ತಿಕೊಂಡಾಗಲೂ ಅದರ ಹಿನ್ನೆಲೆ-ಮುನ್ನೆಲೆಗಳನ್ನು ಸರಿಯಾಗಿ ಗಮನದಲ್ಲಿಟ್ಟುಕೊಂಡು ವಿವರವಾಗಿ ಪರಿಶೀಲಿಸಿ ತಮ್ಮ ವಿಚಾರಗಳನ್ನು ಪ್ರತಿಪಾದಿಸುವುದರಿಂದ ಒಂದು ಸಮುಚಿತವಾದ ಸಮಗ್ರ ನೋಟ ಇಲ್ಲಿ ಓದುಗರಿಗೆ ದೊರೆಯುತ್ತದೆ. ಶಿವಶರಣೆಯರ ವಚನಗಳ ಸಾಹಿತ್ಯಿಕ ನೆಲೆ, ಅನುಭಾವ, ದಾಂಪತ್ಯ ಮೀಮಾಂಸೆ, ಬಸವಯುಗದ ಮಹಿಳೆಯರ ಅಸ್ತಿತ್ವ ಮತ್ತು ಅನನ್ಯತೆಯ ಶೋಧ,

ಅಲ್ಲಿ ಒಡಮೂಡಿದ ಸ್ತ್ರೀತ್ವದ ಮಾದರಿಗಳು - ಇತ್ಯಾದಿಗಳನ್ನು ಗುರುತಿಸಿ ವಿಶ್ಲೇಷಿಸುವಲ್ಲಿ ಯಾವುದೇ ಬಗೆಯ ಅತಿರೇಕವಿರದೆ, ಸಂಯಮದಿಂದ ವಾಸ್ತವ ಸಂಗತಿಯನ್ನು ಮನಗಾಣಿಸಿಕೊಡಲು ಇಲ್ಲಿಯ ಬರವಣಿಗೆ ಸಮರ್ಥವಾಗಿದೆ. ಶರಣ ಸಂಸ್ಕೃತಿಯಲ್ಲಿ ವ್ಯಕ್ತಿ-ಸಮಾಜ ಮೌಲ್ಯಗಳ ಸಾಹಚರ್ಯವನ್ನು ಎತ್ತಿ ತೋರಿಸಿರುವುದು ಹೆಚ್ಚು ಪ್ರಸ್ತುತವೆನಿಸುತ್ತದೆ. 'ಜೈನಧರ್ಮ ಮತ್ತು ಮಹಿಳೆ' 'ವೇಮನನ ವಚನಗಳಲ್ಲಿ ಮಹಿಳಾ ಸಂಬಂಧಿ ಧೋರಣೆಗಳು', 'ಆಧುನಿಕ ವಚನಕಾರ್ತಿಯರು' - ಲೇಖನಗಳು ಲೇಖಕಿಯ ವಿಮರ್ಶಾತ್ಮಕ ದೃಷ್ಟಿಯಿಂದಾಗಿ ತಮ್ಮ ಸಮತೋಲನವನ್ನು ಕಾಯ್ದುಕೊಂಡಿವೆ.

ವಚನ ಸಾಹಿತ್ಯವನ್ನು ಅದರ ಮುಖ್ಯ ಉದ್ದೇಶಕ್ಕೆ ಭಂಗ ಬರದಂತೆ ಸ್ತ್ರೀ ಪರ ಚಿಂತನೆಯ ದೃಷ್ಟಿಯಿಂದ ಪರಿಶೀಲಿಸಿ ಅದರ ಮೌಲ್ಯಗಳನ್ನು ಕಂಡು ಹಿಡಿಯುವಲ್ಲಿ 'ನಿರ್ಭಯರ ನಿಲವು' ಒಂದು ಮಹತ್ವದ ಕೃತಿಯಾಗಿ ನಿಲ್ಲಬಲ್ಲುದು."

ಈ ಮಾತುಗಳನ್ನು ಈಗಲೂ ಗಟ್ಟಿಯಾಗಿ ಹೇಳಬಹುದೆನಿಸುತ್ತದೆ. ಈ ಕೃತಿಯ ನಂತರವೂ, ವ್ಯಕ್ತಿ ಕೃತಿ, ವಿಮರ್ಶೆ-ಸಂಶೋಧನೆಗಳಿಂದೊಡಗೂಡಿದ ಹತ್ತಾರು ಕೃತಿಗಳನ್ನು ಅವರು ಪ್ರಕಟಿಸಿ ವಿಮರ್ಶೆ ಹಾಗೂ ಮಹಿಳಾ ಸಾಹಿತ್ಯ ಸಂಶೋಧನೆಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಜನಪದ ಸಾಹಿತ್ಯ ಕ್ಷೇತ್ರವೂ ಇದಕ್ಕೆ ಹೊರತಾಗಿಲ್ಲ. ವಿವಿಧ ಸಂದರ್ಭಗಳಲ್ಲಿ ಹಿರಿಯ ಲೇಖಕಿಯರಿಗೆ ಸಲ್ಲಿಸಿದ ಅಭಿನಂದನ ಗ್ರಂಥಗಳ ಸಂಪಾದನ ಕಾರ್ಯ ಇವರ ವಿಶಿಷ್ಟ ಕೊಡುಗೆ ಎಂದೇ ಹೇಳಬಹುದು. ಇನ್ನೂ ಕೆಲವು ಕೋಶಗಳು, ಅಧ್ಯಯನಪರ ಕೃತಿಗಳು ಇವರ ಅಂಕಿತದಲ್ಲಿವೆ. ಹೀಗೆ ಅವರ ಒಟ್ಟು ಬರವಣಿಗೆ ಕನ್ನಡ ಸಾಹಿತ್ಯ ಚರಿತ್ರೆಯ ಒಂದು ಭಾಗವಾಗಿಯೇ ಪರಿಣಮಿಸಿದೆಯೆಂದರೆ ತಪ್ಪಾಗದು.

ಡಾ. ಶಾಂತಾ ಇಮ್ರಾಪುರ ಅವರ ಅನೇಕ ಕೃತಿಗಳಲ್ಲಿ ಸ್ತ್ರೀಪರ ಚಿಂತನೆ ಅಬ್ಬರವಿಲ್ಲದೆ ಅಂತರ್ವಾಹಿನಿಯಾಗಿ ಹರಿದಿರುವುದನ್ನು ಕಾಣಬಹುದು, 'ಮಹಿಳಾವಾದ' ಎಂದು ಅದಕ್ಕೆ ಹೆಸರಿಸಬೇಕೋ ಬೇಡವೋ ಗೊತ್ತಿಲ್ಲ. 'ಮಹಿಳಾವಾದ' (Feminism) ಪದದಲ್ಲಿಯ 'ವಾದ' ಎಂಬ ಕಲ್ಪನೆಯೇ ತಮಗಿಷ್ಟವಾಗುತ್ತಿಲ್ಲವೆಂದು ಡಾ. ಜಿ.ಎಸ್. ಶಿವರುದ್ರಪ್ಪನವರು ಒಂದೆಡೆ ಹೇಳಿದ್ದುಂಟು. 'ಮಹಿಳಾ ಧ್ವನಿ' ಎನ್ನುವದು ಹೆಚ್ಚು ಸಮರ್ಪಕ ಎಂದು ಅವರ ಅಭಿಪ್ರಾಯ. ಯಾಕೆಂದರೆ ಮಹಿಳೆ ತನ್ನ ಪರವಾಗಿ ತಾನು ಮಾತನಾಡಲು ತೊಡಗಿದ ಈ ಧ್ವನಿಯಲ್ಲಿ ಒಂದು ಹೊಸ ಎಚ್ಚರವಿದೆ, ಆತ್ಮ ಪ್ರತ್ಯಯವಿದೆ, ವೈಚಾರಿಕತೆಯಿದೆ, ಪ್ರತಿಭಟನೆಯ ಲಕ್ಷಣಗಳಿವೆ ಎಂದು ಅವರು ಅದಕ್ಕೆ ವಿವರಣೆ ನೀಡಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊದಲು

ಈ ಧ್ವನಿ ಪ್ರಬಲವಾಗಿ ಕೇಳಿಬರುವುದು ಅಕ್ಕಮಹಾದೇವಿ ಹಾಗೂ ಅವರ ಸಮಕಾಲೀನ ಕೆಲವು ವಚನಕಾರ್ತಿಯರಲ್ಲಿ. ನಮ್ಮ ಚರಿತ್ರೆ ಎಂದೂ ಮಹಿಳೆಯರ ಪರವಾಗಿರಲಿಲ್ಲವೆಂಬುದು ನಿಜವಾದರೂ ಅದು ಸಂಪೂರ್ಣ ವಿರೋಧವೂ ಆಗಿರಲಿಲ್ಲ. ಮಹಿಳೆಯರ ಬಗ್ಗೆ ಒಂದು ರೀತಿಯಲ್ಲಿ ಗೌರವ ತೋರಿಸುತ್ತ ಆಕೆಯ ಸ್ಥಾನವನ್ನು ವೈಭವೀಕರಿಸುತ್ತಿರುವಂತೆಯೇ ಅವಳ ವ್ಯಕ್ತಿ ಸ್ವಾತಂತ್ರ್ಯವನ್ನು ನಿರಾಕರಿಸುತ್ತ ತನಗೆ ಅಧೀನವಾಗಿರುವಂತೆ ನೋಡಿಕೊಂಡದ್ದೂ ಉಂಟು, ಇಂಥ ಅಧೀನತೆಯ ಹಾಗೂ ವಿಧೇಯತೆಯ ಹಿನ್ನೆಲೆಯಲ್ಲಿ ತನಗೂ ಒಂದು ವ್ಯಕ್ತಿತ್ವವಿರುವುದನ್ನು, ಉಳಿದ ಕ್ಷೇತ್ರಗಳಂತೆ ಸಾಹಿತ್ಯಾಭಿವ್ಯಕ್ತಿಯಲ್ಲಿಯೂ ಗುರುತಿಸಿಕೊಂಡ ಆಧುನಿಕ ಲೇಖಕಿಯರಲ್ಲಿ ಡಾ. ಶಾಂತಾ ಇಮ್ರಾಪುರ ಅವರೂ ಒಬ್ಬರು ಹಾಗೂ ಪ್ರಮುಖರು.

ಅಭಿನಂದನ ಗ್ರಂಥಕ್ಕೆ ಬರೆದ ಲೇಖನ : ೨೦೨೧

ಎಂ.ಎಂ. ಕಲಬುರ್ಗಿಯರವೊಂದಿಗಿನ ಆಪ್ತ ಒಡನಾಟ

ಎಂ.ಎಂ. ಕಲಬುರ್ಗಿಯವರು ಸ್ನಾತಕೋತ್ತರ ಶಿಕ್ಷಣಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಬಂದದ್ದು ೧೯೬೦ರಲ್ಲಿ. ಪ್ರತಿಭಾವಂತ ವಿದ್ಯಾರ್ಥಿಯೆಂದು ಕೇಳಿದ್ದೆನೇ ಹೊರತು ಸಂಪರ್ಕ ಬಂದಿರಲಿಲ್ಲ. ೧೯೬೨ರಿಂದ ನಾಲ್ಕು ವರ್ಷ ಅವರು ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ನನಗೆ ಅವರ ಪರಿಚಯವಾದ ಸ್ವಾರಸ್ಯದ ಪ್ರಸಂಗವನ್ನು ನಾನು ಮರೆತಿಲ್ಲ. ಪ್ರೊ. ಶಿ.ಶಿ. ಬಸವನಾಳರು ಸಂಪಾದಿಸುತ್ತಿದ್ದ 'ಜಯಕರ್ನಾಟಕ' ಮಾಸಪತ್ರಿಕೆಯ ೧೯೬೨ರ ಸಂಚಿಕೆಗಳಲ್ಲಿ ಸುಮಾರು ಎಪ್ಪತ್ತಕ್ಕೂ ಹೆಚ್ಚು ಜನಪದ ಹಾಡುಗಳು ಪ್ರಕಟವಾಗಿದ್ದವು. ಹಾಡುಗಳು ತುಂಬ ಚೆನ್ನಾಗಿದ್ದವು. ಸಂಗ್ರಹಕಾರರ ಹೆಸರು ಮಲ್ಲಿನಾಥ ಕಲಬುರ್ಗಿ ಎಂದಿತ್ತು. ನಾನು ಕುತೂಹಲ ತಡೆಯಲಾರದೆ ವಿಚಾರಿಸಿದಾಗ ಅದೇ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದ ಎಂ.ಎಂ. ಕಲಬುರ್ಗಿಯವರೇ ಅವರು ಎಂಬುದು ಗೊತ್ತಾಗಿ ಮುಂದೆ ಅವರ ಪರಿಚಯವೂ ಆಯಿತು. ತಾವು ಸಂಗ್ರಹಿಸಿದ ಜನಪದ ಹಾಡುಗಳಲ್ಲಿ ಕೆಲವನ್ನು ಅವರೇ ಸೊಗಸಾಗಿ ಹಾಡಿಯೂ ತೋರಿಸಿದರು. ಅವರು ಹಾಡಿದ 'ಯಾಲಕ್ಕಿಗೊನಿಯ ಗಿಣಿರಾಮಾ' ಎಂಬ ಹಾಡು ಇಂದಿಗೂ ನನ್ನ ಕಿವಿಯಲ್ಲಿ ಅನುರಣನಗೊಳ್ಳುತ್ತಿದೆ.

೧೯೬೬ರಲ್ಲಿ ಕಲಬುರ್ಗಿಯವರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿ ಬಂದ ಮೇಲೆ ನನಗೆ ಇನ್ನೂ ಹೆಚ್ಚು ಹತ್ತಿರವಾದರು. ಮೈಸೂರು ಸರಕಾರ ರಚಿಸಿದ ಶ್ರೀ ಬಸವೇಶ್ವರರ ಎಂಟನೇ ಶತಮಾನೋತ್ಸವ ಸಮಿತಿಯವರು ೧೯೬೭ರಲ್ಲಿ ಪ್ರಕಟಿಸಿದ 'ಶ್ರೀ ಬಸವೇಶ್ವರರು' ಗ್ರಂಥದಲ್ಲಿ ಕಲಬುರ್ಗಿಯವರು 'ಬಸವಣ್ಣನವರ ಜೀವನಚರಿತ್ರೆ' ಕುರಿತು ಸಂಶೋಧನಾತ್ಮಕ ಲೇಖನ ಬರೆದಿದ್ದರು. ನಾನದನ್ನು ತುಂಬ ಮೆಚ್ಚಿಕೊಂಡಿದ್ದೆ. ಅದೇ ಗ್ರಂಥದಲ್ಲಿ 'ಬಸವಣ್ಣನವರ ವಚನಗಳ ಸಾಹಿತ್ಯಿಕ ಮೌಲ್ಯ' ಎಂಬ ನನ್ನ ಲೇಖನವೂ ಪ್ರಕಟವಾಗಿತ್ತು. ನಮ್ಮ ಸ್ನೇಹ ಸಂವರ್ಧನೆಗೆ ಇದೂ ಒಂದು ಕಾರಣವಾಗಿತ್ತು.

ವಿಶ್ವವಿದ್ಯಾಲಯದ ಕ್ವಾರ್ಟರ್ಸ್ಸಿನಲ್ಲಿದ್ದವರು ನಮ್ಮ ಮನೆಯ ಮಗ್ಗುಲಿನ ಪ್ಲಾಟ್‌ನ್ನು ಖರೀದಿಸಿ ತಾವು ಕಟ್ಟಿಸಿದ ಹೊಸಮನೆಯಲ್ಲಿಯೇ ಇರಲು ಬಂದರು. ಮನೆಗೆ 'ಶ್ರೀವಿಜಯ' ಎಂಬ ಹೆಸರಿಟ್ಟರು. ಅವರ ಮಗನ ಹೆಸರೂ ಶ್ರೀ ವಿಜಯ. ನಮ್ಮ ನೆರೆಮನೆಯವರಾಗಿ ಕಲಬುರ್ಗಿಯವರು ಎಷ್ಟು ಹತ್ತಿರವಾಗಿದ್ದರೋ ಮಾನಸಿಕವಾಗಿ, ಹಾರ್ದಿಕವಾಗಿ ಇನ್ನೂ ಹೆಚ್ಚು ಹತ್ತಿರದವರಾಗಿದ್ದರು. ಸುಮಾರು

ಐವತ್ತು ವರುಷಗಳ ಒಡನಾಟದಿಂದಾಗಿ ನೂರಾರು ನೆನಪುಗಳು ಈ ಸಂದರ್ಭದಲ್ಲಿ ನುಗ್ಗಿ ಬರುತ್ತಿವೆ. ಕೆಲವನ್ನು ಮಾತ್ರ ಇಲ್ಲಿ ಹೇಳಲು ಸಾಧ್ಯ. ಅದರಲ್ಲಿಯೂ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಸಂಬಂಧಿಸಿದಂತೆ ಅದನ್ನು ಅನಿವಾರ್ಯವಾಗಿ ಸೀಮಿತಗೊಳಿಸಿಕೊಂಡಿದ್ದೇನೆ.

ಪ್ರಸಾರಾಂಗದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸುತ್ತಿದ್ದೆವಷ್ಟೆ. ಆಗ ಕುಲಸಚಿವರಾಗಿದ್ದ ಶ್ರೀ ಸದಾಶಿವ ಒಡೆಯರ ಅವರ ಸೂಚನೆಯಂತೆ ಚೌಡದಾನಪುರದಲ್ಲಿಯೂ ಉಪನ್ಯಾಸ ಶಿಬಿರವನ್ನು ಏರ್ಪಡಿಸಲಾಗಿತ್ತು. ಆಗ ಶ್ರೀ ಕಲಬುರ್ಗಿಯವರು 'ಶಾಸನಗಳಲ್ಲಿ ಶಿವಶರಣರು' ಎಂಬ ವಿಷಯವನ್ನು ಕುರಿತು ಉಪನ್ಯಾಸವಿತ್ತರು. ಜನ ಬಹಳ ಮೆಚ್ಚಿಕೊಂಡ ಆ ಭಾಷಣ ಮುಂದೆ 'ಉಪನ್ಯಾಸ ಗ್ರಂಥಮಾಲೆ'ಯಲ್ಲಿ ಪ್ರಕಟವಾಯಿತು. ಮುಂದೆ ಅದನ್ನು ಇನ್ನೂ ವಿಸ್ತರಿಸಿ ಒಂದು ಗ್ರಂಥವನ್ನೇ ಬರೆದರು. ಅದಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸಂಶೋಧನ ವಿಭಾಗದಲ್ಲಿ ಪ್ರಶಸ್ತಿಯನ್ನೂ ಕೊಡಮಾಡಿತು.

ಡಾ. ಕಲಬುರ್ಗಿಯವರು ಕನ್ನಡ ವಿಭಾಗಕ್ಕೆ ಬಂದ ಒಂದೆರಡು ವರ್ಷಗಳಲ್ಲಿ 'ದರ್ಪಣಾವಲೋಕನ' ಶೀರ್ಷಿಕೆಯಲ್ಲಿ ಎರಡು ಲೇಖನಗಳನ್ನು ಬರೆದರು. ಒಂದು ಲೇಖನ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸುತ್ತಿದ್ದ Journal of the Karnatak University : Humanities Numberದಲ್ಲಿ ಪ್ರಕಟವಾಯಿತು. ಇನ್ನೊಂದು ಲೇಖನ ಪ್ರಸಾರಾಂಗದ ಕನ್ನಡ ತ್ರೈಮಾಸಿಕ 'ಕರ್ನಾಟಕ ಭಾರತಿ'ಯಲ್ಲಿ ಬೆಳಕು ಕಂಡಿತು. ಎರಡರಲ್ಲೂ ಪ್ರೊ. ಡಿ.ಎಲ್.ಎನ್. ಅವರು ಸಂಪಾದಿಸಿದ ಕೇಶಿರಾಜನ 'ಶಬ್ದಮಣಿದರ್ಪಣ'ದ ಸೂತ್ರವೃತ್ತಿ ಟೀಕೆಗಳಲ್ಲಿಯ ಸ್ಖಾಲಿತ್ಯಗಳನ್ನು ಕಲಬುರ್ಗಿಯವರು ಎತ್ತಿ ತೋರಿಸಿದ್ದರು. ಆ ಕಾಲಕ್ಕೆ ಈ ಬರೆಹಗಳು ಅನೇಕ ವಿದ್ವಾಂಸರ ಹುಬ್ಬೇರುವಂತೆ ಮಾಡಿದವು. ಪ್ರೊ. ಡಿ.ಎಲ್.ಎನ್. ಅವರು ತಾವು ಸಂಪಾದಿಸಿದ ಆ ಗ್ರಂಥದ ಮರುಮುದ್ರಣದಲ್ಲಿ ಕಲಬುರ್ಗಿಯವರು ಸೂಚಿಸಿದ ದೋಷಗಳನ್ನು ತಿದ್ದಿಕೊಂಡಿರುವಂತೆ ಕಂಡುಬರುತ್ತದೆ. ೧೯೭೧ರಲ್ಲಿ ಪ್ರೊ. ಡಿ.ಎಲ್.ಎನ್. ನಿಧನರಾದಾಗ ಡಾ. ಕಲಬುರ್ಗಿಯವರು ಅವರ ಬಗ್ಗೆ ಬರೆದ ಲೇಖನವೊಂದರಲ್ಲಿ ಡಿ.ಎಲ್.ಎನ್. ರವರ ದೊಡ್ಡ ಮನಸ್ಸನ್ನು ನೆನೆದುಕೊಂಡಿರುವುದುಂಟು.

ಡಾ. ಕಲಬುರ್ಗಿಯವರು ಪ್ರಸಾರಾಂಗದ ಆಫೀಸಿಗೆ ಬಂದಾಗಲೆಲ್ಲ ಕನ್ನಡಕ್ಕಾಗಿಯೇ ಒಂದು ಪ್ರತ್ಯೇಕ ತ್ರೈಮಾಸಿಕದ ಪ್ರಕಟನೆಯ ಅವಶ್ಯಕತೆಯ ಬಗ್ಗೆ ನನ್ನೊಡನೆ ಚರ್ಚಿಸುತ್ತಿದ್ದರು. ಬಹುಶಃ ಮೈಸೂರು ವಿಶ್ವವಿದ್ಯಾಲಯದ 'ಪ್ರಬುದ್ಧ ಕರ್ನಾಟಕ' ಅವರ ದೃಷ್ಟಿಯಲ್ಲಿದ್ದಿರಬೇಕು. ಮುಂದೆ ಒಂದು ವರ್ಷದಲ್ಲಿಯೇ ಅವರ

ಹಂಬಲ ಈಡೇರುವಂತಾಯಿತು. ೧೯೬೮ರಲ್ಲಿ 'ಕರ್ನಾಟಕ ಭಾರತಿ'ಯ ಮೊದಲ ಸಂಚಿಕೆ ಪ್ರಕಟವಾಯಿತು. ಡಾ. ಕಲಬುರ್ಗಿಯವರು 'ಸಹಾಯಕ ಸಂಪಾದಕರು' ಎಂದಿದ್ದರೂ ಪತ್ರಿಕೆಯ ಸಂಪಾದನೆಯ ಎಲ್ಲ ಕೆಲಸವನ್ನೂ ಅತ್ಯಂತ ದಕ್ಷತೆಯಿಂದ ಅಚ್ಚುಕಟ್ಟಾಗಿ ಅವರೇ ನಿರ್ವಹಿಸುತ್ತಿದ್ದರು. ಯಾವಾಗಲೂ ಹೊಸ ಹೊಸ ಯೋಜನೆಗಳನ್ನು ತಲೆಯಲ್ಲಿ ತುಂಬಿಕೊಂಡಿರುತ್ತಿದ್ದ ಅವರ ನೆರವನ್ನು ಪ್ರಸಾರಾಂಗದ ನಿರ್ದೇಶಕನಾಗಿ ನಾನು ಮರೆಯುವಂತಿಲ್ಲ.

'ಕರ್ನಾಟಕ ಭಾರತಿ'ಯ ಬಗ್ಗೆ ಕಲಬುರ್ಗಿಯವರು ಎಷ್ಟು ಕಾಳಜಿ ವಹಿಸುತ್ತಿದ್ದರು ಎಂದರೆ, ಪತ್ರಿಕೆ ಐದು ವರುಷ ಪೂರೈಸುತ್ತಿದ್ದಾಗ ಅದನ್ನು ಜನಪದ ಸಾಹಿತ್ಯದ ವಿಶೇಷ ಸಂಚಿಕೆಯಾಗಿ ತರಲು ಯೋಚಿಸತೊಡಗಿದರು. ಇದನ್ನೇ ನೆಪ ಮಾಡಿಕೊಂಡು ೧೯೭೩ರಲ್ಲಿ ಕನ್ನಡ ವಿಭಾಗದಿಂದ ಒಂದು ಜನಪದ ಸಾಹಿತ್ಯ ಸಮ್ಮೇಳನವನ್ನೇ ಸಂಘಟಿಸಲು ಅವರು ವಿಭಾಗದ ಮುಖ್ಯಸ್ಥರು ಹಾಗೂ ಸಹೋದ್ಯೋಗಿಗಳ ಮನಸ್ಸು ಒಲಿಸಿದರು. ಶಿವರಾಮ ಕಾರಂತರಿಂದ ಸಮ್ಮೇಳನದ ಉದ್ಘಾಟನೆಯೂ ಆಯಿತು. ಈ ಒಂದು ಒಳ್ಳೆಯ ಉಪಕ್ರಮ ಅಂದಿನಿಂದ ಇಂದಿಗೂ ಮುಂದುವರಿದಿದ್ದು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಪ್ರತಿವರ್ಷ ಜಾನಪದ ಸಾಹಿತ್ಯ ಸಮ್ಮೇಳನ ಏರ್ಪಡುತ್ತ ಬಂದಿದೆ. ಅಲ್ಲಿ ಮಂಡಿತವಾದ ಪ್ರಬಂಧಗಳ ಸಂಗ್ರಹಗಳು 'ಜಾನಪದ ದರ್ಶನ ಮಾಲಿಕೆ'ಯಲ್ಲಿ ಪುಸ್ತಕರೂಪದಲ್ಲಿ ಪ್ರಸಾರಾಂಗ ಪ್ರಕಟಿಸುತ್ತ ಬಂದಿದೆ.

ವಿಶ್ವವಿದ್ಯಾಲಯದ ಬೆಳ್ಳಿಹಬ್ಬದ ಸಂದರ್ಭದಲ್ಲಿ (೧೯೭೫-೭೬) 'ಕರ್ನಾಟಕ ಭಾರತಿ', 'ಕನ್ನಡ ಭಾಷಾಪ್ರಭೇದಗಳಿ'ಗೆ ಸಂಬಂಧಪಟ್ಟಂತೆ ಐದು ನೂರು ಪುಟಗಳ ವಿಶೇಷ ಸಂಚಿಕೆಯಾಗಿ ಹೊರಬಂದಿತು. 'ಈ ಲೋಕದೊಳಗೆ ಮತ್ತನಂತ ಲೋಕಗಳು' ಎಂಬ ಬಸವಣ್ಣನವರ ಮಾತಿನಂತೆ 'ಈ ಕನ್ನಡದೊಳಗೆ ಮತ್ತನಂತ ಕನ್ನಡಗಳು' ಎಂಬುದನ್ನು ಈ ವಿಶೇಷ ಸಂಚಿಕೆಯ ಮೂವತ್ತು ಲೇಖನಗಳೂ ಪ್ರತಿಬಿಂಬಿಸುತ್ತವೆ. ಇದನ್ನು ರೂಪಿಸುವಲ್ಲಿ ಕಲಬುರ್ಗಿಯವರು ಪಟ್ಟ ಪರಿಶ್ರಮ ವರ್ಣನಾತೀತವಾದದ್ದು. ಒಂದು ದೃಷ್ಟಿಯಲ್ಲಿ ಪರಿಶ್ರಮವೇ ಅವರಿಗೆ ಪರಮಾನಂದವಾಗಿತ್ತು. ಈ ಪತ್ರಿಕೆಯ ಯಶಸ್ಸನ್ನು ಕಂಡುಕೊಂಡೇ ವಿಶ್ವವಿದ್ಯಾಲಯ 'ವಿಜ್ಞಾನ ಭಾರತಿ' 'ಮಾನವಿಕ ಭಾರತಿ' ಪತ್ರಿಕೆಗಳನ್ನು (ಇವು ಷಾಣ್ಮಾಸಿಕಗಳು) ಪ್ರಕಟಿಸಲು ಮುಂದೆ ಬಂದಿತು. ಮುಂದೆ ವಿಶ್ವವಿದ್ಯಾಲಯದ ಎಲ್ಲ ವಿಭಾಗಗಳ ವಿದ್ಯಾರ್ಥಿಗಳ ಬರೆಹಗಳಿಗಾಗಿಯೇ 'ವಿದ್ಯಾರ್ಥಿ ಭಾರತಿ'ಯೂ ಪ್ರಕಟವಾಗುವಂತಾಯಿತು. ತಮ್ಮ ಬೋಧನಕ್ರಮದಿಂದಲ್ಲದೆ ಇಂಥ ವಿದ್ಯಾರ್ಥಿಗಳ ಪ್ರೋತ್ಸಾಹಕರ ಚಟುವಟಿಕೆಗಳಿಂದಲೂ ಕಲಬುರ್ಗಿಯವರು ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನವರಾದರು.

'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಸಂಪ್ರಬಂಧವನ್ನೂ ಒಳಗೊಂಡಂತೆ ಡಾ. ಕಲಬುರ್ಗಿಯವರ ಇಪ್ಪತ್ತಕ್ಕೂ ಹೆಚ್ಚು ಕೃತಿಗಳು ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟವಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೊಳಗೊಂಡಂತೆ ಹಲವಾರು ಪ್ರಶಸ್ತಿಗಳನ್ನೂ ಪಡೆದಿವೆ. ತಮ್ಮ ಪುಸ್ತಕಗಳಲ್ಲಿ ಮುದ್ರಣದೋಷಗಳುಳಿಯದಂತೆ ಅವರು ಪ್ರೂಫು ನೋಡುತ್ತಿದ್ದ ರೀತಿ, ಯಾವ್ಯಾವ ಚಿತ್ರಗಳು ಎಲ್ಲಿ ಬರಬೇಕು, ಮುಖಪುಟ ಹೇಗಿರಬೇಕು - ಇತ್ಯಾದಿಗಳ ಬಗ್ಗೆ ಅವರು ವಹಿಸುತ್ತಿದ್ದ ಕಾಳಜಿ ಅಪೂರ್ವವಾದದ್ದು. ಪ್ರಾಧ್ಯಾಪಕರಾಗಿ, ವಿದ್ವಾಂಸರಾಗಿ, ಲೇಖಕರಾಗಿ ಪ್ರಸಾರಾಂಗದೊಡನೆ ಅವರಷ್ಟು ಸಹಕರಿಸಿದವರು ಬಹಳ ವಿರಳವೆಂದೇ ಹೇಳಬೇಕು.

ವಿಶ್ವವಿದ್ಯಾಲಯದ ಬಸವೇಶ್ವರ ಪೀಠಕ್ಕೆ ಮುಖ್ಯಸ್ಥರ ಆಯ್ಕೆಯ ಸಮಿತಿಯಲ್ಲಿ ಡಾ. ಜಿ.ಎಸ್. ಶಿವರುದ್ರಪ್ಪನವರೂ ಇದ್ದರು. ಅವರು ವಿಶೇಷತಃ ನಮ್ಮ ಮನೆಯಲ್ಲಿಯೇ ಇಂಥ ಸಂದರ್ಭಗಳಲ್ಲಿ ಉಳಿದುಕೊಳ್ಳುತ್ತಿದ್ದರು. ಡಾ. ಕಲಬುರ್ಗಿ ಯವರಿಗೂ ಇದು ಗೊತ್ತಿತ್ತು. ಆದರೂ ಅವರು ಪೂರ್ವಭಾವಿಯಾಗಿ ಶಿವರುದ್ರಪ್ಪನವರಿಗೆ ಏನಾದರೂ ಹೇಳಲು ಒಮ್ಮೆಯೂ ನಮ್ಮ ಮನೆಯ ಕಡೆಗೆ ಹಾಯುತ್ತಿರಲಿಲ್ಲ. ಮೀಟಿಂಗ್ ಮುಗಿದ ಮೇಲೆ ಶಿವರುದ್ರಪ್ಪನವರೇ ಸಾಯಂಕಾಲ ಕಲಬುರ್ಗಿಯವರನ್ನು ನಮ್ಮ ಮನೆಗೆ ಕರೆಯಿಸಿಕೊಂಡು ಅವರನ್ನೇ ಆಯ್ಕೆ ಮಾಡಿದ್ದನ್ನು ತಿಳಿಸಿದ್ದುಂಟು.

ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ ಬೇಂದ್ರೆ ಮತ್ತು ಕುವೆಂಪು ಅವರ ಸಮಗ್ರ ಕಾವ್ಯದ ಸಂಪುಟಗಳನ್ನು ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿಸಲು ಯೋಚಿಸಿದ್ದರು. ಡಾ. ವಾಮನ ಬೇಂದ್ರೆ ಕೊನೆಗೂ ಅವರಿಗೆ ಅನುಮತಿಯನ್ನು ಕೊಡಲಿಲ್ಲ. ಹೀಗಾಗಿ ಕೇವಲ ಕುವೆಂಪು ಅವರ ಸಮಗ್ರ ಕಾವ್ಯವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಲಾಯಿತು. ಇದರಿಂದ ತಮಗಾದ ನಿರಾಶೆಯನ್ನು ಆಗಾಗ ಕಲಬುರ್ಗಿಯವರು ನನ್ನೆದುರು ಹೇಳುತ್ತಿದ್ದರು. ಧಾರವಾಡದ ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ವಿಜಯಪುರದ ಡಾ. ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ, ಬೆಳಗಾವಿಯ ಬಸವರಾಜ ಕಟ್ಟೀಮನಿ ಟ್ರಸ್ಟ್ - ಇವೇ ಮೊದಲಾದ ಸಂಸ್ಥೆಗಳಿಗೆ ಭದ್ರವಾದ ಬುನಾದಿ ಹಾಕುವಲ್ಲಿ ಡಾ. ಕಲಬುರ್ಗಿಯವರು ಪಟ್ಟ ಪರಿಶ್ರಮವನ್ನು ಎಲ್ಲರೂ ಬಲ್ಲರು. ಅವು ಒಂದೊಂದರದೂ ಒಂದು ಇತಿಹಾಸವೇ. ಅಂಥ ಇತಿಹಾಸ ನಿರ್ಮಾಣ ಸಾಮರ್ಥ್ಯ ಅವರದಾಗಿತ್ತು.

ಸಾಮಾನ್ಯವಾಗಿ ಕರ್ನಾಟಕದ ಒಂದಲ್ಲ ಒಂದು ಜಿಲ್ಲೆಯಲ್ಲಿ ಸಾಹಿತಿಗಳ ಮತ್ತು ಸಂಗೀತಕಾರರ ಪ್ರತಿಷ್ಠಾನಗಳಿವೆ. ಆದರೆ ವಿಜಯಪುರ ಜಿಲ್ಲೆಯಲ್ಲಿ ಅಂಥ ಯಾವ

ಪ್ರತಿಷ್ಠಾನವೂ ಇಲ್ಲವೆಂಬ ಕೊರಗು ಡಾ. ಕಲಬುರ್ಗಿಯವರಲ್ಲಿತ್ತು. ಆದುದರಿಂದ ಅಂದಿನ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಡಿ.ವಿ. ಸದಾನಂದಗೌಡರಿಗೆ ನಾನೊಂದು ಪತ್ರವನ್ನು ಬರೆಯಬೇಕೆಂದು ಬಯಸಿದರು. ಅವರ ವಿಚಾರ ಯೋಗ್ಯವೆನಿಸಿದ್ದರಿಂದ ನಾನು ಮುಖ್ಯಮಂತ್ರಿಗಳಿಗೆ ೨೬-೬-೨೦೧೨ರಂದು ಪತ್ರ ಬರೆದೆ. ಅದರ ಒಂದು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಗೋವಿಂದ ಕಾರಜೋಳ ಅವರಿಗೂ ಕಳಿಸಿದೆ. ಆಮೇಲೆ ಕೆಲದಿನಗಳ ನಂತರ 'ಹಲಸಂಗಿ ಗೆಳೆಯರ ಪ್ರತಿಷ್ಠಾನ' ವಿಜಯಪುರದಲ್ಲಿ ಸ್ಥಾಪನೆಯಾಯಿತು. ಹೀಗೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಡಾ. ಕಲಬುರ್ಗಿಯವರು ಸದಾ ಚಿಂತಿಸುತ್ತಿದ್ದರು.

'ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು' ಎಂದು ಕಡೆಂಗೋಡ್ಲು ಶಂಕರಭಟ್ಟರ ಕವಿತೆಯೊಂದು ಹೇಳುತ್ತದೆ. ಕಲಬುರ್ಗಿಯವರು ತಮ್ಮ ಸಾಧನೆಯ 'ಮಹಾಮಾರ್ಗ'ದಲ್ಲಿ ಅನೇಕ ಅಗ್ನಿಕುಂಡಗಳನ್ನೇ ದಾಟಬೇಕಾಯಿತು. ಇಷ್ಟಿದ್ದರೂ ಅವರ ಜೀವನೋತ್ಸವ, ಕಾಯಕಶ್ರದ್ಧೆಗಳಿಗೆ ಎಂದೂ ಕುಂದುಂಟಾಗಲಿಲ್ಲ. ೧೯೯೮ರಲ್ಲಿ ಡಾ. ಕಲಬುರ್ಗಿಯವರ 'ಅರುವತ್ತರ ಅಭಿನಂದನ' ಸಮಾರಂಭ ಧಾರವಾಡದ ಪಂ. ಮಲ್ಲಿಕಾರ್ಜುನ ಮನಸೂರ ಕಲಾಭವನದಲ್ಲಿ ಅರ್ಥಪೂರ್ಣವಾಗಿ ಜರುಗಿತು. ಆಗ ಅವರು ತಮ್ಮ ಭಾಷಣದ ಕೊನೆಯಲ್ಲಿ ಹೇಳಿದ ಒಂದು ಮಾತು ಇನ್ನೂ ನನ್ನ ನೆನಪಿನಲ್ಲಿದೆ: "ವ್ಯಕ್ತಿಕೇಂದ್ರಿತ ಬದುಕಿಗಿಂತ ಸಮಾಜಕೇಂದ್ರಿತ ಬದುಕು ಹೆಚ್ಚು ದುಃಖಮಯವಾದುದು.---- ನನಗೆ ಈ ದುಃಖದಲ್ಲಿಯೇ ಸುಖವಿದೆ, ಈ ದುಃಖದ ಆಚೆ ಇನ್ನೂ ದೊಡ್ಡ ಸುಖವಿದೆ ಎಂದು ನನಗೆ ತಿಳಿದಿದೆ. ಆದ್ದರಿಂದ ನಾನು ಸುದೈವಿಯೆಂದೇ ಹೇಳಬೇಕು." ಎಂಥ ಸುದೈವವೋ ಯಾರು ಬಲ್ಲರು? ಅಂಥ ವ್ಯಕ್ತಿಯನ್ನು ಈ ರೀತಿ ಕಳೆದುಕೊಂಡ ನಾವೇ ದುರ್ದೈವಿಗಳು, ಅಷ್ಟೆ.

ಈಚೆಗೆ, ಡಾ. ಎಂ.ಡಿ. ಒಕ್ಕುಂದ ಅವರು 'ಸಾಪ್ತಾಹಿಕ ಭಾರತಿ' (೧೦-೩-೨೦೧೯)ಯ ಒಂದು ಸಂದರ್ಶನದಲ್ಲಿ ಕೊನೆಯಲ್ಲಿ ಒಂದು ಪ್ರಶ್ನೆ ಕೇಳಿದರು : "ಡಾ. ಎಂ.ಎಂ. ಕಲಬುರ್ಗಿಯವರಿಲ್ಲದ ಕಲ್ಯಾಣನಗರ ಹೇಗಿದೆ? ಅವರ ಹತ್ಯೆಯನ್ನು ನಿಮ್ಮ ಕವಿ ಮನಸ್ಸು ಹೇಗೆ ಅರಗಿಸಿಕೊಂಡಿತು" ಎಂದು. ಅದಕ್ಕೆ ನಾನು ಉತ್ತರಿಸಿದೆ: "ಡಾ. ಎಂ.ಎಂ. ಕಲಬುರ್ಗಿಯವರು ನಮ್ಮ ನೆರೆಮನೆಯವರಷ್ಟೇ ಅಲ್ಲ, ಹೃದಯಕ್ಕೆ ಇನ್ನೂ ಹತ್ತಿರದವರು. ಕಲ್ಯಾಣನಗರದಲ್ಲಿಯೇ ಅವರು ಅತ್ಯಂತ ಕ್ರಿಯಾಶೀಲ ವ್ಯಕ್ತಿ. ಅವರು ನಡೆದರೆ ಸಾದಾ ವ್ಯಕ್ತಿಯಂತೆ ಹೋಗುತ್ತಲೇ ಇರಲಿಲ್ಲ. ಸಮೀಪದ ಟಪಾಲು ಪೆಟ್ಟಿಗೆಗೆ ಪತ್ರ ಹಾಕಲು ಹೋದಾಗಲೂ ವೇಗದಿಂದಲೇ ಹೋಗುತ್ತಿದ್ದರು. ಅವರ ಶ್ರೀಮತಿಯವರು ಹೇಳುತ್ತಿದ್ದರು : ಊಟಕ್ಕೆ ನೀಡುವಾಗ ಒಂದು ಪಲ್ಲೆ ನೀಡಿ ತಿರುಗಿ

ಬರುವಷ್ಟರಲ್ಲಿಯೇ ಆ ಪಲ್ಲೆಯನ್ನೇ ಮುಗಿಸುತ್ತಿದ್ದರು. ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿರುವಾಗ, ನಮ್ಮ 'ಪ್ರಸಾರಾಂಗ'ಕ್ಕೆ ಬಂದರೆ, ಯಾವಾಗಲೂ ತಲೆಯಲ್ಲಿ ಹೊಸ ವಿಚಾರಗಳನ್ನು ತುಂಬಿಕೊಂಡೇ ಬರುತ್ತಿದ್ದರು. ಕ.ವಿ.ವಿ. ಯಿಂದ 'ಕರ್ನಾಟಕ ಭಾರತಿ' ಹೊರಟಾಗ ಅದರ ಉಸ್ತುವಾರಿಯನ್ನೆಲ್ಲ ಅವರೇ ನೋಡಿಕೊಳ್ಳುತ್ತಿದ್ದರು."

ತಮ್ಮ ಸಂಶೋಧನೆಯ ಹಾದಿಯಲ್ಲಿ ಯಾವುದೇ ಒಂದು ಹೊಸ ವಿಚಾರ ಹೊಳೆದರೆ, ಕೂಡಲೆ ನಮ್ಮ ಮನೆಗೆ ಬಂದು ಅದರ ಬಗ್ಗೆ ಹೇಳುತ್ತಿದ್ದರು. ವಚನದಲ್ಲಿ ಯಾವುದೋ ಒಂದು ಶಬ್ದ ತಪ್ಪಾಗಿದ್ದರೆ, ಆ ಬಗ್ಗೆ ಚಿಂತಿಸಿ, ಸರಿಯಾದ ಶಬ್ದ ಯಾವುದು ಎಂಬುದನ್ನು ಸೂಚಿಸುತ್ತಿದ್ದರು. ಈ ನಡುವೆ ಬೆಂಗಳೂರಿನಲ್ಲಿ ಮೂಢನಂಬಿಕೆ ನಿಷೇಧ ಕುರಿತು ಉಪನ್ಯಾಸ ಮಾಡುವಾಗ, ಮಾಧ್ಯಮಗಳಲ್ಲಿ ಅಪಪ್ರಚಾರವಾಗಿ, ಅವರ ಮನೆಯ ಮೇಲೆ ಯಾರೋ ಕಲ್ಲೆಸೆದಾಗ ಸರಕಾರ ಅವರ ಮನೆಗೆ ಪೋಲೀಸ್ ರಕ್ಷಣೆ ಒದಗಿಸಿದ್ದರು. ಕೆಲ ದಿನಗಳ ನಂತರ ನಮ್ಮ ಮನೆಗೆ ಪೋಲೀಸ್ ಸಂರಕ್ಷಣೆಯ ಆವಶ್ಯಕತೆಯಿಲ್ಲ ಎಂದು ಹೇಳಿ ಅವರನ್ನು ಹಿಂದಿರುಗಿಸಿದ್ದರು. ಅದಕ್ಕೆ ಕೆಲವು ದಿನಗಳ ಹಿಂದೆಯೇ (೨೮-೧-೨೦೧೪)ರಂದು ಧಾರವಾಡದ ಬಸವರಾಜ ಕಟ್ಟೀಮನಿ ವಿಚಾರ ವೇದಿಕೆ, ಬೆಳಗಾವಿಯಲ್ಲಿ ಅವರು ಅಧ್ಯಕ್ಷರಾಗಿದ್ದ 'ಕಟ್ಟೀಮನಿ ಪ್ರತಿಷ್ಠಾನ' ಸಂಯುಕ್ತ ಆಶ್ರಯದಲ್ಲಿ 'ಮೂಢ ನಂಬಿಕೆಗಳನ್ನು ವಿರೋಧಿಸಿ ಸರಕಾರಕ್ಕೆ ಸಲ್ಲಿಸಿದ ವರದಿ' ಕುರಿತು ಸಂವಾದವನ್ನು ಏರ್ಪಡಿಸಲಾಗಿತ್ತು. ಬೆಂಗಳೂರಿನ ಡಾ. ಜಿ. ರಾಮಕೃಷ್ಣ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಬೆಂಗಳೂರು ಸಭೆಯಲ್ಲಿ ಡಾ. ಕಲಬುರ್ಗಿಯವರ ಭಾಷಣವನ್ನು ಮಾಧ್ಯಮದವರು ಹೀಗೆ ತಿರುಚಿದ್ದಾರೆ ಎನ್ನುವುದನ್ನು ಡಾ. ಜಿ. ರಾಮಕೃಷ್ಣರು ಸ್ಪಷ್ಟ ಪಡಿಸಿದರು. ಡಾ. ಕಲಬುರ್ಗಿಯವರ ಒಡೆದು ಕಾಣುವ ಒಂದು ಗುಣವೆಂದರೆ ಅವರು ಪಾಲಿಸುತ್ತಿದ್ದ ಅಭಿವ್ಯಕ್ತಿ ಸ್ವಾತಂತ್ರ್ಯ. ತಮ್ಮ ಸಂಶೋಧನೆಯಿಂದ ಯಾವುದನ್ನು ಸತ್ಯ ಎಂದು ಕಂಡುಕೊಂಡಿರುತ್ತಾರೋ ಅದನ್ನು ಭಾಷಣದಲ್ಲಾಗಲಿ ಬರಹದಲ್ಲಾಗಲಿ ಎತ್ತಿ ಹೇಳುವುದು. ವಚನ ಸಾಹಿತ್ಯದ ಪ್ರಭಾವವೇ ಅದು: 'ಲೋಕವಿರೋಧಿ ಶರಣನಾರಿಗೂ ಅಂಜುವವನಲ್ಲ' ಎಂಬ ಧೋರಣೆ ಅವರದು. ಡಾ. ಕಲಬುರ್ಗಿಯವರ ಹತ್ಯೆಯಿಂದ ನನ್ನ ಮನಸ್ಸಿಗಂತೂ ದೊಡ್ಡದೊಂದು ಶೂನ್ಯ ಆವರಿಸಿಕೊಂಡಂತಾಯಿತು. ದೇಶ ವಿದೇಶಗಳ ಪತ್ರಿಕೆಗಳಲ್ಲಿ ಇದು ಸುದ್ದಿಯಾಗಿ ವಿಚಾರವಾದಿಗಳಿಂದ ಪ್ರತಿಭಟನೆಯೂ ಪ್ರಕಟವಾಯಿತು. ನಿಷ್ಠುರ ವಿಚಾರವಾದಿಗಳನ್ನು ಹೀಗೆ ಹತ್ಯೆ ಮಾಡುವುದರಿಂದ ನಮ್ಮ ದೇಶದ ಪ್ರಜಾಪ್ರಭುತ್ವಕ್ಕೆ ಬೆಲೆಯೇ ಇಲ್ಲದಂತಾಗಿದೆ.

ಆಪ್ತ ಒಡನಾಟ : ೧೯-೨೦

ಧಾರವಾಡಕ್ಕೆ ಭೂಷಣಪ್ರಾಯರಾದವರು

ಶ್ರೀ ಗುರುಸಿದ್ಧಯ್ಯ ಬಸಯ್ಯ ಹೊಂಬಳ (ಜಿ.ಬಿ. ಹೊಂಬಳ ಅವರು ಬಹಳ ವರ್ಷಗಳಿಂದಲೂ ನನ್ನ ಆತ್ಮೀಯ ಸ್ನೇಹಿತರು. ಅವರ ಅಡ್ಡ ಹೆಸರು ಮಾತ್ರ ಹೊಂಬಳ. ನಾನು ಹುಟ್ಟಿದ ಊರಿನ ಹೆಸರೂ ಹೊಂಬಳ (ಗದಗಿನ ಹತ್ತಿರ.) ಅವರು ಹುಬ್ಬಳ್ಳಿ ತಾಲೂಕಿನ ಇಂಗಳ ಹಳ್ಳಿಯವರು. ಎಲ್ಲದಕ್ಕೂ ಮುಖ್ಯವಾಗಿ ಪುಸ್ತಕಪ್ರೀತಿ, ಸಾಹಿತ್ಯಾಸಕ್ತಿಯೇ ನಮ್ಮನ್ನು ಪರಸ್ಪರ ಸ್ನೇಹಿತರನ್ನಾಗಿ ಮಾಡಿದ್ದು.

೧೯೭೬ರಿಂದಲೂ ಕರ್ನಾಟಕ ಲೋಕಸೇವಾ ಆಯೋಗದಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಮುಖ್ಯ ಜಿಲ್ಲಾ ಗ್ರಂಥಾಲಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತ ಕೋಲಾರ, ಚಿಕ್ಕಮಗಳೂರು, ಬೆಳಗಾವಿ, ಧಾರವಾಡ, ಮಂಗಳೂರು, ಚಿತ್ರದುರ್ಗ, ಗದಗ - ಹೀಗೆ ಎಲ್ಲ ಜಿಲ್ಲೆಗಳಲ್ಲಿಯೂ ಒಳ್ಳೆಯ ಹೆಸರನ್ನು ಗಳಿಸಿದವರು. ಆಧುನಿಕ ಕವಿಗಳಲ್ಲಿ ಖ್ಯಾತರಾದ ಶ್ರೀ ಬಿ.ಆರ್. ಲಕ್ಷ್ಮಣರಾವ್ ಅವರು ಕೋಲಾರ ಜಿಲ್ಲೆಯ ಚಿಂತಾಮಣಿಯವರು. ಚಿಂತಾಮಣಿ ಕರ್ನಾಟಕ ಸಂಘದ ಒಂದು ಕಾರ್ಯಕ್ರಮದಲ್ಲಿ ನಾನೂ ಒಮ್ಮೆ ಭಾಗವಹಿಸಿ ಸಂತಸಪಟ್ಟವನು. ಹೊಂಬಳ ಅವರು ಕೋಲಾರ ಜಿಲ್ಲಾ ಮುಖ್ಯ ಗ್ರಂಥಾಲಯಾಧಿಕಾರಿಯಾಗಿ ಐದು ವರ್ಷ ಕೆಲಸ ಮಾಡುವಾಗಿನ ಸ್ನೇಹ ವಿಶ್ವಾಸಗಳನ್ನು ಬಿ.ಆರ್. ಲಕ್ಷ್ಮಣರಾವ್ ಅವರು ಇಂದಿಗೂ ಕೃತಜ್ಞತೆಯಿಂದ ನೆನೆಯುತ್ತಾರೆ.

ಧಾರವಾಡ ಜಿಲ್ಲಾ ಮುಖ್ಯ ಗ್ರಂಥಾಲಯಾಧಿಕಾರಿಯಾಗಿ ಒಂದು ವರ್ಷ ಕೆಲಸ ಮಾಡಿ ಪುನಃ ೧೯೯೩ ರಿಂದ ೧೯೯೮ರ ವರೆಗೆ ಮತ್ತೆ ಧಾರವಾಡಕ್ಕೆ ಬಂದಾಗಲೇ ನನಗೆ ಹೊಂಬಳ ಅವರ ಪರಿಚಯವಾದದ್ದು. ನನ್ನನ್ನೂ ಗ್ರಂಥಾಲಯ ಪ್ರಾಧಿಕಾರದ ಸದಸ್ಯನಾಗಿ ಅವರು ಮಾಡಿದಾಗ, ಸದ್ದುಗದ್ದಲವಿಲ್ಲದೆ ಮಾಡುತ್ತಿದ್ದ ಅವರ ಕಾರ್ಯವೈಖರಿಯನ್ನು ಕಂಡಿದ್ದೇನೆ. ಅವರು ಹೋದ ಹೋದಲ್ಲಿ ಗ್ರಂಥಾಲಯಗಳಿಗೆ ಕಟ್ಟಡಗಳಾದವು. ಜನತೆಯ ಪುಸ್ತಕ ಪ್ರೀತಿ, ಓದುವ ಅಭಿರುಚಿ ಬೆಳೆಸಿದರು. ಅವರ ಷಷ್ಟ್ಯಬ್ದಿ ಸಮಾರಂಭ ಅವರ ಜನಪ್ರಿಯತೆಗೆ ಸಾಕ್ಷಿ. ೩೦-೧೧-೨೦೦೩ರಲ್ಲಿ ಧಾರವಾಡದಲ್ಲಿಯೇ ವಯೋ ನಿವೃತ್ತಿಯನ್ನು ಪಡೆದದ್ದು ಅತ್ಯಂತ ಸಹಜ ಮತ್ತು ಸಾರ್ಥಕವಾಗಿತ್ತು.

ಕೆಲಸಕ್ಕೆ ನಿವೃತ್ತಿಯಾದರೂ ಅವರ ಗ್ರಂಥಾಲಯ ಪ್ರವೃತ್ತಿ ನಿಮಿತ್ತದ

ಚಟುವಟಿಕೆಗಳಿಗೆ ಎಂದಿಗೂ ಚ್ಯುತಿ ಒದಗಲಿಲ್ಲ. ಅವರಿಗೆ ಅತ್ಯಂತ ಪ್ರಿಯವಾದದ್ದು ಮಕ್ಕಳ ಸಾಹಿತ್ಯ ಮತ್ತು ಮಕ್ಕಳ ಗ್ರಂಥಾಲಯ. ಅಂತೆಯೇ ಹೊಂಬಳ ಅವರು ಮಕ್ಕಳ ಜಿಲ್ಲಾ ಸಾಹಿತ್ಯವೇದಿಕೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆ ಅರುವತ್ತು ತುಂಬಿದ ಸಂದರ್ಭದಿಂದ ಮಕ್ಕಳ ಸಾಹಿತ್ಯ ಸೇವಾನಿರತ ಸಾಹಿತಿಗಳಿಗೆ ೨೦೦೪ ರಿಂದ ಅವರ ಜನ್ಮದಿನ ನವ್ಹಂಬರ್ ೧೦ ರಂದು "ಶ್ರೀ ಜಿ.ಬಿ. ಹೊಂಬಳ ಮಕ್ಕಳ ಸಾಹಿತ್ಯ ರಾಜ್ಯಪ್ರಶಸ್ತಿ" ನೀಡುತ್ತ ಬಂದಿದ್ದು (ಈ ಪ್ರಶಸ್ತಿಯು ಮೊದಲು ಹತ್ತು ಸಾವಿರ ರೂ. ನಗದು ಇದ್ದದ್ದು ಈಗ ೧೫ ಸಾವಿರವಾಗಿದ್ದು ಪ್ರಶಸ್ತಿ ಪತ್ರ ಹಾಗೂ ಸ್ಮರಣ ಫಲಗಳನ್ನು ಒಳಗೊಂಡಿದೆ) ಇದುವರೆಗೆ ೧೬ ಜನ ಹಿರಿ ಕಿರಿಯ ಮಕ್ಕಳ ಸಾಹಿತ್ಯ ಲೇಖಕರು ಪುರಸ್ಕೃತರಾಗಿದ್ದಾರೆ. ಶ್ರೀ ಈಶ್ವರ ಕಮ್ಮಾರ ಅವರ 'ಲೆಪ್ಪ ಮಾಡಿದ ತಪಸ್ಸು' ಮಕ್ಕಳ ಕಾದಂಬರಿಗೆ ೨೦೦೬ರಲ್ಲಿ ಈ ಪ್ರಶಸ್ತಿ ದೊರಕಿದ್ದು. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಈಗ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಮಾಡುತ್ತಿದ್ದಾರೆ. 'ಧಾರವಾಡ ಥೇಟರ್ಸ್' ಮಕ್ಕಳ ನಾಟಕ ಸ್ಪರ್ಧೆಯ ಸಂಘಟಕರೂ, ಕೋಶಾಧ್ಯಕ್ಷರೂ ಆಗಿ ಅವರು ೨೦೦೯ರವರೆಗೂ ಕಾರ್ಯನಿರ್ವಹಿಸಿದ್ದನ್ನು ಇಲ್ಲಿ ನೆನೆಯಬಹುದು. ತಮ್ಮ ತಾಯಿಯ ಬಗ್ಗೆ ಎಂಥ ಅಂತಃಕರಣವೆಂದರೆ ಅವರು ತೀರಿಕೊಂಡ ನಂತರ ತಮ್ಮ ತಾಯಿಯವರ ಹೆಸರಿನಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದತ್ತಿಯನ್ನಿರಿಸಿ ಪ್ರತಿವರುಷ ಗ್ರಂಥಾಲಯದಲ್ಲಿ ಸಾರ್ಥಕ ಸೇವೆಗೈದವರನ್ನು ಇವರು ಗೌರವಿಸುತ್ತ ಬಂದಿದ್ದಾರೆ.

ಹೊಂಬಳ ಅವರು ನಿವೃತ್ತಿಯ ನಂತರ ಮಾಡಿದ ಮಹತ್ವದ ಕೆಲಸವೆಂದರೆ, ೨೦೦೮ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವುಗಳ ಸಂಯುಕ್ತ ಆಶ್ರಯದಲ್ಲಿ, ರಾಜ್ಯಮಟ್ಟದ ಗ್ರಂಥಾಲಯ ಸಮ್ಮೇಳನದ ಸಂಘಟನಾ ಕಾರ್ಯದರ್ಶಿಯಾಗಿ ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದ ಶ್ರೇಯಸ್ಸು ಅವರಿಗಿದೆ. ಅದೂ ಅಲ್ಲದೆ, ಸಾರ್ವಜನಿಕ ಗ್ರಂಥಾಲಯ ಇಲಾಖೆಯವರು ಧಾರವಾಡದಲ್ಲಿ ನಡೆಸುತ್ತಿರುವ "ಗ್ರಂಥಾಲಯ ವಿಜ್ಞಾನ ತರಬೇತಿ" ಶಾಲೆಗೆ ಗೌರವ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶ್ರೀ ಜಿ.ಬಿ. ಹೊಂಬಳ ಅವರ ಜೀವಮಾನ ಸೇವೆಯನ್ನು ನೆನೆದು ೨೦೦೮ರಲ್ಲಿ ಗ್ರಂಥಪಾಲಕರ ದಿನಾಚರಣೆ ಸಂದರ್ಭದಲ್ಲಿ 'ಉತ್ತಮ ಗ್ರಂಥಪಾಲಕ'ರೆಂದು ಕರ್ನಾಟಕ ಸರಕಾರದ ಪ್ರಶಸ್ತಿಗೂ ಅವರು ಭಾಜನರಾಗಿದ್ದಾರೆ.

ನವದೆಹಲಿಯ ಅಖಿಲಭಾರತ ಗ್ರಂಥಾಲಯ ಸಂಘ, ಬೆಂಗಳೂರು ಕರ್ನಾಟಕ ಗ್ರಂಥಾಲಯ ಸಂಘ, ಅಖಿಲ ಭಾರತ ವೀರಶೈವ ಮಹಾಸಭೆ, ಕರ್ನಾಟಕ ವಿದ್ಯಾವರ್ಧಕ

ಸಂಘ, ಬೆಂಗಳೂರಿನ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು - ಮುಂತಾದ ಸಂಘಸಂಸ್ಥೆಗಳ ಆಜೀವ ಸದಸ್ಯತ್ವವನ್ನು ಹೊಂದಿರುವುದು ಅವರ ವಿವಿಧ ಆಸಕ್ತಿಗಳ ದ್ಯೋತಕವಾಗಿದೆ. ಅಖಿಲ ಭಾರತ ಗ್ರಂಥಾಲಯ ಸಂಘವು ದೆಹಲಿ, ಜಯಪುರ, ಚಂಡೀಗಡ, ಅಹಮ್ಮದಾಬಾದ, ಭುವನೇಶ್ವರ, ಬೆಂಗಳೂರು ಮುಂತಾದೆಡೆ ಏರ್ಪಡಿಸಿದ ಸೆಮಿನಾರಗಳಲ್ಲಿ ಭಾಗವಹಿಸಿದ್ದೂ ಅಲ್ಲದೆ, ಚೆನ್ನೈನಲ್ಲಿ ನಡೆದ ಸಾರ್ವಜನಿಕ ಗ್ರಂಥಾಲಯಗಳ ಸಮ್ಮೇಳನದಲ್ಲಿ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಹಣಕಾಸು ವ್ಯವಸ್ಥೆಯ ಬಗ್ಗೆ ಪ್ರಬಂಧ ಮಂಡಿಸಿ ಆ ಬಗ್ಗೆ ಕರ್ನಾಟಕ ಸರಕಾರದ ಲಕ್ಷ್ಯವನ್ನು ಸೆಳೆದದ್ದುಂಟು. ಇಂದಿಗೂ ಧಾರವಾಡದ ಸಾಹಿತ್ಯಿಕ, ಸಾಂಸ್ಕೃತಿಕ ಸಮಾರಂಭಗಳಲ್ಲಿ ಶ್ರೀ ಜಿ.ಬಿ. ಹೊಂಬಳ ಅವರನ್ನು ಅವರ ಸ್ನೇಹಿತರಾದ ಬಸಯ್ಯ ಶಿರೋಳ ಹಾಗೂ ನಿಂಗಣ್ಣ ಕುಂಟಿಯವರೊಂದಿಗೆ ತಟ್ಟನೆ ಗುರುತಿಸಬಹುದು.

ಈಗ ಐದು ವರ್ಷಗಳ ಕೆಳಗೆ (೧೨-೮-೨೦೧೪) ಅವರು ಬರೆದ ಆತ್ಮಕಥೆ 'ತೆರೆದ ಪುಸ್ತಕ'ವನ್ನು ಧಾರವಾಡದಲ್ಲಿ ನನ್ನಿಂದ ಬಿಡುಗಡೆ ಮಾಡಿಸಿದರು. ಅದರಲ್ಲಿ ಹೊಂಬಳ ಅವರು ಹೇಳಿಕೊಂಡಿದ್ದಾರೆ: "ನಾನು ಕವಿಯೂ ಅಲ್ಲ, ಸಾಹಿತಿಯೂ ಅಲ್ಲ, ಬರಹಗಾರನೂ ಅಲ್ಲ. ಒಬ್ಬ ಸಾಹಿತ್ಯಾರಾಧಕ, ಜಿಲ್ಲಾ ಗ್ರಂಥಾಲಯದ ಅಧಿಕಾರಿ, ಪುಸ್ತಕಪ್ರೇಮಿ" ಎಂದು. ತಮ್ಮ ಅನುಭವಗಳನ್ನು ಬರೆಯಬೇಕೆಂಬ ಹಂಬಲ ಅವರಲ್ಲಿ ತುಡಿಯುತ್ತಿದ್ದುದರಿಂದ ತಮಗೆ ಹೊಳೆದಂತೆ ಬರೆದಿದ್ದಾರೆ. "ನೆನಪಿನ ಬುತ್ತಿಯಿಂದ ನಡೆದ ಘಟನೆಗಳನ್ನು ಬಿಚ್ಚಿ ಇಟ್ಟಿದ್ದೇನೆ" ಎಂದು ಸರಿಯಾಗಿಯೇ ಹೇಳಿದ್ದಾರೆ. 'ಬುತ್ತಿ' ಯಾವಾಗಲೂ ರುಚಿಯಾಗಿಯೇ ಇರುತ್ತದೆ. ಕಡೆಂಗೋಡ್ಲು ಶಂಕರಭಟ್ಟರ ಕವಿತೆಯ ಸಾಲೊಂದು ಈ ಸಂದರ್ಭದಲ್ಲಿ ನೆನಪಾಗುತ್ತದೆ: "ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು". ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಎಚ್. ನರಸಿಂಹಯ್ಯ ನವರ ಆತ್ಮಕಥೆಯ ಹೆಸರು 'ತೆರೆದ ಮನ'. ಹೊಂಬಳ ಅವರ ಪುಸ್ತಕದ ಹೆಸರು 'ತೆರೆದ ಪುಸ್ತಕ' ಪ್ರಸ್ತುತ ಶೀರ್ಷಿಕೆ ಎರಡು-ಮೂರು ಅರ್ಥ ಕೊಡಬಲ್ಲದು: ೧)ಯಾರು ಬೇಕಾದರೂ ಓದಬಹುದು ೨) ಅನುಭವಗಳನ್ನು ಮುಚ್ಚು-ಮರೆ ಮಾಡಿಲ್ಲ ೩) ಗ್ರಂಥಾಲಯ ಅಧಿಕಾರಿಯ ತಮ್ಮದೇ ಬದುಕು. ಆತ್ಮಕಥೆ ಬರೆಯುವದು ಕೇವಲ ಸಾಹಿತಿಗಳ ಸ್ವತ್ತಲ್ಲ. ಯಾವುದೇ ಕ್ಷೇತ್ರದ ಕ್ರಿಯಾಶಾಲಿಗಳೂ ಬರೆಯಬಹುದು.

'ತೆರೆದ ಪುಸ್ತಕ'ದಲ್ಲಿ ತಮ್ಮ ಕಷ್ಟ-ಸುಖಗಳನ್ನೆಲ್ಲ ತೋಡಿಕೊಂಡು ಹಗುರಾಗಿದ್ದಾರೆ. ಬಹಳ ಕಷ್ಟಪಟ್ಟು ಶಿಕ್ಷಣ ಪಡೆದುದು, ಗ್ರಾಮೀಣ ಸಂಸ್ಕೃತಿಯನ್ನು ಮೈಗೂಡಿಸಿಕೊಂಡುದು - ಹೀಗೆ. ನಾಟಕ ಆಡಿದರು. ಕಬಡ್ಡಿ ತಂಡಕ್ಕೆ ಕ್ಯಾಪ್ಟನ್ ಆಗಿದ್ದರು. ಹತ್ತಿಕಟ್ಟೆಗೆ ಆರಿಸಿದರು. ಹೊಲಕ್ಕೆ ಗೊಬ್ಬರ ಹೇರಿದರು. ಕೋಲಾಟ

ಆಡಿದರು. ನೌಕರಿಗಾಗಿ ಹುಡುಕಾಟ ನಡೆಸಿದರು. ನೌಕರಿ ಸಿಕ್ಕಮೇಲೂ ವರ್ಗಾವಣೆಯಿಂದ ಊರೂರು ತಿರುಗಿದರು. ಹೋದ ಹೋದಲ್ಲಿ ಜನೋಪಕಾರಿ ಕೆಲಸ ಮಾಡಿ ಒಳ್ಳೆಯವರಿಂದ ಸೈ ಎನಿಸಿಕೊಂಡರು. ಮೇಲಧಿಕಾರಿಗಳಿಂದ ಸಾಕಷ್ಟು ಕಿರುಕುಳ ಅನುಭವಿಸಿಯೂ ತಾಯ ವಾತ್ಸಲ್ಯವೇ ಇವರನ್ನು ಕಾಪಾಡಿತು. ತಂದೆಯಿಂದ ಸಾಕಷ್ಟು ತೊಂದರೆಯಾದದ್ದಲ್ಲದೇ ಅವರ ಸಂಬಂಧವೇ ತಪ್ಪಿಹೋಯಿತು. ತಾಯಿ ಹೇಳಿದ ಕನ್ಯೆಗೆ ತಾಳಿಕಟ್ಟಿದರು.

ತತ್ವನಿಷ್ಠರಾಗಿ ಬದ್ಧತೆಯಿಂದ ಬದುಕಿದ್ದೇ ಒಂದು ಬಂಗಾರ. ಹೋದ ಹೋದಲ್ಲಿ ಗ್ರಂಥಾಲಯಗಳಿಗೆ ಕಟ್ಟಡಗಳಾದವು. ಜನತೆಯಲ್ಲಿ ಪುಸ್ತಕ ಪ್ರೀತಿಯನ್ನೂ, ಓದುವ ಅಭಿರುಚಿಯನ್ನು ಬೆಳೆಸಿದರು. 'ಲಂಕೇಶ ಪತ್ರಿಕೆ'ಯಂಥ ನಿಷ್ಠುರ ಅಭಿಪ್ರಾಯದ ಪತ್ರಿಕೆ ಇವರು ಮುಖ್ಯ ಜಿಲ್ಲಾಧಿಕಾರಿಯಾಗಿದ್ದಾಗಿನ ಕಾರ್ಯವನ್ನು ಪ್ರಶಂಸಿಸಿತು. 'ಒಂದು ಕಪ್ಪು ಚುಕ್ಕೆಯನ್ನು ತಾಕಿಸಿಕೊಳ್ಳದ ವೃತ್ತಿ ಜೀವನ ಇವರದಾಗಿದೆ' ಎಂದು ಶ್ರೇಷ್ಠ ಗ್ರಂಥಪಾಲಕರಾದ ಕೆ.ಎಸ್. ದೇಶಪಾಂಡೆಯಂಥವರು ಹೇಳಿದಮೇಲೆ ಬೇರೆ ಮಾತೇ ಇಲ್ಲ. ಈ ೧೦೪ ಪುಟಗಳ ಆತ್ಮಕಥೆಯಲ್ಲಿ ಅವರ ಜೀವನಾನುಭವಗಳೆಲ್ಲ ಅಡಕವಾಗಿ ಹರಳುಗೊಂಡಿರುವುದನ್ನು ಕಾಣುತ್ತೇವೆ.

ಇಂಥ ಸುಸಂಸ್ಕೃತ ಮನಸ್ಸಿನ ಸ್ನೇಹಜೀವಿ ಶ್ರೀ ಜಿ.ಬಿ. ಹೊಂಬಳ ಅವರು ಧಾರವಾಡಕ್ಕೇ ಭೂಷಣಪ್ರಾಯರಾದವರು. ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಅವರಿಗೆ ಎಲ್ಲ ಶುಭವನ್ನು ಕೋರಿ ಶ್ರೀ ಹೊಂಬಳ ಅವರು ನೂರ್ಕಾಲ ನಮ್ಮ ಮಧ್ಯದಲ್ಲಿರಲಿ ಎಂದು ಹೃದಯ ತುಂಬಿ ಹಾರೈಸುತ್ತೇನೆ.

'ಗ್ರಂಥಚೇತನ' ಅಭಿನಂದನ ಗ್ರಂಥ : ೨೦೨೦

ಭಾವಾಭಿವ್ಯಂಜಕ ಛಾಯಾಚಿತ್ರಕಾರ ಶಶಿ ಸಾಲಿ

ಛಾಯಾಚಿತ್ರ ಕಲೆಯಲ್ಲಿ ಪರಿಣತರಾದ ಡಾ. ದೊಡ್ಡೇರಿ ವೆಂಕಟಗಿರಿರಾವ್ ಅವರು ಫೋಟೋಗ್ರಫಿ ಎಂಬ ಪದಕ್ಕೆ 'ಛಾಯಾಚಿತ್ರ' ಎಂಬ ಪದ ಸಮಾನ ಅರ್ಥ ಕೊಡಲಾರದು ಎನ್ನುತ್ತಾರೆ. ಸೃಜನಾತ್ಮಕವಾದ ಈ ಕಲಾಮಾಧ್ಯಮವನ್ನು ಕುರಿತ ತಮ್ಮ ಗ್ರಂಥವನ್ನು (೧೯೮೫) 'ಭಾವಾಭಿವ್ಯಂಜಕ ಛಾಯಾ ಚಿತ್ರಕಲೆ' ಎಂದು ಕರೆದಿದ್ದಾರೆ. ಆದ್ದರಿಂದ ಸೃಜನಶೀಲ ಕಲಾವಿದರಾದ ಶ್ರೀ ಶಶಿ ಸಾಲಿಯವರನ್ನು ಅಭಿವ್ಯಂಜಕ ಛಾಯಾಚಿತ್ರಕಾರರ ಪಂಕ್ತಿಯಲ್ಲೇ ಪರಿಗಣಿಸಬೇಕಾಗುತ್ತದೆ.

ಸಾಲಿಯವರ ಛಾಯಾಚಿತ್ರಗಳು ಕನ್ನಡಿಯು ಪ್ರತಿಬಿಂಬಿಸುವ ರೀತಿಯವಲ್ಲವೆಂಬುದು ಅವುಗಳನ್ನು ನೋಡಿದ ತಕ್ಷಣವೇ ಗೊತ್ತಾಗಿಬಿಡುತ್ತದೆ. ಅವರು ತಮ್ಮ ಅನಿಸಿಕೆಗಳನ್ನು, ರಸಾನುಭವದ ಕ್ಷಣಗಳನ್ನು ಭಾವನಾತ್ಮಕವಾಗಿ ಹಾಗೂ ಸೂಚ್ಯವಾಗಿ ಕ್ಯಾಮರಾದಲ್ಲಿ ಸೆರೆ ಹಿಡಿಯುತ್ತಾರೆ. ತಮ್ಮ ಕಲಾಭಿರುಚಿ ಮತ್ತು ದೃಷ್ಟಿಕೋನಕ್ಕೆ ತಕ್ಕಂತೆ ಈ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡಿರುವುದನ್ನು ಕಾಣುತ್ತೇವೆ. ಆದ್ದರಿಂದಲೇ ಅವರು ತೆಗೆದ ಛಾಯಾಚಿತ್ರಗಳಲ್ಲಿ ನೆಳಲು-ಬೆಳಕುಗಳ ಸಾಮರಸ್ಯ, ಸುಸಂಬದ್ಧ ಸಂಯೋಜನೆ ಮೊದಲಾದ ಗುಣಗಳು ಒಡೆದು ಕಾಣುತ್ತವೆ.

ವಿದ್ಯಾರ್ಥಿ ದೆಸೆಯಿಂದಲೇ ಅವರು ಈ ಕಲಾದೃಷ್ಟಿಯನ್ನು ಮೈಗೂಡಿಸಿಕೊಂಡು ಬೆಳೆದವರು. ಅಂತರ ಕಾಲೇಜು ಮತ್ತು ವಿಶ್ವವಿದ್ಯಾಲಯ ಮಟ್ಟದ ರಂಗೋಲಿ ಕಲಾಪ್ರದರ್ಶನದಲ್ಲಿ ಇವರ ಚಿತ್ರಗಳು ಬಣ್ಣದ ಸಂಯೋಜನೆಯ ಭಾವಾಭಿವ್ಯಕ್ತಿಯಲ್ಲಿ ಹೇಗೆ ಭಿನ್ನವಾಗಿರುತ್ತಿದ್ದವು ಎಂಬುದನ್ನು ನಾನು ಕಂಡಿದ್ದೇನೆ. ಆಗಿನಿಂದಲೇ ಪುರಸ್ಕಾರ -ಪಾರಿತೋಷಕಗಳು ಅವರಿಗೆ ದೊರೆಯುತ್ತ ಬಂದಿವೆ. ಮಾಳಮಡ್ಡಿಯಲ್ಲಿದ್ದ ಕೃಷ್ಣ ಪೋತದಾರ ಅವರ ಜೊತೆಗೇ ಕಲಾರಾಧನೆಗೆ ತೊಡಗಿದ್ದ ಸಾಲಿಯವರು ಅವರನ್ನು ಗುರುವೆಂದೇ ಪರಿಭಾವಿಸಿದ್ದರು. ಹಿರಿಯ ಕಲಾವಿದರಾದ ಎಮ್.ವ್ಹಿ. ಮಿಣಜಿಗಿ ಮತ್ತು ಜಿ.ಎಸ್. ದಂಡಾವತಿಮಠ ಅವರ ಪ್ರೋತ್ಸಾಹ ಮತ್ತು ಮಾರ್ಗದರ್ಶನ ಇವರಿಗೆ ಇದ್ದೇ ಇತ್ತು. ಇದು ತಮ್ಮ ಭಾಗ್ಯವೆಂದು ಶಶಿ ಭಾವಿಸಿದ್ದಾರೆ.

ಕೃಷ್ಣ ಪೋತದಾರ ಅವರಿಗೆ ಸಾಹಿತ್ಯದಲ್ಲಿಯೂ ಆಸಕ್ತಿಯಿದ್ದುದರಿಂದ ಧಾರವಾಡದ ಅನೇಕ ಸಾಹಿತಿಗಳ ಜೊತೆಗೆ ಅವರ ಒಡನಾಟವಿತ್ತು. ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾಗಿದ್ದ ಶ್ರೀ ಸದಾಶಿವ ಒಡೆಯರ ಅವರು ತಮ್ಮ

ಪುಸ್ತಕಗಳ ಮುಖಪುಟದ ಚಿತ್ರ ವಿನ್ಯಾಸಕ್ಕೆ ಅವರು ಪೋತದಾರ ಮತ್ತು ಶಶಿ ಸಾಲಿಯವರನ್ನೇ ಅವಲಂಬಿಸಿದ್ದರು. ಡಾ. ಷ. ಶೆಟ್ಟರ ಮತ್ತು ಎಸ್. ರಾಜಶೇಖರರಂಥ ಇತಿಹಾಸಕಾರರ ಕಲಾ ಇತಿಹಾಸ ಗ್ರಂಥಗಳಿಗೆ, ಡಾ. ಎಂ.ಎಂ. ಕಲಬುರ್ಗಿಯವರಂಥ ಸಂಶೋಧಕರ 'ಮಹಾಮಾರ್ಗ'ದ ಮುಖಪುಟ ವಿನ್ಯಾಸ ಛಾಯಾಚಿತ್ರಗಳನ್ನು ಒದಗಿಸಿ ಸಾಲಿಯವರು ಕೃತಕೃತ್ಯರಾಗಿದ್ದಾರೆ. ಇದಕ್ಕಾಗಿ ಅವರಿಗೆ ಆ ವರ್ಷದ ಪುಸ್ತಕ ಪ್ರಾಧಿಕಾರದ ಪ್ರಶಸ್ತಿಯೂ ದೊರೆತಿದೆ.

ಬೇಂದ್ರೆಯವರ ಕೆಲವು ಭಾವಗೀತೆಗಳಿಗೆ ಪೋತದಾರ ಅವರು ಬಣ್ಣದ ಕುಂಚದಲ್ಲಿ ಭಾವಾಭಿವ್ಯಕ್ತಿ ನೀಡಲು ಪ್ರಾರಂಭಿಸಿದ್ದರು. ಅವರ ಅಕಾಲ ಮರಣದಿಂದ ಅಪೂರ್ಣವಾಗಿದ್ದ ಆ ಕೆಲಸವನ್ನು ಶಶಿಸಾಲಿಯವರು ಪೂರ್ಣಗೊಳಿಸಿದ ಶ್ರೇಯಸ್ಸಿಗೆ ಪಾತ್ರರಾದರು, ಬೇಂದ್ರೆ ಭವನದ ಮುಖ್ಯ ಆಕರ್ಷಣೆಯಾಗಿ ಅವು ಭವನದ ಮಹಡಿಯನ್ನು ಈಗಲೂ ಅಲಂಕರಿಸಿವೆ. ಹಾಗೆಯೇ ಧಾರವಾಡದಲ್ಲಿ ಮಲ್ಲಿಕಾರ್ಜುನ ಮನಸೂರ ಟ್ರಸ್ಟಿನಲ್ಲಿ ಗಂಗೂಬಾಯಿ ಹಾನಗಲ್ಲ ಅವರ ಮನೆ 'ಗಾನಗಂಗೆ'ಯಲ್ಲಿ ಅವರ ಗಾಯನದ ಭಾವಭಂಗಿಯನ್ನು ಹಿಡಿದಿಡುವ ಅನೇಕ ಛಾಯಾಚಿತ್ರಗಳ ಸಂಯೋಜಕರು ಸಾಲಿಯವರೇ ಆಗಿದ್ದಾರೆ.

ಶಶಿ ಸಾಲಿಯವರ ಮದುವೆಯ ಮಂಟಪವನ್ನು ಕಲಾತ್ಮಕವಾಗಿ ಸಾಲಿಯವರೇ ವಿನ್ಯಾಸಗೊಳಿಸಿದ್ದನ್ನು ಬಂದವರೆಲ್ಲ ಮೆಚ್ಚಿದ್ದನ್ನು ನಾನೇ ನೋಡಿ ಸಂತೋಷಪಟ್ಟಿದ್ದೇನೆ. ಹೀಗೆ ಅವರ ಜೀವನವೇ ಕಲಾತ್ಮಕವಾಗಿ ಕಂಗೊಳಿಸುವುದರಲ್ಲಿ ಆಶ್ಚರ್ಯವಿಲ್ಲ. ಸಭೆ ಸಮಾರಂಭಗಳ ವಿಶಿಷ್ಟ ಬಗೆಯ ಸನ್ನಿವೇಶಗಳು ಸಾಲಿಯವರ ಕಲಾದೃಷ್ಟಿಯಿಂದ ಪಾರಾಗುವಂತೆಯೇ ಇಲ್ಲ. ಕರ್ನಾಟಕ ವಿಶ್ವವಿದ್ಯಾಲಯದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಉನ್ನತ ಮಟ್ಟದ ಕಲಾವಿದನೆಂದು ಅವರನ್ನು ಗೌರವಿಸಲಾಯಿತು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನೊಳಗೊಂಡಂತೆ(೨೦೧೨) ಅನೇಕ ಪ್ರಶಸ್ತಿಗಳು ಅವರನ್ನು ಅರಸಿಕೊಂಡು ಬಂದಿವೆ.

ಸಾಲಿಯವರ ವನ್ಯಜೀವಿಗಳ ಛಾಯಾ ಚಿತ್ರಣಗಳಿಗಾಗಿ ಭಾರತದ ವಿವಿಧ ಅರಣ್ಯ ತಾಣಗಳಲ್ಲದೆ ವಿದೇಶಗಳ ವನ್ಯಜೀವಿ ತಾಣಗಳೂ ಸೇರಿವೆ. ಅ.ಭಾ. ಇನ್‌ಟ್ಯಾಕ್ ಫೋಟೊ ಪ್ರದರ್ಶನದವರಿಂದ ಶಶಿಯವರ 'ಸೆರಾದಾಟ' ಚಿತ್ರಕ್ಕೆ ಪ್ರಥಮ ಬಹುಮಾನ ದೊರೆತುದು ಸಾಲಿವರ ತಲೆಯ ಔನ್ನತ್ಯಕ್ಕೆ ಸಾಕ್ಷಿಯಾಗಿದೆ. ವಿದೇಶಗಳಲ್ಲಿಯ ಕೊಡ್ಯಾಕ್ ಮತ್ತು ಕೋನಿಕಾ ಕಂಪನಿಗಳ ಆಮಂತ್ರಣದ ಮೇರೆಗೆ ನಾಲ್ಕು ಬಾರಿ ವಿದೇಶಗಳನ್ನು ಸಂದರ್ಶಿಸಿ ಈ ದಿಸೆಯಲ್ಲಿ ತಮ್ಮ ಜ್ಞಾನದ ಕ್ಷಿತಿಜವನ್ನು ವಿಸ್ತರಿಸಿಕೊಂಡಿದ್ದಾರೆ. 'ನೇಚರ್‌ಫೊಟೊಗ್ರಾಫಿ'ಯೂ ಛಾಯಾಚಿತ್ರಕಲೆಯ ಒಂದು ಮುಖ್ಯಶಾಲೆಯಾಗಿದೆ.

ಸ್ವಾಭಾವಿಕ ಪರಿಸರದಲ್ಲಿ ವಾಸಿಸುತ್ತಿರುವ ವನ್ಯಪ್ರಾಣಿಗಳ ಛಾಯಾ ಚಿತ್ರೀಕರಣ ವಿಧಾನವೇ ಬೇರೆ. ಅದಕ್ಕೆ ಅವಶ್ಯಕವಾದ ಕ್ಯಾಮರಾ ಸಾಧನ ಸಲಕರಣೆಗಳು, ತಂತ್ರಕೌಶಲ್ಯದಲ್ಲಿ ಸಾಲಿಯವರು ಬಹಳಷ್ಟು ಸಾಧಿಸಿದ್ದಾರೆ. ಇದಕ್ಕೆ ತಾಳ್ಮೆ ಮತ್ತು ಸಮಯದ ವ್ಯವಧಾನಗಳು ಅವಶ್ಯಕ. ಯಾಕೆಂದರೆ ಕ್ಷಣಕ್ಕೊಮ್ಮೆ ಪ್ರಾಣಿಗಳು ಭಂಗಿಯನು ಬದಲಾಯಿಸುತ್ತವೆ. ಲಂಡನ್ನಿನ ರಾಯಲ್ ಫೊಟೊಗ್ರಾಫಿಕ್ ಸೊಸೈಟಿಯಲ್ಲಿ ಇವರ ವನ್ಯಜೀವಿ ಛಾಯಾಚಿತ್ರಗಳು ಪ್ರದರ್ಶನಗೊಂಡುದು(೧೯೯೩) ಸಾಲಿಯವರ ಕಲೆಯ ಹಿರಿಮೆಯನ್ನು ಸಾರುತ್ತದೆ. ಸುಮಾರು ೧೨೦ ಪ್ರಭೇದಗಳ ಹಕ್ಕಿಗಳ ಛಾಯಾಚಿತ್ರ ಪ್ರದರ್ಶನ ('ಹಕ್ಕಿಗಳ ಇಂಚರ') ಧಾರವಾಡ, ಬೆಂಗಳೂರು, ಮೈಸೂರು, ಬೆಳಗಾವಿಗಳಲ್ಲಿ ಇತ್ತೀಚೆಗೆ ಜರುಗಿದಾಗ ಪ್ರೇಕ್ಷಕರ ಮನಸ್ಸನ್ನು ಅದು ಸೂರೆಗೊಂಡದ್ದು ಇನ್ನೂ ಮನಸ್ಸಿನಲ್ಲಿ ಹಸಿರಾಗಿದೆ.

ಛಾಯಾಚಿತ್ರಕಲೆ ಸಾಲಿಯವರಿಗೆ ಹವ್ಯಾಸವೂ ಹೌದು ವೃತ್ತಿಯೂ ಹೌದು. ಮನುಷ್ಯನ ಭಾವನೆ, ಕಲ್ಪನೆಗಳಿಗೆ ಮಿತಿಯೆಂಬುದೇ ಇಲ್ಲ. ಅವುಗಳನ್ನು ಅಭಿವ್ಯಕ್ತಿಸುವ ಮಾರ್ಗಗಳೂ ವಿಪುಲ ಹಾಗೂ ವೈವಿಧ್ಯಪೂರ್ಣ. ಛಾಯಾಚಿತ್ರಕಾರನ ಕಲ್ಪನೆ ಮತ್ತು ತಾಂತ್ರಿಕ ಶಕ್ತಿಗೆ ಸವಾಲೆನಿಸಿದುದನ್ನು ಸ್ವೀಕರಿಸುವ ಸಾಮರ್ಥ್ಯ ಸಾಲಿಯವರಿಗಿದೆ. ಕವಿಯ ಒಳಗಣ್ಣಿಗೆ ಗೋಚರಿಸುವ ಅವ್ಯಕ್ತ ಸೌಂದರ್ಯವನ್ನು ಸಾಲಿಯವರ ಕ್ಯಾಮರಾ ಕಣ್ಣು ಗ್ರಹಿಸಬಲ್ಲುದು.

ಶಶಿ ಸಾಲಿಯವರ ಛಾಯಾಚಿತ್ರಗಳೆಂದರೆ ದೃಶ್ಯಕಾವ್ಯವಿದ್ದಂತೆ. ಅದರ ಕ್ಷೇತ್ರವೂ ವಿಶಾಲ. ಅದು ನಿರಂತರ ಶಾಖೋಪಶಾಖೆಯಾಗಿ ಬೆಳೆದಿದೆ. ಛಾಯಾಚಿತ್ರಕ್ಕೆ ಸಂಬಂಧಪಟ್ಟ ಅನೇಕ ಪ್ರತಿಷ್ಠಿತ ಸಂಸ್ಥೆಗಳು ಇವರನ್ನು ತನ್ನ ಸದಸ್ಯರನ್ನಾಗಿ ಸ್ವೀಕರಿಸಿವೆ. ಅನೇಕ ಕಾರ್ಯಗಾರಗಳಲ್ಲಿ ಸಾಲಿಯವರು ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ಮಾಡಿದ್ದಾರೆ; ಪ್ರತಿಭಾವಂತ ಶಿಕ್ಷಕರಾಗಿ ವಿದ್ಯಾರ್ಥಿಗಳಿಗೆ ಬೋಧಿಸಿ ಅವರನ್ನು ಸಿದ್ಧಗೊಳಿಸಿದ್ದಾರೆ.

ವಾರಕ್ಕೊಮ್ಮೆ 'ಪ್ರಜಾವಾಣಿ'ಯಲ್ಲಿ 'ಚಿತ್ರ-ಚಿತ್ರಣ' ಮಾಲಿಕೆಯಲ್ಲಿ ಸಾಂದರ್ಭಿಕ ಸೂಚನೆಗಳೊಂದಿಗೆ ಪ್ರಕಟವಾಗುತ್ತಿರುವ ಶಶಿಸಾಲಿಯವರ ಛಾಯಾ ಚಿತ್ರಗಳನ್ನು ನೋಡಿದರೆ ನಮ್ಮ ಸಾಂಸ್ಕೃತಿಕ ಚರಿತ್ರೆಯ ಒಂದೊಂದೇ ಪುಟಗಳನ್ನು ತಿರುವಿ ಹಾಕಿದ ಅನುಭವವಾಗುತ್ತದೆ. ಅವರ ಕಲೋಪಾಸನೆ ಇದೇ ರೀತಿ ಮುಂದುವರಿದು ಹೆಚ್ಚಿನ ಶ್ರೇಯಸ್ಸನ್ನು ಪಡೆಯಲೆಂದು ಹಾರೈಸುತ್ತೇನೆ.

ಶಶಿಸಾಲಿ ಅಭಿನಂದನ ಗ್ರಂಥ : ೨೦೨೧

ಕೆ.ಆರ್. ದುರ್ಗಾದಾಸ್ : ನಾನು ಕಂಡಂತೆ

ನನ್ನ ಬೆಳಗಿನ ವಿಹಾರದಲ್ಲಿ ವಾಡಿಕೆಯಂತೆ ಅನೇಕರ ಭೆಟ್ಟಿಯಾಗುತ್ತಿತ್ತು. ಆದರೆ ಕೆಲಹೊತ್ತು ನಿಂತು, ನನ್ನೊಡನೆ ಮಾತನಾಡಿ ಹೋಗುತ್ತಿದ್ದವರಲ್ಲಿ ಡಾ. ಕೆ. ಆರ್. ದುರ್ಗಾದಾಸರೂ ಒಬ್ಬರು. ಕಲ್ಯಾಣನಗರದಿಂದ ವಿಶ್ವವಿದ್ಯಾಲಯದ ಅತಿಥಿಗೃಹದ ನಡೆಗೆ ನಾನು ಏರಿ ಹೋಗುತ್ತಿದ್ದರೆ, ಅವರು ವಿಶ್ವವಿದ್ಯಾಲಯದ ವಸತಿನಿಲಯದಿಂದ ಕಲ್ಯಾಣನಗರದ ಕಡೆಗೆ ಇಳಿದು ಬರುತ್ತಿದ್ದರು. ಮುಂದೆ ರೈಲುನಿಲ್ದಾಣದವರೆಗೂ ಹೋಗುತ್ತಿದ್ದರೆಂದು ತೋರುತ್ತದೆ. ಅವರ ಜೊತೆಗೆ ಸಾಮಾನ್ಯವಾಗಿ ಮೂರು-ನಾಲ್ಕು ಜನ ಇದ್ದೇ ಇರುತ್ತಿದ್ದರು. ಅವರು ವಿದ್ಯಾರ್ಥಿಗಳಾಗಿರಬಹುದು, ಊರಿಂದ ಬಂದ ಅತಿಥಿಗಳಾಗಿರಬಹುದು. ಕೆಲವು ಸಲ 'ನಿಮ್ಮ ಮನೆಯ ಕಡೆಗೇ ಹೊರಟಿದ್ದೆವು' ಎಂದೂ ಹೇಳುತ್ತಿದ್ದರು. ಏನು ವಿಷಯ ಎಂದು ಕೇಳಿದಾಗ ತಮ್ಮ ಜೊತೆಗಿದ್ದವರ ಪರಿಚಯ ಮಾಡಿಸಿ, ಅವರ ಸಲುವಾಗಿ ಆಗಬೇಕಾದ ಸಣ್ಣಪುಟ್ಟ ಕೆಲಸಗಳ ಬಗ್ಗೆ ಹೇಳುತ್ತಿದ್ದರು. ಅವರ ಈ ಸಮುದಾಯ ಪ್ರಜ್ಞೆಯನ್ನು ನಾನು ಮೊದಲಿನಿಂದಲೂ ಗುರುತಿಸಿದ್ದೆ.

ಹೊಸಪೇಟೆಯ ರಾಮಸಾಗರದ ದುರ್ಗಾದಾಸರು ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದವರು. ಪ್ರಾರಂಭದಲ್ಲಿ ಬಸವಕಲ್ಯಾಣದ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕ ವೃತ್ತಿಯನ್ನು ಆರಂಭಿಸಿ, ನಂತರ ತಮ್ಮದೇ ಜಿಲ್ಲೆಯ ನಂದಿಹಳ್ಳಿಯ ಸ್ನಾತಕೋತ್ತರ ಕೇಂದ್ರದಲ್ಲಿ ಮುಂದುವರಿದು, ಬೆಳಗಾವಿಯ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರವಾಚಕರಾಗಿ ಬೋಧಿಸಿದವರು, ಕೊನೆಗೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಳೆದ ಹದಿನೇಳು ವರ್ಷಗಳಿಂದಲೂ ಕೆಲಸ ಮಾಡುತ್ತಿರುವುದನ್ನು ನೋಡಿದರೆ, ಯಾವುದೊ ಒಂದು ಅಂತರಂಗದ ಸಂಬಂಧ ಈ ವಿಶ್ವದ್ಯಾಲಯದೊಡನೆ ಅವರಿಗೆ ಇದ್ದಂತೆ ತೋರುತ್ತದೆ. ಅಲ್ಲದೆ, ಕಲ್ಯಾಣನಗರದಲ್ಲಿಯೇ ತಮ್ಮ ಹೊಸಮನೆಯನ್ನು ಕಟ್ಟಿಸಿ ಅದಕ್ಕೆ 'ಜೀವಧ್ವನಿ' ಎಂದು ಹೆಸರಿಟ್ಟಿದ್ದು ಕೂಡ ಆಕಸ್ಮಿಕವಿರಲಾರದೆಂದು ನಾನು ಭಾವಿಸುತ್ತೇನೆ (ನನ್ನ ಒಂದು ಕವನ ಸಂಗ್ರಹದ ಹೆಸರು 'ಜೀವಧ್ವನಿ') ಅದೇನೇ ಇರಲಿ, ಅವರ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸ್ಫೂರ್ತಿಕೇಂದ್ರ ಧಾರವಾಡವೇ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಆಧುನಿಕ ಸಾಹಿತ್ಯ ವಿಮರ್ಶೆ ಹಾಗೂ ಜಾನಪದ ಅವರ ಆಸಕ್ತಿಯ

ಕ್ಷೇತ್ರಗಳಾಗಿದ್ದು, ಇದುವರೆಗೆ ಪ್ರಕಟಗೊಂಡಿರುವ ಹದಿನೇಳು ಕೃತಿಗಳು ಕೂಡ ಅದಕ್ಕನುಗುಣವಾಗಿಯೇ ಇವೆ. 'ಬಳ್ಳಾರಿ ಜಿಲ್ಲೆಯ ಬಯಲಾಟಗಳು' ಅವರ ಪಿಎಚ್.ಡಿ. ಸಂಪ್ರಬಂಧದ ವಿಷಯವಾಗಿದ್ದು ಮುಂದಿನ ಕೆಲವು ಕೃತಿಗಳಲ್ಲಿಯೂ ಆ ಸಂಸ್ಕೃತಿಯ ವಿವಿಧ ಮುಖಗಳನ್ನು ಕಾಣಬಹುದು. ನಾನು ಬಾಲ್ಯದಲ್ಲಿ ನೋಡಿದ್ದ ಬಯಲಾಟ (ದೊಡ್ಡಾಟ)ದ ಸ್ತುತಿಪದ 'ಪೊಡವೀಯೋಳ್ ಕುಡುತಿನಿಯಾ, ಒಡೆಯಾ ಭೀಮೇಶನಾ' ಎಂಬುದು ಇನ್ನೂ ನನ್ನ ನೆನಪಿನಲ್ಲಿದೆ. ಡಾ. ದುರ್ಗಾದಾಸರ 'ಕುಡುತಿನಿ ನರಸಿಂಗರಾಯ ಕೃತ ಬಯಲಾಟಗಳು' ಪುಸ್ತಕವನ್ನು ನೋಡಿದ ಮೇಲೆ, 'ಕುಡುತಿನಿ' ಶಬ್ದದ ಬಗ್ಗೆ ಮೊದಲಿನಿಂದಲೂ ನನಗಿದ್ದ ಸಂಶಯ ನಿವಾರಣೆಯಾಯಿತು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 'ಬಯಲಾಟ : ಹೊಸ ಸಾಧ್ಯತೆಗಳು' ಕುರಿತು ಕಾರ್ಯಾಗಾರವೊಂದನ್ನು ಕೆಲವರ್ಷಗಳ ಹಿಂದೆ ಧಾರವಾಡದಲ್ಲಿ ಏರ್ಪಡಿಸಿತ್ತು. ಅಂದು ಸಂಜೆ ನಡೆದ ಬಯಲಾಟದ ಪ್ರದರ್ಶನವೊಂದರಲ್ಲಿ ಭೀಮನ ಪಾತ್ರ ವಹಿಸಿದ್ದ ದುರ್ಗಾದಾಸರ ಅಭಿನಯವನ್ನು ಮರೆಯುವಂತಿಲ್ಲ. ಬಯಲಾಟದ ಕಲಾವಿದರೂ ನಿರ್ದೇಶಕರೂ ಆದ ದುರ್ಗಾದಾಸರ ಇನ್ನೊಂದು ಮುಖವನ್ನು ಅಂದು ನೋಡಿದಂತಾಯಿತು. ಆ ಸಂದರ್ಭದಲ್ಲಿ, ಅವರ ತಂದೆಯನ್ನೊಳಗೊಂಡಂತೆ ಅವರ ಊರಿನ ಕೆಲಜನರೂ ಬಂದು ಪ್ರೇಕ್ಷಕವರ್ಗದಲ್ಲಿ ಕುಳಿತು ಸಂತೋಷಪಟ್ಟಿದ್ದನ್ನು ನಾನು ನೋಡಿದೆ. ದುರ್ಗಾದಾಸರ ಸಮುದಾಯ ಪ್ರೀತಿಗೆ ಅದು ಇನ್ನೊಂದು ನಿದರ್ಶನವೆನಿಸಿತು.

ಡಾ. ದುರ್ಗಾದಾಸರು ಮೂವತ್ತಕ್ಕೂ ಮಿಕ್ಕಿ ಸಂಶೋಧನ ವಿದ್ಯಾರ್ಥಿಗಳಿಗೆ ಎಂ.ಫಿಲ್ ಮತ್ತು ಪಿಎಚ್.ಡಿ. ಪದವಿಗಳಿಗೆ ಮಾರ್ಗದರ್ಶಕರಾಗಿರುವುದು ಈ ದಿಸೆಯಲ್ಲಿ ಗಮನಾರ್ಹವಾಗಿದೆ. ಸಂಶೋಧನ ಹಾಗೂ ಜಾನಪದ ವಿಷಯಗಳಿಗೆ ಸಂಬಂಧಪಟ್ಟಂತೆ ಹಲವಾರು ಮಹತ್ವದ ಲೇಖನಗಳನ್ನೂ ಅವರು ಪ್ರಕಟಿಸಿದ್ದಾರೆ. ಹತ್ತಾರು ಕಾರ್ಯಾಗಾರಗಳನ್ನು, ಸಮ್ಮೇಳನಗಳನ್ನೂದುರ್ಗಾದಾಸರು ಯಶಸ್ವಿಯಾಗಿ ಏರ್ಪಡಿಸಿ ತಮ್ಮ ಸಂಘಟನಾ ಸಾಮರ್ಥ್ಯವನ್ನು ವ್ಯಕ್ತಪಡಿಸಿದ್ದುಂಟು. ಅಧ್ಯಯನ, ಅಧ್ಯಾಪನ, ಸಂಶೋಧನ, ಸಂಘಟನೆ, ಆಡಳಿತ - ಹೀಗೆ ಅವರ ವ್ಯಕ್ತಿತ್ವಕ್ಕೆ ಹಲವು ಮುಖಗಳಿವೆ.

ಡಾ. ಕೆ.ಆರ್. ದುರ್ಗಾದಾಸರ ಅರುವತ್ತರ ಅಭಿನಂದನದ ಈ ಸಂದರ್ಭದಲ್ಲಿ, ಅವರ 'ಭೀಮಶಕ್ತಿ' ಇನ್ನೂ ಹೆಚ್ಚು ವರ್ಧಿಸಿ ಸಮಾಜಕ್ಕೆ ಸದುಪಯೋಗವಾಗಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಅಭಿನಂದನ ಗ್ರಂಥಕ್ಕೆ ಬರೆದ ಲೇಖನ ೨೦೨೧

'ಕ್ಲಾರಿಯೋನೆಟ್ ಮಾಂತ್ರಿಕ' ಎಂಬತ್ತರ ಸಂಭ್ರಮದಲ್ಲಿ ಶುಭ ಹಾರೈಕೆ

ಪಂಡಿತ ಡಾ. ನರಸಿಂಹಲು ವಡವಾಟಿಯವರು ೮೦ರ ವಸಂತಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ, ಅವರ ಅಭಿಮಾನಿಗಳೂ ಶಿಷ್ಯರೂ ಅವರಿಗೆ ಅಭಿನಂದನ ಗ್ರಂಥವೊಂದನ್ನು ಅರ್ಪಿಸಲು ಇಚ್ಛಿಸಿರುವುದಕ್ಕೆ ನನಗೆ ಅತ್ಯಂತ ಸಂತೋಷವನ್ನುಂಟು ಮಾಡಿದೆ. ಅವರು ನಮ್ಮ ಮಧ್ಯೆ ಇನ್ನೂ ನೂರ್ಕಾಲ ಬಾಳಲೆಂದು ಹಾರೈಸಿ ಶುಭ ಹಾರೈಕೆಗಳನ್ನು ಸಲ್ಲಿಸುತ್ತೇನೆ.

ವಯೋ ಸಹಜವಾಗಿ ನನಗೀಗ 'ಅರವು-ಮರವು' ವಿಷಯಕ್ಕೆ ಸಂಬಂಧಪಟ್ಟ ಇಸ್ವಿಗಳ ನೆನಪಿಲ್ಲದಿದ್ದರೂ ಮುಂದಿನ ನಾಲ್ಕುಮಾತುಗಳನ್ನು ಅವರ ಬಗ್ಗೆ ಬರೆಯುತ್ತಿದ್ದೇನೆ.

ಆಗ ಹಿಂದುಳಿದ ರಾಯಚೂರು ಜಿಲ್ಲೆಯ ಕುಗ್ರಾಮವಾದ ವಡವಾಟಿಯಲ್ಲಿ ಜನಿಸಿ, ನಿಯಮಾನುಸಾರ ಶಿಕ್ಷಣ ಪಡೆಯದಿದ್ದರೂ ಸ್ವಂತ ಶಕ್ತಿಯಿಂದ ಅನೇಕ ಕಷ್ಟ ಕಾರ್ಪಣ್ಯಗಳನ್ನೆದುರಿಸಿ, ಸಂಗೀತ ಕ್ಷೇತ್ರದಲ್ಲಿ ಅಪಾರ ಸಾಧನೆಯನ್ನು ಮಾಡಿ, ಅವರು ಈ ಉನ್ನತ ಮಟ್ಟವನ್ನು ಪಡೆದಿದ್ದಾರೆ.

ಸ್ವತಃ ಕವಿಗಳೂ, ಉತ್ತಮ ಕತೆಗಾರರೂ ಆದ ಶ್ರೀ ಶಾಂತರಸರು ತಮ್ಮ ಸಾಹಿತ್ಯ ಸಾಂಸ್ಕೃತಿಕ ಸಂಘಟನೆಯಿಂದ, ಕಲ್ಯಾಣಕರ್ನಾಟಕದ ಸಾಹಿತ್ಯ ಕಲೆಗಳನ್ನು ರೂಪಿಸಿದ ವ್ಯಕ್ತಿಗಳಲ್ಲಿ ಅವರೂ ಒಬ್ಬರು. ಅವರ ಸ್ನೇಹಿತರ ಬಳಗದಲ್ಲಿ ಶಾಸ್ತ್ರೀಯ ಸಂಗೀತ ಗಾಯಕರಾದ ಸಿದ್ಧರಾಮ ಜಂಬಲದಿನ್ನಿಯವರೂ ಒಬ್ಬರು. ಅವರಿಗೆ ವಚನಗಾಯನ ಹಾಗೂ ಭಾವಗೀತೆಗಳಿಗೆ ರಾಗ ಸಂಯೋಜನೆ ಮಾಡಿ ಹಾಡುವ ರೂಢಿಯನ್ನು ಹಾಕಿದವರೇ ಶಾಂತರಸರು. ಪಂ. ಮಲ್ಲಿಕಾರ್ಜುನರ ತರುವಾಯ ವಚನಗಳನ್ನು ಸಾಹಿತ್ಯಕವಾಗಿ ಹಾಡಿ, ಭಾಷೆ ನಡೆಗೆಡದಂತೆ, ಅರ್ಥ ಸ್ಪಷ್ಟವಾಗಿ ಕೇಳುಗರನ್ನು ರಂಜಿಸಿದವರೆಂದರೆ ಸಿದ್ಧರಾಮ ಜಂಬಲದಿನ್ನಿಯವರು ಎಂದರೆ ತಪ್ಪಾಗದು.

ಅಂಥವರ ನೇರವಾದ ಶಿಷ್ಯರು ಪಂ. ನರಸಿಂಹಲು ವಡವಾಟಿಯವರು. ಅವರು ಅದ್ವಿತೀಯ ಕ್ಲಾರಿಯೋನೆಟ್ ವಾದನದ ಜೊತೆಗೆ ಉತ್ತಮ ಹಿಂದುಸ್ಥಾನೀ ಗಾಯಕರೂ ಹೌದು. ರಾಯಚೂರು ಹಾಗೂ ಬೆಂಗಳೂರಿನಲ್ಲಿ ಸಂಗೀತ ಶಾಲೆಗಳನ್ನು ಸ್ಥಾಪಿಸಿ, ನೂರಾರು ಶಿಷ್ಯರಿಗೆ ಸಂಗೀತ ಕಲೆಯನ್ನು ಧಾರೆಯೆರೆದ ಶ್ರೇಯಸ್ಸಿಗೆ ಪಾತ್ರರಾದವರು.

ಕಳೆದ ಮೂರು ದಶಕಗಳಿಂದಲೂ ಈ ಕಾರ್ಯದಲ್ಲಿ ನಿರಂತರವಾಗಿ ನಿರತರು.

ಅವರ ಗುರುಗಳಾದ ಸಿದ್ಧರಾಮ ಜಂಬಲದಿನ್ನಿಯವರ ಸ್ಮಾರಕವಾಗಿ ರಾಯಚೂರಿನ ಸಂಗೀತಶಾಲೆಯಲ್ಲಿ ಪ್ರತಿವರ್ಷ ಅಹೋರಾತ್ರಿ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಲಿಂ. ಸಿದ್ಧರಾಮ ಜಂಬಲದಿನ್ನಿಯವರ ಶತಮಾನೋತ್ಸವ ಕಾರ್ಯಕ್ರಮವನ್ನು ವಿಶ್ವವಿಖ್ಯಾತ ಹಿಂದುಸ್ಥಾನಿ ಗಾಯಕರಾದ ರಾಜನ್-ಸಾಜನ್ ಮಿಶ್ರಾ ಅವರನ್ನು ಮುಖ್ಯ ಅತಿಥಿಗಳನ್ನಾಗಿ ಆಮಂತ್ರಿಸಿ ೨೨-೧೨-೨೦೧೮ರಂದು ಆಚರಿಸಿದ್ದನ್ನು ಯಾರೂ ಮರೆಯಲಾರರು.

ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಆಚರಿಸಿದಾಗ ಅದರ ಉದ್ಘಾಟನೆಗಾಗಿ ನನ್ನನ್ನು ಆಮಂತ್ರಿಸಿದ್ದರು. ಆಗಲೇ ಪಂ. ವಡವಾಟಿಯವರು ಅವರು ಸ್ಥಾಪಿಸಿದ ಸಂಗೀತಶಾಲೆಗೆ ಸಿದ್ಧರಾಮ ಜಂಬಲದಿನ್ನಿಯವರ ಸ್ಮಾರಕವೆಂದು ಗುರುತಿಸಲಾಗಿತ್ತು. ಮರುದಿನ ಅವರ ಸಂಗೀತ ಶಾಲೆಗೆ ನನ್ನನ್ನು ಕರೆದುಕೊಂಡು ಹೋಗಿ, ಅಲ್ಲೆಲ್ಲ ಸುತ್ತಾಡಿಸಿದರು. ಈ ಸಂಗೀತಶಾಲೆಯು ರಾಯಚೂರಿನ ಮಧ್ಯಭಾಗದಲ್ಲಿ ವಿಶಾಲಸ್ಥಳದಲ್ಲಿದ್ದ ಸ್ವಂತ ಕಟ್ಟಡವನ್ನೂ ಹೊಂದಿದೆ. ಇಂಥ ಗುರು-ಶಿಷ್ಯ ಸಂಪ್ರದಾಯಕ್ಕೆ ಹೆಗ್ಗುರುತಾಗಿ ಅದು ಶೋಭಿಸುತ್ತಿದೆ. ಇಂಥ ಸುವ್ಯವಸ್ಥಿತ ಸಂಗೀತ ಸಂಸ್ಥೆ ಕಲ್ಯಾಣ ಕರ್ನಾಟಕದಲ್ಲಿ ಇದೇ ಎಂಬ ಹೆಗ್ಗಳಿಕೆಯನ್ನು ಮಹತ್ವವನ್ನೂ ಪಡೆದುಕೊಂಡಿದೆ.

'ಕ್ಲಾರಿಯೋನೆಟ್ ಮಾಂತ್ರಿಕ' ಪಂ. ಡಾ. ನರಸಿಂಹಲು ವಡವಾಟಿಯವರು ಈ ವಾದನದಲ್ಲಿ ಎಷ್ಟು ನಿಷ್ಣಾತರಾಗಿದ್ದಾರೆಂದರೆ, ಅವರನ್ನು ಅಮೇರಿಕಾದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದವರು ಸಂದರ್ಶಕ ಪ್ರಾಧ್ಯಾಪಕರೆಂದು ಆಮಂತ್ರಿಸಿದ್ದಲ್ಲದೆ, ಲಾಸ್ ಎಂಜಿಲೀಸ್‌ನಲ್ಲಿ ನಡೆದ ಇಂಟರ ನ್ಯಾಶನಲ್ ಕ್ಲಾರಿಯೋನೆಟ್ ಫೆಸ್ಟಿವ್‌ನ ಅಧ್ಯಕ್ಷರಾಗಿ ನೇಮಕಗೊಂಡದ್ದು ಕರ್ನಾಟಕಕ್ಕಷ್ಟೇ ಅಲ್ಲ, ಇಡೀ ಭಾರತ ಹೆಮ್ಮೆ ಪಡುವ ಸಂಗತಿಯಾಗಿದೆ.

ಸುಮಾರು ಇದೇ ಹೊತ್ತಿಗೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಅವರಿಗೆ ಸನ್ಮಾನ ಸಮಾರಂಭ ಏರ್ಪಡಿಸಿದ್ದು, ಆಗ ತಮ್ಮ ಕ್ಲಾರಿಯೋನೆಟ್ ವಾದನದಿಂದ ಶ್ರೋತೃಗಳನ್ನು ತಣಿಸಿದ್ದು ಇನ್ನೂ ನನ್ನ ನೆನಪಿನಲ್ಲಿದೆ. ಮರುದಿನ ನಮ್ಮ ಮನೆಗೆ ಬಂದು ಸಿದ್ಧರಾಮ ಜಂಬಲದಿನ್ನಿಯವರು ರಾಗ ಸಂಯೋಜನೆ ಮಾಡಿದ ನನ್ನ 'ನೀಲಾಂಬಿಕೆ' ಕವಿತೆಯನ್ನು ಕ್ಲಾರಿಯೋನೆಟ್‌ನಲ್ಲಿ ನುಡಿಸಿ ತೋರಿಸಿದರು.

ಹೀಗೆ ತುಂಬ ಸರಳ, ಸ್ನೇಹ ಜೀವಿಯಾದ ಅವರು ತಮ್ಮ ಎಲ್ಲಾ ಸಾಧನೆಯನ್ನು

ತಮ್ಮ ಸಂಗೀತ ಗುರುಗಳಾದ ಜಂಬಲದಿನ್ನಿಯವರಿಗೆ ಅರ್ಪಿಸಿದ್ದು ಅವರ ಸೇವಾಭಾವನೆಗೆ ಹಿಡಿದ ಕನ್ನಡಿಯಾಗಿದೆ. ದೇಶ-ವಿದೇಶಗಳಿಂದ ಹಲವಾರು, ಪ್ರಶಸ್ತಿಪುರಸ್ಕೃತರಾದ ಅವರು ಕರ್ನಾಟಕ ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ಕಲಾ ಸೇವೆಗೈದು ಕನ್ನಡಿಗರ ಮನ್ನಣೆಗೆ ಪಾತ್ರರಾಗಿದ್ದಾರೆ.

ಈ ವರ್ಷದ (೨೦೨೦) ನಾಡ ಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿಯೂ ಅವರ ಕ್ಲಾರಿಯೋನೆಟ್ ವಾದನ ಕಾರ್ಯಕ್ರಮವಿರುವುದನ್ನು ಅನೇಕರು ಗಮನಿಸಿರಬಹುದು.

ರಾಯಚೂರು ಉದಯನಗರದಲ್ಲಿ ಅವರು ಸ್ಥಾಪಿಸಿದ ಸ್ವರಸಂಗಮ ಸಂಗೀತ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಪಂ. ಡಾ. ನರಸಿಂಹಲು ವಡವಾಟಿಯವರಿಗೆ ಅರ್ಪಿಸಲಿರುವ ಅಭಿನಂದನ ಗ್ರಂಥ ಮಹತ್ವದ ಲೇಖನಗಳನ್ನೊಳಗೊಂಡು, ಸರ್ವಾಂಗಸುಂದರವಾಗಿ ಪ್ರಕಟವಾಗಲೆಂದು ಹಾರೈಸಿ, ಅವರಿಗೆ ಮತ್ತೊಮ್ಮೆ ಶುಭ ಕೋರುತ್ತೇನೆ.

ಅಭಿನಂದನ ಗ್ರಂಥ ೨೦೨೧

ಭಾಗ ೨

ಮುನ್ನುಡಿ ಬೆನ್ನುಡಿಗಳು

ಗಿರಡ್ಡಿ ಗೋವಿಂದರಾಜ ಅಭಿನಂದನ ಗ್ರಂಥ 'ತಲಸ್ಪರ್ಶಿ'ಗೆ ಬೆನ್ನುಡಿ

ಡಾ. ಗಿರಡ್ಡಿ ಗೋವಿಂದರಾಜರ ಪ್ರತಿಭೆ ಕವಿತೆಯಲ್ಲಿ ಮಿನುಗಿ, ಕಥೆಗಳಲ್ಲಿ ಮೆರುಗು ಪಡೆದು, ವಿಮರ್ಶೆಯಲ್ಲಿ ಪಕ್ವತೆಯನ್ನೂ ಪ್ರಖರತೆಯನ್ನೂ ಪ್ರಕಟಿಸಿ, ಇಂದು ಸಾಹಿತ್ಯದ ಅಭ್ಯಾಸಿಗಳು ಗಂಭೀರವಾಗಿ ಗಮನಿಸಬೇಕಾದ ಒಬ್ಬ ಪ್ರಮುಖ ವಿಮರ್ಶಕರನ್ನಾಗಿ ಅವರನ್ನು ರೂಪಿಸಿದೆ. ಇಂಗ್ಲಿಷ್ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯ ಎರಡರಲ್ಲೂ ಪರಂಪರೆಯ ಅರಿವಿನಿಂದ ಪರಿಣತವಾದ ಅವರ ವಿಮರ್ಶಾಬರವಣಿಗೆ ಸಂಯಮದಿಂದ ಸೂಕ್ಷ್ಮತೆಯನ್ನು ಪಡೆಯುತ್ತ ನವ್ಯ ಮನೋಧರ್ಮದ ಮಿತಿಗಳಿಂದಲೂ ಪಾರಾಗಿ ಸಂಸ್ಕೃತಿಯ ಕಾಳಜಿಗಳತ್ತ ಒಲಿದಿರುವದು ಸ್ವಾಗತಾರ್ಹವಾದ ಬೆಳವಣಿಗೆಯೆಂದೇ ಹೇಳಬಹುದು. ಸಾಹಿತ್ಯದ ಬಗೆಗಿನ ಗಾಢವಾದ ಅವರ ಪ್ರೀತಿಯೇ ಮೌಲಿಕವಾದ ಒಳನೋಟಗಳನ್ನೂ ಚರ್ಚೆಗೆ ಯೋಗ್ಯವಾದ ಅಂಶಗಳನ್ನೂ ಸೂಚಿಸಬಲ್ಲ ನೈತಿಕ ಧೈರ್ಯದಿಂದ ತನ್ನಷ್ಟಕ್ಕೆ ಒಂದು ಮಾದರಿಯಾಗಿ ನಿಲ್ಲುವ ಸಾಮರ್ಥ್ಯವನ್ನು ಪಡೆದುಕೊಂಡಿದೆ.

ಕನ್ನಡದಲ್ಲಿ ಇಂದು ಕ್ರಿಯಾಶೀಲರಾಗಿರುವ ಐವತ್ತಕ್ಕೂ ಹೆಚ್ಚು ಜನ ಲೇಖಕ-ವಿಮರ್ಶಕರನ್ನು 'ತಲಸ್ಪರ್ಶಿ' ಆತ್ಮೀಯವಾಗಿ ಒಳಗೊಂಡಿದೆಯೆಂದರೆ ಇದಕ್ಕಿಂತಲೂ ಹೆಚ್ಚಿನ ಹೃದಯಸ್ಪರ್ಶಿ ಸಂಗತಿ ಯಾವುದು?

ಜಿ.ಡಿ. ಜೋಶಿ ಅವರ
'ಕನ್ನಡವನ್ನು ಮುನ್ನಡೆಸಿದವರು'

'ಹೊರನಾಡ ಕನ್ನಡ ಕಟ್ಟಾಳು' ಎಂಬ ಬಿರುದಿಗೆ ಸಹಜವಾಗಿ ಪಾತ್ರರಾಗಿರುವ ಡಾ. ಜಿ.ಡಿ. ಜೋಶಿ ಮುಂಬಯಿಯ ವೈವಿಧ್ಯಮಯ ಕನ್ನಡದ ಚಟುವಟಿಕೆಗಳಲ್ಲಿ ತಮ್ಮನ್ನು ಸದಾ ತೊಡಗಿಸಿಕೊಂಡಿರುವ ಒಬ್ಬ ಅಪರೂಪದ ವ್ಯಕ್ತಿಯಾಗಿದ್ದು ಅವರ ಸಾಹಿತ್ಯ ಕೃಷಿಯೂ ಅಷ್ಟೇ ಗಮನಾರ್ಹವಾದದ್ದು.

ಕನ್ನಡದಲ್ಲಿ ಹರಟೆಗಳ ಬರವಣಿಗೆಯನ್ನು ಹದವರಿತು ಮುಂದುವರಿಸಿರುವ ಯಶಸ್ವಿ ಲೇಖಕರಲ್ಲಿ ಒಬ್ಬರೆನಿಸಿದ ಅವರು, ನಾಡು-ನುಡಿಗೆ ಅಮೋಘವಾದ ಸೇವೆ ಸಲ್ಲಿಸಿದ ಗಣ್ಯ ವ್ಯಕ್ತಿಗಳನ್ನು ಅಂಕಣಬರೆಹಗಳ ಮೂಲಕ ಪರಿಚಯಿಸುತ್ತ ವಿದ್ಯಾರ್ಥಿಗಳಿಂದ ಹಿಡಿದು ಎಲ್ಲ ವರ್ಗದ ಓದುಗರಿಗೆ ಉಪಯುಕ್ತ ಮಾಹಿತಿಯನ್ನು ಒದಗಿಸುವ ಮಹತ್ವದ ಕಾರ್ಯವನ್ನು ನಿರ್ವಹಿಸಿದ್ದಾರೆ. 'ಕನ್ನಡದ ಕಣ್ಮಣಿಗಳು' 'ಕನ್ನಡದ ಕಾರಣ ಪುರುಷರು' 'ಕನ್ನಡದ ಪೋಷಕರು' ಸಂಕಲನಗಳ ಮಾಲಿಕೆಗೆ ಇದೀಗ 'ಕನ್ನಡವನ್ನು ಮುನ್ನಡೆಸಿದ ಮಹನೀಯರು' ಎಂಬ ಮತ್ತೊಂದು ಮುತ್ತಿನಹಾರ ಸೇರ್ಪಡೆಯಾಗುತ್ತಿರುವುದು ತುಂಬ ಸ್ವಾಗತಾರ್ಹ.

ನವೋದಯದ ಹದಿನಾರು ಹಿರಿಯ ಚೇತನಗಳ ಮಹತ್ಸಾಧನೆಗೆ ಕನ್ನಡಿ ಹಿಡಿದಿರುವ ಪ್ರಸ್ತುತ ಸಂಕಲನ ಅವರ ಬದುಕು-ಬರೆಹಗಳ ಸಮೃದ್ಧ ವಿವರಗಳನ್ನೊಳಗೊಂಡ ಒಂದು ಸಂಗ್ರಾಹ್ಯ ಕೃತಿಯಾಗಿದೆ.

'ಬ್ಯಾಂಕಿಂಗ್ ಕ್ಷೇತ್ರದ ಭೀಷ್ಮ' ಗ್ರಂಥಕ್ಕೆ ಮುನ್ನುಡಿ

ಶ್ರೀ ರಾಮಪ್ಪ ಸಿದ್ಧರಾಮಪ್ಪ ಹೂಗಾರ ಹಾಗೂ ಶ್ರೀಮತಿ ಶೋಭನಾ ಹೂಗಾರ ಅವರದು ಒಂದು ಆದರ್ಶ ದಾಂಪತ್ಯ. 'ಸತಿ-ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎನ್ನುವ ರೀತಿಯದು. ಶ್ರೀಮತಿ ಶೋಭನಾ ಆರ್. ಹೂಗಾರ ಅವರು ಈ ಬರೆಹದಲ್ಲಿ ತಮ್ಮ ೪೫ ವರ್ಷಗಳ ದಾಂಪತ್ಯ ಜೀವನವನ್ನು ಮೆಲುಕು ಹಾಕುತ್ತ ಅದರ ಮಾಧುರ್ಯವನ್ನು ಸಹೃದಯರೊಡನೆ ಹಂಚಿಕೊಂಡಿದ್ದಾರೆ. ಶ್ರೀ ಆರ್.ಎಸ್. ಹೂಗಾರ ಅವರು ತಮ್ಮ ಜೀವನದಲ್ಲಿ ನಡೆದ ಕೆಲವು ಹೃದಯಸ್ಪರ್ಶಿ ಘಟನೆಗಳನ್ನು, ಸಂಗತಿ-ಸನ್ನಿವೇಶಗಳನ್ನು ಕುರಿತು ಬಿಡುವಿನ ವೇಳೆಯಲ್ಲಿ ಧರ್ಮಪತ್ನಿಯೊಂದಿಗೆ ಸಹಜವಾಗಿ ಮಾತನಾಡಿಕೊಂಡದ್ದುಂಟು. ಅವನ್ನೆಲ್ಲ ನೆನಪಿಸಿಕೊಳ್ಳುತ್ತ ತಮ್ಮ ಏಕಾಂಗಿ ಜೀವನದ ಭಾರವನ್ನು ಅವರ ಶ್ರೀಮತಿಯವರು ಈ ಮೂಲಕ ಹಗುರಗೊಳಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. 'ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು' ಎಂಬ ಕವಿವಾಣಿಯಂತೆ ಇನ್ನೂ ಕೆಲವು ಪೂರಕ ಸಂಗತಿಗಳೊಂದಿಗೆ ಅದನ್ನು ಬರೆಹಕ್ಕೆ ಇಳಿಸುತ್ತ ಶ್ರೀ ಹೂಗಾರ ಅವರ ವ್ಯಕ್ತಿತ್ವವನ್ನು ಆದಷ್ಟು ಇಡಿಯಾಗಿ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಅವರ ಮನೆತನದ ಸ್ಥಿತಿ, ಶಿಕ್ಷಣಕ್ಕಾಗಿ ಪಟ್ಟ ಕಷ್ಟ ಕಾರ್ಪಣ್ಯಗಳು, ಗುರು ಹಿರಿಯರ ವಾತ್ಸಲ್ಯ, ತಾಯಿಯ ಅಂತಃಕರಣದ ಆರೈಕೆಯಲ್ಲಿ ಬೆಳೆದು ಬಂದ ರೀತಿ, ಬ್ಯಾಂಕಿಂಗ್ ಕ್ಷೇತ್ರದ ಅವರ ಅಗಾಧ ಸಾಧನೆಗಳ ಹೊಂಗಳಸಕ್ಕೆ ಇವೆಲ್ಲ ಅಡಿಪಾಯವಾಗಿರುವುದು ಗೋಚರಿಸುತ್ತದೆ. ಸ್ವತಃ ಅವರ ಆತ್ಮಸಂಗಾತಿಯೆ ಇವನ್ನೆಲ್ಲ ನಿರೂಪಿಸಿರುವುದರಿಂದ ಇಲ್ಲಿಯ ಬರವಣಿಗೆ ಅಧಿಕೃತತೆಯನ್ನು ಆತ್ಮೀಯತೆಯನ್ನು ಪಡೆದುಕೊಂಡಿದೆ. ವಸ್ತುನಿಷ್ಠವಾಗಿ ನೋಡಿದರೆ ಶ್ರೀ ಹೂಗಾರ ಅವರ ವ್ಯಾವಹಾರಿಕ ಜೀವನ ಹಾಗೂ ಗೃಹಸ್ಥ ಜೀವನ ಎರಡರಲ್ಲೂ ಅವರ ಸ್ವಭಾವ ಸಹಜ ಗುಣವೇ ಎದ್ದು ಕಾಣುತ್ತದೆ.

ಪ್ರಸ್ತುತ ಜೀವನ ಚರಿತೆಯಲ್ಲಿ ಒಂದೆರಡು ಮಹತ್ವದ ಐತಿಹಾಸಿಕ ಸಂಗತಿಗಳೂ ಹೆಣೆದುಕೊಂಡಿರುವುದನ್ನು ಓದುಗರು ಗಮನಿಸಬಹುದು. ಲೇಖಕಿಯ ಅಜ್ಜ ಶ್ರೀ ಶಾಂತವೀರಪ್ಪ ಕೋಟೂರ ಹಾಗೂ ಅವರ ಸಮಕಾಲೀನರಾದ ಶ್ರೀ ಬುದ್ಧಯ್ಯಸ್ವಾಮಿ ಪುರಾಣಿಕಮಠ, ಪ್ರೊ. ಶಿ.ಶಿ. ಬಸವನಾಳ ಮೊದಲಾದ ಸಮಾಜ ಧುರೀಣರು

ಧಾರವಾಡದ ಲಿಂಗಾಯತ ಟೌನ್‌ಹಾಲಿನಲ್ಲಿ ಕಾವ್ಯಶಾಸ್ತ್ರ ವಿನೋದದಲ್ಲಿ ಕಾಲಕ್ಷೇಪ ಮಾಡುತ್ತಿದ್ದ ಸಂಗತಿಯೂ ಇಲ್ಲಿ ಉಲ್ಲೇಖಗೊಂಡಿದೆ. ಪ್ರೊ. ಬಸವನಾಳರು ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಲ್ಲಿ ಒಂದು ಸಾಹಿತ್ಯ ಸಮಿತಿ ಸ್ಥಾಪಿಸಬೇಕೆಂದಾಗ ಶ್ರೀ ಶಾಂತವೀರಪ್ಪ ಕೋಟೂರ ಅವರು ಸಹಾಯ, ಸಹಕಾರ ನೀಡಿದ್ದನ್ನು ಇಲ್ಲಿ ಸ್ಮರಿಸಲಾಗಿದೆ. ಜೊತೆಗೆ ಇನ್ನೂ ಕೆಲವು ಪ್ರಮುಖರ ಹೆಸರುಗಳೂ ದಾಖಲೆಗೊಂಡಿವೆ.

ಬ್ಯಾಂಕಿಂಗ್ ಕ್ಷೇತ್ರದ ಭೀಷ್ಮರೆಂದು ಹೆಸರುಗಳಿಸಿಕೊಂಡ ಶ್ರೀ ಹೂಗಾರರು ಶಿಕ್ಷಣ, ಸಹಕಾರ, ಆರ್ಥಿಕ ಕ್ಷೇತ್ರಗಳಲ್ಲಿಯೂ ಆಸ್ಥೆ-ಅಭಿರುಚಿ ಹೊಂದಿದ್ದವರಾಗಿದ್ದರು. ಭಾರತದ ವಿವಿಧ ಬ್ಯಾಂಕುಗಳಲ್ಲಿ ಕಾರ್ಯ ನಿರ್ವಹಿಸಿ ವಿದೇಶಗಳಲ್ಲಿಯೂ ಪ್ರವಾಸ ಹಾಗೂ ಕೆಲಸ ಮಾಡುವ ಪ್ರಸಂಗಗಳು ಒದಗಿಸಿದ್ದರಿಂದ ವಿಶೇಷವಾದ ಅನುಭವದೊಂದಿಗೆ ಇಂಗ್ಲಿಷ್, ಕನ್ನಡ, ಮರಾಠಿ, ಹಿಂದಿ ಭಾಷೆಗಳಲ್ಲಿಯೂ ಅವರಿಗೆ ಸಹಜ ಪರಿಣತಿಯುಂಟಾಯಿತು. ಜೀವನದಲ್ಲಿ ಅಪಾರವಾದ ಕಷ್ಟದ ನಂಜನ್ನುಂಡಿದ್ದರೂ ಶ್ರೀಮತಿ ಶೋಭನಾ ಅವರು ಹೇಳಿದಂತೆ ಅವರು ಮನಸ್ಸಿನ ನಿರಾಳತೆಯನ್ನೂ ಆನಂದವನ್ನೂ ಕಾಪಾಡಿಕೊಂಡದ್ದು ಅವರ ವೈಶಿಷ್ಟ್ಯವಾಗಿತ್ತು. ವಿನಯ, ವಿವೇಕ, ಪರೋಪಕಾರದ ವಿಚಾರಗಳು ಎಂಥ ಆತಂಕಗಳನ್ನು ಎದುರಿಸುವ ದೃಢಸಂಕಲ್ಪಕ್ಕೆ ಕಾರಣವಾಗಿದ್ದವು. ಜೊತೆಗೆ ಗುರು ಹಿರಿಯರ, ತಂದೆತಾಯಿಗಳ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ದೈವಭಕ್ತಿ ಅವರಲ್ಲಿ ಸ್ವಾಭಾವಿಕವಾಗಿಯೇ ಇತ್ತು. "ದುಗುಡ, ಮುನಿಸು, ಗೊಣಗಾಟಗಳನ್ನು ಅವರು ಎಂದೂ ಪ್ರದರ್ಶಿಸಲಿಲ್ಲ. ನಗುಮೊಗ, ಶಾಂತ ಸ್ವಭಾವ, ಗಾಂಭೀರ್ಯಗಳನ್ನು ಕಂಡವರು ಪ್ರಸನ್ನತೆಯನ್ನು ಪಡೆಯುತ್ತಿದ್ದರು" ಎಂಬುದನ್ನು ಶ್ರೀಮತಿ ಶೋಭನಾ ಅವರು ಪದೇಪದೇ ನೆನೆದುಕೊಳ್ಳುತ್ತಾರೆ.

ಶ್ರೀ ಹೂಗಾರ ಅವರ ಬಾಲ್ಯದ ಚಿತ್ರಣವನ್ನು ಶ್ರೀಮತಿಯವರು ಸ್ವಾರಸ್ಯಕರವಾಗಿ ಕೊಟ್ಟಿದ್ದಾರೆ. ಬಾಲಕನಿದ್ದಾಗ ದಿನ ನಿತ್ಯ ಹೂ ಪತ್ರಿ ಹರಿದು ಸೋದರತ್ತೆ ಶಿವಮ್ಮಗೆ ಕೊಡುತ್ತ ಸಾಯಂಕಾಲ ಅಣ್ಣೀಗೇರಿಯ ಅಮೃತೇಶ್ವರ ದೇವಾಲಯಕ್ಕೆ ಗಂಟೆಯನ್ನು ಬಾರಿಸಲು ಹೋಗುತ್ತಿದ್ದರಂತೆ. ಶ್ರೀ ಹೂಗಾರ ಗದಗಿನಲ್ಲಿ ಶಿಕ್ಷಣವನ್ನು ಮುಂದುವರಿಸಿದಾಗ ಊಟಕ್ಕೆಂದು ಅವರ ತಾಯಿ ಜೋಳದ ರೊಟ್ಟಿ, ಗುರೆಳ್ಳು ಹಾಗೂ ಪುಟಾಣಿ ಚಟ್ನಿಯನ್ನು ಎಂಟುದಿನ ಆಗುವಷ್ಟು ಕಟ್ಟಿಕೊಡುತ್ತಿದ್ದರಂತೆ. ಅದಕ್ಕೆ ಇವರು ಚಟ್ನಿಯಲ್ಲಿ ನೀರನ್ನು ಹಾಕಿ ಕಲಸಿ ತಿನ್ನುತ್ತಿದ್ದರಂತೆ. ಕೆಲವು ಇಂಥ ಸಂಗತಿಗಳಿವೆ. ಹೀಗೆ ತಮ್ಮ ಅಂತಃಕರಣವನ್ನೇ ಧಾರೆಯೆರೆದು ಬೆಳೆಸಿದ ತಮ್ಮ ತಾಯಿಯನ್ನೇ ದೇವರೆಂದು ಭಾವಿಸಿ ಅವರ ನಿಧನದನಂತರ 'ಮಾತೋಶ್ರೀ ನಿಂಗಮ್ಮ ಆರ್. ಹೂಗಾರ

ಶಿಕ್ಷಣ ಹಾಗೂ ಸಂಶೋಧನ ಪ್ರತಿಷ್ಠಾನ'ವನ್ನು ತಾವು ಹುಟ್ಟಿ ಬೆಳೆದ ಅಣ್ಣಿಗೇರಿಯಲ್ಲಿ ಸ್ಥಾಪಿಸಿ, ಅದರಡಿಯಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು ವಿಜ್ಞಾನ, ವಾಣಿಜ್ಯ, ಕಲಾ ಕಾಲೇಜುಗಳನ್ನು ಕಟ್ಟಿ, ಏಳು ನೂರು ಮಕ್ಕಳಿಗೆ ಓದುವ ಅವಕಾಶವನ್ನು ಕಲ್ಪಿಸಲಾಗಿದೆ. ಪ್ರತಿಷ್ಠಾನದ ಧ್ಯೇಯೋದ್ದೇಶಗಳೂ ಉದಾತ್ತವಾಗಿದ್ದು ಅವೆಲ್ಲವನ್ನು ಅನುಷ್ಠಾನದಲ್ಲಿ ತರಲಾಗಿದೆ. "ನೀನೊಬ್ಬನೆ ಕಲಿತರಲ್ಲ, ನಿನ್ನ ಜೊತೆಗೆ ಹತ್ತಾರು ರಾಮುಗಳಿಗೆ ಶಿಕ್ಷಣ ನೀಡು" ಎಂದು ಆ ತಾಯಿ ಹೇಳಿದ್ದರಂತೆ. ಶ್ರೀಮತಿ ಹೂಗಾರ ಅವರು ಬರೆಯುತ್ತಾರೆ: "ಒಬ್ಬ ಹೆಚ್ಚು ಕಲಿಯದ ತಾಯಿಯ ಬಾಯಿಂದ ಅದ್ಭುತ ಹಾರೈಕೆಯ ಈ ಮಾತು ಬರುವದು ನಿಜಕ್ಕೂ ಕರ್ಣಾನಂದಕರ". ಬ್ಯಾಂಕಿನಲ್ಲಿ ನೌಕರಿ ಹತ್ತಿದೆ ಎಂದಾಗ ಈ ತಾಯಿಯೇ ಹೇಳಿದ್ದು; "ರಿಜರ್ವ್‌ಬ್ಯಾಂಕಿನ ಅಧ್ಯಕ್ಷನಾಗಬೇಕು. ಪ್ರತಿಯೊಂದು ನೋಟಿನ ಮೇಲೆ ನಿನ್ನ ಸಹಿಯಾಗಬೇಕು" ಎಂದುದನ್ನು ನೆನೆದು ಶ್ರೀಮತಿ ಶೋಭನಾ ಅವರು "ಬರಿ ನಾಲ್ಕನೇಯತ್ತೆ ಕಲಿತ ನನ್ನ ಅತ್ತೆ ಎಷ್ಟು ಜಾಣರು ನೋಡಿ, ನನಗೂ ಸಹ ಮನಸ್ಸಿನಲ್ಲಿ ಬಂದಿರಲಿಲ್ಲ ಈ ಮಾತು" ಎಂದು ಪ್ರತಿಕ್ರಿಯಿಸಿದ್ದಾರೆ. "ದೇವರ ಜೊತೆ ಸಮನಾಗಿ ಮಾತನಾಡಬಲ್ಲ ಒಂದು ಮಾದರಿಯಲ್ಲಿ ಅವರು ತಾಯಿಯವರ ಆತ್ಮದೊಂದಿಗೆ ಮಾತನಾಡುತ್ತಿದ್ದರು" ಎಂದಿರುವಲ್ಲಿ ಅತಿಶಯೋಕ್ತಿ ಕಾಣಿಸದು. ಪುಸ್ತಕದ ಕೊನೆಯಲ್ಲಿ ಆತ್ಮೀಯರು ಬರೆದ ಹೃದಯಸ್ಪರ್ಶಿ ಪತ್ರಗಳನ್ನು ಬಂಧುಬಳಗದ ಶ್ರದ್ಧಾಂಜಲಿ ಗೀತಗಳನ್ನು ಕೊಟ್ಟಿರುವುದು ಈ ನುಡಿಚಿತ್ರಕ್ಕೆ ಸುಂದರ ಸ್ಮರಣೆಯ ಕಟ್ಟು ಹಾಕಿದಂತಿದೆ.

"ಪದವಿಶಿಕ್ಷಣ ಪೂರೈಸಿದ್ದರೂ ಸಾಹಿತ್ಯ ಕ್ಷೇತ್ರದಲ್ಲಿ ಇಷ್ಟರವರೆಗೆ ಕೈಯಾಡಿಸದಿದ್ದ ನಾನು, ಒಮ್ಮಿಂದೊಮ್ಮಿಗೆ ನನ್ನ ಯಜಮಾನರ ಕುರಿತಾಗಿ ಒಂದು ಪುಟ್ಟ ಜೀವನಚರಿತ್ರೆ ಬರೆಯುವ ಮಹಾಸಾಹಸಕ್ಕೆ ಕೈಹಾಕಬೇಕೆಂದು ಯೋಚಿಸಿದಾಗ ಒಂದಿನಿತು ದಿಗಿಲು, ಒಂದಿನಿತು ಆಶ್ಚರ್ಯ" ಶ್ರೀಮತಿ ಶೋಭನಾ ಆರ್. ಹೂಗಾರ ಅವರಿಗೆ ಅನಿಸಿದ್ದರೂ ಬರೆಯಲೇ ಬೇಕೆಂಬ ತುಡಿತವಿದ್ದುದರಿಂದ ಎಲ್ಲವೂ ಸರಳವಾಗಿ, ಸಹಜವಾಗಿ ಮೂಡಿ ಬಂದಿರುವುದನ್ನು ಓದುಗರು ಗುರುತಿಸಬಹುದು. "ನನ್ನವರು ಸಾಂಸಾರಿಕ ಜೀವನದಲ್ಲಿಯೂ ಅತ್ಯಂತ ಸಂತೃಪ್ತರು. ಸಹಧರ್ಮಿಣಿಯಾದ ನನ್ನನ್ನು ತಮ್ಮ ಜೀವನಾಂತ್ಯದವರೆಗೂ ಅತ್ಯಂತ ಪ್ರೀತಿಗೌರವದಿಂದ ನೋಡಿಕೊಂಡರು" ಎಂಬ ತೃಪ್ತಿ ಅವರಲ್ಲಿರುವುದರಿಂದ ಬರೆಹದಲ್ಲಿಯೂ ಸಮತೋಲನ ದೃಷ್ಟಿ ಕಂಡುಬರುತ್ತದೆ. "ನಮ್ಮ ದಾಂಪತ್ಯದ ಕರ್ತವ್ಯಗಳಲ್ಲಿ ಅಧ್ಯಾತ್ಮದ ಎಳೆ ಕಂಡಿದ್ದೇನೆ" ಎಂಬ ಮಾತೂ ಈ ಸಂದರ್ಭದಲ್ಲಿ ಅತ್ಯಂತ ಸೂಕ್ತವಾಗಿದೆ. ಕಲ್ಯಾಣ ನಗರದ ತಮ್ಮ ಮನೆಯಲ್ಲಿ ('ಪೀತಾಂಬರ') ಹೂಗಾರ ದಂಪತಿಗಳು ಇರತೊಡಗಿದಂದಿನಿಂದಲೂ (೨೦೦೧) ಅವರ

ಸಂಪರ್ಕವಿದ್ದು ಅವರ ಜೀವನ ವಿಧಾನವನ್ನು ನೋಡುತ್ತ ಬಂದಿರುವುದರಿಂದ ಈ ಬರವಣಿಗೆಯಲ್ಲಿ ನನಗೆ ಯಾವುದೂ ಅತಿಶಯೋಕ್ತಿಯೆಂದು ಅನಿಸಿಲ್ಲ. ಹೂಗಾರ ಅವರ ಜೀವನ ಚರಿತ್ರೆ ಇಂದಿನ ಪೀಳಿಗೆಗಂತೂ ಅತ್ಯಂತ ಸ್ಫೂರ್ತಿದಾಯಕ ಮಾರ್ಗದರ್ಶಕವಾಗಿದೆಯೆಂದರೆ ತಪ್ಪಾಗದು.

ಹಿಂದೆ, ಎಲ್ಲರೂ ಸಂತೋಷ ಹಾಗೂ ನೆಮ್ಮದಿಯಿಂದ ಬದುಕುತ್ತಿದ್ದ ಕೌಟುಂಬಿಕ ವ್ಯವಸ್ಥೆ ಇತ್ತೀಚೆಗೆ ಕಣ್ಮರೆಯಾಗುತ್ತಿರುವ ಸಂದರ್ಭದಲ್ಲಿ ಕುಟುಂಬವತ್ಸಲರಾದ ಶ್ರೀ ಆರ್.ಎಸ್. ಹೂಗಾರ ಅವರ ಜೀವನಚರಿತ್ರೆ ಈ ರೂಪದಲ್ಲಿ ಬರುತ್ತಿರುವುದು ಅತ್ಯಂತ ಸ್ವಾಗತಾರ್ಹ. ಅದಕ್ಕಾಗಿ ಶ್ರೀಮತಿ ಶೋಭನಾ ಹೂಗಾರ ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

'ಬ್ಯಾಂಕಿಂಗ್ ಕ್ಷೇತ್ರದ ಭೀಷ್ಮ' ಗ್ರಂಥ : ೨೦೧೬

ರಾಜೇಂದ್ರ ಗಡಾದ ಅವರ 'ವಚನ ವಿಕಾಸ'ಕ್ಕೆ ಮುನ್ನುಡಿ

ಡಾ. ರಾಜೇಂದ್ರ ಎಸ್. ಗಡಾದ ಅವರು ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದವರಲ್ಲಿ ಒಬ್ಬರೆನಿಸಿದ್ದಾರೆ. ಮಕ್ಕಳಿಗಾಗಿ ಅವರು ಕವಿತೆ ಬರೆದಿದ್ದಾರೆ, ಕತೆ ಹೇಳಿದ್ದಾರೆ, ಒಗಟು ಒಡ್ಡಿದ್ದಾರೆ, ವಚನ ರಚಿಸಿದ್ದಾರೆ, ಜೀವನ ಚರಿತ್ರೆ ಒದಗಿಸಿದ್ದಾರೆ, ಶಿಶು ಪ್ರಾಸಗಳನ್ನು ಹೆಣೆದಿದ್ದಾರೆ, ಕಿರು ನಾಟಕಗಳನ್ನು ಬರೆದಿದ್ದಾರೆ. ಈ ಎಲ್ಲ ಪ್ರಕಾರಗಳಲ್ಲಿಯೂ ಅವರು ಉತ್ತಮ ಕೃಷಿಗೈದದ್ದಲ್ಲದೆ, 'ಮಕ್ಕಳ ಸಾಹಿತ್ಯ ಮತ್ತು ಶಿಸು ಸಂಗಮೇಶ' ವಿಷಯವನ್ನು ಕುರಿತು ಸಂಶೋಧನೆ ಮಾಡಿ ಸಂಪ್ರಬಂಧವನ್ನೂ ಪ್ರಕಟಿಸಿದ್ದಾರೆ. ಇದೂ ಅಲ್ಲದೆ, ಮಕ್ಕಳ ಸಾಹಿತ್ಯಕ್ಕೆ ಸಂಬಂಧಪಟ್ಟ ಹಲವಾರು ಮಹತ್ವದ ಸಂಕಲನಗಳ ಸಂಪಾದಕರೂ ಆಗಿದ್ದಾರೆ.

ಈಗ್ಗೆ ಹದಿನೆಂಟು ವರ್ಷಗಳ ಹಿಂದೆಯೇ 'ದಾರಿದೀಪ' ಎಂಬ ಮಕ್ಕಳ ವಚನ ಸಂಕಲನವನ್ನು ಪ್ರಕಟಿಸಿ ವಚನ ರಚನೆಯಲ್ಲಿ ಹೊಸದಾರಿಯೊಂದನ್ನು ಕಂಡುಕೊಂಡಿದ್ದಾರೆ. ಇದನ್ನೆಲ್ಲ ನೋಡಿದಾಗ ಮಕ್ಕಳ ಸಾಹಿತ್ಯದಲ್ಲಿ ಅವರು ಎಷ್ಟೊಂದು ಪ್ರಯೋಗಶೀಲರಾಗಿದ್ದಾರೆ ಎಂಬ ಅಚ್ಚರಿಯೂ ಉಂಟಾಗಬಹುದು. ಈ ಎಲ್ಲ ಪ್ರಕಾರಗಳಲ್ಲಿ ಅವರ ಕೃತಿಗಳು ಒಂದೇ ಗುಣಮಟ್ಟದಲ್ಲಿ ಇರಲಿಕ್ಕಿಲ್ಲವಾದರೂ ಮಕ್ಕಳ ವಚನರಚನೆಯಲ್ಲಿ ಒಂದು ಹೊಸತನವನ್ನು ಮೆರೆದಿದ್ದಾರೆ. ಪ್ರಸ್ತುತ 'ವಚನವಿಕಾಸ', 'ದಾರಿದೀಪ' ಸಂಗ್ರಹದ ರೀತಿ ನೀತಿಗಳ ಮುಂದುವರಿಕೆಯೇ ಆಗಿದ್ದು, ಅದರದೇ ಎರಡನೆಯ ಸಂಪುಟವೆಂದೂ ಕರೆಯಬಹುದು.

'ದಾರಿದೀಪ'ದಲ್ಲಿ ೬೮ ವಚನಗಳಿದ್ದರೆ 'ವಚನವಿಕಾಸ'ದಲ್ಲಿ ೧೪೫ ವಚನಗಳಿವೆ. ವಿಷಯದಲ್ಲೂ ಸಾಕಷ್ಟು ವೈವಿಧ್ಯವಿದೆ. ಮಾತು, ಜ್ಞಾನ, ಶಾಲೆ, ಪರಿಸರ, ಹಣ, ಶಿಸ್ತು, ಪ್ರಾರ್ಥನೆ, ಪುಸ್ತಕ, ವಿದ್ಯೆ, ಶ್ರದ್ಧೆ, ವಿಶ್ವಾಸ, ದುರಾಶೆ, ನೀರು, ಏಕಾಗ್ರತೆ, ಸಿಟ್ಟು, ಸಮಯ - ಹೀಗೆ ಹಲವಾರು ವಸ್ತು-ವಿಶ್ಲೇಷಣೆಗಳನ್ನೊಳಗೊಂಡು ಈ ಸಂಕಲನ ವಿಶಾಲವಾದ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಹಿರಿಕಿರಿಯರೆಂಬ ಭೇದವಿಲ್ಲದೆ ಎಲ್ಲ ವಯಸ್ಸಿನ ಮಕ್ಕಳು ಏನೇನು ತಿಳಿದುಕೊಳ್ಳಬೇಕಾಗಿದೆಯೋ ಸ್ವಭಾವದಲ್ಲಿ, ನಡವಳಿಕೆಯಲ್ಲಿ, ಆಚಾರ-ವಿಚಾರಗಳಲ್ಲಿ ಏನೇನು ತಿದ್ದಿಕೊಳ್ಳ ಬೇಕಾಗಿದೆಯೊ ಅದೆಲ್ಲವನ್ನೂ ಸಾಧ್ಯವಿದ್ದಷ್ಟು ಸರಳವಾಗಿ, ನೇರವಾಗಿ, ಹಿತಕರವಾಗಿ ಮನಸ್ಸಿನಲ್ಲಿ ಅಚ್ಚೊತ್ತುವಂತೆ ವಚನರೂಪದಲ್ಲಿ ನಿರೂಪಿಸಲಾಗಿದೆ. ಶೈಲಿಯೂ ವಿಷಯಕ್ಕೆ ತಕ್ಕಂತೆ ರೂಪುಗೊಂಡಿದೆ. ಉದಾಹರಣೆಗೆ ಈ ವಚನವನ್ನು ನೋಡಿ :

ಜ್ಞಾನದಿಂದ ವಿವೇಕ ಹೊಳೆಯುತ್ತದೆ
ಜ್ಞಾನದಿಂದ ಬುದ್ಧಿ ವಿಕಾಸವಾಗುತ್ತದೆ
ಜ್ಞಾನದಿಂದ ಬೆಳಕು ಹರಡುತ್ತದೆ
ಜ್ಞಾನದಿಂದ ನಯವಿನಯ ಗೋಚರಿಸುತ್ತದೆ
ಜ್ಞಾನದಿಂದ ವ್ಯಕ್ತಿತ್ವದ ಸೌಂದರ್ಯ ವರ್ಧಿಸುತ್ತದೆ
ರಾಜೇಂದ್ರ ಪ್ರಿಯಪ್ರಭು
ಜ್ಞಾನವೇ ನಿಜವಾದ ವಿಕಾಸವಯ್ಯ

'ಜ್ಞಾನದಿಂದ' ಎಂಬ ಪದ ಪ್ರತಿಸಾಲಿನಲ್ಲಿಯೂ ಪ್ರಾರಂಭದಲ್ಲಿಯೇ ಬಂದು ಈ ಮಾತಿನ 'ಅಚ್ಚೊತ್ತುವಿಕೆ'ಗೆ ನೆರವಾಗುತ್ತದೆ. ವಿವೇಕ, ಬುದ್ಧಿ, ಬೆಳಕು, ನಯವಿನಯ - ಇವೆಲ್ಲ ಒಂದೊಂದು ಮೆಟ್ಟಿಲಾಗಿ ಇಡೀ ವ್ಯಕ್ತಿತ್ವದ ಸೌಂದರ್ಯ ವರ್ಧನೆಗೆ ಕಾರಣವಾಗುತ್ತವಲ್ಲದೆ, ಒಟ್ಟು 'ಜ್ಞಾನ'ವೇ ಮನುಷ್ಯನ ನಿಜವಾದ ವಿಕಾಸಕ್ಕೆ ಸಾಧನ ವೆಂಬುದನ್ನು ಪರಿಣಾಮಕಾರಿಯಾಗಿ ಮೂಡಿಸುತ್ತದೆ.

ಪೋಲಿಸ್ ಠಾಣೆಗೂ, ಸೆರೆಮನೆಗೂ, ನ್ಯಾಯಾಲಯಕ್ಕೂ ಶಾಲೆಗೂ ಸಂಬಂಧವೇ ಇಲ್ಲ. ಆದರೆ ಸದ್ಯದ ಸ್ಥಿತಿಯಲ್ಲಿ ಶಾಲೆಯನ್ನು ಆ ಅವಸ್ಥೆಗೆ ತಂದಿದ್ದೇವೆ. ಯಾಕೆಂದರೆ ಮಕ್ಕಳು ತಪ್ಪಿತಸ್ಥರು, ಕಳ್ಳರು, ಅಪರಾಧಿಗಳು ಎಂಬ ಭಾವನೆ ಸಾಮಾನ್ಯವಾಗಿ ಬಿಟ್ಟಿದೆ. ಶಾಲೆಗಳು ನಿಜವಾಗಿ ದೇವಾಲಯಗಳಾಗಿ ಮಾರ್ಪಾಡಾಗಬೇಕು, ಮಕ್ಕಳೇ ವಿದ್ಯಾರ್ಥಿಗಳೇ ದೇವರಂತೆ ಶಿಕ್ಷಕರು ಭಾವಿಸಬೇಕು. ಈ ವಿಚಾರವನ್ನು ಒಂದು ಬಗೆಯ ನಿಷೇಧಾತ್ಮಕ ನುಡಿಗಳಲ್ಲಿ ನಿರೂಪಿಸಿರುವ ರೀತಿ ಪರಿಣಾಮಕಾರಿ ಯಾಗಿರುವುದನ್ನು ಮುಂದಿನ ವಚನದಲ್ಲಿ ನೋಡಬಹುದು:

ಶಾಲೆಯೆಂಬುದು ಪೋಲೀಸ ಠಾಣೆಯಾಗಬಾರದು
ಮಕ್ಕಳು ತಪ್ಪಿತಸ್ಥರಲ್ಲ ನೋಡಯ್ಯ
ಶಾಲೆಯೆಂಬುದು ಸೆರೆಮನೆಯಾಗಬಾರದು
ಮಕ್ಕಳು ಕಳ್ಳ ಖದೀಮರಲ್ಲ ನೋಡಯ್ಯ
ಶಾಲೆಯೆಂಬುದು ನ್ಯಾಯಾಲಯವಾಗಬಾರದು
ಮಕ್ಕಳು ಅಪರಾಧಿಗಳಲ್ಲ ನೋಡಯ್ಯ
ರಾಜೇಂದ್ರ ಪ್ರಿಯ ಪ್ರಭುವೇ
ಶಾಲೆಯೆಂಬುದು ದೇವಾಲಯವಾಗಬೇಕಯ್ಯಾ
ಮಕ್ಕಳೇ ದೇವರು ನೋಡಯ್ಯ.

ಮನುಷ್ಯ ದೊಡ್ಡವನಾಗುವದು ಹೃದಯಶ್ರೀಮಂತಿಕೆಯಿಂದಲ್ಲದೆ ಉಳಿದ ಯಾವುದೇ 'ದೊಡ್ಡಿಸ್ತನ'ಗಳಿಂದಲ್ಲ, ಮುಂದಿನ ವಚನದ ಅಭಿವ್ಯಕ್ತಿಯ ರೀತಿಯೇ ಅದನ್ನು ಸೂಚಿಸುತ್ತದೆ:

ಸಿರಿತನ ಹಿರಿತನದಿಂದ ಮನುಷ್ಯ ದೊಡ್ಡವನಾಗಲಾರ
ಬಿರುದು ಬಾವಲಿಗಳಿಂದ ಮನುಷ್ಯ ದೊಡ್ಡವನಾಗಲಾರ
ಅಂತಸ್ತು ಅಧಿಕಾರಗಳಿಂದ ಮನುಷ್ಯ ದೊಡ್ಡವನಾಗಲಾರ
ಕಾರು ಬಂಗಲೆಗಳಿಂದ ಮನುಷ್ಯ ದೊಡ್ಡವನಾಗಲಾರ
ಹೃದಯ ಶ್ರೀಮಂತಿಕೆಯಿಂದ ಮಾತ್ರ
ಮನುಷ್ಯ ದೊಡ್ಡವನಾಗುವನು ನೋಡಾ
ರಾಜೇಂದ್ರ ಪ್ರಿಯ ಪ್ರಭು

ವಿದ್ಯುನ್ಮಾನ ಉಪಕರಣಗಳನ್ನು ಉಪಯೋಗಿಸುವುದರಿಂದ ಮಾತ್ರ ವ್ಯಕ್ತಿ ಆಧುನಿಕನಾಗುವುದಿಲ್ಲ. ಆಧುನಿಕತೆಯ ಹೆಸರಿನಲ್ಲಿ ಮಕ್ಕಳು, ವಿದ್ಯಾರ್ಥಿಗಳು ಹೇಗೆ ತಮ್ಮ ಕಾಲ ಮೇಲೆ ತಾವೇ ಕಲ್ಲು ಚೆಲ್ಲಿಕೊಳ್ಳುತ್ತಾರೆಂಬುದನ್ನು ದಿನವೂ ನಾವು ನೋಡುತ್ತೇವೆ. ಬದುಕಿನ ನೈಜ ಸೊಗಸನ್ನೇ ಕಳೆದುಕೊಂಡು ವಿರಾಮಕಾಲವೂ ರಸಹೀನವಾಗುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಅದಕ್ಕೆ ಪರಿಹಾರವೆಂಬಂತೆ ಮುಂದಿನ ವಚನದಲ್ಲಿ ಕಿವಿಮಾತು ಹೇಳಲಾಗಿದೆ.

ಹೊತ್ತು ಹೋಗಲೆಂದು ಹರಟೆ ಹೊಡೆಯುವದಕ್ಕಿಂತ
ಶಾಂತ ಸ್ಥಳವನ್ನಾರಿಸಿ ಓದುವದು ಲೇಸು
ಬೇಸರವಾಗಿದೆಯೆಂದು ಮೊಬೈಲ್‌ಗೇಮ್ ಆಡುವದಕ್ಕಿಂತ
ಆರೋಗ್ಯವರ್ಧಕ ಕ್ರೀಡೆಗಳನ್ನಾಡುವದು ಲೇಸಯ್ಯ
ಹೊತ್ತು ಮುತ್ತಿಗಿಂತ ಉತ್ತಮ. ಒಮ್ಮೆ ಕಳೆದು ಹೋದ
ಹೊತ್ತು ಏನೆಲ್ಲ ಕೊಟ್ಟರೂ ಸಿಗದು ನೋಡಾ
ರಾಜೇಂದ್ರ ಪ್ರಿಯ ಪ್ರಭುವೇ.

ಕೇವಲ ಮಾದರಿಗೆಂದು ಮೇಲಿನ ಕೆಲವು ವಚನಗಳನ್ನಿಲ್ಲಿ ಉದಾಹರಿಸಲಾಗಿದೆ.

ಇಲ್ಲಿಯ ಒಂದೊಂದು ವಚನವೂ ಒಂದೊಂದು ವಿಷಯವನ್ನು ಕುರಿತ ಚಿಂತನಾಕ್ರಮದಿಂದ ಮಕ್ಕಳಿಗೆ ಇದೊಂದು ನೀತಿ ಚಿಂತಾಮಣಿಯೂ ಆಗಿ ಪರಿಣಮಿಸಿದೆ.

ಮಕ್ಕಳಿಗೆ ಇವುಗಳ ಓದೇ ಒಂದು 'ಶಿಕ್ಷಣ' ವೆನಿಸಿ, ವ್ಯಕ್ತಿತ್ವ ವಿಕಸನದ ಒಂದು ಸಂಸ್ಕೃತಿಯನ್ನು ಇವು ರೂಪಿಸಬಲ್ಲವು. ಮೊದಲ ವಚನಸಂಕಲನ 'ದಾರಿದೀಪ'ಕ್ಕೆ ಡಾ. ಬಿ.ವ್ಹಿ. ಶಿರೂರ ಅವರು ಅಭಿಪ್ರಾಯ ಪಟ್ಟಂತೆ ಹೊಸರೀತಿಯಲ್ಲಿ ಮೂಡಿ ಬಂದ ಈ ಕೃತಿ ಮಕ್ಕಳಿಗಷ್ಟೇ ಅಲ್ಲ, ಪಾಲಕರಿಗೂ ಶಿಕ್ಷಕರಿಗೂ ಸರ್ವವಿಧದಲ್ಲಿ 'ದಾರಿದೀಪ' ವಾಗುವುದಾಗಿ ಅವರು ಭರವಸೆಯನ್ನು ವ್ಯಕ್ತಪಡಿಸಿದ್ದುಂಟು. 'ವಚನವಿಕಾಸ' ಆ ಮಾತನ್ನು ಇನ್ನಷ್ಟು ಗಟ್ಟಿಗೊಳಿಸಿದೆ. ಅದಕ್ಕಾಗಿ ಡಾ. ರಾಜೇಂದ್ರ ಗಡಾದ ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

'ವಚನ ವಿಕಾಸ'ದ ಮುನ್ನುಡಿ ೨೦೧೮

ವಿದ್ಯಾಧರ ಮುತಾಲಿಕ ದೇಸಾಯಿ ಅವರ 'ಉಡಿಯತುಂಬುವೆ'ಗೆ ಮುನ್ನುಡಿ

ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಠಾಕುರ್ಲಿ (ಪೂರ್ವ) ಯಲ್ಲಿ ೨೦೦೧ರಲ್ಲಿ ಆರಂಭಗೊಂಡ ಮುಂಬೆಳಕು ಕನ್ನಡ ಬಳಗ ಶ್ರೀ ವಿದ್ಯಾಧರ ಮುತಾಲಿಕ ದೇಸಾಯಿಯವರನ್ನು ಸಂಸ್ಥಾಪಕ ಅಧ್ಯಕ್ಷರನ್ನಾಗಿಸಿಕೊಂಡು, ಕನ್ನಡ ನಾಡು-ನುಡಿ-ಜಲ-ನೆಲ ಮನಸ್ಸುಗಳನ್ನು ಬೆಸೆಯುವ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡು, ಕನ್ನಡದ ಅನೇಕ ಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಬಂದಿರುವುದು ನಿಜಕ್ಕೂ ಅಭಿಮಾನದ ಹಾಗೂ ಅಭಿನಂದನೀಯ ಸಂಗತಿಯಾಗಿದೆ.

ಈ ಸಂಸ್ಥೆ ಹೊರನಾಡಿನ ಕನ್ನಡ ಶಾಲೆಗಳಲ್ಲಿ ಪ್ರತಿಭಾ ಪ್ರೋತ್ಸಾಹ, ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ, ಲೇಖಕರಿಗೆ ವಾರ್ಷಿಕ ಸಾಹಿತ್ಯ ಪ್ರಶಸ್ತಿ, ಮನೆಮನೆಯಲ್ಲಿ ಸಾಹಿತ್ಯಗೋಷ್ಠಿ, ಸಾಂದರ್ಭಿಕ ಕವಿಗೋಷ್ಠಿ, ದತ್ತಿ ಉಪನ್ಯಾಸ ಇತ್ಯಾದಿ ಕಾರ್ಯಕ್ರಮಗಳಲ್ಲದೆ ಆಗಾಗ ಗ್ರಂಥ ಪ್ರಕಟಣೆಗಳನ್ನೂ ಸಾಧ್ಯವಿದ್ದಷ್ಟು ಮಾಡುತ್ತ ಬಂದಿದೆ. ಹೊರನಾಡಿನಲ್ಲಿ ಎಲ್ಲೆಲ್ಲಿ ಕನ್ನಡವೋ, ಅಲ್ಲಲ್ಲಿ ಕನ್ನಡ ಕಾರ್ಯಕ್ರಮಕ್ಕೆ ಸಿದ್ಧವಿರುವ ಬಳಗ 'ಮುಂಬೆಳಗು'. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇನ್ನೂ ಹೆಚ್ಚಿನ ವಾರ್ಷಿಕ ಅನುದಾನ ನೀಡಿ ಇಂಥ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವದೆಂದು ಆಶಿಸುತ್ತೇನೆ. ಇದು ಅದರ ಕರ್ತವ್ಯವೂ ಆಗಿದೆ.

ಸೊಲ್ಲಾಪುರದಲ್ಲಿ 'ಕನ್ನಡ ಕೋಟೆ'ಯನ್ನು ಕಟ್ಟಿ, ಮಹಾರಾಷ್ಟ್ರದಲ್ಲಿ ಹಾಗೂ ಹೊರನಾಡಿನಲ್ಲಿ ಕನ್ನಡದ ಅಪೂರ್ವ ಜಾಗೃತಿಯನ್ನುಂಟುಮಾಡಿ, ಕನ್ನಡ ಹಾಗೂ ಮರಾಠಿಯಲ್ಲಿ ಅನೇಕ ಕೃತಿಗಳನ್ನು ರಚಿಸಿ ಪರಸ್ಪರ ಬಾಂಧವ್ಯವನ್ನು ಹೆಚ್ಚಿಸಿದ ಮಹಾವ್ಯಕ್ತಿಗಳಲ್ಲಿ ಜಯದೇವಿ ತಾಯಿ ಲಿಗಾಡೆಯವರು ಚಿರಸ್ಮರಣೀಯರು. ಕನ್ನಡದ ಗಣ್ಯ ಕವಯಿತ್ರಿಯಾಗಿ "ಸಿದ್ಧರಾಮ ಪುರಾಣ"ದಂತಹ ತ್ರಿಪದಿ ಮಹಾಕಾವ್ಯವನ್ನು ರಚಿಸಿ, ವಚನಸಾಹಿತ್ಯವನ್ನು ಮರಾಠಿಯಲ್ಲಿ ಹೃದ್ಯವಾಗಿ ಅನುವಾದಿಸಿ, ಮರಾಠಿ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ ಶ್ರೀ ತರ್ಕತೀರ್ಥ ಲಕ್ಷ್ಮಣಶಾಸ್ತ್ರೀ ಜೋಶಿಯವರಿಂದ "ಇವರ ಕೃತಿಯನ್ನೋದಿದ ನಮಗೆ ಕನ್ನಡದ ಬಗ್ಗೆ ಆದರವನ್ನು ಬೆಳೆಸಬೇಕೆಂಬ ಇಚ್ಛೆಯಾಗುತ್ತದೆ ಎಂಬ ಮಾತೇನೂ ಸಣ್ಣದಲ್ಲ" ಎಂಬ ಪ್ರಶಂಸೆಗೆ ಭಾಜನರಾದವರು. ೧೯೭೪ರಲ್ಲಿ ಮಂಡ್ಯದಲ್ಲಿ ನಡೆದ ೪೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ,

ಕರ್ನಾಟಕ ವಿಶ್ವವಿದ್ಯಾಲಯದ ಡಿ.ಲಿಟ್. ಪದವಿ ಮೊದಲಾದ ಪ್ರಶಸ್ತಿ ಗೌರವಗಳು ಅವರಿಗೆ ಸಂದಿವೆ. ಸೊನ್ನಲಿಗೆಯ ಸಿದ್ಧರಾಮನಲ್ಲಿ ಅವರ ಪ್ರಾರ್ಥನೆ ಇದು :

ಸೊಲ್ಲಾಪುರದೊಳಗೆ ಸೊಲ್ಲಾ ಅಡಗಿಸಬ್ಯಾಡೊ
ನಿಲ್ಲೆಂದು ತಾಯಿನುಡಿನಿಲ್ಲಿಸು ಸಿದ್ಧರಾಮ
ಅಲ್ಲಗಳೆದವರಿಗೆ ತಿಳಿಹೇಳು

ಇಂಥ ಪ್ರಾತಃಸ್ಮರಣೀಯ ವ್ಯಕ್ತಿಯ ಜನ್ಮಶತಾಬ್ದಿಯ ಸವಿನೆನಪಿಗೆ 'ಮುಂಬೆಳಗು', ಮಹಾರಾಷ್ಟ್ರ ಮತ್ತು ಹೊರನಾಡ ಕನ್ನಡಿಗರಿಗಾಗಿ ಕವನ ಸ್ಪರ್ಧೆ ಏರ್ಪಡಿಸಿ 'ಉಡಿಯ ತುಂಬುವೆ' ಕವನ ಸಂಕಲನವನ್ನು ಅರ್ಪಿಸುತ್ತಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ. ಅದಕ್ಕಾಗಿ ಸಂಪಾದಕದ್ವಯರಾದ ಶ್ರೀವಿದ್ಯಾಧರ ಮುತಾಲಿಕ ದೇಸಾಯಿ ಹಾಗೂ ಡಾ. ಗುರುಸಿದ್ಧಯ್ಯ ಸ್ವಾಮಿಯವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಹಾಗೆಯೇ ಧಾರವಾಡದ ಶ್ರೀವತ್ಸ ಪ್ರಕಾಶನ ಸಂದರ್ಭೋಚಿತವಾದ ಈ ಪ್ರಕಟಣೆಯಿಂದ ಎಲ್ಲ ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗಿದೆ.

(೨)

ಗುಜರಾತ, ಚೆನ್ನೈ, ದೆಹಲಿ, ಕೇರಳ, ಮಹಾರಾಷ್ಟ್ರ ಮುಂತಾದ ಹೊರನಾಡಿನ ಮೂಲೆಮೂಲೆಗಳಿಂದ ಕವಿಗಳು ಸ್ಪಂದಿಸಿರುವದೂ, ಅವರಲ್ಲಿ ಯುವ ಪೀಳಿಗೆ ಹಾಗೂ ಮಹಿಳೆಯರ ಪ್ರಮಾಣ ಗಣನೀಯವಾಗಿರುವುದೂ ತುಂಬ ಸ್ವಾಗತಾರ್ಹ ಸಂಗತಿಯಾಗಿದೆ.

ಈ ಸಂಕಲನದ ೪೩ ಕವಿತೆಗಳಲ್ಲಿ ಎಂಟು ಜನ ಒಳನಾಡಿನ ಕವಿಗಳು ತಾವಾಗಿಯೇ ತಮ್ಮ ಕವಿತೆಗಳೊಂದಿಗೆ ಸಹಕರಿಸಿರುವುದು ಮೆಚ್ಚತಕ್ಕ ಸಂಗತಿಯೇ ಸರಿ.

ಪುಣೆಯ ಆರ್. ಎಂ. ಗಣಾಚಾರಿಯವರು 'ಜಯದೇವಿ ತಾಯಿ ಲಿಗಾಡೆ' ಯವರನ್ನು ಕುರಿತ ತಮ್ಮ ಕವಿತೆಯಲ್ಲಿ 'ಮಾತೃಭಾಷೆ ಮರಾಠಿಯಾದರೂ ಕನ್ನಡಾಂಬೆಯ ಮಗುವಾಗಿ ಬೆಳೆದ' ಅವರ ವಿವಿಧ ಸಾಧನೆಗಳನ್ನು ಸ್ಥೂಲವಾಗಿ ಗುರುತಿಸಿ ಇತಿಹಾಸ ನಿರ್ಮಿಸಿದ ಅವರ ಆಶೀರ್ವಾದವನ್ನು ಬಯಸಿರುವದು ಸಹಜವಾಗಿದೆಯಲ್ಲದೆ ಹೊರನಾಡ ಕನ್ನಡಿಗರ ಒಳದನಿಯೂ ಆಗಿದೆ.

'ನಿಮ್ಮ ಬಾಳೇ ನಮಗೆ ಕನ್ನಡದ ಹೆದ್ದಾರಿ
ನಿಮ್ಮ ಬದುಕೇ ನಮ್ಮ ಬಾಳಿನ ಬೆಳವಣಿಗೆ
ನಿಮ್ಮ ಆಶೀರ್ವಾದವೆ ನಮ್ಮ ಕನ್ನಡದ ಉಸಿರು
ಜಯದೇವಿ ನೀ ತಾಯಿ
ಹಲವು ಇತಿಹಾಸಗಳ ಮಮತಾಮಯಿ'

ಈ ಸಂಕಲನದ ಕವಿಗಳ ಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರೇ ಇರುವದು ಇದರ ವೈಶಿಷ್ಟ್ಯವಾಗಿದೆ. ಇಷ್ಟೇ ಅಲ್ಲ, ಈ ರಚನೆಗಳು ವಸ್ತು ವೈವಿಧ್ಯದಿಂದಲೂ ಕೂಡಿವೆ. ಸಾಮಾನ್ಯವಾಗಿ ಮುಕ್ತ ಛಂದದಲ್ಲಿಯೇ ಮಾತನಾಡುವ ಈ ಕವಿತೆಗಳು ವೈಯಕ್ತಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗು ರಾಜಕೀಯ ಪರಿಸ್ಥಿತಿ ಹಾಗೂ ವಿದ್ಯಮಾನಗಳಿಗೆ ಸ್ಪಂದಿಸಿರುವುದನ್ನು ಇಲ್ಲಿ ಕಾಣುತ್ತೇವೆ. ಅಲ್ಲಲ್ಲಿ ಆಧ್ಯಾತ್ಮಿಕ ಅಂಶಗಳೂ ಇಲ್ಲದಿಲ್ಲ. ಅವುಗಳನ್ನೇ ಮೊದಲು ಪರಿಶೀಲಿಸಬಹುದು.

ದಾಕ್ಷಾಯಿಣಿ ಯಡಹಳ್ಳಿಯವರ 'ವಿಷಮ'ದಲ್ಲಿ 'ಅಂಕುಡೊಂಕಿನ ಪಥವೆ ನಮ್ಮ ಸೇರುವ ವೃತವು' ಸ್ವಲ್ಪ ಅಸ್ಪಷ್ಟವೆನಿಸಿದರೂ "ಆರು ಜನರು ದಾರಿಗೆ ಜೋಡಿ ಕರೆಯುತಿಹರು ಸ್ನೇಹವ ನೀಡಿ ಸೆರೆಗೆ ಹೋಗದಿರುವ ಮುನ್ನ ಬೆರೆಯಬೇಕು ಒಳಗಿನವನ" ಎಂಬ ತುಡಿತ ಅರ್ಥವಾಗುವಂತಿದೆ. ಮುತ್ತಲಗಿಡದ ಪ್ರತೀಕದಿಂದ ಪ್ರಾರಂಭವಾದ ಮಮತಾ ಅವರ 'ಋಣ', ಭ್ರಷ್ಟಾಚಾರ, ಅತ್ಯಾಚಾರ, ಬಾಂಬ್‌ದಾಳಿ, ರಕ್ತದಾಹದ ಅಟ್ಟಹಾಸದಲ್ಲೂ ಹುತಾತ್ಮ ಮಹಾತ್ಮರ ಮಾತೃಭಕ್ತಿಯ ಜೀವ ತುಂಬಿತ್ತು'. ಎಂಬ ಚಿತ್ರದೊಂದಿಗೆ 'ಅವ್ವನ ಹಾಲಿನ ಋಣ' ದಿಂದ ತೃಪ್ತಿಗೊಳ್ಳುತ್ತದೆ.

ಪ್ರೀತಿಯ ಸೆಳೆತದಿಂದ ಮರುಳಾಗಿಸಿ ಮತ್ತೆ ಕೈಕೊಟ್ಟಾಗ ಅಂಥ ವ್ಯಕ್ತಿಯ ಬಗೆಗೆ ಹೆಣ್ಣಿನ ಅಳಲು 'ಕಪ್ಪು ಚಿತ್ರ' ಕವಿತೆಯಲ್ಲಿ ಕಲಾಕಾರ ಮತ್ತು ಬಣ್ಣದ ಪ್ರತಿಮೆಯಾಗಿ ಶಾರದಾ ಅಂಜನ್ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

> "ಕಪ್ಪು ಚುಕ್ಕೆಯಲೇಕೆ ಚಿತ್ರಿಸಿದೆ ನನ್ನ
> ಮತ್ತೆಯಾರೂ ಬಳಿಯದಂತೆ ಬಣ್ಣ"

ಚೆಲುವಾದ ಪ್ರಕೃತಿಯನ್ನು ಕೆಡಿಸಿ ವಿರೂಪಗೊಳಿಸುವದು ಸಲ್ಲ. ಶಾಂತಾ ಶಾಸ್ತ್ರೀಯವರ 'ಕಾಮುಕ'ದಲ್ಲಿ ಎಚ್ಚರಿಕೆಯ ನುಡಿಯಿದೆ. ಇಲ್ಲಿ ಪ್ರಕೃತಿ ಹೆಣ್ಣಿನ ಪ್ರತೀಕವೂ ಆಗಿದೆ.

> "ನಿನ್ನ ಕಾಮದ ತೃಷೆಗೆ ಅವಳು ಬಲಿಯಾಗುವವಳಲ್ಲ
> ಕ್ಷಾಮದಲಿ ಒಣಬಣಗಿ ಬತ್ತಲಾಗುವಳಲ್ಲ
> ಪ್ರೀತಿ-ವಿಶ್ವಾಸ, ಸ್ನೇಹ-ಸುಗುಣಗಳು ಅವಳಿಗೆ ಬೇಕಲ್ಲ
> ಅಂದಾಗಲೇ ಧರಣಿ ಕಂಗೊಳಿಸುವಳು ಹಚ್ಚಹಸಿರಲ್ಲೆಲ್ಲಾ
> ನೀಡುತ್ತ ಉಸಿರು ಜಗದ ಸಕಲ ಜೀವಾದಿಗಳಿಗೆಲ್ಲ"

'ಮರೆತು ಹೋಗುವ ಮೊದಲು ಪುಟಗಳ ಹಾಸಿ ಕಾವ್ಯ ಬಿಡಿಸಬೇಕು' ಎಂಬ ಹಂಬಲ ಅನಿತಾ ಪೂಜಾರಿಯವರ 'ಮರೆವು' ಸೂಚಿಸಿದರೆ, 'ನಿನ್ನೆಣಿಕೆಯಂತೆ ನಾನಾಗಲಿಲ್ಲ' ಎಂಬ ಕೊರಗಿನಲ್ಲಿಯೂ 'ಕನಸಿನ ಕನ್ನಡಿಯ ಬಿಂಬಕ್ಕೆ ಮೂಲ ಜೀವದ

ಬಿಂಬ ತುಂಬುವ' ಭರವಸೆ ಅಂಜಲಿ ತೊರವಿಯವರ 'ಕನಸಿನ ಕನ್ನಡಿ'ಯಲ್ಲಿ ಅಭಿವ್ಯಕ್ತಿಗೊಂಡಿದೆ. 'ಹಗರಣಗಳ ಸುಳಿಯಲ್ಲಿ ಭಾರತ' (ಸುರೇಖಾ ನಾಯಕ್) ಸ್ವಲ್ಪ ವಾಚ್ಯವಾಗಿದ್ದರೆ, 'ನಾವು ಮನುಷ್ಯರು' (ಪವಿತ್ರಾ ಬಿ. ಶೆಟ್ಟಿ)ದಲ್ಲಿ ಆತ್ಮಾವಲೋಕನದ ವ್ಯಂಗ್ಯವಿದೆ. 'ಸ್ಫೋಟ' (ದೀಪ್ತಿ)ದಲ್ಲಿ ಜಗದ ಶಾಂತಿ ಕೆದಕುತ್ತಿರುವ ನೋವು ನುಡಿಗೊಂಡಿದೆ. 'ಸಂಭ್ರಮದ ದೀಪಾವಳಿ' ಸಾರ್ಥಕವಾಗಲಿ ಎಂಬ ಹಾರೈಕೆ ಹೇಮಲತಾ ಶೆಟ್ಟಿಯವರದು. ಪ್ರಾರಂಭದಲ್ಲಿ ಸುಖದಾಯಕ, ಅತಿಯಾದಾಗ ಅವಾಂತರಗೊಳ್ಳುವ ಚಿತ್ರ ಸಂಧ್ಯಾ ಎನ್. ಅವರ 'ಈ ಮಳೆ'ಯಲ್ಲಿದೆ. ಜಗದ ತಾರತಮ್ಯವನ್ನು ಅಸಮಾನತೆಯನ್ನು ನಿವಾರಿಸಿ ಕಾಪಾಡುವದು ದೇವರ ಕರ್ತವ್ಯವಲ್ಲವೆ? ಎಂದು ಕೇಳುತ್ತದೆ ಸೌಮ್ಯ ಎಸ್. ಅವರ 'ದೇವರೆಲ್ಲಾ ಹೀಗೇನಾ?' ಪದ್ಮ, ನಿಶಾ ಎಚ್. ಅವರ 'ಇನಿಯಾ-ನೀ ಬರುವೆಯಾ' ಕವಿತೆಯಲ್ಲಿ ವಿರಹವೇದನೆಯ ತೀವ್ರತೆಯಿದೆ. 'ಭಯೋತ್ಪಾದಕರು' (ರಿತಿಕಾ) ಕ್ರೌರ್ಯ, ಹಿಂಸೆಯ ಪ್ರತೀಕವಾಗಿದೆ. 'ಮುದಿದೇಹದ ಮಾತೆಯ ಮಮಕರಿಸುವರಾರಿಲ್ಲ' ಎಂಬ ಕಳವಳವನ್ನು ಉದ್ದಕ್ಕೂ ನಿವೇದಿಸುವ ಕವಿತೆ (ಸುಮಾ ಶಿವರಾಮ) ಓದುಗರಲ್ಲಿ ಕರುಣೆಯನ್ನು ಉಕ್ಕಿಸುವಂತಿದೆ.

ಸರೋಜಾ ಅಮಾತಿಯವರ 'ಯಾರು ಹೊಣೆ'ಯಲ್ಲಿ ಹೆಣ್ಣಿನ ಶೋಷಣೆಯ ಚೊಕ್ಕ ಚಿತ್ರವಿದೆ. ನಿಸರ್ಗದ ಚೆಲುವನ್ನಸ್ವಾದಿಸುವ ನಲ್ಲನಲ್ಲೆಯ ಪ್ರೀತಿಯ ನರುಗಂಪಿನೊಂದಿಗೆ 'ನವಜೀವನದ ಹೊಸರಾಗ' 'ಇಳೆಯೆಲ್ಲ ಬೆಳಗಾಯಿತೂ' (ಪದ್ಮಾ ಸದಾನಂದ) ಒಂದು ಸುಂದರ ಬಾವಗೀತೆ.

ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯ, ಪುರುಷ ಸಾಹಿತ್ಯ ಎಂಬ ಭೇದ ಸರಿಯಲ್ಲವಾದರೂ ಕಾವ್ಯದಲ್ಲಿ ಮಾತ್ರ ಸ್ತ್ರೀ ಸಂವೇದನೆಯ ಸೂಕ್ಷ್ಮಗಳನ್ನು ಗುರುತಿಸಲು ಸಾಧ್ಯವಿದೆ. ಮೇಲೆ ಉದಾಹರಿಸಿದ ಕೆಲವು ಕವಿತೆಗಳಲ್ಲಿ ಅಂಥ ಸಂವೇದನೆಯನ್ನು ಗುರುತಿಸಬಹುದು. ದಾಂಪತ್ಯ ಜೀವನ ಸುಗಮವೂ ಸುಖಪ್ರದವೂ ಆಗಬೇಕಾದರೆ ಪರಸ್ಪರ ತ್ಯಾಗದ ಅವಶ್ಯಕತೆಯಿದೆ. ಗಿರೀಶ ಜಕಾಪುರ ಅವರ 'ಮರೆತುಬಿಡು' ಕವಿತೆ ಈ ಭಾವವನ್ನು ಸಮರ್ಥವಾಗಿ ಅಭಿವ್ಯಕ್ತಗೊಳಿಸಿದೆ.

'ನೀನು ನನಗೆ ಸಮಾ.... ಬಾಳು ಕೊಡು
ನಾನು ನಿನ್ನ ತೆಕ್ಕೆಯಲಿ ಸಾವೂ ಮರೆಯುತ್ತೇನೆ
ನೀನು ನಿನ್ನ ಹಮ್ಮು ಬಿಮ್ಮು ಮರೆತು ಬಿಡು
ನಾನು ತಳಮಳ ತಲ್ಲಣ ಮರೆಯುತ್ತೇನೆ'

'ಅಣ್ಣನ ಸತ್ಯಾಗ್ರಹ' (ಅಣ್ಣಾಹಜಾರೆ)ದ ಧ್ಯೇಯ ಧೋರಣೆಗಳನ್ನು ಪಾಂಗಾಳ ವಿಶ್ವನಾಥ ಶೆಟ್ಟಿ ಸರಳ ಷಟ್ಪದಿಯಲ್ಲಿ ನಿರೂಪಿಸಿದ್ದಾರೆ. 'ಎರಡು ಹಿಡಿ ಮಣ್ಣು'

(ಕೆ.ಎನ್. ಸತೀಶ) ಮತ್ತು 'ಬಲಾತ್ಕಾರ' (ಬೋಜರಾಜಶೆಟ್ಟಿ) ಕವನಗಳ ಆಶಯವನ್ನು ಊಹಿಸುವದು ಸ್ವಲ್ಪ ಕಷ್ಟ. ಆದರೆ ಮಿತ್ರ ಪಟ್ನದ 'ಇವರು ಮನುಷ್ಯತ್ವಹೀನರು' ಹೆಚ್ಚು ಸ್ಪಷ್ಟವಾಗಿದೆ. 'ರೈತನಕಥೆ' (ಅರವಿಂದ ಮುದ್ಗಲ್) ವಾಸ್ತವಚಿತ್ರದೊಂದಿಗೆ ಕೊನೆಯಲ್ಲಿ ಉಪದೇಶಾತ್ಮಕವಾಗಿದೆ. 'ಕನ್ನಡತಿ' (ಪಿ. ಮಂಜಣ್ಣ) ಹೊರನಾಡ ಕನ್ನಡಿಗರ ಆರ್ತಭಾವಕ್ಕೆ ನುಡಿಗೊಟ್ಟಂತಿದೆ. ಆಂಡಯ್ಯನ ಶೈಲಿಯನ್ನು 'ವರ್ತಮಾನ' (ಶಿಮಂತೂರು ಚಂದ್ರಹಾಸ ಸುವರ್ಣ) ಕ್ಕೆ ಅನ್ವಯಿಸಿಕೊಂಡದ್ದು ಒಂದು ಯಶಸ್ವಿ ಪ್ರಯೋಗ. 'ವೇದನೆ' (ಪ್ರಭಾಕರ ಬೆಳುವಾಯಿ) ವೈಯಕ್ತಿಕವಾದರೂ ತೀವ್ರತೆಯಿದೆ. ಶಶಿಕುಮಾರ ಸಿ. ಸುಂದರ ಅವರ 'ಇದೇ ನಮ್ಮ ಧ್ಯಾನ'ದಲ್ಲಿ ಒಳ್ಳೆಯ ಬಯಕೆಗಳನ್ನು ಒಟ್ಟುಗೂಡಿಸುವ ಹವಣಿಕೆಯಿದೆ. 'ಮಳೆ' (ಕರುಣಾಕರ ಶೆಟ್ಟಿ) ಆ ಸಂದರ್ಭದ ಪ್ರಕೃತಿಸೌಂದರ್ಯವನ್ನು ಚಿತ್ರಿಸುವದರೊಂದಿಗೆ ಮನುಷ್ಯತ್ವದ ಸ್ಪರ್ಶವನ್ನು ಪಡೆದು ಹೃದ್ಯವಾಗಿದೆ. ಕಂಚುಗಾರರ 'ಆಕ್ರಂದನ' ಕಥನಕ್ಕೆ ಚೆನ್ನಾಗಿ ಒಗ್ಗಿದೆ.

'ಸಂಕ್ರಾಂತಿ ಬಂದಿದೆ' (ವಿಠಲ ಚೌಗುಲೆ) ಸಮರಸ ಸಾಧಿಸಬಯಸುವ ಸರಳ ನಿರೂಪಣೆ. ಗುರುಬಸು ವಗ್ಗೋಲಿಯವರ 'ಗುರುಮಹಿಮೆ' ಲಾವಣಿಗತ್ತಿನಲ್ಲಿ ಹಾಡಬಹುದಾದದ್ದು. ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ಅನ್ಯಾಯಕ್ಕೆ ಪ್ರತಿಕ್ರಿಯೆಯಾಗಿ ಹೊರಹೊಮ್ಮಿದೆ ದಿನೇಶ ಠಾಕೂರ, ಚವ್ಹಾಣರ 'ಅನ್ಯಾಯದ ಅಗ್ನಿಯಲ್ಲಿ'. ಕಿರಿಯರ ಕೈಗೆಟುಕಲಾರದ ಮಲ್ಲಿಗೆಯರಳೊಂದರ ಹಂಬಲಕ್ಕೆ ಕಲ್ಪನೆಯ ಮರುಗನ್ನು ನೀಡಿದ ಕವನ 'ಎತ್ತಿಕೊಳ್ಳುವಿಯಾ ಎನ್ನನು' (ಗುರುಸಿದ್ದಯ್ಯಸ್ವಾಮಿ). 'ಸಖಿಗೆ' ಕವಿತೆ ಒಂದು ರೀತಿಯಲ್ಲಿ ವಿದ್ಯಾಧರರ ಸಖೀಗೀತವೆನ್ನಬಹುದು. ಕವಿಯ ಕಾವ್ಯಸೌಂದರ್ಯದ ಒಡನಾಟ ಸಖಿಗೆ ಸವತಿಯಾಗಿರಬಹುದೆಂಬ ಊಹಾವಿಲಾಸ ಆಡು ಮಾತಿನಲ್ಲಿ ಹಾಡಾಗಿದೆ. ಉಳಿದ ಏಳೆಂಟು ಕವಿತೆಗಳು ಈಗಾಗಲೇ ಪಳಗಿದ ಒಳನಾಡಿನ ಕವಿಗಳ (ಅಮೃತೇಶ ತಂಡರ, ಮಲ್ಲಿಕಾರ್ಜುನ ಬನ್ನಿ ಮೊದಲಾದ) ರಚನೆಗಳಾಗಿ ಸಂಕಲನಕ್ಕೆ ಬೆಂಬಲ ನೀಡಿದಂತಿವೆ.

ಒಟ್ಟಿನಲ್ಲಿ ಭಾವ, ಭಾಷೆ, ಛಂದಸ್ಸು ಒಂದು ಹದದಲ್ಲಿ ಮೇಳೈಸಿದಾಗ ಕವಿಯ ಅನುಭವ ತಕ್ಕರೂಪವನ್ನು ಪಡೆದುಕೊಳ್ಳಬಲ್ಲುದೆಂಬುದನ್ನು ಈ ಸಂಗ್ರಹದ ಕವಿಗಳು ಅರಿಯದವರೇನಲ್ಲ. ತಮ್ಮ ಪ್ರತಿಭೆಯನ್ನು ಇವರು ಸತತಾಭ್ಯಾಸ ಪ್ರಯತ್ನದಿಂದ ಸಫಲಗೊಳಿಸಿಕೊಳ್ಳುವರೆಂದು ಆಶಿಸುತ್ತೇನೆ.

ಹೊರನಾಡಿನಲ್ಲಿರುವ ಕನ್ನಡಿಗರ ಜಾಗೃತಿಗಾಗಿ ಕೊನೆಯವರೆಗೂ ಹೋರಾಡಿದ, ಸೊಲ್ಲಾಪುರದ ಸಿದ್ದರಾಮನ ಕಾರುಣ್ಯದ ಶಿಶುವೆಂದು ತಮ್ಮನ್ನು ನಮ್ರತೆಯಿಂದ ಕರೆದುಕೊಂಡ ಧೀರ ಕವಯಿತ್ರಿ ಜಯದೇವಿತಾಯಿ ಲಿಗಾಡೆಯವರ ಜನ್ಮದಿನದ

ಶತಮಾನೋತ್ಸವದ ಸಂದರ್ಭದಲ್ಲಿ 'ಉಡಿಯ ತುಂಬುವೆ' ಕವನಸಂಕಲನದ ಮೂಲಕ ಅವರನ್ನು ಸ್ಮರಿಸಿಕೊಂಡ ಶ್ರೀ ವಿದ್ಯಾಧರ ಮುತಾಲಿಕ ದೇಸಾಯಿ ಹಾಗೂ ಡಾ. ಗುರುಸಿದ್ಧಸ್ವಾಮಿಯವರನ್ನು ಶಾಕುರ್ಲಿಯ ಮುಂಬೆಳಗು ಕನ್ನಡ ಬಳಗವನ್ನು ಮತ್ತೊಮ್ಮೆ ಹಾರ್ದಿಕವಾಗಿ ಅಭಿನಂದಿಸುತ್ತೇನೆ. ತಾಯಿಯವರ ತ್ರಿಪದಿಯೊಂದಿಗೆ ಮುನ್ನುಡಿಗೆ ಮುಕ್ತಾಯ ಹಾಡಬಹುದು.

ಕನ್ನಡ ತಾಯಿನುಡಿ | ಮನ್ನಿಸಿ ಮಾತನಾಡಿ
ಅನ್ಯಕ್ಕೆ ಮರುಳಾಗದಿರು | ಮರುಳೇ ನೀ
ಕನ್ನಡಿಗನೆಂಬುದು ಮರೀಬೇಡ

'ಕಲಬುರ್ಗಿ - ೮೦' ಸಂಸ್ಮರಣ ಗ್ರಂಥಕ್ಕೆ ಬೆನ್ನುಡಿ

ಡಾ. ಎಂ.ಎಂ. ಕಲಬುರ್ಗಿಯವರದು ಬಹುಮುಖ ಪ್ರತಿಭೆಯ ಒಂದು ಅಪರೂಪದ ವ್ಯಕ್ತಿತ್ವ. ಅಧ್ಯಯನ, ಅಧ್ಯಾಪನ, ಸಂಶೋಧನ-ಎಲ್ಲವನ್ನೂ ಒಂದು ಉನ್ನತ ಮಟ್ಟದಲ್ಲಿ ಬದುಕಿನ ಪ್ರಮುಖ ಕ್ರಿಯೆಗಳಾಗಿ ಅವರು ಸ್ವೀಕರಿಸಿದವರು. ಸಂಶೋಧನೆಯ ಮಾರ್ಗದಲ್ಲಿ ತಾವು ಕಂಡುಕೊಂಡ ಸತ್ಯವನ್ನು ಯಾವುದೇ ಮುಲಾಜಿಗೆ ಒಳಗಾಗದೆ, ಅದಕ್ಕೆ ವಿರೋಧ ವ್ಯಕ್ತವಾಗುತ್ತದೆ ಎಂಬುದು ಗೊತ್ತಿದ್ದರೂ ಅದನ್ನು ಹೇಳದೆ ಬಿಡುತ್ತಿರಲಿಲ್ಲ. ಕೆಲ ವಿಚಾರಗಳು ಅಪ್ರಿಯ ಸತ್ಯಗಳಾಗಿದ್ದರೂ ಅದನ್ನು ಬಹಿರಂಗವಾಗಿ ಹೇಳುವ ಧೈರ್ಯ ಮತ್ತು ಎದೆಗಾರಿಕೆ ಅವರಿಗಿತ್ತು. ಅವರಿಗೆ ಮಾತ್ರ ಇತ್ತು ಎಂದೂ ಕೆಲವರಿಗೆ ಅನಿಸಬಹುದು.

ಯಾವುದೇ ಕೆಲಸವನ್ನು ಪಟ್ಟುಹಿಡಿದು ಮಾಡುವದು ಮತ್ತು ಅದನ್ನು ಸಮಗ್ರವಾಗಿ ಪೂರೈಸುವದು ಅವರ ಹುಟ್ಟುಗುಣವೇ ಆಗಿತ್ತು. ಒಂದಿಷ್ಟು ಹಠ ತೋರಿಸುತ್ತಿದ್ದ ರಾದರೂ ತಮ್ಮದು ತಪ್ಪು ಎಂದು ಮನವರಿಕೆಯಾದರೆ ಅದನ್ನು ಒಪ್ಪಿ ತಿದ್ದಿಕೊಳ್ಳುವ ಗುಣವೂ ಅವರಲ್ಲಿತ್ತು. ಸಾಮಾಜಿಕವಾಗಿ ಅವರು ಎಷ್ಟು ನಿಷ್ಠುರರಾಗಿರುತ್ತಿದ್ದರೊ ವೈಯಕ್ತಿಕ ನೆಲೆಯಲ್ಲಿ ಅಷ್ಟೇ ಮೃದುಸ್ವಭಾವದ ಸ್ನೇಹಜೀವಿಯೂ ಆಗಿದ್ದರು.

ಆರೋಗ್ಯಕರವಾದ ಚರ್ಚೆ ಮತ್ತು ಸಂವಾದಕ್ಕೆ, ಹಿರಿಯ ತಲೆಮಾರಿನವರ ಕಾಲಕ್ಕೆ ಸಾಕಷ್ಟು ಅವಕಾಶವಿತ್ತು. ಆದರೆ ಕಲಬುರ್ಗಿಯವರ ತಲೆಮಾರಿನವರಲ್ಲಿ ಅದು ಬಹುಮಟ್ಟಿಗೆ ಕುಗ್ಗಿ, ಇಂದಂತೂ ಅದು ಹೇಳಹೆಸರಿಲ್ಲದಂತಾಗಿದೆ. ವಿಚಾರವಾದ, ಅಭಿವ್ಯಕ್ತಿ ಸ್ವಾತಂತ್ರ್ಯ ನಾಗರಿಕ ಸಮಾಜದ ಮೂಲಭೂತ ಅವಶ್ಯಕತೆಗಳು. ಅವುಗಳ ರಕ್ಷಣೆ ಪ್ರಜ್ಞಾವಂತ ಸಮಾಜದ ಲಕ್ಷಣ. ಸತ್ಯದ ಹೆಸರಿನಲ್ಲಿ ಅಸತ್ಯವನ್ನು ಸಾಧಿಸುವ ಪ್ರಮಾದಗಳನ್ನು ಕಲಬುರ್ಗಿಯವರು ಎಂದೂ ಸಹಿಸುತ್ತಿರಲಿಲ್ಲ. ಗತಕಾಲದ ಪ್ರಶ್ನೆಗಳಿಗೆ ಉತ್ತರ ಹುಡುಕುವುದರ ಜೊತೆಗೆ ಅಷ್ಟೇ ನಿಷ್ಠೆಯಿಂದ ವರ್ತಮಾನದ ಪ್ರಶ್ನೆಗಳಿಗೂ ಉತ್ತರಿಸುತ್ತಿದ್ದರು.

ಸ್ವತಃ ಶ್ರೇಷ್ಠ ಸಂಶೋಧಕರಾದ ಡಾ. ಷ. ಶೆಟ್ಟರ ಅವರು ಒಂದೆಡೆ ಬರೆದಿದ್ದಾರೆ: "ಕನ್ನಡ ಸಂಶೋಧನ ಕ್ಷೇತ್ರದ ೧೫೦ ವರ್ಷಗಳ ಇತಿಹಾಸದಲ್ಲಿ ಇಂಥ ಮತ್ತೊಬ್ಬ ಮಹಾ ಮೇಧಾವಿ, ಶ್ರಮಜೀವಿ, ಸಂಶೋಧಕ ಇನ್ನೊಬ್ಬ ಇಲ್ಲ." ಇದೇನೂ ಅತಿಶಯೋಕ್ತಿಯ ಮಾತಲ್ಲ ಎಂಬುದು 'ಕಲಬುರ್ಗಿ-೮೦' ಸಂಸ್ಮರಣ ಗ್ರಂಥ ದೃಢಪಡಿ ಸುತ್ತದೆ. ಅದಕ್ಕಾಗಿ ಸಂಪಾದಕದ್ವಯರನ್ನು (ಡಾ. ಜಿ.ಎಂ. ಹೆಗಡೆ ಮತ್ತು ಡಾ. ಬಾಳಣ್ಣ ಸೀಗಿಹಳ್ಳಿ) ನಾನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಮಹಾದೇವ ಹೊರಟ್ಟಿಯವರ 'ಶಾಂತಿಯ ಪಯಣ' ಗ್ರಂಥಕ್ಕೆ ಮುನ್ನುಡಿಗೆ ಬದಲು ನಾಲ್ಕು ಮಾತು

ಶ್ರೀ ಮಹಾದೇವ ಹೊರಟ್ಟಿಯವರು ತಮ್ಮ ಧರ್ಮಪತ್ನಿ ಶ್ರೀಮತಿ ಪ್ರೇಮಾ ಅವರ ಜೊತೆಗೆ, ಕೆಲದಿನಗಳ ಹಿಂದೆ ನಮ್ಮ ಮನೆಯವರೆಗೂ ಬಂದು 'ಬೋಧ ಒಂದೇ' (ಸಂ: ಮಹಾದೇವ ಹೊರಟ್ಟಿ) ಮತ್ತು 'ಅನುಭಾವ' (ಪ್ರೇಮಕ್ಕ ಹೊರಟ್ಟಿ) ಎಂಬ ಎರಡು ಪುಸ್ತಕಗಳನ್ನು ನನಗೆ ಕೊಟ್ಟರು. ಎರಡೂ ಬಸವ ಶಾಂತಿ ಮಿಶನ್ ಟ್ರಸ್ಟಿನ ಇತ್ತೀಚಿನ ಪ್ರಕಟಣೆಗಳು. "ಒಂದು ಬಗೆಯ ನಿರ್ಜೀವ ಏಕತೆ ನಮ್ಮ ಗುರಿಯಲ್ಲ; ನಮಗೆ ಬೇಕಾದುದು ವೈವಿಧ್ಯದಲಿ ಏಕತೆ" ಎಂದು ಮಹಾತ್ಮಾ ಗಾಂಧೀಜಿಯವರ ನುಡಿಯನ್ನು ಉದಾಹರಿಸಿ, ಜಗತ್ತಿನ ವಿವಿಧ ದೇಶಗಳ, ವಿವಿಧ ಜನಾಂಗಗಳ, ವಿವಿಧ ಭಾಷೆಗಳ ಅನುಭವಿ-ಅನುಭಾವಿಗಳ, ಮಾನವ ಕಲ್ಯಾಣದ ಆದರ್ಶವನ್ನು ಪ್ರತಿಪಾದಿಸುವ ನುಡಿಗಳನ್ನು ಒಂದೆಡೆ ಸಂಗ್ರಹಿಸಿರುವ ಗ್ರಂಥವೇ 'ಬೋಧ ಒಂದೇ'. ಇವನ್ನು ಈ ರೀತಿ ಸಂಗ್ರಹಿಸುವಲ್ಲಿ ಮಹಾದೇವ ಹೊರಟ್ಟಿಯವರ ಆಶಯ ಅವರೇ ಹೇಳಿದಂತೆ 'ಮಹಾತ್ಮರ ನುಡಿಗಳ ಮಾರ್ಗದರ್ಶನದಲ್ಲಿ ನಾವು ಸಾಗಿ, ನಮ್ಮ ಬದುಕನ್ನು ಹಾಗೂ ಸುತ್ತಣ ಬದುಕನ್ನು ಸುಂದರಮಯ, ಆದರ್ಶಮಯ ಮಾಡಿಕೊಂಡಾಗ ನಮ್ಮ ಬಾಳಿಗೆ ಸಾರ್ಥಕತೆ ಬರುತ್ತದೆ.' ಇದೇ ಆಶಯವನ್ನಿಟ್ಟು ಕೊಂಡು ಪ್ರೇಮಕ್ಕ ಹೊರಟ್ಟಿಯವರು ಅನುಭಾವ ಕೃತಿಯಲ್ಲಿ ತಾವು ಬರೆದ ಹನ್ನೆರಡು ಲೇಖನಗಳನ್ನು ಸಂಕಲಿಸಿ ಕೊಟ್ಟಿದ್ದಾರೆ. ಹೀಗೆ ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬ ಜೇಡರ ದಾಸಿಮಯ್ಯನವರ ವಚನ ಈ ದಂಪತಿಗಳಲ್ಲಿ ಸಾರ್ಥಕವಾಗಿದೆ ಎನ್ನಬಹುದು.

ಇದೇ ಪ್ರಕಾಶನದಿಂದ ಈ ಮೊದಲು ಹಿಂದಿ ಸಾಹಿತ್ಯದ ಪ್ರಸಿದ್ಧ ಲೇಖಕರಾದ ಡಾ. ಭಗವಾನ್‌ದಾಸ ತಿವಾರಿ ಇವರು ಹಿಂದಿಯಲ್ಲಿ ಬರೆದ ವಿಶ್ವಮಾನವ ಬಸವೇಶ್ವರ (೨೦೦೧) ಶಿವಯೋಗಿನಿ ಅಕ್ಕಮಹಾದೇವಿ (೨೦೦೩) ಎಂಬ ಎರಡು ಮಹತ್ವದ ಗ್ರಂಥಗಳು ಪ್ರಕಟವಾಗಿವೆ. ಈ ಇಬ್ಬರ ವಚನಗಳ ಹಿಂದಿ ಅನುವಾದದೊಂದಿಗೆ ದೀರ್ಘ ಪ್ರಸ್ತಾವನೆಯನ್ನೂ ಇವು ಒಳಗೊಂಡಿವೆ. ಎರಡು ದಶಕಗಳ ಹಿಂದೆಯೇ ಇಬ್ಬರು ಕನ್ನಡದ ಶ್ರೇಷ್ಠ ವಚನಕಾರರನ್ನು ಹಿಂದೀ ಜಗತ್ತಿಗೆ ಪರಿಚಯಿಸುವ ಮಹತ್ತರ ಕಾರ್ಯವನ್ನು ನೆರವೇರಿಸಿದ ಹೊರಟ್ಟಿಯವರಿಗೆ ಕನ್ನಡಿಗರು ಕೃತಜ್ಞರು. ಇನ್ನೂ ಕೆಲವು

ಮಹತ್ವದ ಕೃತಿಗಳನ್ನು ಈ ಪ್ರಕಾಶನ ಪ್ರಕಟಿಸಿದೆ. ಧಾರವಾಡದಲ್ಲಿ ಬಸವಪೀಸ್ ಮಿಶನ್ ಟ್ರಸ್ಟ್ ಸ್ಥಾಪನೆಯಾದಾಗಿನಿಂದ ಒಂದು ಹೊಸ ವಾತಾವರಣವೇ ಸೃಷ್ಟಿಯಾಗಿದೆ ಎಂದು ಹೇಳಬಹುದು. 'Peace March' ಎಂಬ ಇಂಗ್ಲಿಷ್ ತ್ರೈಮಾಸಿಕವನ್ನು ಏಳೆಂಟು ವರ್ಷಗಳವರೆಗೆ ನಡೆಸಿದ ಶ್ರೇಯಸ್ಸು ಈ ಟ್ರಸ್ಟಿನ ಅಧ್ಯಕ್ಷರಾದ ಮಹಾದೇವ ಹೊರಟ್ಟಿಯವರಿಗಿದೆ. ೧೯೯೮ರ, ಜನವರಿ-ಫೆಬ್ರುವರಿ ಸಂಯುಕ್ತ ಸಂಚಿಕೆ ಈಗ ನನ್ನ ಕಣ್ಣೆದುರಿಗಿದ್ದು, ಬಸವಶಾಂತಿ ಜ್ಯೋತಿ ಪಾದಯಾತ್ರೆಯ ಭಾವಚಿತ್ರಗಳು ಹಾಗೂ ಸೊಲ್ಲಾಪುರ ನಗರದಲ್ಲಿ ೧ನೇ ಜನವರಿ, ೨೦೦೧ರಲ್ಲಿ ನೆರವೇರಿದ ವಿಶ್ವದ ಜನತೆಯ ಶಾಂತಿ ಸಮ್ಮೇಳನದ ಭಾವಚಿತ್ರಗಳನ್ನು ಒಳಗೊಂಡು ಈ ಸಂಚಿಕೆ ಕಂಗೊಳಿಸುತ್ತಿದೆ.

ಶ್ರೀ ಮಹಾದೇವ ಹೊರಟ್ಟಿಯವರು ಇದೀಗ 'ಶಾಂತಿಯ ಪಯಣ' ಎಂಬ ಸರ್ವಗ್ರಾಹಿಯಾದ, ಸಾಧ್ಯವಿದ್ದ ಮಟ್ಟಿಗೆ ಸಮಗ್ರ ಸಮಾಲೋಚನೆಯಿಂದ ಕೂಡಿದ ಗ್ರಂಥವೊಂದನ್ನು ಸಂಪಾದಿಸಿ ಪ್ರಕಟಿಸುತ್ತಿದ್ದಾರೆ. ಈ ಕೃತಿ ಭೂಮಂಡಲದಲ್ಲಿ ಶಾಂತಿ, ಸಮತೆ ಬಯಸುವ ಸಹೃದಯ ಓದುಗರಿಗೆ ಬಸವಶಾಂತಿ ಮಿಶನ್ ಸಂಸ್ಥೆ ಸಲ್ಲಿಸುವ ಅಳಿಲು ಸೇವೆ ಎಂದು ಅವರು ಭಾವಿಸಿದ್ದಾರೆ. ಅವರು ಅತ್ಯಂತ ಪರಿಶ್ರಮವಹಿಸಿ ಸಂಪಾದಿಸಿದ ಈ ಗ್ರಂಥಕ್ಕೆ ನಾಲ್ಕು ಮಾತು ಬಹಳ ಸಂತೋಷದಿಂದ ಬರೆಯುತ್ತಿದ್ದೇನೆ.

ಈ ಗ್ರಂಥವನ್ನು ಏಳು ಭಾಗಗಳಲ್ಲಿ ಅವರು ವಿಂಗಡಿಸಿಕೊಂಡಿದ್ದಾರೆ. ಮೊದಲ ಭಾಗ ಧರ್ಮಗಳು: ಆಧ್ಯಾತ್ಮ-ವಿಶ್ವಶಾಂತಿ ಈ ಬಗೆಗಿನ ಲೇಖನಗಳನ್ನು ಒಳಗೊಂಡಿದ್ದರೆ, ಎರಡನೆಯ ಭಾಗ : ಯುದ್ಧಗಳು: ಶಾಂತಿಯ ಪಥ, ಈ ಎರಡೂ ಭಾಗಗಳು ಮಹತ್ವದವಾಗಿದ್ದು ಹೆಚ್ಚು ಲೇಖನಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಮೂರನೆಯ ಭಾಗ ವಿಶ್ವಶಾಂತಿ : ದಾರ್ಶನಿಕರ ನುಡಿಗಳು, ನಾಲ್ಕನೆಯದು, ಶಾಂತಿ ಸೌಹಾರ್ದ: ಮಾನವ ಹಕ್ಕುಗಳ ಅನುಷ್ಠಾನಕ್ಕೆ ಶ್ರಮಿಸಿದ ವಿಶ್ವಮಾನ್ಯ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತರ ಭಾಷಣಗಳ ಅನುವಾದಗಳು, ಐದನೆಯದರಲ್ಲಿ ಶಾಂತಿಗೀತೆಗಳು, ಆರನೆಯದು ಪರಿಸರ ಸಂರಕ್ಷಣೆ, ಏಳನೆಯದು ಕೂಡಲಸಂಗಮ, ವಿಶ್ವಶಾಂತಿ ಕೇಂದ್ರ: ಶಾಂತಿಯಾತ್ರೆಯ ಉಗಮಸ್ಥಳ, ವಿಶ್ವಶಾಂತಿ ಸೌಹಾರ್ದದ ಕೇಂದ್ರ ಕೂಡಲಸಂಗಮ ಕ್ಷೇತ್ರ ಸಂರಕ್ಷಣೆ, ಶಾಂತಿಯಾತ್ರೆಯ ಒಂದು ವಿಹಂಗಮ ನೋಟ ಎಂಬ ಹೊರಟ್ಟಿಯವರ ಎರಡು ಲೇಖನಗಳನ್ನು ಒಳಗೊಂಡಿದೆ.

ಮೊದಲನೆಯ ಭಾಗ ತಪೋವನದ ಪೂಜ್ಯ ಶ್ರೀ ಕುಮಾರಸ್ವಾಮೀಜಿ, ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಮಹಮ್ಮದ ಕುಂಞ, ಡಾ. ಪ್ರಶಾಂತ ವೆಸ್ಲಿ ಡಿಸೋಜ, ಡಾ. ಬಸವರಾಜ ಸಿದ್ಧಾಶ್ರಮ ಮೊದಲಾದ ಇನ್ನೂ ಅನೇಕರ ಲೇಖನಗಳಿಂದ ಪುಷ್ಟಿ ಪಡೆದಿದೆ. ಈ ಎಲ್ಲ ಲೇಖಕರ ವಿಚಾರಗಳನ್ನು ಅವರದೇ ಮಾತಿನಲ್ಲಿ ಕ್ರಮವಾಗಿ

ಹೀಗೆ ಸಂಗ್ರಹಿಸಬಹುದಾಗಿದೆ:

* ಈ ಸತ್ಯ-ಸೃಷ್ಟಿಗಳು, ಈ ಶಾಂತಿ-ಆನಂದಗಳು, ಜೀವನದ ಉತ್ತರ, ದಕ್ಷಿಣ ಧ್ರುವತಾರೆಗಳಿದ್ದಂತೆ. ಆನಂದವಿಲ್ಲದ ಶಾಂತಿಯು ಶಾಂತಿಯಲ್ಲ; ಅದು ಬರಿ ಭ್ರಾಂತಿ! ಶಾಂತಿಯಿಲ್ಲದ ಆನಂದವು ಆನಂದವೇ ಅಲ್ಲ, ಅದು ಅನುತಾಪ.
* ಸಣ್ಣ ವಸ್ತು ಪ್ರೀತಿಸಿದರೆ ಪ್ರೇಮ. ದೊಡ್ಡ ವಸ್ತು ಪ್ರೀತಿಸಿದರೆ ಅನಂತ. ಒಂದು ಪರಿಮಿತ, ಇನ್ನೊಂದು ಅಪರಿಮಿತ.
* ಬುದ್ಧನು ಈ ಜಗತ್ತಿಗೆ ನೀಡಿದ ಅನುಪಮ ಕೊಡುಗೆಯೆಂದರೆ ಶಾಂತಿ ಮತ್ತು ಅಹಿಂಸೆಯ ಮಾರ್ಗವನ್ನು ಅನುಸರಿಸಿ, ಹಿಂಸೆ, ದುಃಖ ಮತ್ತು ಸಂಘರ್ಷಗಳಿಂದ ಮುಕ್ತರಾಗುವುದು.
* ಇಸ್ಲಾಂ ಕಾರುಣ್ಯದ ಧರ್ಮ, ಕರುಣೆಯು ಮಾನವೀಯ ಸಂಬಂಧಗಳನ್ನು ಜೋಡಿಸುವ ಪ್ರಬಲ ಕೊಂಡಿಯಾಗಿದೆ. ಅಲ್ಲಾಹನು ದಯಾಮಯನು. ಆತನ ಕರುಣೆಗೆ ಮಿತಿಯಿಲ್ಲ. ಅದು ಇಡೀ ವಿಶ್ವವನ್ನು ವ್ಯಾಪಿಸಿದೆ.
* ಜೈನಧರ್ಮದ ಮೂಲ ಉದ್ದೇಶ ಶಾಂತಿ ಮತ್ತು ಅಹಿಂಸೆಯಾಗಿದೆ.
* ಮತ್ಸರದಿಂದ ಮತ್ಸರವನ್ನು, ದ್ವೇಷದಿಂದ ಮತ್ತು ಹಿಂಸೆಯಿಂದ ಹಿಂಸೆಯನ್ನು ಅಳಿಸಲು ಸಾಧ್ಯವಿಲ್ಲ. ಬದಲಾಗಿ ಪ್ರೀತಿ ನೀತಿಯ ಕ್ಷಮೆ-ದಯೆಯ ಮೂಲಕ ಶಾಂತಿ ಸಾಮರಸ್ಯದ ಸಮಾಜವನ್ನು ಸ್ಥಾಪಿಸಬಹುದು ಎಂದು ಕ್ರೈಸ್ತ ಧರ್ಮ ಹೇಳುತ್ತದೆ.
* ಭಾರತೀಯ ತತ್ವಶಾಸ್ತ್ರ ಕೇವಲ ಸೈದ್ಧಾಂತಿಕ ಶಾಸ್ತ್ರವಲ್ಲ. ತನ್ನ ಸಿದ್ಧಾಂತವನ್ನು ಲೋಕ ಜೀವನದಲ್ಲಿ ಆಚರಣೆಗೆ ತರುವ ಮುಖಾಂತರ ಲೋಕದಲ್ಲಿಯೇ ವಿಶಿಷ್ಟ ಸ್ಥಾನ ಗಳಿಸಿದೆ. ತನ್ನ ಸಿದ್ಧಾಂತವನ್ನು ದರ್ಶನವೆಂದು ಹೆಸರಿಸಿದರೆ ಅದರ ಪ್ರಾಯೋಗಿಕ ಆಚರಣೆಯನ್ನು ಧರ್ಮವೆಂದು ಸಂಬೋಧಿಸಿದೆ.
* ಕಬೀರರಿಗೆ ಸಾಹಿತ್ಯ ರಚಿಸುವ ಉದ್ದೇಶವಿರಲಿಲ್ಲ. ಬದಲಾಗಿ ತಮ್ಮ ಭಾವನೆ ಹಾಗೂ ವಿಚಾರಗಳಿಗೆ ಶಾಬ್ದಿಕ ರೂಪ ಕೊಡುವ ಉದ್ದೇಶವಾಗಿತ್ತು. ಕಬೀರರು ಜ್ಞಾನಸಂಪನ್ನರಾಗಿದ್ದರು. ದೀನ, ದಲಿತರ, ನೊಂದವರ, ಕಷ್ಟನಿವಾರಣೆಗೆ ಪ್ರಯತ್ನಿಸಿದ ಕಬೀರರು ಉಚ್ಚವರ್ಗಗಳ, ಪಂಡಿತರ ಸಂಸ್ಕೃತ ಭಾಷೆಯನ್ನು ತ್ಯಜಿಸಿ, ಲೋಕಭಾಷೆಯನ್ನು ಬಳಸಿದರು. ಸಾಮಾನ್ಯ ಜನರಿಗೆ ಸರಳವಾಗಿ ಅರ್ಥವಾಗುವಂತೆ ತಮ್ಮ ಅನುಭವಗಳನ್ನು ವ್ಯಕ್ತಪಡಿಸಿದರು.
* ಧರ್ಮವೆಂದರೆ ಅದು ಕೇವಲ ಕಟ್ಟಳೆಯಲ್ಲ. ಅದು ಸರಳವಾಗಿ ನಿಸರ್ಗಕ್ಕೆ

ಸಮೀಪವಾಗಿ ಎಲ್ಲರಿಗೂ ಬೇಕಾಗಿ ಬದುಕುವ ಧರ್ಮವಾಗಿದೆ. ಎಲ್ಲ ಧರ್ಮಗಳಿಗಿಂತ ಮಾನವ ಧರ್ಮ ದೊಡ್ಡದು. ಸಹಬಾಳ್ವೆಯಲ್ಲಿಯೇ ಸಾಮಾಜಿಕ ಸೌಹಾರ್ದತೆಯಲ್ಲಿಯೇ ಶಾಂತಿ ನೆಲೆಸಿದೆ.

* ಲಾ ಇಲಾಹ ಇಲ್‌ಲ್ಲಾಹ್, ದೇವರಲ್ಲದೆ ಮತ್ತಾವ ದೇವರೂ ಇಲ್ಲ. ಇದು ಸೂಫಿ ಪಂಥದ ಮೂಲಭೂತ ಸಾರವಾಗಿದೆ. ಇದುವೇ ಬೀಜ, ಈ ಬೀಜದ ಮೂಲಕ ಸೂಫಿಜಂ ನ ಬೋಧಿವೃಕ್ಷ ಬೆಳೆದಿದೆ.
* ಅಧ್ಯಯನದ ದೃಷ್ಟಿಯಿಂದ ಎಲ್ಲ ದಾಸ ಸಾಹಿತ್ಯವೂ ಒಂದಲ್ಲ ಒಂದು ಬಗೆಯಲ್ಲಿ ಅಧ್ಯಾತ್ಮವಾಸನೆಯೊಡನೆ ಜಗದಗಲವನ್ನು ಮನದಗಲಕ್ಕಿಳಿಸಿ, ಮಾನವರನ್ನು ಘನವನ್ನಾಗಿಸುವ ಮೂಲಕ ಬದುಕಿನ ಮೌಲಿಕತೆಯನ್ನು ಬಿಂಬಿಸುತ್ತದೆ.
* ಮಾನವರೆಲ್ಲರೂ ಒಂದೇ, ಎಲ್ಲರೂ ಪರಮಾತ್ಮನ ಸೃಷ್ಟಿ. ಆದ್ದರಿಂದ ಜಾತಿ, ಕುಲ, ಧರ್ಮ, ವರ್ಣ, ಬಡವ-ಬಲ್ಲಿದ ಮುಂತಾದ ಭೇದಗಳು ಬಹಳ ತುಚ್ಛವಾದವುಗಳು. ಬಸವಾದಿ ಶರಣರ ಮಾತುಗಳು ನಮಗೆಲ್ಲ ಅನುಸರಣೀಯ. 'ಜಾತಿವಿಡಿದು ಸೂತಕವನರಸುವೆ, ಜ್ಯೋತಿವಿಡಿದು ಕತ್ತಲೆಯನರಸುವೆ ಇದೇಕೋ ಮರುಳು ಮಾನವಾ'?
* ನಮ್ಮೊಳಗೆ ನಮ್ಮನ್ನು ಕಂಡು ಒಮ್ಮನದಿಂದ ಬಾಳಬಲ್ಲ ಅಮೃತ ಸಮಾನ ಆಧ್ಯಾತ್ಮಿಕ ಸ್ಥಿರತೆಯೇ ಶಾಂತಿ. ಹೌದು 'ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ. ಅವು ಜಗಕ್ಕಿಕ್ಕಿದ ವಿಧಿ'. ನಿನ್ನ ಒಡವೆಯೆಂಬುದು ಜ್ಞಾನರತ್ನ, ಅದೇ ಶಾಂತಿಯ ನವರತ್ನ.
* ಮನುಷ್ಯರು ತಮ್ಮ ಕ್ಷುದ್ರ ಸ್ವಾರ್ಥದ ಹಂತದಿಂದ ಮೇಲೆದ್ದು ಯಾವ ಬಾಹ್ಯ ಆಕರ್ಷಣೆಗೂ ಒಳಗಾಗದೆ ಇತರರ ಸಲುವಾಗಿ ಕಾರ್ಯತತ್ಪರರಾದಾಗ ಮಾತ್ರ ಚಿರಂತನ ಶಾಂತಿಯನ್ನು, ಸಂತೋಷವನ್ನು ಪಡೆಯಬಲ್ಲರು.
* ಯುದ್ಧದಲ್ಲಿ ಗೆದ್ದವರಿಗೆ ಏನು ಪ್ರಯೋಜನವಾಗುತ್ತದೆ ಎಂಬ ಪ್ರಶ್ನೆಗೆ ಸುಲಭ ಉತ್ತರ ಸಿಗದು. ಗೆದ್ದಾಗ ತಮ್ಮ ಉದ್ದೇಶ ಸಾಧನೆಯಾಯಿತೆಂಬ ಭ್ರಮೆ ಹುಟ್ಟಿಸುತ್ತದೆ.
* ಯುದ್ಧದಲ್ಲಿ ಗೆಲ್ಲುವುದು ಸಾವು ಮಾತ್ರ ಮನುಕುಲ. ಇಂದು ಅತ್ಯಂತ ಪ್ರಕ್ಷುಬದ್ಧವಾದ ಕಾಲಘಟ್ಟದಲ್ಲಿದೆ. ಶಾಂತಿಯ ಮೂಲಕ ಮಾತ್ರ ಅದು ಎಲ್ಲ ಅನಿಷ್ಟಗಳಿಂದ ಪಾರಾಗಬಲ್ಲದು.
* ಇಂದು ಜಾಗತಿಕ ಮಟ್ಟದಲ್ಲಿ ನಡೆಸಬೇಕಾದ ಶಾಂತಿಯ ಆಂದೋಲನಗಳ

ಗುರಿಯು ಯಾವ ಬೆಲೆಯನ್ನಾದರೂ ತೆತ್ತು ಜಾಗತಿಕ ಶಾಂತಿಯನ್ನು ಸ್ಥಾಪಿಸಬೇಕು ಎನ್ನುವುದಾಗಬೇಕಾಗಿದೆ. ಇದು ಸಾಧ್ಯವಾಗಬೇಕಾದರೆ, ಶೋಷಣಾರಹಿತ ಮಾನವನ ದುಃಖ- ದುಮ್ಮಾನ, ಸರಿ-ಸಮಾನತೆಯ ನಿಜವಾದ ಮಾನವೀಯ ಸಮಾಜದ ಸ್ಥಾಪನೆಯ ಮೂಲಕ ಮಾತ್ರ ಎನ್ನುವ ಮೂಲಾಂಶವನ್ನು ಮರೆಯಬಾರದು.

* ವಿಜ್ಞಾನ ಮತ್ತು ಆಧ್ಯಾತ್ಮದ ಸಮನ್ವಯವೆ ವಿಶ್ವಶಾಂತಿಯ ಮೂಲ. ಎರಡರ ಸಮನ್ವಯತೆ ಕಂಡಾಗ ಜಾಗತಿಕ ಶಾಂತಿ ಕಾಣಲು ಸಾಧ್ಯ. ಎರಡೂ ಬದುಕಿಗೆ ಬೇಕಾದ ಸಾಮಗ್ರಿಗಳೇ.

* ೧) ಎಲ್ಲ ರಾಷ್ಟ್ರಗಳು ಸ್ವತಂತ್ರವಾಗಬೇಕು. ೨) ಎಲ್ಲ ರಾಷ್ಟ್ರಗಳ ಸಮಾನತೆಗೆ ಮನ್ನಣೆ ಸಿಗಬೇಕು. ಮತ್ತು ೩) ನಿಶ್ಶಸ್ತ್ರೀಕರಣ ಒಂದು ತತ್ವ ಹಾಗೂ ಆಚರಣೆಯಾಗಿ ಎಲ್ಲ ರಾಷ್ಟ್ರಗಳಿಂದ ಒಪ್ಪಿತವಾಗಬೇಕು. ಸಬಲ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳ ಮೇಲೆ ನಡೆಸುವ ಶೋಷಣೆ ದಬ್ಬಾಳಿಕೆಗಳು ಕೊನೆಗೊಳ್ಳಬೇಕು ಎಂಬುದು ಗಾಂಧೀಜಿಯವರ ಚಿಂತನೆಯಾಗಿತ್ತು.

* ಇತರರನ್ನು ಕೊಲ್ಲುವವರೇ ತಮ್ಮ ರಕ್ಷಣೆಗಾಗಿ ಎಲ್ಲ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಮಿಲಿಟರಿ ಅಧಿಕಾರಿಗಳಿಗೆ ಮತ್ತು ಯೋಧರಿಗೆ ರಕ್ಷಣಾ ಕವಚಗಳು ವಿಕಿರಣ ನಿರೋಧಕ ಮುಖವಾಡಗಳು ಹಾಗೂ ಶುದ್ಧಗಾಳಿ, ಸಿಲೆಂಡರುಗಳೂ ಲಭ್ಯವಾಗುತ್ತವೆ. ಸಮರ ನಡೆದರೆ ಮಿಲಿಟರಿ ಬದುಕುಳಿದು ನಾಗರಿಕ ಪ್ರಪಂಚ ಮಣ್ಣುಮುಕ್ಕಬೇಕಾಗುವ ವಿಶಿಷ್ಟ ಪರಿಸ್ಥಿತಿ ಉಂಟಾಗುತ್ತದೆ.

* ಸಮಾಜದಲ್ಲಿ ಅಶಾಂತಿ ಮತ್ತು ಹಿಂಸೆಗೆ ಕಾರಣವಾಗುವ ಮಕ್ಕಳಿಗೆ ಜನ್ಮ ನೀಡುವದಿಲ್ಲವೆಂದು ತಾಯಂದಿರು ಸಂಕಲ್ಪ ಮಾಡಬೇಕು. ವಿಶ್ವದ ಭವಿಷ್ಯ ಇಂದು ಯುವಜನಾಂಗದ ಮೇಲೆ ನಿಂತಿದೆ. ಇವರೇ ವಿಶ್ವದ ಜೀವಾಳ.

* ಕುವೆಂಪು ಸಾಮಾಜಿಕ ಘನತೆ ಮತ್ತು ನಿಸರ್ಗದಲ್ಲಿಯ ಜೀವದ ಘನತೆ ಇವೆರಡನ್ನು ಎತ್ತಿ ಹಿಡಿಯುತ್ತಾರೆ. ಬಹುತ್ವದ ಸಾಂಸ್ಕೃತಿಕ ನೆಲೆಗಳನ್ನು ವಿಸ್ತರಿಸುತ್ತಾರೆ. ಕುವೆಂಪು ಅವರ ವಿಶ್ವ ವಿಶಾಲವಾದುದು. ಅಲ್ಲಿ ಶಾಂತಿಗೇ ಅಗ್ರಸ್ಥಾನ. ಇವರ ವಿಶ್ವದಲ್ಲಿ ಪಶುಪಕ್ಷಿಗಳಿಂದ ಹಿಡಿದು ಮನುಷ್ಯನವರೆಗೆ ಎಲ್ಲರೂ ದಿವ್ಯರೇ, ಘನತೆ ಇದ್ದವರೇ.

* ಪರಸ್ಪರರ ಮಧ್ಯೆ ಭಾವೈಕ್ಯತೆಯ ಎಳೆಯಾಗಿರುವ ಭಾರತೀಯ ಸಂಗೀತವು ವಿಶ್ವಶಾಂತಿಯನ್ನು ಸ್ಥಾಪಿಸುವಲ್ಲಿ ಮಹತ್ವದ ಪಾತ್ರ ವಹಿಸುವುದು ಖಂಡಿತ.

* ನಮ್ಮ ಹಿರಿಯರ ಸಂದೇಶವನ್ನು, ನಮ್ಮ ಮೂಲ ಸಂಸ್ಕೃತಿಯನ್ನು ಮರೆತು ನಾವೆಲ್ಲರೂ ಮೂಲಭೂತವಾದಿಗಳಾಗಿ, ಕೋಮುವಾದಿಗಳಾಗಿ, ಸ್ವೇಚ್ಛಾಚಾರಿಗಳಾಗಿ, ಸುಖ, ಶಾಂತಿ, ಕಾಣದೇ ಭಯದ ವಾತಾವರಣದಲ್ಲಿ ಬದುಕುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಆಶಾಕಿರಣವಾಗಿ ಮೂಡಿ ಬಂದದ್ದೇ ಐತಿಹಾಸಿಕ ಬಸವ ಶಾಂತಿ ಜ್ಯೋತಿಯಾತ್ರೆ, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ನ್ಯಾಯಮೂರ್ತಿ ಶ್ರೀ ರಂಗನಾಥ ಮಿಶ್ರಾರವರ ಮಾರ್ಗದರ್ಶನ, ಭಾರತ ಏಕತಾ ಆಂದೋಲನದ ರಾಷ್ಟ್ರೀಯ ಅಧ್ಯಕ್ಷರಾದ ಮಾಜಿ ಕೇಂದ್ರ ಗೃಹಮಂತ್ರಿ ಸರ್ದಾರ ಬೂಟಾಸಿಂಗರ ಬೆಂಬಲ, ಧಾರವಾಡದ ಬಸವ ಶಾಂತಿ ಮಿಶನ್ ಟ್ರಸ್ಟ್ ಅಧ್ಯಕ್ಷರಾದ ಮಹಾದೇವ ಹೊರಟ್ಟಿಯವರ ಸಮರ್ಥ ನಾಯಕತ್ವ, ಬೆಂಗಳೂರಿನ ಏಕತಾ ಚಾರಿಟೇಬಲ್ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಶಿವಕುಮಾರ ಸ್ವಾಮಿಗಳು ನಾಶಿಮಠ ಇವರ ಸಲಹೆಯಿಂದ ಬೆಂಗಳೂರಿನಿಂದ - ಹಂಪಿ, ಹಂಪಿಯಿಂದ - ಬಸವ ಕಲ್ಯಾಣಕ್ಕೆ ಪಾದಯಾತ್ರೆ ಸಾಗಿದ್ದು ಒಂದು ಮಹತ್ವದ ಘಟನೆ.
* ಇಂದು ಸಹಜೀವನ ಹಾಗೂ ಭಾವೈಕ್ಯ- ಇವು ಬಹಳ ಮಹತ್ವ ಪಡೆದ ಮಾನವನ ಧ್ಯೇಯಗಳಾಗಿವೆ. ದೇವರ ಹೆಸರಿನಲ್ಲಿ, ಭಾಷೆಯ ಹೆಸರಿನಲ್ಲಿ ವರ್ಣ, ವರ್ಗ, ಗಡಿ, ಉಚ್ಚ-ನೀಚ ಮುಂತಾದ ಸ್ವನಿರ್ಮಿತ ಸಮಸ್ಯೆಗಳನ್ನು ಮಾನವನು ಎದುರಿಸುತ್ತಿದ್ದಾನೆ. ವೈಜ್ಞಾನಿಕ ಪ್ರಗತಿಯನ್ನು ಸಾಧಿಸುತ್ತಿದ್ದರೂ ಬಡವರು ಬಡವರಾಗಿಯೇ ಉಳಿದಿದ್ದಾರೆ.

ಇದೇ ರೀತಿ ಉಳಿದ ವಿಭಾಗಗಳ ಲೇಖನಗಳ ಸಾರವನ್ನು ಓದುಗರು ಸಂಗ್ರಹಿಸಿ ನೋಡಬಹುದು. ನಾಲ್ಕನೆಯ ವಿಭಾಗದಲ್ಲಿ ನೋಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತರು ಆ ಸಂದರ್ಭದಲ್ಲಿ ಮಾಡಿದ ಭಾಷಣಗಳ ಅನುವಾದಗಳನ್ನು ಕೊಡಲಾಗಿದೆ. ಎಲ್ಲರೂ ದೇಶ ವಿದೇಶಗಳಲ್ಲಿ ತಾವು ಎದುರಿಸಿದ ಸವಾಲುಗಳನ್ನು ಬಗೆಹರಿಸಲು ನಡೆಸಿದ ಹೋರಾಟ ಮತ್ತು ಶಾಂತಿಸ್ಥಾಪನೆಗೆ ಮಾಡಿದ ಪ್ರಯತ್ನಗಳನ್ನು ಚಿತ್ರಿಸಿದ್ದಾರೆ. ಮತ್ತೊಂದು ವಿಭಾಗದಲ್ಲಿ ಶಾಂತಿ ಗೀತೆಗಳಿವೆ. ಪರಿಸರ ರಕ್ಷಣೆಗೂ ಇಲ್ಲಿ ಎಡೆಗೊಡಲಾಗಿದೆ.

ಕೊನೆಯ ಭಾಗದಲ್ಲಿರುವ ಮಹಾದೇವ ಹೊರಟ್ಟಿಯವರ ಎರಡು ಲೇಖನಗಳು, ಭಾರತ ಏಕತಾ ಆಂದೋಲನ, ಬಸವ ಶಾಂತಿ ಮಿಶನ್ ಸಂಘಟನೆಗಳು ಸಂಯುಕ್ತವಾಗಿ ಭಾರತ ದೇಶದಾದ್ಯಂತ, ೨೫೦೦೦ ಕಿ.ಮೀ. ಶಾಂತಿಯಾತ್ರೆಗಳನ್ನು ಸಂಘಟಿಸಿದ್ದರ ರೋಚಕ

ವಿವರಗಳಿವೆ. ಜನಾಂಗೀಯ ಸಾಮರಸ್ಯ ಮತ್ತು ಸೌಹಾರ್ದತಾ ಪರಂಪರೆಯನ್ನು ಮೈಗೂಡಿಸಿಕೊಂಡು ಬೆಳೆದ ಭಾರತ ದೇಶದಲ್ಲಿ ಭಾವೈಕ್ಯದ ಬೆಸುಗೆಯನ್ನು ನಿರಂತರವಾಗಿ ಕಾಪಾಡಿಕೊಳ್ಳುವುದು ಪ್ರತಿ ಭಾರತೀಯನ ಪ್ರಥಮ ಕರ್ತವ್ಯವಾಗಿದೆ. ಧರ್ಮಗಳ ಮೂಲ ತತ್ವಗಳಾದ ದಯೆ, ಪ್ರೀತಿ, ಪ್ರೇಮ ಮತ್ತು ಮಾನವೀಯ ಅನುಕಂಪದ ಸಂದೇಶಗಳನ್ನು ಸಾರುತ್ತ ವಿಶ್ವಶಾಂತಿಗೆ ಪೂರಕವಾದ ಭಾವೈಕ್ಯ ಭಾರತ ನಿರ್ಮಿಸುವುದೇ ಭಾರತ ಏಕತಾ ಆಂದೋಲನ ಮತ್ತು ಬಸವ ಶಾಂತಿ ಮಿಶನ್ ಸಂಘಟನೆಗಳ ಗುರಿ ಎಂಬುದು ಮಹಾದೇವ ಹೊರಟ್ಟಿಯವರಿಗೆ ಸ್ಪಷ್ಟವಾಗಿದೆ. ಹೊರಟ್ಟಿಯವರ ವಿಶ್ವಶಾಂತಿ ಸೌಹಾರ್ದದ ಕೇಂದ್ರ ಕೂಡಲಸಂಗಮ ಕ್ಷೇತ್ರ ಸಂರಕ್ಷಣೆ ಹಾಗೂ ಶಾಂತಿಯಾತ್ರಿಯ ವಿಹಂಗಮ ನೋಟ ಲೇಖನಗಳು ಅದನ್ನೇ ಒತ್ತಿ ಹೇಳುತ್ತವೆ.

೧೯೮೬ರಲ್ಲಿಯೇ ಬಸವಶಾಂತಿ ಮಿಶನ್ ಪಾದಯಾತ್ರೆಯ ಮೂಲಕ ಜನಜಾಗೃತಿಯನ್ನು ಸಾಧಿಸಿ, ಆ ಅವಿಶ್ರಾಂತ ಹೋರಾಟದ ಫಲವಾಗಿ ಇಡೀ ಭಾರತದೇಶದಲ್ಲಿ ಅವರು ಕೈಕೊಂಡ ಶಾಂತಿಯಾತ್ರೆ ಯಶಸ್ವಿಯಾಯಿತು. ಮುಖ್ಯಮಂತ್ರಿ ಎಸ್. ಆರ್. ಬೊಮ್ಮಾಯಿಯವರು ಪ್ರಥಮ ಸಂಪುಟದ ಸಭೆಯಲ್ಲಿ ಕೂಡಲಸಂಗಮ ಕ್ಷೇತ್ರ ಸಂರಕ್ಷಣೆ ಮಾಡುವ ಐತಿಹಾಸಿಕ ನಿರ್ಧಾರ ಕೈಕೊಂಡರು. ನಂತರ ಬಂದ ಮುಖ್ಯಮಂತ್ರಿಗಳಾದ ಜೆ.ಎಚ್. ಪಟೇಲರು ಕೂಡಲಸಂಗಮ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಕರ್ನಾಟಕ ಸರಕಾರದಿಂದ ೨೦ ಕೋಟಿ ರೂ. ಮೊತ್ತದ ಹಣವನ್ನು ಬಿಡುಗಡೆ ಮಾಡಿ ಐಎಎಸ್ ಅಧಿಕಾರಿ ಎಸ್.ಎಂ. ಜಾಮದಾರ ಅವರಿಗೆ ಈ ಜವಾಬ್ದಾರಿಯನ್ನು ವಹಿಸಿದರು. ಅವರು ಕ್ಷೇತ್ರದ ನೀಲನಕ್ಷೆಯನ್ನು ತಯಾರಿಸಿ ಅದನ್ನು ಸುಂದರವಾಗಿ ಅನುಷ್ಠಾನಗೊಳಿಸಿದ ಶ್ರೇಯಸ್ಸಿಗೆ ಪಾತ್ರರಾದರು.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸಂಪಾದಕರ ನುಡಿಯಲ್ಲಿ ಶ್ರೀ ಮಹಾದೇವ ಹೊರಟ್ಟಿಯವರು ಸೂಚಿಸಿದ ಮುಖ್ಯ ಮಾತಿನೊಂದಿಗೆ ಈ ನಾಲ್ಕು ಮಾತುಗಳನ್ನು ನಾನು ಮುಗಿಸಬಹುದು. ಮಾನವಕುಲದ ಮುಂದೆ ಎರಡು ಆಯ್ಕೆಗಳಿವೆ. ಒಂದು ಸರ್ವನಾಶ. ಇನ್ನೊಂದು ಹಸಿವಿಲ್ಲದ, ರೋಗಗಳಿಲ್ಲದ, ನಿರಕ್ಷರಿಗಳಿಲ್ಲದ, ವಿಶ್ವದ ಪುನರ್ ನಿರ್ಮಾಣ, ಶಾಂತಿ ಸಮತೆಯ ನಿರ್ಮಾಣಕ್ಕಾಗಿ ಮಾನವಕುಲ ಧ್ವನಿ ಎತ್ತಬೇಕಾಗಿದೆ. ಅಣ್ವಸ್ತ್ರ ರಾಷ್ಟ್ರಗಳು ತಾವು ಸಂಗ್ರಹಿಸಿರುವ ಮಾನವ ವಿರೋಧಿ, ಜೀವ ವಿರೋಧಿ, ಅಣ್ವಸ್ತ್ರಗಳನ್ನು ನಿಷ್ಕ್ರಿಯಗೊಳಿಸಬೇಕು. ಆಗ ಮಾತ್ರ ಶಾಂತಿಯ ಕ್ರಿಯೆ ಪ್ರಾರಂಭವಾಗುತ್ತದೆ.

'ಶಾಂತಿಯ ಪಯಣ' ೨೦೧೯

ಗಿರಿಜಾ ಸಂಗೊಳ್ಳಿ ಅವರ ಕವಿತಾ ಸಂಕಲನಕ್ಕೆ ಮುನ್ನುಡಿ

ಈ ಸಂಕಲನದ ೩೦ ಕವನಗಳಲ್ಲಿ ಕೊರಾನಾ -೧೯ ವೈರಾಣು ಕುರಿತ ಪರಿಣಾಮಕಾರಿಯಾದ ಆರು ಕವನಗಳಿವೆ. 'ಕೋವಿಡ್ - ೧೯ ಬಂದೈತಿ ಕೇಳ್ರಿ' ಕವಿತೆ ಲಾವಣಿಗತ್ತಿನಲ್ಲಿ ವಿವರವಾಗಿ ಬಣ್ಣಿಸುತ್ತ, ಕೊನೆಗೆ ಹೀಗೆ ಮುಗಿಯುತ್ತದೆ:

ನಾವsನ ಬದಲಾಗಬೇಕು
ಕಲಿಯಬೇಕು ಪಾಠಾನ
ಯಾವ್ದೂನೂ ಅತಿ ಆಗಬಾರದಂತ
ಕಲೀರಪ್ಪ ಕಲೀರಿ
ಕಲೀರಣ್ಣ ಕಲೀರಿ.

'ಕ್ಷಮಿಸುದೇವಾ' ಕವನ, ಬಡವ ಬಲ್ಲಿದರೆನ್ನದೆ ಜಗದ್ವ್ಯಾಪಿಯಾಗಿ ಎಲ್ಲರನ್ನೂ ಅಚ್ಚರಿ ಬಡಿಸಿ, ಅವಸಾನಗೊಳಿಸುವ ಚಿತ್ರವನ್ನು ಕಟ್ಟಿ ಕೊಡುತ್ತದೆ:

ಹೆಂಗಸೇನು? ಗಂಡಸರೇನು? ಸಿರಿವಂತನೇನು?
ಬಡವನೇನು? ಅರಸನೇನು? ಭಿಕ್ಷುಕನೇನು?
ನಗರವೇನು? ಕೊಂಪೆಯೇನು?
ಎಲ್ಲೆಲ್ಲೂ ಅಟ್ಟಹಾಸ ಮೆರೆಯಲು
ಲೋಕವದು ತಲ್ಲಣಿಸಿ
ಬಸವಳಿದು ಸೋತಾಗಿದೆ
ಸಾಯುತಲಿದೆ

ಎಂಬ ಭೀಕರ ಚಿತ್ರವನ್ನು ಕಣ್ಣೆದುರು ಹಿಡಿಯುತ್ತದೆ. ಹೊರ ರಾಜ್ಯಗಳಿಂದ ಕೂಲಿ-ನಾಲಿ ಹುಡುಕಿಕೊಂಡು ಬಂದು, ನಗರಗಳಲ್ಲಿ ಉದ್ಯೋಗಗೈದವರ ಪಾಡಂತೂ ಹೇಳಲಾಸಲ್ಲ. 'ಮಹಾವಲಸೆ' ಕವಿತೆ ಇದನ್ನು ವಿವರವಾಗಿ ಚಿತ್ರಿಸುತ್ತದೆ:

ರೈಲು ಹಳಿಗಳ ಮಾರ್ಗ ಹಿಡಿದು
ತಮ್ಮ ತಮ್ಮ ಊರುಗಳ ಸೇರಿದರು
ಕೊನೆಗೆ ಈ 'ಮಹಾಮನೆ'ಗೆ ಮಂಗಳ ಹಾಡಿದರು...

'ಮಂಗಳ ಹಾಡಿದರು' ಕ್ರಿಯೆಯಂತೂ ಅತ್ಯಂತ ಧ್ವನಿಪೂರ್ಣವಾಗಿದೆ. ಹೀಗೆ

'ಕೊರಾನಾ-೧೯' ಸಂಬಂಧಪಟ್ಟ ಕವನಗಳು ಸ್ವಲ್ಪ ದೀರ್ಘವಾದರೂ ಪರಿಣಾಮಕಾರಿಯಾಗಿವೆ.

(೨)

ಈ ಭೂಮಿ ತಾಯಿ ಹೇಗೆ ರಚನೆಗೊಂಡಳೆಂಬುದನ್ನು 'ಭೂಮಿತಾಯಿ ಗರ್ಭ' ನಿರೂಪಿಸುತ್ತ, ತಾಯಿ-ಗರ್ಭದೊಂದಿಗೆ ಸಮೀಕರಿಸಿ 'ಊಹಾತೀತ ವಿಸ್ಮಯದ ಗೂಡಿದು', 'ಜೀವ ತಂತುವಿನ ರೂವಾರಿಯಿದು' ಎಂದು ಬಣ್ಣಿಸಿದ ಮಹತ್ವದ ಕವಿತೆ ಎನ್ನಬಹುದು.

'ದೇವಭೂಮಿ' ಎಂದು ಹೇಳಿಕೊಳ್ಳುವ ನಾವು -
ಹೂವಿನಂಥ ಹಸುಳೆ
ಕಂದಮ್ಮಗಳು
ಕಾಮಾತುರರ ಕೈಗಳಲ್ಲಿ
ಹತ್ಯೆಗೊಳ್ಳುತ್ತಿರುವುದೇಕೆ?
ಎಂಬ ಪ್ರಶ್ನೆ ಎದ್ದು ನಿಲ್ಲುತ್ತದೆ.
ನಿರ್ಭಯಾ - ಮತ್ತರವ-
ಳಂತೆ ಸಾವಿರ ಸಾವಿರ
ಹೆಣ್ಣುಗಳಿಗೇಕೆ ಈ ಹಿಂಸೆ?

ಕೊನೆಗೆ 'ನ್ಯಾಯ ದೇವತೆಗೆ ಕಣ್ಣಿಲ್ಲವೆ?' ಎಂಬ ಹಿಂಸಾಚಾರದ ಚಿತ್ರ ಎಷ್ಟೊಂದು ವಿರೋಧಾಭಾಸವಾಗಿದೆ- 'ದೇವಾನುದೇವತೆಗಳ ಪುಣ್ಯಭೂಮಿ' ಎಂದು ಹೆಸರಾದ ದೇಶದಲ್ಲಿ?

ಮೇಲಿಂದ ಮೇಲೆ ನೆರೆಹಾವಳಿಗೆ ಈಡಾಗುತ್ತಿರುವ ನಾಡಿನ ಘೋರ ಚಿತ್ರವನ್ನು ಇಲ್ಲಿಯ ಕೆಲವು ಕವನಗಳು ಕೊಡುತ್ತವೆ. 'ಈಜೋಣ, ಈಜಿ ಬದುಕೋಣ' ಎಂಬ ಧೈರ್ಯದ ಮಾತುಗಳೂ ಇಲ್ಲಿವೆ. 'ವರುಣನಶಾಪ' ಕವನದಲ್ಲಿ ನೆರೆ ಹಾವಳಿಯಿಂದ ಬಳಲುತ್ತಿರುವ ಜನತೆಯ ಸನ್ನಿವೇಶವನ್ನು ಕಣ್ಣಿಗೆ ಕಟ್ಟುತ್ತದೆ:

ಊರು, ಕೇರಿ, ಹೊಲ, ತೋಟ
ಗದ್ದೆಗಳು, ಮನೆ, ಅಂಗಡಿ, ಶಾಲೆ-ಕಾಲೇಜು
ರಸ್ತ ರಸ್ತೆಗಳೆಲ್ಲ ನೀರೇ ನೀರು

ಹೀಗೆ ಸಾಮಾಜಿಕ ಕಳಕಳಿ, ನೋವಿಗೆ ಸ್ಪಂದಿಸುವ ಶಕ್ತಿ ಮುಖ್ಯ ಅಭಿವ್ಯಕ್ತಿಯಾಗಿದೆ ಈ ಕವಯಿತ್ರಿಗೆ, ದೇಶಕ್ಕೆ, ಅಂತರಂಗಕ್ಕೆ ಕೂಡಿಯೇ ಮಿಡಿಯುವ ಹೃದಯ ಶ್ರೀಮತಿ ಗಿರಿಜಾ ಅವರಲ್ಲಿದೆ.

ಹುಬ್ಬಳ್ಳಿಯ ಲಿಂಗರಾಜ ನಗರದಲ್ಲಿ ವಿಶ್ರಾಂತಜೀವನ ನಡೆಸುತ್ತಿರುವ ಶ್ರೀಮತಿ ಗಿರಿಜಾ ವೀ. ಸಂಗೊಳ್ಳಿ ಗೃಹಿಣಿಯಾಗಿಯೇ ಸುತ್ತುಮುತ್ತಿನ ಜೀವನಕ್ಕೆ ಸ್ಪಂದಿಸಬಲ್ಲವರಾಗಿದ್ದಾರೆ.

(೩)

ವಸ್ತು-ವಿಷಯಗಳು ಬದಲಾದಂತೆ 'ಚಿತ್ತಚೋರನ ಮೋಹಕರೂಪಗಳು' ಎಂಬ ಕವನವೂ ಇಲ್ಲಿದೆ. ಮಗುವಿನ ನಾನಾ ರೂಪಗಳನ್ನು ಕಂಡು ವಿಚಲಿತಳಾದ ತಾಯಿಗೆ ಪ್ರೀತಿಯ ಅನುಭೂತಿ ಮುಖ್ಯವೆಂದು ಅನಿಸುತ್ತದೆ. 'ನೆರಳು' ಮತ್ತು 'ಪ್ರೀತಿಯ ನನ್ನಣ್ಣ' ಎರಡೂ ಸುಂದರ ವಾತ್ಸಲ್ಯಗೀತೆ' 'ಅಣ್ಣಾ ನೀನೇ ನನಗೊಂದು | ದೊಡ್ಡಾಲದ ಮರ | ಅದರದೇ ನೆರಳಲ್ಲಿ ಆಡಿ ಬೆಳೆದವಳು ನಾನು' ಎಂಬ ಕೃತಜ್ಞತಾ ಭಾವವಿಲ್ಲಿದೆ, ಪೌರಾಣಿಕ ವ್ಯಕ್ತಿಗಳೆಲ್ಲ 'ಓ ಶಿವಾ' ಕವಿತೆಯಲ್ಲಿ ಜೀವ ತಳೆದಿವೆ. ಆದರೆ ಅವರಂತೆ ನಮ್ಮಲ್ಲಿ 'ವಿದ್ಯಾವಿನಯಗಳ ಭಕ್ತಿಯ ಯುಕ್ತಿಯೂ ಇಲ್ಲ' ಎಂಬ ಆತ್ಮಾವಲೋಕನ ಕವಿತೆಗೆ ಜೀವಂತ ಸ್ಪರ್ಶ ನೀಡಿದೆ.

ಇದು, ಇವರ ಪ್ರಥಮ ಸಂಕಲನವಾದರೂ ಸಾಕಷ್ಟು ಪ್ರಗತಿಪರವಾಗಿದೆ, ಮುಂದಿನ ಸಂಕಲನದಲ್ಲಿ ಇವಕ್ಕೂ ಉತ್ತಮವಾದ ರಚನೆಗಳನ್ನು ನೀಡುತ್ತಾರೆಂಬ ಭರವಸೆಯನ್ನು ಈ ಸಂಕಲನ ಮೂಡಿಸಿದೆ.

ಈ ಕವಯಿತ್ರಿಗೆ ಎಲ್ಲ ಶುಭಗಳನ್ನೂ ಕೋರುತ್ತೇನೆ.

೨೦೨೦

ಭಾಗ ೩

ಕೃತಿ ಚಿಂತನ – ಅನಿಸಿಕೆ ಅಭಿಪ್ರಾಯಗಳು

ಜಿ.ಎಸ್. ಶಿವರುದ್ರಪ್ಪನವರ 'ಚಕ್ರಗತಿ'

ಪ್ರಿಯ ಶಿವರುದ್ರಪ್ಪನವರಿಗೆ,

'ಚಕ್ರಗತಿ' ಪ್ರತಿ ತಲುಪಿದೆ. ಕೃತಜ್ಞತೆಗಳು.

ಪುಸ್ತಕ ತುಂಬ ಚೆನ್ನಾಗಿ ಬಂದಿದೆ-ಯಾವ ಆಡಂಬರವೂ ಇಲ್ಲದೆ, ಸರಳ ಸುಂದರವಾಗಿ.

ಎಲ್ಲ ಕವಿತೆಗಳನ್ನೂ ಮತ್ತೊಮ್ಮೆ ಓದಿದೆ. ಎಂಥ ಭಾವವನ್ನೂ ಪ್ರಶಾಂತ ಚಿತ್ತಕ್ಕೊಯ್ಯುವ ಪಕ್ವತೆ ಈ ಕವಿತೆಗಳ ಲಯದಲ್ಲಿ, ನಡಿಗೆಯಲ್ಲಿ, ಶೈಲಿಯಲ್ಲಿ ಮೈದೋರಿದೆ. 'ಪ್ರಶ್ನೆ-ಉತ್ತರ', 'ನನ್ನ ನೆನಪಿನಾಳದಲ್ಲಿ', 'ಕೆಲವು ಪ್ರಶ್ನೆಗಳು', 'ಕಂಪಿನ ಕರೆ', 'ದಾವಣಗೆರೆಯ ನೆನಪುಗಳು', 'ಕೇಂದ್ರಬಿಂದು', 'ಪ್ರತೀಕ್ಷೆ', 'ಅಸ್ತಮಾನ'-ಮೊದಲಾದ ಉತ್ತಮ ರಚನೆಗಳಲ್ಲಿರುವ ವೈವಿಧ್ಯ, ಭಾವಸೂಕ್ಷ್ಮತೆ ಉನ್ನತಮಟ್ಟದ್ದಾಗಿ ನನಗೆ ತೋರಿತು.

ಅನುವಾದಗಳಂತೂ ತುಂಬ ಸೊಗಸಾಗಿವೆ. ಮೂಲದ ವಸ್ತು, ರೀತಿ ಮತ್ತು ಶೈಲಿಗೆ ಎಲ್ಲಿಯೂ ಭಂಗ ಬಂದಿಲ್ಲ-ಇಷ್ಟೇ ಅಲ್ಲ, ಕೆಲವೆಡೆ ಮೂಲಕ್ಕಿಂತಲೂ ಹೆಚ್ಚಿನ ಸೊಗಸು ಇಲ್ಲಿ ಕಾಣಿಸಿಕೊಂಡಿದೆ. ಬಹುಶಃ ಆಯ್ಕೆಯೂ ಇದಕ್ಕೆ ಕಾರಣವಾಗಿರಬೇಕು.

ಸಂಗ್ರಹದ ಹೆಸರೂ ಅರ್ಥಪೂರ್ಣವಾಗಿದೆ; ಅಭಿನಂದನೆಗಳು.

'ಮಾಸ್ಕೊದಲ್ಲಿ ಇಪ್ಪತ್ತೆರಡು ದಿನ' ಇಲ್ಲಿ ಬಿ.ಎ. IIIಕ್ಕೆ ಪಠ್ಯವಾಗಿದೆಯೆಂದು ಅಧಿಕೃತವಾಗಿ ತಿಳಿದು ಬಂದಿದೆ. ನಿಮಗೂ ವಿಶ್ವವಿದ್ಯಾಲಯದವರಿಂದ ಕಾಗದ ಬಂದಿರಬಹುದು

ಮತ್ತೆಲ್ಲ ಕ್ಷೇಮ

ವಂದನೆಗಳೊಂದಿಗೆ,

೨೭-೮-೧೯೮೨

'ಹಣತೆ' ಜಿ.ಎಸ್.ಎಸ್. ಅಭಿನಂದನ ಗ್ರಂಥ

ಕಮಲಾ ಹಂಪನಾ ಅವರ 'ಬಿಂದಲಿ'

'ಬಿಂದಲಿ'ಯನ್ನು ಶ್ರೀಮತಿ ಕಣವಿಯವರು ಮೊದಲು ಓದಿದರು. ಆಮೇಲೆ ನಾನು ಓದಿದೆ. ಕೆಲವು ವಚನಗಳು ಇಬ್ಬರ ಕುತೂಹಲವನ್ನು ತಣಿಸಿದವು. ನಮ್ಮ ಮನಸ್ಸನ್ನು ಕಾಡುವ ಕೆಲವು ವಿವರಗಳು, ಭಾವನೆಗಳು, ಆ ಕ್ಷಣದ ಚಿಂತನೆಗಳು ಇಲ್ಲಿ ಅಲ್ಲಲ್ಲಿ ಚೆನ್ನಾಗಿ ಅಭಿವ್ಯಕ್ತಿಗೊಂಡಿವೆ. ೧, ೩, ೪, ೬, ೯, ೨೦, ೩೦, ೩೭, ೪೦, ೪೮, ೪೯, ೬೪, ೬೭, ೬೯- ಇವು ಒಂದಲ್ಲ ಒಂದು ರೀತಿಯಿಂದ ನಿಮ್ಮ ತುಡಿತವನ್ನು ಓದುಗರಿಗೆ ಪರಿಣಾಮಕಾರಿಯಾಗಿ ಮುಟ್ಟಿಸಬಲ್ಲವು. ೧೮ ತುಂಬ ಸುಂದರ, ೧೯ರಲ್ಲಿಯ ಭಾವೋತ್ಕಟತೆ ಧ್ವನಿಪೂರ್ಣವಾಗಿದೆ. ೨೨, ೨೭, ೪೭, ಜೋಕುಗಳಿಗೆ ಈ ರೂಪ ತೊಡಿಸಿದಂತಿದೆ. ೮ರ ಧೋರಣೆ ಸರಿಯಲ್ಲ ಎನಿಸಿತು. ೧೧ರಲ್ಲಿ ಮೊದಲೆರಡು ಸಾಲುಗಳ ಔಚಿತ್ಯ ಅರ್ಥವಾಗದು. ೧೨, ೧೪, ೧೬, ೧೭ ಇವುಗಳಲ್ಲಿಯ ವಿಚಾರಗಳು ಸಮಗ್ರ ದೃಷ್ಟಿಗೂ ಪಕ್ವತೆಗೂ ಎತ್ತರವಾಗಿದೆ ಎನಿಸುತ್ತದೆ. ೧೫, ೪೩ ವೈಯಕ್ತಿಕ ಮಟ್ಟದಲ್ಲಿಯೇ ಉಳಿದು ಬಿಡುತ್ತವೆ. 'ಬಿಂದಲಿಗೊಂದು ಹರಳು' ನನಗೆ ಹೆಚ್ಚು ಮೆಚ್ಚಿಕೆಯಾಯಿತು. ಅಲ್ಲಿಯ ಬರವಣಿಗೆಯು ಚಿಕ್ಕ ಹಾಗೂ ಪ್ರಾಮಾಣಿಕ ಆಧುನಿಕ ವಚನಕಾರರಲ್ಲಿ, ನೀವು ಒಬ್ಬರಾದುದು ಸಂತೋಷ ಸಂಗತಿ. ನಮ್ಮಿಬ್ಬರ ಶುಭಾಶಯಗಳನ್ನು ಸ್ವೀಕರಿಸಿ.

'ಬಿಂದಲಿ' - ಸಪ್ನ ಬುಕ್ ಹೌಸ್, ಕಮಲಾ ಹಂಪನಾ ೨೦೧೦

ರವಿ ಉಪಾಧ್ಯ ಅವರ
'ನಿನ್ನ ರೂಪಿಸಲು ಕೂತಂತೆ' ಕವಿತಾ ಸಂಕಲನ

ಕವನ ಸಂಗ್ರಹ ಓದಿ ಸಂತೋಷವಾಯಿತು. ಬೆಳವಣಿಗೆಯ ಹೆಜ್ಜೆಗಳು ಸ್ಪಷ್ಟವಾಗಿವೆ. ರಾಜಕೀಯ ಹಾಗೂ ಸಾಮಾಜಿಕ ಚಿಂತನದ ಮೇಲೆ ಕಾವ್ಯ ಕಾವು ಕೂತು 'ರೂಪಿಸಲು ಕೂತಂತೆ' ಇದೆ. ಅದೇ ಕಳಕಳಿ ಈಗಲೂ ಸಂಯಮದಿಂದ ಮುಂದುವರೆದಿದೆ. ಭಾವನೆಗಳು ವ್ಯಕ್ತಿಕೇಂದ್ರೀಕೃತವಾಗಿದ್ದರೂ ಸಾರ್ವತ್ರಿಕವನ್ನು ಸುತ್ತಿಕೊಳ್ಳುವುದರಲ್ಲಿ ಹಿಂದೆ ಮುಂದೆ ನೋಡುವುದಿಲ್ಲ. ಭಾಷೆ ಹಾಗೂ ಲಯದಲ್ಲಿ ನಿಮ್ಮತನ ಮೆಚ್ಚುವಂಥದು. 'ಸ್ವಂತ ಚಹರೆ ಛಾಪು ಒತ್ತಬಲ್ಲೆಯಾ?' ಎಂಬ ಪ್ರಶ್ನೆಗೆ ಇಡೀ ಸಂಗ್ರಹ ಉತ್ತರ ಕೊಟ್ಟಿದೆ ಎಂದರೆ ತಪ್ಪಾಗದು.

೨೨-೬-೨೦೦೨

ಎಸ್.ಎಂ. ಹಿರೇಮಠರ 'ಕನ್ನಡ ಕಾವ್ಯಮೀಮಾಂಸೆ'

"ಆಧುನಿಕ ಕನ್ನಡ ಕಾವ್ಯಮೀಮಾಂಸೆ ತಲುಪಿದೆ. ಕೃತಜ್ಞತೆಗಳು. ನಿಮ್ಮ ಹಿಂದಿನ ಎರಡು ಕಾವ್ಯಮೀಮಾಂಸೆಗಳಿಗಿಂತಲೂ ಈ ಕೃತಿಯು ವಿಷಯ ವಿಸ್ತಾರವನ್ನು ಒಳಗೊಂಡದ್ದಾಗಿದೆ. ಆ ವಿಸ್ತಾರವನ್ನೆಲ್ಲ ಕಾವ್ಯಮೀಮಾಂಸೆಯ ಚೌಕಟ್ಟಿಗೆ ಒಗ್ಗಿಸಿಕೊಳ್ಳುವಲ್ಲಿ ಪ್ರೌಢಿಮೆಯನ್ನು ಸಾಧಿಸಿದ್ದೀರಿ. ಆಧುನಿಕ ಕನ್ನಡ ಕವಿಗಳ ಕಾವ್ಯ ತತ್ತ್ವಶ್ರದ್ಧೆಯನ್ನು ಗುರುತಿಸುವಲ್ಲಿ ನೀವು ಅತ್ಯಂತ ಸಫಲರಾಗಿದ್ದೀರಿ. ನಿಮ್ಮ ಅಧ್ಯಯನ-ಕೃತಿ ರಚನೆಯ ನಿರಂತರತೆಗೆ ಯಾರಾದರೂ ಬೆರಗು ಪಡಬೇಕು ಅಭಿನಂದನೆಗಳು"

೨೦೦೨

ಎಸ್.ಎಂ. ಹಿರೇಮಠರ 'ಜನಪದ ಕಾವ್ಯಮೀಮಾಂಸೆ'

ಜನಪದ ಕಾವ್ಯಮೀಮಾಂಸೆ ಕೊಡುಗೆಗಾಗಿ ಕೃತಜ್ಞ, ಕಾವ್ಯಮೀಮಾಂಸೆಯನ್ನು ಕುರಿತ ನಿಮ್ಮ ಬರವಣಿಗೆ ಈಗೊಂದು ಪೂರ್ಣಾಕಾರ ದೊರೆತಂತಾಯಿತು (ಕನ್ನಡ ಕಾವ್ಯಮೀಮಾಂಸೆ, ವಚನಕಾರರ ಕಾವ್ಯಮೀಮಾಂಸೆ, ಆಧುನಿಕ ಕನ್ನಡ ಕಾವ್ಯಮೀಮಾಂಸೆ, ಆದಮೇಲೆ ಈ ಕೃತಿ). ಸುಮಾರು ಮೂರು ದಶಕಗಳ ಹಿಂದೆ 'ಜನಪದ ಕಾವ್ಯದಲ್ಲಿ ಪ್ರತಿಮಾ ವಿಧಾನ'- ಎಂಬ ಲೇಖನ ಬರೆದ ನನಗೆ ನಿಮ್ಮ ಈ ವಿಸ್ತೃತ ಕೃತಿಯನ್ನು ಕಂಡು ಬಹಳ ಸಂತೋಷವಾಯಿತು. ಇದೊಂದು ಮೌಲಿಕ ಕೃತಿಯೆಂಬುದರಲ್ಲಿ ಎರಡು ಮಾತಿಲ್ಲ...

೯-೧-೨೦೦೪

ಕಾಂತಾವರ ಕನ್ನಡ ಸಂಘದ 'ನಾಡಿಗೆ ನಮಸ್ಕಾರ'

ಹುಟ್ಟಿದೊಡನೆಯೇ ಮಗು ಮಾತಾಡತೊಡಗಿದರೆ ಯಾರಿಗೆ ತಾನೆ ಆಶ್ಚರ್ಯವಾಗುವುದಿಲ್ಲ? ಕಾಂತಾವರ ಕನ್ನಡ ಸಂಘ ಕಳೆದ ಮೂರು ದಶಕಗಳಲ್ಲಿ ಮಾಡಿ ತೋರಿಸಿದ ಕೆಲಸ ಅಷ್ಟು ಅದ್ಭುತವಾದದ್ದು. ಉಪನ್ಯಾಸ ಮಾಲೆ, ಗ್ರಂಥ ಪ್ರಕಟಣೆ, ವಿಚಾರಗೋಷ್ಠಿ, ಸಾಧಕರಿಗೆ ಸನ್ಮಾನ, ಮುದ್ದಣಕಾವ್ಯ ಪ್ರಶಸ್ತಿ, ಭವ್ಯವಾದ ಕನ್ನಡ ಭವನದ ನಿರ್ಮಾಣ, - ಇತ್ಯಾದಿ ಅರ್ಥಪೂರ್ಣ ಚಟುವಟಿಕೆಗಳ ಮೂಲಕ ಗ್ರಾಮಾಂತರ ಪ್ರದೇಶದಲ್ಲಿ ಕೂಡ ಸಾಂಸ್ಕೃತಿಕವಾಗಿ ಕನ್ನಡವನ್ನು ಕಟ್ಟುವ ಕಾರ್ಯವನ್ನು ಹೇಗೆ ಮಾಡಬಹುದು ಎಂಬುದಕ್ಕೆ ಇದು ಮಾದರಿಯಾಗಬಲ್ಲುದು.

ಇದೀಗ ಸುವರ್ಣ ಕರ್ನಾಟಕ, ಆಚರಣೆಯ ಸಂದರ್ಭದಲ್ಲಿ ಕಾಂತಾವರ ಕನ್ನಡ ಸಂಘವು 'ನಾಡಿಗೆ ನಮಸ್ಕಾರ' ಎನ್ನುವ ಸಾಹಿತ್ಯ ಸಂಸ್ಕೃತಿ ಚಿಂತನ ಗ್ರಂಥಮಾಲೆಯನ್ನು ಪ್ರಾರಂಭಿಸಿ ಸದ್ದಿಲ್ಲದೆ ಮತ್ತೊಂದು ಮಹತ್ವದ ಹೆಜ್ಜೆಯನ್ನು ಇಟ್ಟಿದೆ. ಕಾಸರಗೋಡು ಸೇರಿದಂತೆ ಅಖಂಡ ದಕ್ಷಿಣ ಕನ್ನಡವು ಸಮಗ್ರ ಕರ್ನಾಟಕಕ್ಕೆ ನೀಡಿದ ಒಟ್ಟು ಕೊಡುಗೆಯ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳ ಸಾಧನೆಯನ್ನು ಸಂಕ್ಷಿಪ್ತವಾಗಿ ಸಾರವತ್ತಾಗಿ ಪರಿಚಯಿಸುವ ಸುಲಕ್ಷಣವಾದ ಹತ್ತು ಪುಸ್ತಕಗಳನ್ನು ಹೊರತಂದಿದ್ದು ಇನ್ನೂ ಹಲವು ಕಂತುಗಳಲ್ಲಿ ಪುಸ್ತಕ ಪ್ರಕಟಿಸಲಿದೆ.

ನಾಡಿನ ಒಟ್ಟು ಸಂಸ್ಕೃತಿಯ ಅನಾವರಣಕ್ಕೆ ಪೂರಕವಾಗಬಲ್ಲ ಇಂಥ ಕಾರ್ಯ ಉಳಿದ ಜಿಲ್ಲೆಗಳ ಸಂಘಗಳಿಗೂ ಪ್ರೇರಕ ಶಕ್ತಿಯಾಗಿ ಪರಿಣಮಿಸಿದೆಂದು ಹಾರೈಸುತ್ತೇನೆ. ಈ ಬಗೆಯ ಕನ್ನಡದ ಪ್ರೀತಿ, ಸಾರ್ಥಕ ಕಾಳಜಿಗಳೇ ಕನ್ನಡವನ್ನು ಮುನ್ನಡೆಸಬಲ್ಲವು. ಸುವರ್ಣ ಕರ್ನಾಟಕ ಆಚರಣೆ ಅರ್ಥಪೂರ್ಣವಾಗುವದು ಇಂಥ ಕೆಲಸಗಳಿಂದ ಮಾತ್ರ. ಅದಕ್ಕಾಗಿ ಡಾ. ನಾ. ಮೊಗಸಾಲೆ ಅವರು ಎಲ್ಲ ಕನ್ನಡಿಗರ ಅಭಿನಂದನೆಗೆ ಪಾತ್ರರು.

- ಸಂಘ ಜಂಗಮ, ೨೦೧೬

ಡಾ. ಜಿ.ಎನ್. ಉಪಾಧ್ಯ ಅವರ 'ಅನುಭಾವ ಸಾಹಿತ್ಯದ ವಿಭಿನ್ನ ನೆಲೆಗಳು'

ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ಪ್ರಾಧ್ಯಾಪಕರೂ ಮುಖ್ಯಸ್ಥರೂ ಆಗಿರುವ ಡಾ. ಜಿ.ಎನ್. ಉಪಾಧ್ಯ ಅವರು ತಮ್ಮ ವಿಭಾಗವನ್ನು ಅಧ್ಯಯನ, ಸಂಶೋಧನ ಹಾಗೂ ಪ್ರಕಟಣೆಯ ಆಕರ್ಷಕ ಕೇಂದ್ರವಾಗಿ ರೂಪುಗೊಳಿಸುತ್ತಿರುವುದರ ಜೊತೆಗೆ, ಮುಂಬಯಿ ಕನ್ನಡಿಗರ ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗವಾಗಿ ಕೆಲಸ ಮಾಡುತ್ತಿರುವುದು ನನಗೆ ಹೆಚ್ಚಿನ ಸಂತೋಷವನ್ನುಂಟು ಮಾಡಿದೆ. ಸ್ವತಃ ಉತ್ತಮ ಲೇಖಕರಾಗಿರುವ ಅವರು ಈಗಾಗಲೇ ಇಪ್ಪತ್ತೈದಕ್ಕೂ ಮಿಕ್ಕಿ ಗ್ರಂಥಗಳನ್ನು ಪ್ರಕಟಿಸಿದ್ದು ಅವುಗಳಲ್ಲಿ ಮಹಾರಾಷ್ಟ್ರ - ಕರ್ನಾಟಕ ಸಾಂಸ್ಕೃತಿಕ ಬಾಂಧವ್ಯಕ್ಕೆ ಸಂಬಂಧಪಟ್ಟ ಐದಾರು ಸಂಶೋಧನ ಗ್ರಂಥಗಳು ವಿದ್ವಾಂಸರ ಹೆಚ್ಚಿನ ಮನ್ನಣೆಗೆ ಪಾತ್ರವಾಗಿದೆ. 'ಅನುಭಾವ ಸಾಹಿತ್ಯದ ವಿಭಿನ್ನ ನೆಲೆಗಳು' ಎಂಬ ಪ್ರಸ್ತುತ ಕೃತಿ ಅವರು ಕಾಲ ಕಾಲಕ್ಕೆ ಪ್ರಸ್ತುತ ಪಡಿಸಿದ ಇಪ್ಪತ್ತೊಂದು ಲೇಖನಗಳನ್ನು ಒಳಗೊಂಡಿದ್ದು ಅವುಗಳಲ್ಲಿ ಕೊನೆಯ ನಾಲ್ಕೈದು ಪುಸ್ತಕಗಳ ವಿಮರ್ಶೆಗಳಾಗಿವೆ.

ಅನುಭವ ಪ್ರಾಮಾಣ್ಯವನ್ನು ವಿಶೇಷವಾಗಿ ಅವಲಂಬಿಸಿದ, ತಿಳಿಯಲಾರದ ಘನವನ್ನು ತಿಳಿಯುವ, 'ಅರಿವೇ ಗುರು' ಎಂಬ ಧೋರಣೆಯ, 'ಆತ್ಮವಿದ್ಯೆಯೇ ಅನುಭಾವ' ಎಂಬ ಶರಣರ ಅಥವಾ ವಚನಕಾರರ ನಿಲುವನ್ನು ಬಹುತೇಕ ಅಂಗೀಕರಿಸಿದ ಲೇಖಕರು ಆ ಹಿನ್ನೆಲೆಯಲ್ಲಿಯೇ ವಚನಸಾಹಿತ್ಯ, ದಾಸಸಾಹಿತ್ಯ, ಮರಾಠಿ ಸಂತಸಾಹಿತ್ಯ ಇತ್ಯಾದಿಗಳಲ್ಲಿ ಅದರ ವಿಭಿನ್ನ ನೆಲೆಗಳನ್ನು ಗುರುತಿಸುವ ಪ್ರಯತ್ನವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಏಕ ಕಾಲಕ್ಕೆ ಆತ್ಮಕಲ್ಯಾಣ ಮತ್ತು ಲೋಕಕಲ್ಯಾಣವನ್ನು ಸಾಧಿಸಿದ, ಸಮಾಜೋ-ಧಾರ್ಮಿಕ ಆಂದೋಲನದ ಪ್ರತೀಕವಾಗಿ, ಅಚ್ಚ ದೇಶೀಯ ಸಂಸ್ಕೃತಿಯ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ವಚನ ಸಾಹಿತ್ಯವನ್ನು ಗುರುತಿಸಲಾಗಿದೆ. ಭಾರತೀಯ ಭಕ್ತಿ ಪರಂಪರೆಯ ಭಿನ್ನ ಧ್ವನಿ 'ವಚನ ಚಳುವಳಿ' ಎಂಬುದಕ್ಕೆ ಸುಮಾರು ಮೂವತ್ತು ಕಾರಣಗಳನ್ನು ನೀಡಿ ಸಮರ್ಥಿಸಿರುವುದು ಗಮನಾರ್ಹವಾಗಿದೆ.

ಸಾಹಿತ್ಯ, ಸಂಗೀತ, ನೃತ್ಯ ಹಾಗೂ ಸಿದ್ಧಾಂತಗಳನ್ನೊಳಗೊಂಡ, ಮೋಕ್ಷ ಸಾಧನೆಗೆ ಭಕ್ತಿ ಮಾರ್ಗ ಹಾಗೂ ನಿರ್ಮಲ ಜೀವನ ಕ್ರಮವೇ ಸೂಕ್ತವೆಂದು ಕಂಡುಕೊಂಡ ದಾಸ ಸಾಹಿತ್ಯದ ವೈಶಿಷ್ಟ್ಯ ಹಾಗೂ ಪರಂಪರೆಯನ್ನು, ಕನ್ನಡ ಕೀರ್ತನ ಸಾಹಿತ್ಯಕ್ಕೆ ಕಾಯಕಲ್ಪ ಮಾಡಿದ ವ್ಯಾಸರಾಯರಿಂದ ಹಿಡಿದು, ಪುರಂದರ ದಾಸರ ಕನಕದಾಸರನ್ನು ಮುಖ್ಯವಾಗಿಟ್ಟು

ಕೊಂಡು ಇತರ ಜನಪ್ರಿಯ ದಾಸರ ಹಾಡುಗಳ ವಿಶ್ಲೇಷಣೆಯ ಮೂಲಕ ಜೀವನ ನಿಷ್ಠ, ಸಮಾಜ ವಿಮರ್ಶೆ, ನೀತಿ ಬೋಧೆಗೆ ಒತ್ತು ಕೊಟ್ಟು ನಿರೂಪಿಸಲಾಗಿದೆ.

ಸೂಫಿ ಸಂತರು, ಅವಧೂತರು, ಶೈವ ವೈಷ್ಣವ ಮೊದಲಾದ ಪಂಥಗಳೊಡನೆ ಬೆರೆತು ಸಂಕ್ರಮಣ ಕಾಲದಲ್ಲಿ ಸಾಹಿತ್ಯ ರಚಿಸಿ, ಒಂದು ಸಂಪ್ರದಾಯಕ್ಕೆ ಸೀಮಿತಗೊಳ್ಳದ ಮಹೀಪತಿದಾಸರು ಒಡೆದು ಕಂಡರೆ ಆಶ್ಚರ್ಯವಿಲ್ಲ. ಹಾಗೆಯೇ ಶ್ರೀರಾಮ ಅಂಕಿತದಲ್ಲಿ ಕೀರ್ತನೆಗಳನ್ನು ಬರೆದು ಪ್ರಗತಿಪರ ಚಿಂತನೆ ಹಾಗೂ ಸರ್ವಧರ್ಮ ಸಮಭಾವವನ್ನು ವ್ಯಕ್ತಪಡಿಸಿದ ಏಕೈಕ ಮುಸ್ಲಿಂ ದಾಸ ಕವಿ ಬಡೇಸಾಬನನ್ನೂ ಲೇಖಕರು ಮರೆತಿಲ್ಲ. ಶಿಶುನಾಳ ಷರೀಫರನ್ನು ಅನುಭಾವದ ಅವಧೂತನೆಂದಿರುವದು ಸಮಂಜಸವಾಗಿದೆ.

ಮಹಾರಾಷ್ಟ್ರದ ಭಕ್ತಿ ಪರಂಪರೆಯಲ್ಲಿ ಸಮರ್ಥ ರಾಮದಾಸರು ತಮ್ಮದೇ ಆದ ಅನುಭಾವ ಪಂಥವನ್ನು ಸ್ಥಾಪಿಸಿದ ಬಹುಶ್ರುತ, ಮೇಧಾವಿ, ತತ್ವದರ್ಶಿ, ಮಹಾನ್ ಕರ್ಮಯೋಗಿ. ಅವರನ್ನು ಕುರಿತ ಲೇಖನ ತುಂಬ ಮಹತ್ವದ್ದಾಗಿದೆ. ಹಿಂದೂ ಧರ್ಮದ ದುರ್ಬಲ ಸ್ಥಿತಿಯನ್ನು ಹೋಗಲಾಡಿಸಿ, ಪುನರುತ್ಥಾನಕ್ಕೆ ಶ್ರಮಿಸದೆ ಅವರು ಮಹಾರಾಷ್ಟ್ರದ ಮೂಲೆ ಮೂಲೆಯಲ್ಲಿ ಹನುಮಾನ್ ಮಂದಿರಗಳನ್ನು, ಸಾವಿರಾರು ದೇವಾಲಯಗಳನ್ನು ಸ್ಥಾಪಿಸಿದರು. 'ದಾಸ ಬೋಧ' ಅವರ ಮೇರು ಕೃತಿಯಾಗಿದ್ದು ಕನ್ನಡವನ್ನೂ ಒಳಗೊಂಡಂತೆ ಬೇರೆ ಭಾಷೆಗಳಿಗೂ ಅದು ಅನುವಾದಗೊಂಡಿದೆ. ಛತ್ರಪತಿ ಶಿವಾಜಿ ಇವರನ್ನು ಗುರುಗಳೆಂದು ಸ್ವೀಕರಿಸಿದನೆಂದು ಹೇಳಲಾಗಿದೆ.

ಕನ್ನಡ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ್ದರೆ ಮರಾಠಿ ಆರ್ಯನ್ ಭಾಷಾ ವರ್ಗಕ್ಕೆ ಸೇರಿದ್ದಾಗಿದೆ. ಉಭಯ ಭಾಷೆಗಳ ನಡುವಿನ ಆದಾನ ಪ್ರಧಾನವನ್ನು ಲೇಖಕರು ಎತ್ತಿ ತೋರಿಸಿರುವುದು ತುಂಬ ಸ್ವಾಗತಾರ್ಹ. 'ಮರಾಠಿ ಕವಿಗಳ ಕನ್ನಡ ಪ್ರೇಮ' ಲೇಖನ ಮರಾಠಿಯಲ್ಲಿ ಅನುವಾದಗೊಂಡು ಪ್ರಮುಖ ಮರಾಠಿ ಪತ್ರಿಕೆಯಲ್ಲಿ ಪ್ರಕಟಗೊಳ್ಳುವುದು ಅವಶ್ಯವೆಂದು ನನ್ನ ಭಾವನೆ.

ಪುರಂದರ ದಾಸರ ಜೀವನ ಸಾಧನೆ ಹಾಗೂ ಕೃತಿಗಳನ್ನು ಅತ್ಯಂತ ಕರಾರುವಕ್ಕಾಗಿ ಬರೆದ ದಿವಾಣಜಿಯವರ 'ಪ್ರಸಾದ ಯೋಗ'ದ ವಿಮರ್ಶಾ ಲೇಖನ ಹೆಚ್ಚು ಜನರ ಗಮನಕ್ಕೆ ಬರುವದು ಒಳ್ಳೆಯದು. ಹಾಗೆಯೇ 'ಧರ್ಮಸ್ಥಳ: ಬಹುಮುಖಿ ಅಧ್ಯಯನ' ಕೃತಿಯ ವಿಮರ್ಶೆಯೂ ಸಮುಚಿತವಾಗಿದೆ. 'ಕನ್ನಡದಲ್ಲಿ ಸಿದ್ಧರಾಮ ಸಾಹಿತ್ಯ' ಒಂದು ಪ್ರತ್ಯೇಕ ಪುಸ್ತಕವಾಗುವಷ್ಟು ಹರಹನ್ನು ಪಡೆದ ಪ್ರಬಂಧವಾಗಿದೆ.

ಈ ಮಹತ್ವದ ಕೃತಿಗಾಗಿ ಡಾ. ಜಿ.ಎನ್. ಉಪಾಧ್ಯ ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಸಂ : ಭರತಕುಮಾರ ಪೊಲಿಪು, ಕರ್ನಾಟಕ ಸಂಘ, ಮುಂಬಯಿ ೨೦೧೧

ಬಿ.ಎ. ಸನದಿ : ಕಾವ್ಯ - ಸಾಹಿತ್ಯ - ವ್ಯಕ್ತಿತ್ವ

ಕನ್ನಡ ಕಾವ್ಯದ ದೀಪಾವಳಿಯಲ್ಲಿ ಹೊಯ್ದಾಡದೆ ಪ್ರಶಾಂತವಾಗಿ ಬೆಳಕು ಬೀರುತ್ತಿರುವ, ನನ್ನ ಆತ್ಮೀಯ ಸ್ನೇಹಿತರಾದ ಡಾ. ಬಿ.ಎ. ಸನದಿಯವರ ಕಾವ್ಯ-ಸಾಹಿತ್ಯ - ವ್ಯಕ್ತಿತ್ವವನ್ನು ಕುರಿತು ಸಹೃದಯತೆಯಿಂದ ಕೂಡಿದ ಪರಿಚಯಾತ್ಮಕ ಕೃತಿಯೊಂದನ್ನು ಅಚ್ಚುಕಟ್ಟಾಗಿ ಕೊಟ್ಟಿರುವ ನಿಮ್ಮನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಮುಂಬಯಿ ಕರ್ನಾಟಕ ಸಂಘದೊಡನೆ ಅನ್ಯೋನ್ಯ ಸಂಬಂಧವನ್ನು ಪಡೆದು ಅದರ ಏಳಿಗೆಯಲ್ಲಿ ಪಾಲ್ಗೊಂಡು ತಾವೂ ಬೆಳೆದು, ಮುಂಬಯಿ ಕನ್ನಡಿಗರೆಲ್ಲರಿಗೂ ಕಣ್ಮಣಿಯಾಗಿದ್ದ (ಯಾಗಿರುವ) ಸನದಿಯವರನ್ನು ಕುರಿತು ಈ ಗ್ರಂಥವನ್ನು ಕರ್ನಾಟಕ ಸಂಘಕ್ಕೆ ಅರ್ಪಿಸಿರುವುದೂ ಹಾಗೆಯೇ ಸಂಘವೇ ಅದನ್ನು ಪ್ರಕಟಿಸಿರುವುದೂ ತುಂಬ ಔಚಿತ್ಯಪೂರ್ಣವಾಗಿದೆ.

ಸಾಹಿತ್ಯ-ಸ್ನೇಹ-ಸಂಘ-ಸಹೃದಯತೆ ಎಲ್ಲ ಒಗ್ಗೂಡಿದ ಬಿ.ಎ. ಸನದಿ ಬದುಕು ಬರಹ ಗ್ರಂಥ ಕೃತಿಗಳು ನಮ್ಮ ಸಾಹಿತ್ಯ ಪ್ರಪಂಚದ ನಿರ್ಮಲತೆಗಳನ್ನು ಕಾಪಾಡಿಕೊಳ್ಳುವಲ್ಲಿ ಮಹತ್ವದ ಪಾತ್ರವನ್ನು ವಹಿಸಬಲ್ಲವು. ಮತ್ತೊಮ್ಮೆ ತಮ್ಮೆಲ್ಲರಿಗೂ ಹಾರ್ದಿಕ ಅಭಿನಂದನೆಗಳು. ರಾಜ್ಯೋತ್ಸವದ ಶುಭಾಶಯಗಳು. ಸಂಘದ ಗೌ. ಕಾರ್ಯದರ್ಶಿಗಳಾದ ಓಂದಾಸ್ ಕಣ್ಣಂಗಾರ್ ಅವರಿಗೂ ನನ್ನ ವಂದನೆಗಳು.

ಸಂ: ಡಾ. ಭರತಕುಮಾರ ಪೊಲಿಪು, ಕಸಾಪ ಘಟಕ, ಮುಂಬಯಿ ೨೦೧೨

ಡಾ. ಜಿ.ಎನ್. ಉಪಾಧ್ಯ ಅವರ
ಮಹಾರಾಷ್ಟ್ರ-ಕರ್ನಾಟಕ ಆದಾನ ಪ್ರದಾನ

ಪ್ರಿಯ ಡಾ. ಜಿ.ಎನ್. ಉಪಾಧ್ಯ ಅವರಿಗೆ, ವಂದನೆಗಳು. 'ಮಹಾರಾಷ್ಟ್ರ ಕರ್ನಾಟಕ ಆದಾನ ಪ್ರದಾನ' ಪುಸ್ತಕ ತಲುಪಿದೆ. ಕೆಲಸದಲ್ಲಿ ಉತ್ತರಿಸಲು ವಿಳಂಬವಾಯಿತು. ಕಳೆದ ಹದಿನೈದು ವರ್ಷಗಳಿಗೂ ಮಿಕ್ಕಿ ಮಹಾರಾಷ್ಟ್ರದ ಅನೇಕ ಸ್ಥಳಗಳಲ್ಲಿ, ಊರು ನಗರಗಳಲ್ಲಿ ನೀವು ಕೈಕೊಂಡ ಕ್ಷೇತ್ರಕಾರ್ಯ, ಮಾಡಿದ ಸಂಶೋಧನೆ, ಪ್ರಕಟಿಸಿದ ತೀರ್ಮಾನ ಎಲ್ಲವನ್ನು ಒಂದೆಡೆ ತಂದು ಉಭಯ ಭಾಷೆಗಳಿಗೂ ಮಹದುಪಕಾರ ಮಾಡಿದ್ದೀರಿ. ಇದೊಂದು ಸಾರ್ಥಕ ಪ್ರಯತ್ನ. ಪರಸ್ಪರ ಭಾಷೆ, ಸಂಸ್ಕೃತಿಯನ್ನು ಅರಿತು ಅರ್ಥಮಾಡಿಕೊಂಡು ಸೌಹಾರ್ದತೆಯಿಂದ ಬಾಳಲು ಪ್ರಚೋದಿಸುವ ಒಂದು ಮಹತ್ವದ ಕೃತಿ. 'ಸಿದ್ಧರಾಮನ ಸೊನ್ನಲಿಗೆ' ಗ್ರಂಥವನ್ನು ಇದರ ಜೊತೆಗೆ ಸೇರಿಸಿದ್ದು ಒಳ್ಳೆಯದೇ ಆಯಿತು. ಈ ಗ್ರಂಥ ಮರಾಠಿಗೂ ಅನುವಾದವಾಗುವದು ಅಗತ್ಯವೆಂದು ನನಗನಿಸುತ್ತದೆ. ಪುಣೆಯ 'ಕನ್ನಡ-ಮರಾಠಿ ಸ್ನೇಹ ವರ್ಧನ ಸಂಘ' ಇದನ್ನು ಕೈಗೆತ್ತಿಕೊಳ್ಳಬಹುದೆ, ಕೇಳಿ ನೋಡಿ, ಹಾರ್ದಿಕ ಅಭಿನಂದನೆಗಳೊಂದಿಗೆ

ಸಂ: ಭರತಕುಮಾರ ಪೊಲಿಪು

ಪ್ರ : ಕರ್ನಾಟಕ ಸಂಘ, ಮುಂಬಯಿ ೨೦೧೨

ಜಿ.ಎಸ್. ಜಯದೇವರ 'ಶಿಕ್ಷಣ ಮತ್ತು ಸಮಾಜ'

ಸ್ವತಃ ಕಾಲೇಜಿನಲ್ಲಿ ವಿಜ್ಞಾನದ ಅಧ್ಯಾಪಕನಾಗಿ ಕೆಲಸಮಾಡಿ, ಗಿರಿಜನರೊಡನೆ ಒಡನಾಟ-ಸಂಪರ್ಕವಿಟ್ಟುಕೊಂಡು ಸಮಾಜಸೇವೆಯಲ್ಲಿ ತೊಡಗಿದ ಜಿ.ಎಸ್. ಜಯದೇವ, ಕಳೆದ ಎರಡು ದಶಕಗಳಿಂದ ಚಾಮರಾಜ ನಗರದಲ್ಲಿ 'ದೀನಬಂಧು ಸಂಸ್ಥೆ'ಯನ್ನು ಸ್ಥಾಪಿಸಿ, ಅನಾಥ ನಿರ್ಗತಿಕ ಗಂಡು ಮಕ್ಕಳ ಏಳಿಗೆಗಾಗಿ 'ದೀನಬಂಧು ಮಕ್ಕಳ ಮನೆ' ಆಶ್ರಮಶಾಲೆ ನಡೆಸುತ್ತಿರುವವರು. ಅವರಿಗೆ ಶಿಕ್ಷಣವೆಂದರೆ ಎಲ್ಲಿಲ್ಲದ ಆಸಕ್ತಿ. ಈ ಮುಂಚಿನ 'ಹಳ್ಳಿಹಾದಿ' ಗ್ರಂಥದಲ್ಲಿಯೂ ಉಳಿದ ವಿಷಯಗಳ ಜೊತೆಗೆ ಶಿಕ್ಷಣದ ಬಗೆಗಿನ ತಮ್ಮ ವೈವಿಧ್ಯಮಯವಾದ ಅನುಭವಗಳನ್ನು ಪ್ರಸ್ತುತಪಡಿಸಿ ತೀವ್ರವಾದ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿದ ಅವರು 'ಶಿಕ್ಷಣ ಮತ್ತು ಸಮಾಜ' ಗ್ರಂಥದಲ್ಲಿ ಇನ್ನಷ್ಟು ವ್ಯಾಪಕವಾಗಿ ಶಿಕ್ಷಣ ಕುರಿತ ಸ್ವೋಪಜ್ಞ ಚಿಂತನೆಗಳನ್ನು ನೈತಿಕ ಜವಾಬ್ದಾರಿಯಿಂದ, ಅನುಷ್ಠಾನಕ್ಕೆ ಒತ್ತುಕೊಟ್ಟು ಮುಂದುವರಿಸಿದ್ದಾರೆ.

ನಮ್ಮ ಬದುಕು, ವ್ಯಕ್ತಿತ್ವ, ಪರಿಸರ, ಆದರ್ಶಗಳು-ಮಿತಿಗಳು ಇತ್ಯಾದಿಗಳೊಡನೆ ಶಿಕ್ಷಣದ ಸಂಬಂಧವನ್ನು ಮುಖಾಮುಖಿಯಾಗಿ, ವಿವೇಚಿಸಿ, ವಿಶ್ಲೇಷಿಸುವ ಇಲ್ಲಿಯ ಕ್ರಮಕ್ಕೆ ಅನುಭವಗಳನ್ನೇ ಆಧಾರವಾಗಿಸಿ, ಸಮಸ್ಯೆಗಳಿಗೆ ಪರಿಹಾರವನ್ನೂ ಸೂಚಿಸಿರುವುದು ಗಮನಾರ್ಹವಾಗಿದೆ. ಮನುಷ್ಯನ ಮನಸ್ಸಿನಲ್ಲಿರುವ ಎಲ್ಲ ದೌರ್ಬಲ್ಯಗಳನ್ನು ಬಂಡವಾಳ ಮಾಡಿಕೊಂಡ ಜಾಗತೀಕರಣ, ಕೊನೆಯಿಲ್ಲದ ತಾಂತ್ರಿಕ ಪ್ರಗತಿ ಅವನ ದುರಾಸೆಗಳನ್ನು ಹೆಚ್ಚಿಸಿ, ಬದುಕಿನ ಕೃತಕ ಅವಶ್ಯಕತೆಗಳ ಪೂರೈಕೆಗೆ ಇಂದಿನ ಶಿಕ್ಷಣ ಮಕ್ಕಳನ್ನು ಸಿದ್ಧಗೊಳಿಸುತ್ತ, ಸರಳಜೀವನದಲ್ಲಿ ಸಂತೋಷವಿದೆ ಯೆಂಬ ಸತ್ಯವನ್ನು ತಿಳಿಸಿಕೊಡದಿರುವ ಬಗೆಗಿನ ಲೇಖಕರ ವಿಷಾದ, ಶಿಕ್ಷಣದಲ್ಲಿ ನಿಜವಾದ ಆಸಕ್ತಿಯುಳ್ಳವರ ಕಣ್ಣು ತೆರೆಸುವಂತಿದೆ.

ಜೀವನವನ್ನು ಸಮಗ್ರವಾಗಿ ನೋಡಬಲ್ಲ ಒಂದು ಸರಳ ಜೀವನದೃಷ್ಟಿಯನ್ನು ರೂಪಿಸುವ ಶಿಕ್ಷಣದ ಅವಶ್ಯಕತೆಯನ್ನು ಪ್ರತಿಪಾದಿಸುವ ಈ ಗ್ರಂಥ ಲೇಖಕರು ಆಶಿಸುವಂತೆ ಶಿಕ್ಷಣಕ್ಷೇತ್ರದಲ್ಲಿ ದುಡಿಯುತ್ತಿರುವ ಎಲ್ಲ ಸಹೃದಯರ ಕೈಸೇರಿ, ಅವರ ಮನಸ್ಸನ್ನು ಪರಿವರ್ತಿಸುವಂತಾಗಲಿ ಎಂದು ಹಾರೈಸುತ್ತೇನೆ.

೧೭-೨-೨೦೧೩

ವಾಮನಬೇಂದ್ರೆ ಅವರ
'ಅನಂತಧಾರೆ'

ಪ್ರಿಯ ಶ್ರೀ ವಾಮನ ಬೇಂದ್ರೆಯವರಿಗೆ ಸಪ್ರೇಮ ಅಭಿನಂದನೆಗಳು.

'ಅನಂತಧಾರೆ'ಯನ್ನು ಓದಲು ಮೊನ್ನೆ ಕೈಗೆತ್ತಿಕೊಂಡೆ ನಾದರೂ ನೀವು ಅದನ್ನು ಕೊಟ್ಟಂದಿನಿಂದಲೂ ಅದು ನನ್ನ ನೆನಪಿನಲ್ಲಿ ಹರಿಯುತ್ತಲೇ ಇತ್ತು. ಕೆಲಸಗಳ ನಡುವೆ ಈಗ ಅದಕ್ಕೆ ದಾರಿಯಾಯಿತು.

ಇಲ್ಲಿಯ ಎಲ್ಲ ಕವನಗಳನ್ನು ಕಣ್ಣಾಡಿಸಿದ ಮೇಲೆ 'ಅನಂತಧಾರೆ', 'ಸ್ಮರಣೆ', 'ಲ೨ರ ಬೇಂದ್ರೆ', 'ಇಹುದು ಎಂದರೇನು?' 'ಆಪ್ತಾಲೋಚನೆ', 'ಒಂದೇ ಪೂರ್ಣ ಸತ್ಯ' - ಈ ಕವಿತೆಗಳು ವಿಶೇಷವಾಗಿ ನನ್ನ ಗಮನವನು ಸೆಳೆದವು. ಇಲ್ಲಿ ಕಣ್ಣಿಗೆ ಕಟ್ಟುವ ಚಿತ್ರಗಳಿವೆ; ಆದರೆ ಇದು ಕಣ್‌ಕಟ್ಟಲ್ಲ. ನಮ್ಮ ದೃಷ್ಟಿಯಾಚೆಗಿರುವ ಬೆರಗನ್ನೂ ಕಾವ್ಯ ಸತ್ಯವನ್ನೂ ಇವು ಸೊಗಸಾಗಿ ಪ್ರತಿಬಿಂಬಿಸುತ್ತವೆ. ಎಲ್ಲೆಲ್ಲಿಯವರ ಮೇಲೆ ಬೇಂದ್ರೆ ಪ್ರಭಾವ ಬಿದ್ದಿರುವಾಗ ಅವರ ಹತ್ತಿರದಲ್ಲಿಯೇ 'ಎತ್ತಾಗಿ, ತೊತ್ತಾಗಿ, ಹಿತ್ತಲದ ಗಿಡವಾಗಿ(ಸರ್ವಜ್ಞ ಹೇಳುವಂತೆ) ಇದ್ದ ನಿಮ್ಮ ಮೇಲೆ ಬೀಳದೇ ಇರುವುದು ಹೇಗೆ ಸಾಧ್ಯ? ಮೇಲೆ ಉದಾಹರಿಸಿದ ಕವಿತೆಗಳು ಆ ಪ್ರಭಾವವನ್ನು ಅರಗಿಸಿಕೊಂಡು ಸ್ವಂತಿಕೆಯನ್ನು ಎತ್ತಿ ಹಿಡಿದಿವೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ. 'ಇಂಥ ಕವಿತೆಗಳನ್ನು ಹೆಚ್ಚು ಹೆಚ್ಚಾಗಿ ಬರೆಯಬೇಕು. ಎಂದೂ ಗೆ. ಕುರ್ತಕೋಟಿಯವರ ಜೊತೆಗೆ ದನಿಗೂಡಿಸುತ್ತೇನೆ. ಇವುಗಳ ಜೊತೆಗೆ ಬೇರೆ ಬೇರೆ ಕಾರಣಕ್ಕಾಗಿ 'ಒಂದು ಇನ್ನೊಂದು 'ಬೀಳ್ಕೊಡುಗೆ', 'ತರುಣರ ದುಸ್ಥಿತಿ', 'ತಾಯಿಗೆ' ಈ ಕವನವನ್ನು ಹೆಸರಿಸಬೇಕು. ನನ್ನ ಮತ್ತು ಶಿವರುದ್ರಪ್ಪನವರ ಸ್ನೇಹವನ್ನು ಕುರಿತು ಬರೆದ ಪದ್ಯ ನಿಜಕ್ಕೂ ಹೃದ್ಯವಾಗಿದೆ. 'ಕೃತಿಯ ಸಂಕಲ್ಪವನ್ನು ಮೀರಿ ಹೋಗುವುದೇ ಕಾವ್ಯಗುಣದ ಲಕ್ಷಣ' ಎಂಬ ಮಾತನ್ನು ಈ ಸಂದರ್ಭದಲ್ಲಿ ಕೀರ್ತಿಯವರು ಆಡಿರುವುದು ಅರ್ಥಪೂರ್ಣವಾಗಿದೆ.

ಎಂ.ಆರ್. ರವಿ ಅವರ 'ಜೀವನ ಸೌರಭ'

ಪ್ರಿಯ ಶ್ರೀ ಛಾಯಾಪತಿಯವರಿಗೆ ವಂದನೆಗಳು

ಮೊನ್ನೆ ಜೂನ್ ೨೮ಕ್ಕೆ ೮೩ ಮುಗಿದು ೮೪ರಲ್ಲಿ ಕಾಲಿಟ್ಟಿದ್ದೇನೆ. ವಯೋಸಹವಾಗಿ, ಮೊದಲಿನಂತೆ ಈಗ ಓದುವದಾಗುವುದಿಲ್ಲ. ಕಣ್ಣು ಮಂಜ್ ಮಂಜಾಗುತ್ತವೆ. ಹೀಗಾಗಿ ಇತ್ತೀಚೆಗೆ ನನಗೆ ಬಂದ ಪುಸ್ತಕಗಳನ್ನೆಲ್ಲ ಅನಿವಾರ್ಯವಾಗಿ ಒಂದೆಡೆ ಇಟ್ಟುಬಿಟ್ಟಿದ್ದೇನೆ.

ನಿಮ್ಮ ಪ್ರೀತಿಯ ಒತ್ತಾಯಕ್ಕಾಗಿ, ಡಾ. ಎಂ.ಆರ್. ರವಿಯವರ 'ಜೀವನ ಸೌರಭ'ವನ್ನು ಕಷ್ಟಪಟ್ಟು ಓದಿದೆ. ಓದಿದ್ದಕ್ಕೂ ಸಾರ್ಥಕವಾಯಿತು ಎನಿಸಿತು. ಇಲ್ಲದಿದ್ದರೆ ಇಂಥ ಯೋಜನಾತ್ಮಕ ಓದಿಗೆ ನಾನು ಎರವಾಗಬೇಕಾಗಿತ್ತು. ಇಲ್ಲಿರುವ ಲೇಖನಗಳು 'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ ಅಂಕಣರೂಪದಲ್ಲಿ ಪ್ರಕಟಗೊಂಡ ಬರೆಹಗಳು. ಅದಕ್ಕೆ ಅದರದೇ ಆದ ಮಿತಿಗಳಿದ್ದರೂ ಕಥಾಗುಣವನ್ನುಳ್ಳ ಇಲ್ಲಿಯ ಕಿರು ಪ್ರಬಂಧಗಳು, ಮುನ್ನುಡಿಯಲ್ಲಿ ಡಾ. ಎಚ್.ಎಸ್.ವಿ. ಹೇಳಿದಂತೆ ಇದನ್ನು "ಓದುವ ಸಂತೋಷಕ್ಕಾಗಿಯೇ ಓದಬಹುದು".

ಡಾ. ರವಿಯವರು ತಮ್ಮ ಜೀವನದ ಸಾರವನ್ನೇ 'ಜೀವನ ಸೌರಭ'ದಲ್ಲಿ ಎರಕ ಹೊಯ್ದು 'ಆಲೋಚನಾ ಬರವಣಿಗೆ'ಯಾಗಿಸಿದ್ದಾರೆ. ಸುಮ್ಮನೆ ಉದಾಹರಣೆಗೆ ಇಲ್ಲಿ ಕೆಲಸವನ್ನು ನೋಡಬಹುದು:

"ಮಾಡಿದ ಮೋಸವನ್ನು ಎಷ್ಟೇ ಜೋರಾಗಿ ಸಮರ್ಥಿಸಿಕೊಂಡರೂ ಒಪ್ಪುವಂಥದಲ್ಲ".

"ಪ್ರೀತಿಯಲ್ಲಿ ಸ್ವಾರ್ಥ ಇಲ್ಲದೇ ಇರಲು ಸಾಧ್ಯವೇ ಇಲ್ಲ"

"ಕೇವಲ ಒಳ್ಳೆಯ ಆಲೋಚನೆಗಳು ಇದ್ದ ಮಾತ್ರಕ್ಕೆ ಒಳ್ಳೆಯ ನಿರ್ಧಾರಗಳು ಸಾಧ್ಯವೇ ಎಂಬ ಪ್ರಶ್ನೆ ನನ್ನಲ್ಲಿ ಆಗಾಗ ಮೂಡುತ್ತಿರುತ್ತದೆ"

"ಉಸಿರಾಟ ಶುರುವಾದಾಗ ಜನನ ಎನ್ನುತ್ತೇವೆ, ನಿಂತಾಗ ಮರಣ ಎನ್ನುತ್ತೇವೆ" "ನನ್ನ ಪ್ರಕಾರ ಒಳ್ಳೆಯತನ ದೌರ್ಬಲ್ಯವೂ ಅಲ್ಲ, ಅಸಹಾಯಕತೆಯೂ ಅಲ್ಲ; ಅದು ಗಟ್ಟಿತನದ ಮತ್ತು ಸದೃಢತೆಯ ಸಂಕೇತ",

"ಅಹಂಕಾರಕ್ಕೆ ಉದಾಸೀನವಿರಲಿ, ಆದರೆ ಅಹಂಕಾರಿಗಳಿಗಲ್ಲ"

"ದುಡ್ಡು ಕಾಡುತ್ತಿರುವಷ್ಟು ತೀವ್ರವಾಗಿ ಯಾವುದೂ ನಮ್ಮನ್ನು ಇಂದು ಕಾಡುತ್ತಿಲ್ಲ"

"ಯಾರು ಜವಾಬ್ದಾರಿಯಿಂದ ವಿಮುಖರಾಗುತ್ತಾರೆಯೊ ಅವರು ಎಂದೂ ಯಶಸ್ಸನ್ನು ಕಾಣಲು ಸಾಧ್ಯವಿಲ್ಲ."

"ನಾನೂ ಸಹ ಪತ್ರಕರ್ತನಾಗಿದ್ದರಿಂದ ಸದ್ದು ಮತ್ತು ಸುದ್ದಿಗೂ ವ್ಯತ್ಯಾಸ ಗೊತ್ತಿದೆ".

ಹೀಗೆ ಜೀವನಾನುಭವವನ್ನೆ ಚಿಂತಿಸುವ ಇಲ್ಲಿಯ ಬರವಣಿಗೆಗೆ ಸಹಜವಾದ ಜೀವಂತಿಕೆ ಪ್ರಾಪ್ತವಾಗಿದೆ ಎಂದು ಧಾರಾಳವಾಗಿ ಹೇಳಬಹುದು. ಆದ್ದರಿಂದಲೇ ಇದು ಸಾರ್ಥಕವಾದ ಬರವಣಿಗೆ.

ವಿರಳವಾಗುತ್ತಿರುವ ಇಂಥ I.A.S. ಅಧಿಕಾರಿಗಳು ಕನ್ನಡ ನಾಡಿನ ಸಾಂಸ್ಕೃತಿಕ ಲೋಕವನ್ನು ಬೆಳಗಲೆಂದು ಹಾರೈಸುತ್ತೇನೆ.

"ಮೈಸೂರು ಮಿತ್ರ" ಅಕ್ಟೋಬರ್ ೨೦೨೦

ಭಾಗ ೪

ಸ್ವತಂತ್ರ ಲೇಖನಗಳು, ಭಾಷಣಗಳು, ಸಂದರ್ಶನಗಳು

'ಗಾಂಧಿ ಜಯಂತಿ'ಯ ದಿನವಾದರೂ ಸತ್ಯವನ್ನಾಡೋಣ

ಸಂದರ್ಶನ ಸಂಗ್ರಹ : ಡಾ. ಜಿ.ಎಂ. ಹೆಗಡೆ

ಗಾಂಧಿತತ್ವ ಹೇಳಲಿಕ್ಕುಂಟು ಮಾಡಲಿಕ್ಕೆ ಇಲ್ಲ ಅಲ್ಲವೇ?

೧) ಸ್ವದೇಶಿ ದೃಷ್ಟಿಯಿಂದ ಗಾಂಧೀಜಿಯವರ ತತ್ವಗಳು ತುಂಬಾ ಮಹತ್ವದ್ದಾಗಿವೆ. ಸತ್ಯ, ಅಹಿಂಸೆ, ತ್ಯಾಗದಿಂದ ಅವರು ಸ್ವಾತಂತ್ರ್ಯ ಗಳಿಸಲು ನಡೆಸಿದ ಹೋರಾಟ ಒಂದು ಅದ್ಭುತ. ಅವರು ತೋರಿದ ಅಹಿಂಸಾ ಮಾರ್ಗದ ಹೋರಾಟದಿಂದಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿತು. ಅವರ ಸಮಕಾಲೀನರೆಲ್ಲರೂ ಅವರ ತತ್ವ, ಆದರ್ಶಗಳಿಗೆ ಗೌರವ ನೀಡಿದರು. ಆಗ ಹಾಗೂ ಎರಡನೇ ತಲೆಮಾರಿನವರೆಗೂ ಅವರ ಪ್ರಭಾವವೂ ದಟ್ಟವಾಗಿತ್ತು. ಆದರೆ ಕಾಲಕ್ರಮೇಣ ವಿದೇಶಿ ಧೋರಣೆಗಳ ವ್ಯತ್ಯಾಸ, ಮತೀಯವಾದ, ಕೋಮುವಾದ ಮುಂತಾದ ಕಾರಣಗಳಿಂದ ಗಾಂಧಿ ದೃಷ್ಟಿಕೋನ, ತತ್ವಗಳಿಗೆ ಧಕ್ಕೆ ಬರುತ್ತಿದೆ. ಎಲ್ಲೆಡೆ ಭ್ರಷ್ಟಾಚಾರ ತುಂಬಿ ಹೋಗಿದೆ. ಹೆಸರಿಗೆ ಮಾತ್ರ ಗಾಂಧೀಜಿ ತತ್ವಗಳು ಕೇಳಿಬರುತ್ತಿವೆ. ಆದರೆ ಅವುಗಳ ಆಚರಣೆ ಮಾತ್ರ ಆಗುತ್ತಿಲ್ಲ. ಗಾಂಧೀಜಿ ತತ್ವಗಳು ಹೇಳಲಿಕ್ಕುಂಟು ಎಂಬಂತೆ ನಮ್ಮ ರಾಜಕಾರಣಿಗಳಲ್ಲಿವೆ. ಗಾಂಧೀಜಿ ತತ್ವಗಳನ್ನು ಹೇಳದೇ ಇರುವದೂ ಇಂದು ಯಾವುದೇ ಪಕ್ಷಕ್ಕೂ ಅಸಾಧ್ಯ. ಆದರೆ ಆಚರಣೆ ದೃಷ್ಟಿಯಿಂದ ಎಲ್ಲ ಪಕ್ಷಗಳ ಲೋಪವೂ ಇದೆ. ಗಾಂಧೀಜಿಯ ತತ್ವಗಳ ಬಗ್ಗೆ ಭಾರೀ ಭಾಷಣ ಮಾಡುವದು ಹಾಗೂ ಅವರ ಪ್ರತಿಮೆಯನ್ನು ಅನಾವರಣ ಮಾಡುವದು ಇಲ್ಲವೇ ಒಂದು ರಸ್ತೆಗೆ ಅವರ ಹೆಸರು ನಾಮಕರಣ ಮಾಡುವದಷ್ಟೇ ತಮ್ಮ ಪರಮ ಕರ್ತವ್ಯ. ಇದೇ ಅವರಿಗೆ ಸಲ್ಲಿಸುವ ಗೌರವ ಎಂಬ ಭಾವನೆಗಳೇ ಅನೇಕರಲ್ಲಿ ಹಾಗೂ ರಾಜಕಾರಣಿಗಳು, ವಿವಿಧ ಪಕ್ಷಗಳಲ್ಲಿ ಕಾಣುತ್ತಿವೆಯೇ ಹೊರತು ಅವರ ತತ್ವಗಳ ಅನುಷ್ಠಾನ ಎಂಬುದೇ ಇಲ್ಲವಾಗುತ್ತಿದೆ. ಈ ಕುರಿತಂತೆ ನಮ್ಮ ರಾಜಕಾರಣಿಗಳು, ಪಕ್ಷಗಳು ಹಾಗೂ ನಾಗರಿಕರಲ್ಲಿ ಸ್ವವಿಮರ್ಶೆ ಪ್ರಜ್ಞೆ ಮೂಡಬೇಕಾಗಿದೆ.

ಸತ್ಯವೇ ದೇವರು ಎಂದರು ಗಾಂಧೀಜಿ ನಿವೇನು ಹೇಳುತ್ತೀರಿ? ಅದು ಈಗ ಎಷ್ಟರಮಟ್ಟಿಗೆ ಪಾಲಿಸಲ್ಪಡುತ್ತದೆ?

೨) ಸತ್ಯ ಬೇರೆಯಲ್ಲ, ದೇವರು ಬೇರೆಯಲ್ಲ ಎಂದು ಧರ್ಮಗಳೇ ಹೇಳುತ್ತವೆ. ರಾಘವಾಂಕನು ತನ್ನ ಹರಿಶ್ಚಂದ್ರ ಕಾವ್ಯದಲ್ಲಿ 'ಸತ್ಯವೆಂಬುದೇ ಹರನು. ಹರನೆಂಬುದೇ

ಸತ್ಯ' ಎಂದೂ ಪ್ರತಿಪಾದಿಸಿದ್ದಾನೆ. ಈ ಐತಿಹ್ಯ ಅರಿತೇ ಗಾಂಧೀಜಿಯವರೂ ಸತ್ಯವೇ ದೇವರೆಂದು ಹೇಳಿರಬಹುದೇನೋ. ಇದು ಅಕ್ಷರಶಃ ನಿಜವಾಗಿದೆ.

ಸತ್ಯದ ಮಹತ್ವ ಅರಿತುಕೊಂಡೇ ಅವರು ಸತ್ಯಾಗ್ರಹವನ್ನು ಹುಟ್ಟುಹಾಕಿರಬಹುದು. ಸತ್ಯಾಗ್ರಹವೆಂದರೆ ಇಲ್ಲಿ ಸತ್ಯಕ್ಕಾಗಿ ಆಗ್ರಹಿಸುವದೇ ಆಗಿದೆ. ಗಾಂಧೀಜಿ ತಮ್ಮ ಜೀವನದಲ್ಲಿ ಪ್ರತಿ ಮೆಟ್ಟಲಿಗೂ ಸತ್ಯಕ್ಕೆ ಅಪಾರ ಬೆಲೆ ನೀಡುತ್ತಿದ್ದರು.

ಆದರೆ ಈಗ ಸತ್ಯದ ಆಚರಣೆ ಎಲ್ಲಿದೆ?

'ಗಾಂಧೀಜಿ ಜಯಂತಿಯ ದಿನವಾದರೂ ಸತ್ಯವನ್ನಾಡೋಣ. ಸುಳ್ಳಿಗೋ ಇಡೀ ವರ್ಷವೇ ತೆರವು ಇರುವದು..' ಎಂದು ಬೇಂದ್ರೆಯವರೇ ಒಂದೆಡೆ ಹೇಳಿದ್ದಾರೆ. ಸತ್ಯವನ್ನು ಪಾಲಿಸುವವರೇ ಈಗ ತುಂಬಾ ವಿರಳ. 'ಸತ್ಯವೇ ದೇವರು' ಎಂದು ಹೇಳುವವರೂ ಕಡಿಮೆಯಾಗುತ್ತಿದ್ದಾರೆ.

ಗಾಂಧಿತಾತ ಈಗ ಇದ್ದಿದ್ದರೆ?

೩) ಇದನ್ನು ನಾವು ಊಹಿಸಲೂ ಆಗುವದಿಲ್ಲ. ಆದರೂ ಈ ಬಗ್ಗೆ ಹೇಳುವದಾದರೆ ಈಗಿನ ರಾಜಕಾರಣಕ್ಕೆ ಅರ್ಥವಿರುತ್ತಿತ್ತು. ಈಗ ನೈತಿಕವಾಗಿ ಹಾಳಾಗಿರುವ ರಾಜಕೀಯ ಕ್ಷೇತ್ರಕ್ಕೆ ಗಾಂಧೀಜಿ ಸತ್ಯ, ನ್ಯಾಯ ಮತ್ತು ನಿಷ್ಠುರತೆ ಉಳಿಯುವಂತೆ ಮಾಡಿರುತ್ತಿದ್ದರು. ವಿಶ್ವ ಮಟ್ಟದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ತಕ್ಕಂತೆ ಗಾಂಧೀಜಿಯವರು ಬೇರೆ, ಬೇರೆ ರೀತಿಯ ಸಿದ್ಧಾಂತಗಳನ್ನು ರೂಪಿಸುತ್ತಿದ್ದರು. ಹಲವು ಮೂಲಭೂತ ತತ್ವಗಳಿಗೆ ವಿಭಿನ್ನ ರೂಪ ಕೊಟ್ಟಾದರೂ ಅವುಗಳನ್ನು ಜಾರಿಗೊಳಿಸುತ್ತಿದ್ದರೇನೋ...

ಈಗಿನ ರಾಜಕೀಯವೆಂದರೆ ಒಂದರ್ಥದಲ್ಲಿ ಬಹುತೇಕವಾಗಿ ವೇಶ್ಯೆಯರ ಬಾಳಿನಂತಾಗಿದೆ. 'ಗಾಂಧೀಜಿ ನೀನಿಂದು ಬದುಕಿರುತ್ತಿದ್ದರೆ ಒಂದು ವೇಳೆ ಸೂಳೆ ಕೂಡ ಗರತಿಯಾಗಬಹುದಿತ್ತೇನೋ....' ಎಂದು ನಾನೆ ಒಂದು ಕವನದಲ್ಲಿ ಬರೆದಿದ್ದೆ.

ಕಾಂಗ್ರೆಸ್ ಪಕ್ಷವನ್ನು ಸ್ವಾತಂತ್ರ್ಯಾನಂತರ ವಿಸರ್ಜಿಸಬೇಕು ಎಂದು ಗಾಂಧೀಜಿ ಅವರು ಹೇಳಿದ್ದರು. ಬಹುಶಃ ಮುಂದಿನ ರಾಜಕೀಯದ ವಿದ್ಯಮಾನಗಳನ್ನು ಗಾಂಧೀಜಿ ಅರಿತುಕೊಂಡೇ ಈ ಮಾತು ಹೇಳಿದ್ದರೇನೋ.

'ಸಂಯುಕ್ತ ಕರ್ನಾಟಕ' ೩೦-೯-೨೦೦೧

ಕಾರ್ಕಳ ಸಾಹಿತ್ಯ ಸಂಘದ ದಶಮಾನೋತ್ಸವ
ಸಂಸ್ಕೃತಿಯ ಅಭಿವ್ಯಕ್ತಿ

ಯಾವುದೇ ಸಂಘ-ಸಂಸ್ಥೆಗಳನ್ನು ಕಟ್ಟಲಿ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ, ಹೊಸ ಯೋಜನೆಗಳನ್ನು ರೂಪಿಸಲಿ, ಅವುಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು, ಪರಸ್ಪರ ಸಹಕಾರದಿಂದ, ಅಚ್ಚುಕಟ್ಟಾಗಿ, ಶಿಸ್ತು ಹಾಗೂ ಸಮಯನಿಷ್ಠೆಯೊಂದಿಗೆ, ಸ್ಥಳೀಯ ಕಲೆಗಳ ಆವಿಷ್ಕಾರದ ಶೋಭೆಯಿಂದ ಅದನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಯಾವಾಗಲೂ ಮುಂದು. ಇಂಥ ಮನೋಧರ್ಮದ ಸಾಂಘಿಕ ಪ್ರಯತ್ನಗಳಲ್ಲಿ ಕಾರ್ಕಳದ ಸಾಹಿತ್ಯ ಸಂಘವೂ ಒಂದಾಗಿದ್ದು ಕಳೆದ ಹತ್ತು ವರ್ಷಗಳಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಪಟ್ಟ ಹಲವಾರು ಕಾರ್ಯಚಟುವಟಿಕೆಗಳನ್ನು ವೈವಿಧ್ಯಪೂರ್ಣವಾಗಿ ನಡೆಸುತ್ತ ಕನ್ನಡಿಗರ ಗಮನವನ್ನು ಸೆಳೆದುಕೊಂಡಿದೆ. ಎರಡು ವರ್ಷಗಳ ಹಿಂದೆ ಸಂಘದ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಂದರ್ಭದಲ್ಲಿ ನಾನು ಮೇಲೆ ಗುರುತಿಸಿದ ಎಲ್ಲ ಗುಣಲಕ್ಷಣಗಳನ್ನು ಕಾರ್ಕಳ ಸಾಹಿತ್ಯ ಸಂಘದ ಕಾರ್ಯಕ್ರಮಗಳಲ್ಲಿ ಕಂಡು ತುಂಬ ಸಂತೋಷಪಟ್ಟಿದ್ದೇನೆ. ಅದೀಗ ತನ್ನ ದಶಮಾನೋತ್ಸವವನ್ನು ಆಚರಿಸುತ್ತಿರುವುದು ಯಥಾಯೋಗ್ಯವಾಗಿದೆ.

ಉತ್ಸವ ಸಮಿತಿಯ ಎಲ್ಲ ಪದಾಧಿಕಾರಿಗಳ ಸಹಕಾರದಿಂದ, ಸ್ವತಃ ಉತ್ತಮ ಲೇಖಕರಾದ ಪ್ರೊ. ಎಂ. ರಾಮಚಂದ್ರ ಅವರ ಸಂಚಾಲಕತ್ವದಲ್ಲಿ ದಶಮಾನೋತ್ಸವದ ಆಚರಣೆ ಅರ್ಥಪೂರ್ಣವಾಗಿ ಜರುಗಿ ತನ್ನ ಮುಂದಿನ ದಾರಿ, ಗುರಿಗಳನ್ನು ನಿಚ್ಚಳಗೊಳಿಸಿಕೊಳ್ಳುವುದೆಂದು ಆಶಿಸಿದ್ದೇನೆ.

ಉತ್ಸವ, ಸಂಭ್ರಮ ಸಡಗರಗಳು ಕೂಡ ಒಂದು ಸಂಸ್ಕೃತಿಯ ಅಭಿವ್ಯಕ್ತಿಯೇ. ಆದರೆ ಕನ್ನಡ ಪ್ರೀತಿ ಅಲ್ಪ ಸಂತೋಷಕ್ಕೆ ಸೀಮಿತಗೊಳ್ಳದೆ ಅಂತರಂಗದಲ್ಲಿ ಕನ್ನಡದ ಧ್ಯಾನ, ಕಾಳಜಿಗಳನ್ನು ಹೆಚ್ಚಿಸಿಕೊಂಡು, ಕನ್ನಡವನ್ನು ಕಾಪಾಡುವ ವೈಜ್ಞಾನಿಕ ನೋಟವನ್ನು ಗಳಿಸಿಕೊಳ್ಳಲು ನೆರವಾಗಬೇಕು. ವೈಯಕ್ತಿಕ ಹಾಗೂ ಸಾಮೂಹಿಕ ನೆಲೆಯಲ್ಲಿ ಕನ್ನಡವನ್ನು ಕಟ್ಟುವ ಕಾರ್ಯಕ್ಕೆ ಈ ಉತ್ಸವ ಪ್ರೇರಕವಾಗಿ ಪರಿಣಮಿಸಲಿ ಎಂದು ಹಾರೈಸಿ ಸಮಾರಂಭಕ್ಕೆ ಎಲ್ಲ ಬಗೆಯ ಯಶಸ್ಸು ಕೋರುತ್ತೇನೆ.

ಸಾವಿರಾರು ಪುಟಗಳ ನೂರೆಂಟು ಪುಸ್ತಕಗಳನ್ನು ಬರೆಯುವದೇ ಸಾಹಿತಿಯ

ಹೆಗ್ಗಳಿಕೆಯಲ್ಲ. ಜೀವನದ ಸಮೃದ್ಧ ಅನುಭವ, ಅದಕ್ಕೆ ನಿಷ್ಠೆ ಮತ್ತು ಉದ್ದೇಶ ಸ್ಪಷ್ಟತೆಗಳೇ ನಿಜವಾದ ಸಾಹಿತಿಯ ಸಲ್ಲಕ್ಷಣ. ಶತಮಾನಗಳ ಹಿಂದೆ ರಾಘವಾಂಕ ಕವಿ 'ಜನಬದುಕಲೆಂದು ಕಾವ್ಯ ಮುಖದಿಂ ಪೇಳ್ವೆ' ಎನ್ನುತ್ತಾನೆ. ಸಾಹಿತ್ಯದಿಂದ ಜನರ ಬದುಕು ಹಸನಾಗಬೇಕು ವಿಸ್ತಾರವಾಗಬೇಕು ಎಂಬುದು ರಾಘವಾಂಕನ ಉದ್ದೇಶ. ನಮ್ಮೆಲ್ಲರ ಉತ್ತರದಾಯಿತ್ವವೂ ಇದೇ ಆಗಬೇಕು. ನಾನು ಈವರೆಗೆ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿಲ್ಲ. ಈ ದಿನ ಕಾರ್ಕಳದಲ್ಲಿ ಸಾಹಿತ್ಯ - ಕಲೆ- ಗಾಯನಗಳ ತ್ರಿವೇಣಿಯಲ್ಲಿ ಸ್ನಾನ ಮಾಡಿ ಪುನೀತನಾಗಿದ್ದೇನೆ. ಇದಕ್ಕಿಂತ ಮಿಗಿಲಾದ ತ್ರಿವೇಣಿ ಯಾವುದಿದೆ? ಡಾ. ಶಿವರುದ್ರಪ್ಪನವರು ಬೇಂದ್ರೆ ಶ್ರಾವಣದ ಕವಿ, ಕುವೆಂಪು ಸೂರ್ಯೋದಯ ಕವಿ, ಕಣವಿ - ನನ್ನನ್ನು ಮಳೆಗಾಲದ ಕವಿ, ಎಂದು ಕರೆದರು. ನಾನು ಕಾರ್ಕಳದಲ್ಲಿ ಇಂದು ಕಾರ್ಗಾಲದ ವೈಭವ ನೋಡಿದೆ. ಹೊರಗೆ ಮಳೆಗಾಲ ಒಳಗೆ ಸಾಹಿತ್ಯ ಮಳೆಗಾಲ ನನ್ನನ್ನು ಪುಳಕಗೊಳಿಸಿತು.

ಕಾರ್ಕಳ ಸಾಹಿತ್ಯ ಸಂಘ ದಶಮಾನೋತ್ಸವ 'ದಶಮಿ'

(೨೦೦೬-೨೦೦೭)

ಇಂದಿನ ಆವಶ್ಯಕತೆ : ತಾಯ್ನುಡಿ ತಮ್ಮಡಿಗಳ ದಂಡು

ಅಖಿಲ ಕರ್ನಾಟಕ ಕನ್ನಡಪರ ಸಂಘಟನೆಗಳ ಸಮಾವೇಶವನ್ನು ಉದ್ಘಾಟನೆ ಮಾಡಿ ನಮ್ಮ ರಾಜ್ಯದ ಉನ್ನತ ಶಿಕ್ಷಣ ಸಚಿವರಾದ ಮಾನ್ಯ ಡಾ. ವಿ.ಎಸ್. ಆಚಾರ್ಯರವರು ಕನ್ನಡಭಾಷೆ, ಸಾಹಿತ್ಯ, ಅವುಗಳ ಬೋಧನೆ, ಮೊದಲಾದುವುಗಳನ್ನು ಕುರಿತು ಪ್ರಾಮಾಣಿಕವಾದ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಕನ್ನಡ ಸಂಘ ಸಂಸ್ಥೆಗಳಿಗೆ ಸರ್ಕಾರದಿಂದ ಆಗಬೇಕಾದ ಕೆಲಸಗಳನ್ನು ತಾನು ನಿಜವಾದ ಕಾಳಜಿಯಿಂದ ಮಾಡುತ್ತೇನೆ ಎಂಬುದಾಗಿ ತಮ್ಮ ಹೊಣೆಗಾರಿಕೆ ತಿಳಿದುಕೊಂಡು ಹೇಳಿದ್ದಾರೆ. ನಿಜವಾಗಿಯೂ ಅವರ ಮಗ್ಗುಲಿನಲ್ಲಿ ಕುಳಿತಾಗ ನಾನೊಬ್ಬ ರಾಜಕಾರಣಿಯ ಮಗ್ಗುಲಿನಲ್ಲಿ ಕುಳಿತಿದ್ದೇನೆ ಎಂದು ನನಗೆ ಅನ್ನಿಸಲೇ ಇಲ್ಲ. ಅನೇಕ ಸಂದರ್ಭಗಳಲ್ಲಿ ಇಂತಹ ಸಭೆಗಳಲ್ಲಿ ಬಹಳ ಕಟುವಾದ ಅನುಭವ ಆಗುತ್ತಾ ಇರುತ್ತದೆ. ಆದರೆ ಇಲ್ಲಿ ಹಾಗಾಗಲಿಲ್ಲ. ಕಾರಣ ಅಂದರೆ ಇದು ದಕ್ಷಿಣ ಕನ್ನಡ ಜಿಲ್ಲೆ. ಇಲ್ಲಿ ಧರ್ಮಸ್ಥಳ ಇದೆ, ಉಡುಪಿ ಇದೆ, ಕಾರ್ಕಳ ಆಯಿತು, ಮೂಡಬಿದಿರೆ ಕಾಂತಾವರಗಳು ಇವೆ. ಈ ಎಲ್ಲ ಸಾಂಸ್ಕೃತಿಕ ಸಾಹಿತ್ಯಿಕ ವಾತಾವರಣದಲ್ಲಿ ಅವರು ಓಡಾಡಿದವರು, ಅಲ್ಲೆಲ್ಲ ಏನಾಗುತ್ತದೆ ಎಂಬುದನ್ನು ತಿಳಿವವರು. ನ್ನ ಜೊತೆ ಅವರು ಮಾತಾಡಿದ್ದು ಸಹ, ರಾಜಕೀಯ ಏನೂ ಹೇಳಲಿಲ್ಲ. ತಾವು ಸಾಹಿತ್ಯ ಸಮ್ಮೇಳನದಲ್ಲಿ ಸ್ವಯಂ ಸೇವಕನಾಗಿ ಕೆಲಸ ಮಾಡಿದ್ದು, ಸಾಹಿತಿಗಳ ಸಹಿ ಸಂಗ್ರಹ ಮಾಡಿದ್ದು ಎಲ್ಲ ಹೇಳುತ್ತಾ ಇದ್ದರು. ನಿಜವಾಗಿ ಅವರು ನೀಡಿದ ಆಶ್ವಾಸನೆ ಇದೆಯಲ್ಲ ಅದನ್ನು ಅವರು ನಿಷ್ಠೆಯಿಂದ ಪೂರೈಸುತ್ತಾರೆ ಎಂಬ ಭರವಸೆ ನನಗೆ ಇದೆ.

ಈವೊತ್ತು ತಾಳ್ತಜೆ ವಸಂತಕುಮಾರ್ ಅವರು ಆಶಯ ಭಾಷಣವನ್ನು ಮಾಡಿದ್ದಾರೆ. ಅದಕ್ಕೆ ಪ್ರತಿಸ್ಪಂದಿಸಿ ನಮ್ಮ ಇಬ್ಬರು ಸ್ನೇಹಿತರು ಇಬ್ಬರು ಸೋದರಿಯರು ತಮ್ಮ ತಮ್ಮ ಆತಂಕಗಳನ್ನು, ತಾವು ಎದುರಿಸಬೇಕಾಗಿ ಬಂದಂತಹ ಕೆಲವು ಸಂದರ್ಭಗಳನ್ನು ಸನ್ನಿವೇಶಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಏರ್ಯ ಲಕ್ಷ್ಮೀನಾರಾಯಣ ಆಳ್ವ ಅವರು ಅಭಿನಂದನ ಸಮಿತಿಯ ಗೌರವಾಧ್ಯಕ್ಷರಾಗಿ ಡಾ. ಮೋಹನ ಆಳ್ವರು ಅಧ್ಯಕ್ಷರಾಗಿ ಇರುವಂಥಾದ್ದು ಎಂ. ರಾಮಚಂದ್ರ ಅವರ ವ್ಯಕ್ತಿತ್ವದ ಬಗ್ಗೆ ಅವರಲ್ಲಿ ಇರುವ ಆದರ ಗೌರವಗಳಿಂದ ಎಂದು ನಾನು ತಿಳಿದು ಕೊಂಡಿದ್ದೇನೆ. ಅಖಿಲ ಕರ್ನಾಟಕ ಕನ್ನಡಪರ ಸಂಘ ಸಂಸ್ಥೆಗಳ ಈ ಸಮಾವೇಶವನ್ನು ಕೂಡ ಪ್ರೊ.

ಎಂ. ರಾಮಚಂದ್ರ ಅವರ ಅಭಿನಂದನ ಸಮಾರಂಭದಂದು ಏರ್ಪಡಸಿದ್ದು ಅತ್ಯಂತ ಸಂದರ್ಭೋಚಿತವಾದ ಯೋಚನೆ ಎಂದು ಹೇಳಬಹುದು. ಏಕೆಂದರೆ ಈ ಬಗೆಯ ಸಂಘಟನೆ ಮತ್ತು ಕನ್ನಡದ ಕೆಲಸ ಅವರ ವ್ಯಕ್ತಿತ್ವದ ಅವಿಭಾಜ್ಯವಾದ ಅಂಶವೇ ಅಂಗವೇ ಆಗಿದ್ದರಿಂದ ಅವರಿಗೆ ಈ ಎಲ್ಲ ಸಂಘ ಸಂಸ್ಥೆಗಳು ಅವೆಲ್ಲದರ ಪರವಾಗಿ ಅವರಿಗೆ ವ್ಯಕ್ತಪಡಿಸಿದ ಗೌರವದ ದ್ಯೋತಕ ಎಂದು ನಾನು ಭಾವಿಸುತ್ತೇನೆ. ಕನ್ನಡವನ್ನು ಕಟ್ಟುವ ಕೆಲಸದಲ್ಲಿ ತೊಡಗಿ ಸಾಮಾನ್ಯ ಜನತೆಯಲ್ಲಿಯೂ ಕೂಡ ಕನ್ನಡ ನಾಡು ನುಡಿ ಸಂಸ್ಕೃತಿಯ ಬಗ್ಗೆ ಜಾಗೃತಿಯನ್ನು ಉಂಟುಮಾಡಿದ ಅನೇಕ ಸಂಘಸಂಸ್ಥೆಗಳು ನಮ್ಮಲ್ಲಿವೆ. ಪ್ರಾತಿನಿಧಿಕವಾಗಿ ಆರು ಸಂಘಗಳನ್ನು ಈ ದಿನ ಸಮ್ಮಾನಿಸಿದ್ದು, ಅವುಗಳ ಐದು ಮಂದಿ ಪ್ರತಿನಿಧಿಗಳು ಇಲ್ಲಿ ಬಂದು ತಮ್ಮ ತಮ್ಮ ಸಂಘಸಂಸ್ಥೆಗಳ ಬಗ್ಗೆ ಕಲವು ಮಾತುಗಳನ್ನು ಹೇಳಿದ್ದಾರೆ. ಈ ದಿನ ಸಮ್ಮಾನಿತವಾದ ಸಂಘ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ನಾನು ವೈಯಕ್ತಿಕವಾಗಿ ಹಾರ್ದಿಕವಾದ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ಬೆಳಗ್ಗೆ ಬಿಡುಗಡೆ ಮಾಡಿದ 'ಪತ್ರಾವಳಿ' ಬಗ್ಗೆ ಒಂದು ಮಾತನ್ನು ಹೇಳಿ ಬಿಡುತ್ತೇನೆ. ಅದನ್ನು ನಾನು ಬಹಳ ಸಂತೋಷದಿಂದ ಬಿಡುಗಡೆ ಮಾಡಿದೆ. ಏಕೆಂದರೆ ಇಪ್ಪತ್ತು ವರ್ಷಗಳ ಹಿಂದೆ ಸೇಡಿಯಾಪು ಕೃಷ್ಣ ಭಟ್ಟರಿಗೆ ತೊಂಬತ್ತು ವರ್ಷವಾದಾಗ ಅದು ಪ್ರಕಟವಾದದ್ದು, ಈಗ ಅದರ ಪುನರ್ಮುದ್ರಣ. ಈಗ ನಾವು ಯಾರೂ ಯಾರಿಗೂ ಪತ್ರವೇ ಬರೆಯುವುದಿಲ್ಲ. ಕೆಲವು ಸಂಘ ಸಂಸ್ಥೆಗಳು ಮಾತ್ರ ಬರೆಯುತ್ತವೆ. ಈಗ ದೂರವಾಣಿ, ಮೊಬೈಲ್, ಇ-ಮೇಲ್‌ಗಳಲ್ಲೇ ನಮ್ಮ ವ್ಯವಹಾರ. ಆದರೆ ಇದು ಯಾವುದೂ ಇಲ್ಲದೇ ಇದ್ದ ಕಾಲದಲ್ಲಿ ಸೇಡಿಯಾಪು ಕೃಷ್ಣ ಭಟ್ಟರು ತಮ್ಮ ಶಿಷ್ಯ ರಾಮಚಂದ್ರರಿಗೆ ಸುಮಾರು ಐದುನೂರು ಪತ್ರಗಳನ್ನು ಬರೆದಿದ್ದರು ಅನ್ನುವುದೇ ಒಂದು ಪವಾಡ ಎಂದು ಅನ್ನಿಸುತ್ತಿದೆ. ಅವುಗಳಲ್ಲಿ ಒಂದು ನೂರ ಆರನ್ನು ಆರಿಸಿ ಸಾಹಿತ್ಯ ಸೌಗಂಧ ಬೀರುವಂತಹ ಗುಚ್ಛವನ್ನು ಸಿದ್ಧಪಡಿಸಿದ್ದಾರೆ. ಇದು ಬಹಳ ಅಪರೂಪದ ಗ್ರಂಥ ಎಂದು ಹೇಳಬಹುದು. ವೀಸೀ ಸಂಪದ ಅವರು ಇದರ ಪ್ರಕಟನೆಯನ್ನು ಮಾಡಿದ್ದಾರೆ. ನಿಜವಾಗಿಯೂ ನಮ್ಮ ಪತ್ರಸಾಹಿತ್ಯಕ್ಕೆ ಇದು ಅದ್ವಿತೀಯವಾದ ಕೊಡುಗೆ ಎಂದು ಹೇಳಬಹುದು. ಹಿಂದೆ ಹೇಳಿದ ಹಾಗೆ ಹಾ ಮಾ ನಾಯಕರು ಬಹಳ ದೀರ್ಘವಾದ, ಬಹಳ ಮಹತ್ವದ ಪ್ರಸ್ತಾವನೆಯನ್ನು ಇದಕ್ಕೆ ಬರೆದಿದ್ದಾರೆ.

ಇನ್ನು ನಿರ್ದಿಷ್ಟ ವಿಷಯಕ್ಕೆ ಬರುತ್ತೇನೆ. ತಾಳ್ತಜೆ ವಸಂತ ಕುಮಾರ್ ಅವರು ಒಳನಾಡಿನಲ್ಲೂ ಕೆಲಸ ಮಾಡಿದವರು, ಹೊರನಾಡಿನಲ್ಲೂ ಕೆಲಸ ಮಾಡಿದವರು.

ಹೀಗಾಗಿ ಅನೇಕ ಅನುಭವಗಳು ಅವರಿಗೆ ಆಗಿವೆ. ಈಚೆಗೆ ಒಂದು ತಿಂಗಳ ಹಿಂದೆ ಮುಂಬೈಗೆ ಹೋಗಿದ್ದೆ. ಮುಂಬಯಿ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗಕ್ಕೂ ಆಕಾಶವಾಣಿಗೂ ಹೋಗಿದ್ದೆ, ಏಕೆಂದರೆ ಅಲ್ಲಿ ಸನದಿಯವರು ಇದ್ದಾಗೆಲ್ಲ ಯಾರು ಹೊರಗಿಂದ ಬಂದರೂ ಅವರ ಭೇಟಿ ಮಾಡಲೇ ಬೇಕು. ಕಾವ್ಯವಾಚನವೋ ಸಂದರ್ಶನವೋ ಇರುತ್ತಿತ್ತು. ಆಮೇಲೆ ಮಾತುಂಗ ಕನ್ನಡ ಸಂಘ ಈ ಮೂರಕ್ಕೂ ಹೋಗಿದ್ದೆ. ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಅದರ ಯೋಗಕ್ಷೇಮವನ್ನಷ್ಟೇ ಅವರು ನೋಡಿಕೊಳ್ಳುತ್ತಾ ಇಲ್ಲ, ಇಡೀ ಮುಂಬಯಿಯಲ್ಲಿ ನಡೆಯುವ ಕನ್ನಡ ಚಟುವಟಿಕೆಗಳ, ಸಾಂಸ್ಕೃತಿಕ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿ ಕೆಲಸ ಮಾಡುತ್ತಾ ಇದ್ದಾರೆ. ಇದು ಬಹಳ ಸಂತೋಷದ ಸಂಗತಿ. ಅವರು ನನಗೆ ಒಂದು ವಿಷಯವನ್ನು ಸೂಚಿಸಿ ಹೇಳಿದ್ದರು. ಅಲ್ಲಿ ಆ ವಿಭಾಗದಿಂದ ಎಷ್ಟು ಕೆಲಸ ಆಗುತ್ತಾ ಇವೆ ಎಂಬುದನ್ನೆಲ್ಲ ತಿಳಿಸುತ್ತ ಗ್ರಂಥಪ್ರಕಟನೆಗಳು, ವಿದ್ಯಾರ್ಥಿಸಂಖ್ಯೆ, ಎಷ್ಟೆಷ್ಟು ದೂರದಿಂದ ಅವರು ಬರುತ್ತಾರೆ, ಹಾಗೆ ಬರುವವರಲ್ಲಿ ಎಂ.ಫಿಲ್‌ಗಾಗಿ ಎಷ್ಟು, ಪಿಎಚ್.ಡಿ.ಗಾಗಿ ಎಷ್ಟು ಎಂಬುದನ್ನೆಲ್ಲ ಹೇಳಿದರು. ನಮ್ಮ ಕಾಲೇಜುಗಳಲ್ಲಿ ಪಿಎಚ್.ಡಿ. ಮಾಡುವವರಲ್ಲಿ ಬಡ್ತಿಗಾಗಿ ಮಾಡುವವರೇ ಹೆಚ್ಚು. ಆದರೆ ಅಲ್ಲಿ ಬ್ಯಾಂಕ್‌ನಲ್ಲಿ ಕೆಲಸ ಮಾಡುವವರು, ರೈಲ್ವೇನಲ್ಲಿ ಕೆಲಸ ಮಾಡುವವರು. ಅಂದರೆ, ಆ ವಿಷಯದ ಬಗ್ಗೆ ನಿಜವಾದ ಆಸಕ್ತಿ ಇಟ್ಟುಕೊಂಡು ಮಾಡುವವರು. ಮೊನ್ನೆ ಭರತ ಕುಮಾರ ಪೊಲಿಪು ಅವರ ಥೀಸಿಸ್ ಬಂತು - 'ಮುಂಬಯಿಯಲ್ಲಿ ರಂಗಭೂಮಿ' ಅಂತ. ಬಹಳ ಮಹತ್ವದ ಗ್ರಂಥ. ಅವರು ಯಾವ ಕಾಲೇಜಿನಲ್ಲೂ ಕೆಲಸ ಮಾಡಿದವರಲ್ಲ. ನಾಟಕ ರಂಗಭೂಮಿಯಲ್ಲಿ ಕೆಲಸ ಮಾಡಿಕೊಂಡಿದ್ದವರು. ಆ ಸಂದರ್ಭದಲ್ಲಿ ಉಪಾಧ್ಯ ಅವರು ಒಂದು ಮಾತು ಹೇಳಿದರು - ಮುಖ್ಯಮಂತ್ರಿ ಚಂದ್ರು ಅವರು ಈ ಕಡೆ ಬಂದಿದ್ದರು. ಆಗ ಅವರಲ್ಲಿ 'ಕನ್ನಡೇತರರಿಗೆ ಕನ್ನಡ ಡಿಪ್ಲೊಮಾ ಸರ್ಟಿಫಿಕೇಟ್ ಕೋರ್ಸ್‌ಗಾಗಿ ತರಗತಿ ನಡೆಸುತ್ತಾ ಇದ್ದೇವೆ. ಬಹಳ ಪ್ರಯತ್ನಪಟ್ಟು ಮಾಡುತ್ತಾ ಇದ್ದೇವೆ. ನಾವೇನು ಹೆಚ್ಚು ಕೇಳುವುದಿಲ್ಲ. ಹಾನೊರೇರಿಯಮ್‌ಗಾಗಿ ಹದಿನೈದು - ಇಪ್ಪತ್ತು ಸಾವಿರ ಕೊಡುವಂತೆ ಕೇಳಿದ್ದೆವು. ಮುಖ್ಯಮಂತ್ರಿ ಚಂದ್ರು ಅವರು 'ಇದೇನು ದೊಡ್ಡ ವಿಷಯ, ನಾನು ಹೋಗಿ ಮಾಡುತ್ತೇನೆ' ಎಂದು ಹೇಳಿದ್ದರಂತೆ. ಬೆಂಗಳೂರಿಗೆ ಬಂದ ಕೂಡಲೆ ಮರೆತುಬಿಟ್ಟರು ಎಂದು ಕಾಣುತ್ತದೆ.' ನಾನು ಊರಿಗೆ ಬಂದವನೇ ಫೋನ್ ಮಾಡಿದೆ. ಮುಖ್ಯಮಂತ್ರಿ ಚಂದ್ರು ಅವರನ್ನು ಬೆಂಗಳೂರಿನಲ್ಲಿ ಭೆಟ್ಟಿಯಾದಾಗ ನೆನಪಿಸಿದೆ. ಅದರ ಮರುದಿವಸವೇ ಚಂದ್ರು ಅವರು ಡಾ| ಉಪಾಧ್ಯ ಅವರಿಗೆ ಫೋನ್ ಮಾಡಿ 'ಈ

ವರ್ಷದ ಬಜೆಟ್‌ನಲ್ಲಿ ಸೇರಿಸಿದ್ದೇವೆ, ಕೊಡುತ್ತೇವೆ' ಎಂದು ಹೇಳಿದರಂತೆ. ಮತ್ತೆ ಉಪಾಧ್ಯ ಅವರು ನನಗೆ ಫೋನ್ ಮಾಡಿ ಹೇಳಿದರೆ - 'ನಿಮಗೆ ಹೇಳಿದ್ದೆ ಆದರೆ ನೀವು ಇಷ್ಟು ಬೇಗ ಅದನ್ನು ಕಾರ್ಯರೂಪಕ್ಕೆ ತರುತ್ತೀರಿ, ಚಂದ್ರು ಅವರಿಗೆ ಹೇಳುತ್ತೀರಿ, ಅನುದಾನ ಕೊಡುವ ಹಾಗೆ ಮಾಡುತ್ತೀರಿ ಎಂದು ಅನ್ನಿಸಿರಲಿಲ್ಲ. ತುಂಬ ಕೃತಜ್ಞತೆಗಳು' ಎನ್ನುವ ಮಾತುಗಳನ್ನು ಹೇಳಿದರು.

ಈ ಸಮಾವೇಶ ಪ್ರೊ. ರಾಮಚಂದ್ರ ಅವರ ಅಭಿನಂದನ ಸಮಾರಂಭದ ಅಂಗವಾಗಿ ನಡೆದದ್ದರಿಂದ ಅವರ ಬಗ್ಗೆ ಒಂದು ಮಾತನ್ನಾದರೂ ಹೇಳದೆ ಮುಂದೆ ಹೋಗಲು ಸಾಧ್ಯವಿಲ್ಲ. ಅವರು ವಿದ್ಯಾರ್ಥಿದೆಸೆಯಿಂದಲೂ ನನಗೆ ಪರಿಚಿತರು. ಧಾರವಾಡದಲ್ಲೇ ಎಂಎ ಮಾಡಿದವರು. ಒಂದು ಘಟನೆಯನ್ನು ಇಲ್ಲಿ ಹೇಳಲೇಬೇಕು. ೧೯೬೦-೬೨ರ ಸಂದರ್ಭದಲ್ಲಿ ಅವರು ಎಂ.ಎ. ಮಾಡುತ್ತಿರುವಾಗ 'ಜಯಂತಿ'ಯಲ್ಲಿ ಒಂದು ಲೇಖನ ಪ್ರಕಟವಾಗಿತ್ತು. ಅದು ಕನ್ನಡದಲ್ಲಿ ಆಗ ಅತ್ಯುತ್ತಮವಾದ ವ್ಯಕ್ತಿಚಿತ್ರವನ್ನು ಬರೆಯುತ್ತಿದ್ದ ವ್ಯಕ್ತಿ ದ.ಬಾ. ಕುಲಕರ್ಣಿಯವರನ್ನು ಕುರಿತದ್ದು. ಅವರ 'ಹಕ್ಕಿನೋಟ' ಎನ್ನುವಂಥಾದ್ದು ಆಗಲೇ ಪ್ರಕಟವಾಗಿತ್ತು. ಅದರಲ್ಲಿ ದಬಾಕು ಅವರ 'ನಾನು ಕಂಡ ಗೌರಮ್ಮ' ಎನ್ನುವ ವ್ಯಕ್ತಿಚಿತ್ರವಂತೂ ಅತ್ಯಂತ ಹೃದಯಸ್ಪರ್ಶಿ. ಅಂತಹ ವ್ಯಕ್ತಿಚಿತ್ರ ಮತ್ತೆ ಯಾರೂ ಬರೆಯಲಿಲ್ಲ. ಯಾರೂ ಅದನ್ನು ಮರೆತಿಲ್ಲ. ಅಂತಹ ದಬಾಕು ಅವರ ಬಗ್ಗೆಯೇ ಒಂದು ವ್ಯಕ್ತಿಚಿತ್ರವನ್ನು 'ಜಯಂತಿ'ಯಲ್ಲಿ ಓದಿದೆ. ಆ ಲೇಖನದ ಕೊನೆಯಲ್ಲಿ ಲೇಖಕರ ಹೆಸರು 'ಚಂದ್ರಮಾ' ಎಂದು ಇತ್ತು. ನನಗೆ ಧಾರವಾಡದಲ್ಲಿ 'ಚಂದ್ರಮಾ' ಎನ್ನುವ ಮಹಿಳೆ ಇದ್ದು ಇಷ್ಟು ಚೆನ್ನಾಗಿ ಲೇಖನ ಬರೆದಿದ್ದಾರಲ್ಲ, ಇವರು ಯಾರಿರಬಹುದು, ನನಗೆ ಗೊತ್ತೇ ಇಲ್ಲವಲ್ಲ ಎಂದೆನ್ನಿಸಿತು! ಆಮೇಲೆ ಕುತೂಹಲ ತಣಿಯಿತು. ಅವರು ಮಹಿಳೆಯಲ್ಲ, ಎಂ. ರಾಮಚಂದ್ರ ನಮ್ಮ ಯೂನಿವರ್ಸಿಟಿಯ ಎಂ.ಎ. ವಿದ್ಯಾರ್ಥಿ ಎಂದು ತಿಳಿಯಿತು! ಆಮೇಲೆ ಅಂತಹ ಅನೇಕ ವ್ಯಕ್ತಿಚಿತ್ರಗಳನ್ನು ಬರೆದರು. ನನ್ನ ಬಗೆಗೂ ಬರೆದರು! ಬಹುಶಃ ಮುನ್ನೂರು - ನಾನ್ನೂರು ಪುಟದ ಒಳ್ಳೆಯ ಗ್ರಂಥ ಆಗುತ್ತದೆ. ಅದು ಈವೊತ್ತು ಸಂಜೆ ಬಿಡುಗಡೆಯಾಗುತ್ತದೆ. ಬಹಳ ಸಂತೋಷ. ಈಗಿನ ಎರಡು ಪುಸ್ತಕಗಳ ಜೊತೆ ಅದೂ ಕೂಡ ಬರುತ್ತದೆ.

ರಾಮಚಂದ್ರರ ಪೂಜ್ಯಗುರು ಸೇಡಿಯಾಪು ಕೃಷ್ಣ ಭಟ್ಟರು ವಾತ್ಸಲ್ಯದಿಂದ 'ಚಂದ್ರಮಾ' ಎಂದು ಕರೆದಿದ್ದರು. ಅದಕ್ಕಾಗಿ ರಾಮಚಂದ್ರ ಅವರು 'ಚಂದ್ರಮಾ' ಎನ್ನುವ ಹೆಸರಿನಲ್ಲೇ ಲೇಖನ ಬರೆದಿದ್ದರು. ಈಗ ಅಭಿನಂದನ ಗ್ರಂಥದ ಹೆಸರು ಕೂಡ 'ಚಂದ್ರಮಾ' ಎಂದಿದೆ. ಮುಂದೆ ದ ಬಾ ಕುಲಕರ್ಣಿ ಅವರ ಇನ್ನೊಂದು

ಪುಸ್ತಕ ಬಂತು, 'ಸೀಮಾಪುರುಷರು' ಎಂದು. ಅದಕ್ಕೆ ಮುನ್ನುಡಿಯಾಗಿ ಅವರು ಎಲ್ಲರ ಮೆಚ್ಚಿಗೆಗೆ ಪಾತ್ರವಾಗಿದ್ದಂತಹ ಚಂದ್ರಮಾ ಅವರು ಬರೆದ ವ್ಯಕ್ತಿಚಿತ್ರ ಲೇಖನವನ್ನೇ ಬಳಸಿಕೊಂಡರು. ಆಮೇಲೆ ರಾಮಚಂದ್ರರು ಕಾರ್ಕಳದ ಭುವನೇಂದ್ರ ಕಾಲೇಜಿಗೆ ಬಂದರು, ಅಧ್ಯಾಪಕರಾದರು, ನಿರಂತರವಾದ ಸೇವೆಯನ್ನು ಸಲ್ಲಿಸಿದರು. ಸಾಹಿತ್ಯ ಸಂಘವನ್ನು ಹೇಗೆ ಬೆಳೆಸಿದರು ಇವೆಲ್ಲ ತಮಗೆ ಗೊತ್ತು. ಬಹುಶಃ ಮಾಸ್ತಿಯವರು ಮೊದಲು ಮಾಡಿಕೊಂಡು ಅನೇಕ ಹಿರಿಯ ಸಾಹಿತಿಗಳು, ಕಿರಿಯ ಸಾಹಿತಿಗಳು ಕಾರ್ಕಳದ ಈ ಕಾಲೇಜಿಗೆ ಬಂದಿದ್ದಾರೆ. ಎಂದರೆ ರಾಮಚಂದ್ರ ಅವರನ್ನು ಕರೆಸಿದ್ದಾರೆ. ನಿವೃತ್ತಿಯ ಅನಂತರ ಊರಲ್ಲಿ ಮತ್ತೊಂದು ಸಾಹಿತ್ಯಸಂಘವನ್ನು ಸ್ಥಾಪಿಸಿದ್ದಾರೆ. ಅದರಲ್ಲಿ ಹನ್ನೆರಡು - ಹದಿಮೂರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಅದರ ಅಧ್ಯಕ್ಷ ಆಗಬೇಕು ಎಂದೇನೂ ಇಲ್ಲ. ಯಾವಾಗಲೂ ಸಂಚಾಲಕರು, ಅದು ಸಾಹಿತ್ಯ ಪರಿಚಾರಿಕೆಯ ಬಹಳ ಒಳ್ಳೆಯ ಗುಣವಿಶೇಷ ಎಂದು ಹೇಳಬಹುದು. ಅಂತಹ ಕೆಲಸ ಮಾಡಿಕೊಂಡು ಬಂದವರು ಅವರು.

ಈಗ ಮುಖ್ಯವಾದ ವಿಷಯಕ್ಕೆ ಬರಬೇಕಾಗಿದೆ. ಈ ಕನ್ನಡ ಸಂಘ ಸಂಸ್ಥೆಗಳ ಸಮಾವೇಶದ ಆಶಯ ಭಾಷಣಕ್ಕೆ ನಾಲ್ಕು ಮಂದಿ ಸ್ಪಂದನವನ್ನು ತೋರಿಸಿದರು. ಅವರಲ್ಲಿ ಸುನೀತಾ ಶೆಟ್ಟಿಯವರಂತೂ ಮುಂಬೈಯಲ್ಲಿ ಇದ್ದವರು. ಈ ಭಾಗದಿಂದ ಹೋದವರೇ ಅಲ್ಲಿ ರಾತ್ರಿ ಶಾಲೆಗಳಲ್ಲಿ ಓದಿ ಕಲಿಸುತ್ತ ನಿಜವಾಗಿ ಕನ್ನಡವನ್ನು ಉಳಿಸಿದವರು. ದಕ್ಷಿಣಕನ್ನಡ ಜಿಲ್ಲೆಯಿಂದ ಯಾರು ಯಾರು ಹೋಗಿದ್ದಾರೋ ಅವರು ಕನ್ನಡ ಉಳಿಸಿದ್ದಾರೆ. ನಾನೂ ಆ ಶಾಲೆಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಅಲ್ಲಿಯ ಬಿಲ್ಲವ ಸಂಘದವರು ಬೆಳ್ಳಿಹಬ್ಬಕ್ಕೋ ಸುವರ್ಣ ಮಹೋತ್ಸವಕ್ಕೋ ನನ್ನನ್ನು ಕರೆದಿದ್ದರು. ಹೋದದ್ದು ನೆನಪಿದೆ ನನಗೆ. ಬಂಟರ ಸಂಘ ಇದೆ. ಅಂದರೆ ಇವೆಲ್ಲ ಜಾತಿಸೂಚಕವಾದರೂ ಜಾತಿಯನ್ನು ಕೆಳಗಿಟ್ಟು ಕನ್ನಡವನ್ನು ಮೇಲೆತ್ತಿ ಹಿಡಿದುಕೊಂಡು ಬೆಳೆಸಿಕೊಂಡು ನಡೆಸಿದವರು. ಅಲ್ಲಿ ಆ ರೀತಿಯ ಭಾವನೆಯನ್ನು ತೆಗೆದುಕೊಂಡು ಬಂದವರು. ಅದನ್ನು ಅವರು ಮೆಚ್ಚಿಕೊಂಡು ಮಾತಾಡಿದ್ದಾರೆ. ಎಂತಹ ಅಭದ್ರತೆಯ ಅವಸ್ಥೆಯಲ್ಲಿಯೂ ಮುಂಬೈಯಲ್ಲಿ ಇದ್ದಷ್ಟು ಕರ್ನಾಟಕ ಸಂಘಗಳು ಬೇರೆ ಕಡೆ ಇಲ್ಲ. ಮಾತುಂಗದಲ್ಲಿ ಇದೆ, ಡೊಂಬಿವಿಲಿಯಲ್ಲಿ ಇದೆ. ಗೊರೆಗಾಂನಲ್ಲಿ ಇದೆ. ಅವರು ಇನ್ನೊಂದು ಮಾತು ಹೇಳಿದರು 'ಕುತ್ತು ಕನ್ನಡಕ್ಕಲ್ಲ ಕನ್ನಡಿಗರಿಗೆಂದು'. ಅದೇ ರೀತಿ ಹೊರನಾಡುಗಳಾದ ಮದ್ರಾಸ್‌ನಲ್ಲಿ ಹೈದರಾಬಾದ್‌ನಲ್ಲಿ ಇರುವ ಕನ್ನಡಿಗರಿಗೆ ಯಾವ ರೀತಿಯ ಆತಂಕಗಳಿವೆ, ಅಥವಾ ಎದುರಿಸಬೇಕಾದ ಸವಾಲುಗಳಿವೆ ಎಂಬ ಸೂಚನೆಯನ್ನು ಕೊಟ್ಟರು.

ಧಾರವಾಡದ ಜಿ.ಎಂ. ಹೆಗಡೆಯವರಂತೂ ಕಾಲೇಜುಗಳ ಕನ್ನಡ ಅಧ್ಯಾಪಕರ ಪರಿಷತ್ತನ್ನು ಹುಟ್ಟುಹಾಕಿದವರು. ಉಳಿದ ವಿಶ್ವವಿದ್ಯಾಲಯಗಳವರಿಗೂ ಹೇಳಿದರು - 'ನೀವೂ ಒಂದು ಮಾಡಿ, ಆಗ ನಿಮ್ಮ ಸಂಘಟನೆಗೆ ಶಕ್ತಿ ಬರುತ್ತದೆ' ಎಂದು. ಅವರಿಗೆ ನಿತ್ಯವೂ ಕನ್ನಡದ ಉಳಿವು, ಬಳಕೆಗಳದೇ ಚಿಂತೆ. ಆ ಕುರಿತಾದ ತಮ್ಮ ನೋವನ್ನೂ ಕೂಡ ಹೇಳಿದರು. ನಿನ್ನೆ ರಾತ್ರಿ ಬಂದೆವು. ಬಂದಾಗ ಅವರು ಇಲ್ಲಿಯ ಅರುಣಕುಮಾರ್ ಸಿಕ್ಕಿದಾಗಲೇ ಸುರುಮಾಡಿಬಿಟ್ಟರು. - ಐಚ್ಛಿಕ ಕನ್ನಡದ್ದು, ಅದರ ಸ್ಥಿತಿ ಏನು ಎತ್ತ ಎಂಬುದಾಗಿ. ಅಷ್ಟು ತಳಮಳ ಅವರಲ್ಲಿ ಇರುವಂಥಾದ್ದು.

ಕಾಸರಗೋಡಿನ ಮಹೇಶ್ವರಿಯವರು 'ಕಯ್ಯಾರ ಕಿಞ್ಞಣ್ಣ ರೈ ಅವರಿಗೆ ತೊಂಬತ್ತೇಳು ವರ್ಷ ಆಯಿತು ಎಂಬುದನ್ನು ಜ್ಞಾಪಿಸಿ ಅವರ 'ಬೆಂಕಿ ಬಿದ್ದಿದೆ ಮನೆಗೆ' ಕವಿತೆಯನ್ನು ೧೯೫೭ರಲ್ಲಿ ಧಾರವಾಡದಲ್ಲಿ ಕುವೆಂಪು ಅವರ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಕಯ್ಯಾರರೇ ಓದಿದ್ದರು. ಐವತ್ತನಾಲ್ಕು ವರ್ಷಗಳಾಗಿರಬಹುದು. ಕವಿ ಕಯ್ಯಾರರ ಕಾಸರಗೋಡಿನಲ್ಲಿ ಕನ್ನಡದ ಸ್ಥಿತಿ-ಗತಿ ಹೇಗಿದೆ ಎಂಬುದನ್ನು ತಿಳಿಸಿದರು. ಅಲ್ಲಿ ಇನ್ನೂ ಬೆಂಕಿ ಉರಿಯುತ್ತಲೇ ಇದೆ. ಹಬ್ಬುತ್ತಾ ಇದೆ, ಎಷ್ಟು ಕುತ್ತು ಬಂದಿದೆ ಎಂದು ಹೇಳಿದರು. ಭಾಷೆಯ ಭಯೋತ್ಪಾದನೆ ಎನ್ನುವ ಮಾತನ್ನು ಉಪಯೋಗ ಮಾಡಿದರು. ಅದು ನಿಜವಾಗಿಯೂ ಆತಂಕಕಾರಿಯಾದ ಬೆಳವಣಿಗೆ ಎಂದು ಹೇಳಬಹುದು.

ಮಂಗಳೂರಿನ ನರಸಿಂಹಮೂರ್ತಿಯವರದು ಇದ್ದುದರಲ್ಲಿ ಸಮಾಧಾನ, ತೃಪ್ತಿ. ಮಂಗಳೂರಿನಲ್ಲಿ ಏನೇನನ್ನು ಪ್ರಥಮವಾಗಿ ಕನ್ನಡ ಸಾಧಿಸಿತು ಎಂಬುದನ್ನೆಲ್ಲ ಹೇಳಿ ಕೊನೆಗೆ ಐಚ್ಛಿಕ ಕನ್ನಡದ ಬಗ್ಗೆ ಅವರೂ ಮಾತಾಡಿದ್ದಾರೆ. ಈ ರೀತಿಯಾಗಿ ಎಲ್ಲರೂ ತಮ್ಮ ಭಾಷಣಗಳಲ್ಲಿ ಕುಂದು ಕೊರತೆಗಳನ್ನು ಹೇಳಿದ್ದಾರೆ. ಆದರೆ ಸಮಸ್ಯೆ ಉಳಿಯುತ್ತದೆ. ಏರ್ಯ ಲಕ್ಷ್ಮೀನಾರಾಯಣ ಆಳ್ವ ಅವರು ಮತ್ತು ರಾಮಚಂದ್ರ ಅವರು ಒಂದು ಮನವಿಯನ್ನು ತಯಾರು ಮಾಡಿ ಅದನ್ನು ನಮ್ಮ ಸಚಿವ ಡಾ. ಆಚಾರ್ಯ ಅವರಿಗೆ ಒಪ್ಪಿಸಿ ಅವರ ಮೂಲಕವಾಗಿ ಅದು ಮುಖ್ಯಮಂತ್ರಿಗಳವರಿಗೆ ಮುಟ್ಟಬೇಕು ಎಂದು ಯೋಚನೆ ಮಾಡಿದ್ದಾರೆ. ಅದು ನಿಜವಾಗಿಯೂ ಈ ಸಂಘಸಂಸ್ಥೆಗಳ ಸಮಾವೇಶದ ಒಳ್ಳೆಯ ಫಲಿತಾಂಶ ಎಂದು ಹೇಳಬಹುದು. ಇಲ್ಲದಿದ್ದರೆ ನಾವು ಸುಮ್ಮನೆ ಬಂದು ಮಾತಾಡಿದ್ದರೆ ಅಷ್ಟು ಮಹತ್ತ್ವ ಬರುತ್ತಿರಲಿಲ್ಲ. ಈವೊತ್ತು ಅದನ್ನು ಮಾಡಿದ್ದರಿಂದ ರಚನಾತ್ಮಕವಾಗಿ, ವಿಧಾಯಕವಾಗಿ ಆ ಕಾರ್ಯ ಮುಂದುವರಿಯುತ್ತದೆ. ಬಹುಶಃ ಡಾ. ಆಚಾರ್ಯರು ಸುಮ್ಮನಿರುವುದಿಲ್ಲ - ಮುಖ್ಯಮಂತ್ರಿಗಳಿಗೆ ಹೇಳುತ್ತಾರೆ. ಸರಕಾರದ ಅನುದಾನಕ್ಕಾಗಿ ಸಂಘಸಂಸ್ಥೆಗಳ ಆಯ್ಕೆ

ಮಾಡಲು ಅವರಿಗೆ ಏನು ನಿಯಮಗಳನ್ನು ಹಾಕಿವೆ ಅವು ಕೂಡ ಬಹಳ ಜಾಣತನದಿಂದ ಮಾಡಿದ್ದು. ಇಲ್ಲದಿದ್ದರೆ ಸುಮ್ಮನೇ ಒಂದು ಲಕ್ಷವೋ ಎರಡು ಲಕ್ಷವೋ ತೆಗೆದುಕೊಂಡು ಸುಮ್ಮನೇ ಕೂತುಬಿಡುವುದು. ಅದನ್ನು ಆಡಿಟ್ ಮಾಡಿಸದೇ ಇರುವುದು ಎಲ್ಲ ಇದೆ. ಅದು ಬೇರೆ ವಿಷಯ. ಅನುದಾನ ಪಡೆಯುವುದಕ್ಕೆ ಕಂಡಿಶನ್ಸ್ ಹಾಕಿದ್ದು ಕೂಡ ಈ ಸಮಾವೇಶದ ಒಳ್ಳೆಯ ಫಲಿತಾಂಶ ಎಂದು ನಾನು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಎಲ್ಲರೂ - ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕನ್ನಡ ಸಂಘದ ರೆಫರ್ ಮಾಡಿದ್ದಾರೆ. ಹಿರಿಯ ಸಾಹಿತಿಗಳಾದ ಜಿ.ಪಿ. ರಾಜರತ್ನಂ ಅವರು ದೊಡ್ಡ ಕೆಲಸ ಮಾಡಿದ್ದಾರೆ. ಸಾಹಿತ್ಯ ಪರಿಚಾರಿಕೆಯಾಗಿ ಅಮೋಘವಾದ ಕಾರ್ಯವನ್ನು ಮಾಡಿದ್ದಾರೆ. ಅವರನ್ನು ರಾಮಚಂದ್ರ ತನ್ನ ಪರೋಕ್ಷಗುರು ಎಂದು ಹೇಳ್ಕೊಂಡಿದ್ದಾರೆ. ಮತ್ತೆ ಅವರ ಬಗ್ಗೆ ಬಹಳ ಅತ್ಯುತ್ತಮವಾದ ಮೊನೊಗ್ರಾಫ್ ಬರೆದಿದ್ದಾರೆ, ಏಕವ್ಯಕ್ತಿ ಪ್ರಬಂಧ. ಅದು 'ಭಾರತೀಯ ಸಾಹಿತ್ಯ ನಿರ್ಮಾಪಕರು' ಎಂಬ ಶೀರ್ಷಿಕೆಯಲ್ಲಿ ಕೇಂದ್ರಸಾಹಿತ್ಯ ಅಕಾಡೆಮಿ ಮಾಡುವ ಮಾಲಿಕೆಯಲ್ಲಿ ಬಂದಿರುವ ಅತ್ಯುತ್ತಮ ಪುಸ್ತಕಗಳಲ್ಲಿ ಒಂದು ಎಂದು ಹೇಳಬಹುದು.

ರಾಜರತ್ನಂ ಅವರು ೧೯೭೭ರಲ್ಲಿ ದಿಲ್ಲಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅವರ ಭಾಷಣದ ಶೀರ್ಷಿಕೆ ಏನು ಗೊತ್ತ? 'ಸಾಹಿತ್ಯ ಪರಿಚಾರಿಕೆ'. ಅವರು ಸ್ವತಃ ಶ್ರೇಷ್ಠ ಸಾಹಿತಿಗಳಾಗಿದ್ದವರು, ರತ್ನನ ಪದಗಳು, ನಾಗನ ಪದಗಳು ಅಂತ ಬರೆದವರು. ಅನೇಕ ಬೌದ್ಧ ಸಾಹಿತ್ಯ ಜೈನ ಸಾಹಿತ್ಯಗಳ ಲೇಖಕರಾಗಿದ್ದವರು. ಇತರ ನೂರಾರು ಪುಸ್ತಕಗಳನ್ನು ಬರೆದವರು; ಶ್ರೇಷ್ಠ ಅಧ್ಯಾಪಕರು. ಶ್ರೇಷ್ಠ ವಾಗ್ಮಿ. ಹಾಗಿದ್ದೂ ಸಹ ಅಧ್ಯಕ್ಷ ಭಾಷಣಕ್ಕೆ ಸಾಹಿತ್ಯ ಪರಿಚಾರಿಕೆ ಎಂದು ಶೀರ್ಷಿಕೆ ಕೊಟ್ಟದ್ದನ್ನು ನೋಡಿದರೆ ಅದು ಎಷ್ಟು ಮುಖ್ಯ ಎಂಬುದು ತಿಳಿಯುತ್ತದೆ. ಅವರಿಗೆ ಹಿರಿಯರು ಎ.ಆರ್. ಕೃಷ್ಣಶಾಸ್ತ್ರಿಗಳು. ಅವರು ಕೂಡ 'ಪ್ರಬುದ್ಧ ಕರ್ನಾಟಕ' ಇತ್ಯಾದಿಗಳ ಮೂಲಕವಾಗಿ ಕೆಲಸವನ್ನು ಮಾಡಿದ್ದಾರೆ. ನಮ್ಮ ಕನ್ನಡ ಸಾಹಿತ್ಯದಲ್ಲಿ ಅನೇಕ ಶ್ರೇಷ್ಠ ಸಾಹಿತಿಗಳು ಇದ್ದಾರೆ. ಆದರೆ ಸಾಹಿತ್ಯ ಪರಿಚಾರಕರ ಸಂಖ್ಯೆ ಬಹಳ ಕಡಿಮೆ. ಅದು ಬಹಳ ಅಗತ್ಯವೆಂದು ರಾಜರತ್ನಂ ಹೇಳಿದರು. ರಾಮಚಂದ್ರರೂ ಹೇಳಿರಬಹುದು. ಅದೆಂದರೆ, ಪಕ್ವಾನ್ನ ಆಗಿದೆ, ಆದರೆ ಎಲ್ಲ ಸರಿಯಾಗಿ ಎಲ್ಲರಿಗೂ ಮುಟ್ಟುವ ಹಾಗೆ ಬಡಿಸುವವರೇ ಇಲ್ಲದಿದ್ದರೆ ಅಡುಗೆ ಮಾಡಿ ಏನು ಪ್ರಯೋಜನ? ರಾಜರತ್ನಂ ಅವರೇ ಕೊಟ್ಟ ಉದಾಹರಣೆ ಅದು. ರಾಜರತ್ನಂ ಅವರಂತೆ ಆ ಕೆಲಸವನ್ನು ಬಹಳ ನಿಷ್ಠೆಯಿಂದ ಮಾಡಿಕೊಂಡು ಬಂದವರು ಪ್ರೊ. ರಾಮಚಂದ್ರ. ಅನಂತರ ಇನ್ನೊಬ್ಬರ ಹೆಸರನ್ನು - ಕ್ರೈಸ್ಟ್ ಕಾಲೇಜಿನ ಕನ್ನಡ

ಸಂಘದಿಂದ ಬಹಳ ಅದ್ಭುತವಾದ ಕೆಲಸ ಮಾಡಿದ ಚಿ. ಶ್ರೀನಿವಾಸ ರಾಜು ಅವರನ್ನು ನಾವು ಈ ಸಂದರ್ಭದಲ್ಲಿ ಹೇಳಲೇಬೇಕು. ಹೆಚ್ಚಾಗಿ ಕನ್ನಡೇತರರಿಂದ ತುಂಬಿಕೊಂಡಂಥ ಇಂಗ್ಲಿಷ್ ಮಾಧ್ಯಮದ ವಾತಾವರಣದಲ್ಲಿ ಮತ್ತು ಅದೇ ಪ್ರಧಾನವಾಗಿದ್ದಂತಹ, ಮತ್ತು ಕನ್ನಡದ ಬಗ್ಗೆ ಅಷ್ಟೇನು ಕಾಳಜಿ ಇಲ್ಲದ ಆಡಳಿತವರ್ಗವನ್ನು ಹೊಂದಿದಂತಹ ಕಾಲೇಜಿನಲ್ಲಿ ಕನ್ನಡ ಸಂಘವನ್ನು ಸ್ಥಾಪಿಸಿ, ಬೆಳೆಸಿ ಅರಳುವಂತಹ ಪ್ರತಿಭೆಗಳನ್ನು ಪ್ರೋತ್ಸಾಹಿಸಿ ಪುಸ್ತಕಗಳನ್ನು ಪ್ರಕಟಿಸಿ ಆ ಪ್ರಕಟನೆಗಳಿಗೆ, ಪುಸ್ತಕೋದ್ಯಮಕ್ಕೆ ಹೊಸ ಆಯಾಮವನ್ನು ತಂದುಕೊಟ್ಟವರು ಚಿ. ಶ್ರೀನಿವಾಸರಾಜು ಅವರು. ಆ ಕ್ರೈಸ್ತ ಕನ್ನಡ ಸಂಘದಿಂದ ಬೆಳಕಿಗೆ ಬಂದ ಅನೇಕ ದೊಡ್ಡ ಲೇಖಕರ ಒಂದು ಪರಂಪರೆಯನ್ನೇ ನಾವು ಕಾಣಬಹುದು. ಶ್ರೀನಿವಾಸರಾಜು ಅವರು ತಾವೇ ತಮ್ಮ ಬಗೆ ಒಂದು ಹೇಳಿಕೊಂಡಿದ್ದಾರೆ : "ಬೇಂದ್ರೆಯವರ 'ಮರಳುಸಿದ್ಧ' ಕವನದಂತೆ ನಾನು ಏನೋ ಮಾಡಲು ಹೊರಟು ಕನ್ನಡಸಂಘದ ಕಿನ್ನರಿಯಾಗಿಬಿಟ್ಟೆ" ಅಂತ. ಬೇಂದ್ರೆಯವರ ಆ ಕವನ ಕೇಳಿರಬಹುದು ನೀವು -

ಮರುಳಸಿದ್ಧನ ನಾರಿ ಮರುಳ ಮಾಡಕ ಹೋಗಿ
ಮರುಳಾಗಿಹಳು ಜಂಗಮಯ್ಯಾಗ,
ಕಿನ್ನರಿಯಾಗಿಹಳು ಕೈಯಾಗ

ಆ ರೀತಿ ಕನ್ನಡದ ಕಿನ್ನರಿಯಾಗಿಬಿಟ್ಟೆ ಅಂತ. ಹಾಗೆ ನಮ್ಮ ಪ್ರೊ. ಎಂ. ರಾಮಚಂದ್ರ ಅವರು ಕೂಡ ಸಾಹಿತ್ಯ ಸಂಘದ ಶಹನಾಯಿ ಆಗಿಬಿಟ್ಟರು. ಅವರು. ಕನ್ನಡ ಸಂಘದ ಕಿನ್ನರಿಯಾದರು, ಇವರು ಸಾಹಿತ್ಯ ಸಂಘದ ಶಹನಾಯಿಯಾಗಿ ಕೆಲಸ ಮಾಡುತ್ತಾ ಇದ್ದಾರೆ ಎಂದು ಅನ್ನಿಸುತ್ತಿದೆ. ಇದೇ ಪರಂಪರೆಯನ್ನು ಇನ್ನೂ ಅನೇಕರು ಮುಂದುವರಿಸುತ್ತಿದ್ದಾರೆ - ಮೊಗಸಾಲೆಯವರು ಕಾಂತಾವರದಲ್ಲಿ ಮಾಡುತ್ತಿದ್ದಾರೆ. ನಾನು ಅಲ್ಲಿ ಹೋಗಿಬಂದಿದ್ದೇನೆ. ಅಲ್ಲಿ ನಾನು 'ಇದು ಕೇವಲ ಕಾಂತಾವರ ಅಲ್ಲ ಅಯಸ್ಕಾಂತಾವರ' ಎಂದು ಹೇಳಿದ್ದೆ. ಎಲ್ಲರನ್ನು ತನ್ನ ಕಡೆಗೆ ಎಳೆಯತಕ್ಕಂಥಾದ್ದು. ಬಹಳ ಸಂತೋಷದ ಸಂಗತಿ.

ಸಾಹಿತ್ಯ ಪರಿಚಾರಿಕೆ ಎನ್ನುವುದು ಬರಬರುತ್ತಾ ಕ್ಲೀಷೆಯಾಗಿಬಿಟ್ಟಿದೆ. ಆದರೆ ಅದನ್ನು ನಾವು ಲಘುವಾಗಿ ಪರಿಗಣಿಸಬಾರದು. ಯಾವುದೇ ಶಬ್ದವೂ ಆ ರೀತಿಯ ಕೆಲಸ ಮಾಡಿದವರು ಇಲ್ಲದೇ ಇದ್ದಾಗ ಕ್ಲೀಷೆಯಾಗಿಬಿಡುತ್ತದೆ. ಸ್ವತಃ ಸೃಜನಶೀಲ ಲೇಖಕರಾದವರೂ ಅಂಥ ಕೆಲಸ ಮಾಡಿದ್ದಾರೆ ಎನ್ನುವುದನ್ನು ನಾವು ಮರೆತುಬಿಡುತ್ತೇವೆ. ಬರೇ ಇದೇ ಕೆಲಸ ಮಾಡುತ್ತಿದ್ದರು ಎಂದಲ್ಲ. ಒಳ್ಳೇ ಒಳ್ಳೆ ಕೃತಿಗಳನ್ನೂ ಬರೆದಿದ್ದಾರೆ.

ಇನ್ನೂ ಅನೇಕ ಕೃತಿಗಳನ್ನು ಬರೆಯಬಲ್ಲವರಾಗಿದ್ದವರು - ರಾಜರತ್ನಂ ಆಗಲಿ, ಶ್ರೀನಿವಾಸರಾಜು ಆಗಲಿ, ರಾಮಚಂದ್ರ ಆಗಲಿ ಅವರು ಬರೆದ ಸಾಹಿತ್ಯ ಯಾವ ದೃಷ್ಟಿಯಿಂದಲೂ ಕಡಿಮೆಯಲ್ಲ ಎಂದೇ ಹೇಳಬಹುದು. ಅದಕ್ಕಾಗಿ ರಾಮಚಂದ್ರ ಅವರ ಅಭಿನಂದನ ಗ್ರಂಥಕ್ಕೆ ನನ್ನದೂ ಒಂದು ಲೇಖನಕೊಟ್ಟೆ. ಅದಕ್ಕೇ ಏನು ಹೆಡಿಂಗ್ ಕೊಟ್ಟೆ ಅಂದರೆ - ಸಾಹಿತ್ಯ ಪರಿಚಾರಿಕೆ ಕ್ಲೀಷೆಯಾಗಿಬಿಡುತ್ತದೆ ಎಂದು ನಾನು 'ತಾನುನುಡಿಯ ತಮ್ಮಡಿ ಯಮ್ಮ ರಾಮಚಂದ್ರ' ಎಂದು ಬರೆದೆ. ಕನ್ನಡದ ಯಮ್ಮ, ಇಂಗ್ಲಿಷ್‌ನ ಎಮ್ ಅಲ್ಲ. ಇನ್ನು ತಮ್ಮಡಿ ಎಂಬುದನ್ನು ಮಾಸ್ತಿಯವರೇ ಹಿಂದೆ ಉಪಯೋಗಮಾಡಿದ್ದಾರೆ. ತಮ್ಮಡಿ ಅಂದರೆ ಅರ್ಚಕ, ಪೂಜಾರಿ, ಗುರು, ಅಧ್ಯಾಪಕ, ಮುನಿ ಇತ್ಯಾದಿ ಅರ್ಥಗಳು ಬರುತ್ತವೆ. ಈ ಎಲ್ಲ ಶಬ್ದಗಳ ಸಾರ ಈ ತಮ್ಮಡಿ ಎಂಬ ಶಬ್ದದಲ್ಲಿ ಇದೆ ಎಂದು ನಾನು ಭಾವಿಸುತ್ತೇನೆ. ಮಾಸ್ತಿಯವರು ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದಾಗ ಒಂದು ಮಾತು ಹೇಳಿದರು "ನನಗೆ ಹತ್ತು ಜನ ಒಳ್ಳೆಯ ಕಾರ್ಯಕರ್ತರನ್ನು ಕೊಡಿ, ಕನ್ನಡದಲ್ಲಿ ಕ್ರಾಂತಿಯನ್ನು ಮಾಡಿ ತೋರಿಸುತ್ತೇನೆ" ಎಂದು. ನೋಡಿ, ನಿಜವಾದ ಕಾರ್ಯಕರ್ತರನ್ನು ಹುಡುಕುವುದು, ಅವರು ಸಿಗುವುದು ಎಷ್ಟು ಕಷ್ಟ ಎನ್ನುವ ಮಾತು. ಈಗಂತೂ ತೋರಿಕೆಯ, ಆಡಂಬರದ, ಪ್ರಚಾರದ ಕಾಳಜಿ ಇರುತ್ತದೆಯೇ ವಿನಾ ನಿಜವಾದ ಕಾರ್ಯಕರ್ತರ, ಕನ್ನಡದ ಪ್ರಜ್ಞೆಯನ್ನು ಇಟ್ಟುಕೊಂಡು ಕೆಲಸ ಮಾಡುವಂತಹರ ಸಂಖ್ಯೆ ಕಡಿಮೆ ಎಂದು ಹೇಳಬಹುದು. ಇದು ಕೇವಲ ಘೋಷಣೆಗಳಿಂದ ಮೆರವಣಿಗೆಗಳಿಂದ ಆಗುವ ಕೆಲಸ ಅಲ್ಲ. ಕನ್ನಡಪ್ರಜ್ಞೆ ಎಂದರೆ ಕೂಪಮಂಡೂಕದಂತೆ ನಮ್ಮದೇ ಶ್ರೇಷ್ಠ ಎಂದು ತಿಳಿದುಕೊಳ್ಳಬಾರದು. ಕನ್ನಡದಿಂದಾಗಿ ನಾವು ಈ ವಿಶಾಲವಾದ ಜಗತ್ತಿನಲ್ಲಿ ತಲೆ ಎತ್ತಿ ನಿಲ್ಲುವ ಹಾಗೆ ಆಗಬೇಕು. ಅದೇ ನಿಜವಾದ ಕನ್ನಡದ ಪ್ರಜ್ಞೆ ಎಂದು ಅದನ್ನು ಅರ್ಥೈಸಬಹುದು.

ಈವೊತ್ತು ನಾವು ಕಲಿತ ವಿದ್ಯಾಸಂಸ್ಥೆಗಳು ಸರಿಯೆ, ಆದರೆ ಅವುಗಳ ಆವರಣದ ಹೊರಗೆ ಏನು ಜಗತ್ತು ಇದೆಯಲ್ಲ, ಆ ವಿಶಾಲವಾದ ಪರಿಸರದಲ್ಲಿ ಯಾವ ಹೊಸ ಪೀಳಿಗೆ ಬರುತ್ತಾ ಇದೆ ಅವರ ವ್ಯಕ್ತಿತ್ವವನ್ನು ಬೆಳೆಸುವಲ್ಲಿ ಅವುಗಳ್ನು ಪೋಷಣೆ ಮಾಡುವಲ್ಲಿ, ರೂಪಿಸುವಲ್ಲಿ ಇಂಥ ಸಂಘಗಳ ಪಾಲು ಬಹಳ ದೊಡ್ಡದು ಎಂದು ಹೇಳಬಹುದು. ವೈಯಕ್ತಿಕವಾಗಿ ಹೇಳುವುದಾದರೆ ನಾನು ಹೈಸ್ಕೂಲು ಶಿಕ್ಷಣಕ್ಕಾಗಿ ಧಾರವಾಡಕ್ಕೆ ಬಂದಂದಿನಿಂದ ಸುಮಾರು ಅರುವತ್ತು - ಎಪ್ಪತ್ತು ವರ್ಷದ ಹಿಂದೆ ೧೯೪೦-೪೧ರಲ್ಲಿ ನಾನು ಬಂದದ್ದು - ಇಂದಿನವರೆಗೂ ಕೂಡ ಧಾರವಾಡದ ವಿದ್ಯಾವರ್ಧಕ ಸಂಘ ನನ್ನನ್ನು ಬೆಳೆಸುತ್ತಲೇ ಇದೆ. ಏಕೆಂದರೆ ಅದಕ್ಕಿರುವ ಪರಂಪರೆಯೇ

ಅಂಥಾದ್ದು - ನೂರ ಇಪ್ಪತ್ತು ವರ್ಷದ ಮೇಲಾಗಿ ಹೋಯಿತು. ನಮ್ಮಲ್ಲಿ ಅಷ್ಟು ಪ್ರಾಚೀನ ಸಂಘ ಬೇರೆ ಇಲ್ಲ ಎಂದೇ ಹೇಳಬಹುದು. ನಮ್ಮ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅದು ಆಡಂಬಲ. ಅದರಲ್ಲಿ ಅನೇಕ ವೇದಿಕೆಗಳಿವೆ. ಎಲ್ಲವೂ ಕೆಲಸ ಮಾಡುತ್ತಾ ಇವೆ. ಸುಮಾರು ನಲ್ವತ್ತೈದು ವರ್ಷಗಳಿಂದ ಪಾಟೀಲ ಪುಟ್ಟಪ್ಪ ಅಧ್ಯಕ್ಷರಾಗಿದ್ದಾರೆ. ಅವರು ಎಷ್ಟು ಕೆಲಸಗಳನ್ನು ಮಾಡಿಕೊಂಡು ಬಂದಿದ್ದಾರೆ! ಹಾಗೆಯೇ ಗುಂಜೆಟ್ಟಿಯವರು ಮೂವತ್ತು ವರ್ಷಗಳಿಂದ ಸಂಘದಲ್ಲಿ ಕೆಲಸ ಮಾಡಿಕೊಂಡು ಬಂದವರು. ಆ ಸಂಘದಲ್ಲಿ ನಾನು ಒಂದು ಸಂಸ್ಕಾರವನ್ನು ಪಡೆದೆ, ಮುಳಿಯ ತಿಮ್ಮಪ್ಪಯ್ಯನವರು ಸಂಘದಲ್ಲಿ ಪಾರ್ತಿಸುಬ್ಬನ ಬಗ್ಗೆ ಮಾತಾಡಿದ್ದನ್ನು ನಾನು ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ ಕೇಳಿದ್ದೆ. ಅವರನ್ನು ನೋಡಿದ್ದು ಇನ್ನೂ ಕಣ್ಣ ಮುಂದೆ ಕಟ್ಟಿದ ಹಾಗೆ ಇದೆ. ಪಾರ್ತಿಸುಬ್ಬನ ಬಗ್ಗೆ ಮಾತಾಡುತ್ತಾ ಅವರು ಯಕ್ಷಗಾನದ ಕೆಲವು ಪದ್ಯಗಳನ್ನು ಹೇಳಿ ತೋರಿಸಿದ್ದರು. ಅದು ಇನ್ನೂ ನನ್ನ ಕಿವಿಯಲ್ಲಿ ಅನುರಣಿಸುತ್ತಾ ಇದೆ, 'ಏನಮ್ಮಾ ರಾವಣ ನೀನಮ್ಮಾ ಸೀತೆಯ' ಎಂದು ಶುರುವಾಗುತ್ತದೆ ಒಂದು ಹಾಡು. ಅದೇ ರೀತಿ ಬಿಎಂಶ್ರೀಯವರ ಭಾಷಣವನ್ನು ಕೇಳಿದ್ದೇನೆ. ಅವರ 'ಕನ್ನಡ ಮಾತು ತಲೆ ಎತ್ತುವ ಬಗೆ' ಅಲ್ಲ, ಆಗ ನಾನು ಹುಟ್ಟಿರಲೇ ಇಲ್ಲ. ಆ ಮಾತು ಬೇರೆ. ಆಗ ಧಾರವಾಡದಲ್ಲಿ ಕರ್ನಾಟಕ ಕಾಲೇಜು ಬಿಟ್ಟರೆ ಬೇರೆ ಕಾಲೇಜುಗಳು ಇರಲಿಲ್ಲ. ಆಮೇಲೆ ಹೊಸ ಕೆ.ಇ. ಬೋರ್ಡ್ ಸಂಸ್ಥೆಯ ಕಾಲೇಜು ಶುರುವಾಯಿತು. ಆಗಲೇ ಮೈಸೂರಲ್ಲಿ ಬಿ.ಎಂ. ಶ್ರೀ.ಯವರು ನಿವೃತ್ತರಾಗಿದ್ದು, ಆ ಹೊಸ ಕಾಲೇಜಿಗೆ ಪ್ರಿನ್ಸಿಪಾಲರಾಗಿ ಬಂದರು. ಎರಡು-ಮೂರು ವರ್ಷ ಅಲ್ಲಿದ್ದರು. ಆವಾಗ ಅವರು ವಿದ್ಯಾವರ್ಧಕ ಸಂಘದಲ್ಲಿ ಮಾತಾಡಿದ್ದು, ಹಾಗೆಯೇ ಗೋವಿಂದ ಪೈಯವರ ಭಾಷಣ ಕೇಳಿದ್ದೇನೆ. ಹೀಗೆ ಅನೇಕರ - ಧಾರವಾಡದ ಹಿರಿಯರಂತೂ ಸರಿಯೆ - ಬೇಂದ್ರೆಯವರು, ಬೆಟಗೇರಿಯವರು, ಶಂಬಾ ಅವರು, ಮಿಂಚಿನ ಬಳ್ಳಿ ಗ್ರಂಥಮಾಲೆಯ ಬುರ್ಲಿ ಬಿಂದುಮಾಧವರು, ಉತ್ತಂಗಿ ಚೆನ್ನಪ್ಪನವರು, ಬಸವನಾಳರು, ಸಿದ್ದಯ್ಯಸ್ವಾಮಿ ಪುರಾಣಿಕರು - ಹೀಗೆ ಅನೇಕರು. ಅಲ್ಲದೆ ಮಾಸ್ತಿಯವರು, ಅನಕೃ ಅವರು ಮೇಲಿಂದ ಮೇಲೆ ಬರುತ್ತಿದ್ದರು. ಅವರನ್ನೆಲ್ಲ ಪ್ರಥಮ ಬಾರಿ ನೋಡಿದ್ದು ಮಾತುಗಳನ್ನು ಕೇಳಿದ್ದು ಅವರ ಮಾತುಗಳನ್ನು ಎದೆಯಲ್ಲಿ ಇಂಗಿಸಿಕೊಂಡದ್ದು ಆ ಸಂಘದ ಮೂಲಕವಾಗಿಯೇ ಎಂದು ಹೇಳಿಬಹುದು.

ಪ್ರೊ. ರಾಮಚಂದ್ರರವರು ನನಗೆ ಉದಾರವಾಗಿ ಹೇಳಿಬಿಟ್ಟಿದ್ದಾರೆ ಬೇಕಾದಷ್ಟು ಮಾತಾಡಿ ಎಂದು. ಆದರೂ ನಾನು ಮುಗಿಸುತ್ತಿದ್ದೇನೆ. ಶ್ರೀಯವರು 'ಸಿರಿಗನ್ನಡಂ ಗೆಲ್ಗೆ' ಎನ್ನುವ ಮಾತನ್ನು ಚಾಲ್ತಿಗೆ ತಂದರು. ಆದರೆ ಅದನ್ನು ನಿಜವಾಗಿಯೂ

ಮೊತ್ತಮೊದಲಿಗೆ ಬಳಸಿದವರು ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪನೆ ಮಾಡಿದ ರಾ.ಹ. ದೇಶಪಾಂಡೆಯವರು. ಪತ್ರದಲ್ಲಿ ಅದನ್ನು ಬರೆಯುವವರು. ಆಮೇಲೆ ಮೀಟಿಂಗ್‌ನ ನೋಟೀಸುಗಳಲ್ಲಿ - ೧೮೯೪ರಲ್ಲಿ ಕರೆದ ನೋಟಿಸ್ ಮೇಲೆ - 'ಸಿರಿಗನ್ನಡಂ ಗೆಲ್ಗೆ' ಎಂದು ಮೇಲೆ ಬರೆದು ಕೆಳಗೆಲ್ಲ ವಿಷಯವನ್ನು ಬರೆಯುತ್ತಿದ್ದರು. ಈ ರೀತಿಯಾಗಿ ಕನ್ನಡದ ಕೆಲಸ ನಡೆಯಿತು.

ಕರ್ನಾಟಕದ ಮೊಟ್ಟ ಮೊದಲ ಕನ್ನಡ ಗ್ರಂಥಕರ್ತರ ಸಮ್ಮೇಳನವನ್ನು ೧೯೦೭ರಲ್ಲಿ ವಿದ್ಯಾವರ್ಧಕಸಂಘ ಮಾಡಿತು. ಎಂದರೆ ಗ್ರಂಥಕರ್ತರು, ಪ್ರಕಾಶಕರು, ಕವಿಗಳು, ಸಾಹಿತಿಗಳು, ಲೇಖಕರು ಎಲ್ಲರೂ ಬಂದಿದ್ದರು. ಅದನ್ನು ನಿಜವಾದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಎಂದು ಗುರುತಿಸಲಾಗಿದೆ. ಆಗ ಇನ್ನೂ ಸಾಹಿತ್ಯ ಪರಿಷತ್ತು ಆಗಿರಲಿಲ್ಲ. ನಮ್ಮ ಹಿರಿಯರಾದ ನವೋದಯದ ಎಸ್.ಜಿ. ನರಸಿಂಹಾಚಾರ್ ಅವರು ಅದರ ಅಧ್ಯಕ್ಷರಾಗಿದ್ದರು. ಅವರ ಭಾಷಣದ ಶೀರ್ಷಿಕೆ 'ಸಿರಿಗನ್ನಡಂ ಗೆಲ್ಗೆ'. ಕನ್ನಡ ಭಾಷೆಯನ್ನು ಯಾವ ರೀತಿ ಬೆಳೆಸಬೇಕು. ಆ ಕ್ಷೇತ್ರದಲ್ಲಿ ಏನು ಮಾಡಬೇಕು ಎನ್ನುವ ಬಗ್ಗೆ ಅವರು ಹೇಳಿದ ಮಾತುಗಳನ್ನು ನೋಡಿದರೆ ಈಗಲೂ ಅದು ಎಷ್ಟು ಪ್ರಸ್ತುತ ಎಂದು ಅನ್ನಿಸುತ್ತದೆ. ಅವರು ತಮ್ಮ ಭಾಷಣವನ್ನು ಇಂಗ್ಲಿಷಿನಲ್ಲೇ ಮಾಡಿದರಂತೆ. ಬಿಎಂಶ್ರೀ ಅವರು ಸಹ ಇಂಗ್ಲಿಷಿನಲ್ಲೇ ಪತ್ರ ಬರೆಯುತ್ತಿದ್ದರಂತೆ. ಆಗ ನಮ್ಮ ರಾ.ಹ. ದೇಶಪಾಂಡೆ ಅವರು ಒಂದು ಪತ್ರ ಬರೆದು 'ನೀವು ಇಂಗ್ಲಿಷಿನಲ್ಲಿ ಬರೆಯುತ್ತಿದ್ದೀರಿ. ನಮ್ಮ ಸಂಘಕ್ಕೆ ಇನ್ನು ಮುಂದೆ ಕನ್ನಡದಲ್ಲಿ ಬರೆಯಿರಿ' ಎಂದು ಹೇಳಿದರೆಂದು ಕೇಳಿದ್ದೇನೆ.

ವಿದ್ಯಾವರ್ಧಕ ಸಂಘ ೧೮೯೬ರಲ್ಲಿ 'ವಾಗ್ಭೂಷಣ' ಎನ್ನುವ ಪತ್ರಿಕೆ ಶುರು ಮಾಡಿತು. ಸುಮಾರು ಮೂವತ್ತು ವರ್ಷಗಳವರೆಗೆ ಅದನ್ನು ನಡೆಸಿಕೊಂಡು ಬಂತು. ಅನೇಕ ಗ್ರಂಥಗಳನ್ನು ಪ್ರಕಟಿಸಿತು. ಬಹುಮಾನವನ್ನು ಪಡೆಯಿತು. ಗಳಗನಾಥ ರಂತಹವರು ಕೂಡ ಗ್ರಂಥಕರ್ತರಲ್ಲಿ ಒಬ್ಬರಾಗಿದ್ದರು. ಕರ್ನಾಟಕ ಏಕೀಕರಣ ಚಳುವಳಿಯಂತೂ ಸರಿಯೆ, ಕರ್ನಾಟಕ ವಿವಿ., ಆಕಾಶವಾಣಿ ಕೇಂದ್ರ ಇವುಗಳ ಸ್ಥಾಪನೆಗಾಗಿ ಹೋರಾಟ ಆಯಿತು. ೧೯೩೬ರಲ್ಲಿ ವಿಜಯನಗರ ಆರನೇ ಶತಮಾನೋತ್ಸವ - ಷಟ್‌ಸಾಂವತ್ಸರಿಕೋತ್ಸವ ಅಂತ ಕರೆಯುತ್ತಿದ್ದರು. ಅದರಲ್ಲೂ ಪ್ರಮುಖ ಪಾತ್ರ ವಹಿಸಿ ಸಂಘಟನೆ ಮಾಡಿದ್ದು ವಿದ್ಯಾವರ್ಧಕ ಸಂಘ. ಹಾಗೆಯೇ ಈಗ ಅದನ್ನೆಲ್ಲ ಏಕೆ ಹೇಳುತ್ತಾ ಇದ್ದೇನೆ ಅಂದರೆ ಹೀಗೆ ಉದ್ದಕ್ಕೂ ನಮ್ಮ ಹಿರಿಯರೆಲ್ಲ ಕನ್ನಡದ ಬಗ್ಗೆ ಎಷ್ಟೊಂದು ಕಳಕಳಿಯಿಂದ ನಿಸ್ವಾರ್ಥಬುದ್ಧಿಯಿಂದ ಕೆಲಸ ಮಾಡುತ್ತಾ ಇದ್ದರು. ಅವರಿಗೆ ಬರುತ್ತಿದ್ದ ಪಗಾರ ಎಷ್ಟು? ಅವರು ಏನು

ಕೆಲಸ ಮಾಡುತ್ತಿದ್ದರು? ಎಂಬುದನ್ನು ಜ್ಞಾಪಿಸುವುದಕ್ಕೆ. ಅದನ್ನು ನೋಡಿದರೆ ಈವೊತ್ತಿನ ಮಾನದಿಂದ ಅವರ ಗಳಿಕೆ ಎಂದರೆ ಕನ್ನಡದ ಗಳಿಕೆಯೇ ಆಗಿತ್ತು.

ನಾಡು ಕಟ್ಟುವುದು ಎನ್ನುವ ಮಾತನ್ನು ನಾವು ಆಗಾಗ್ಗೆ ಬಳಸುತ್ತೇವೆ. ರಾಜಕೀಯವಾಗಿ ಎಂದಲ್ಲ - ಭೌಗೋಳಿಕವಾದದ್ದು ಸೀಮಾರೇಖೆಯಾಗಿ ಎಂದಲ್ಲ - ನಿಜವಾಗಿಯೂ ಒಂದು ಜೀವಂತವಾದ ಚಿಂತನಶೀಲವಾದ ಸೃಜನಶೀಲವಾದ ಜನಪರ ದೃಷ್ಟಿ. ಅದು. ಆ ಅರ್ಥದಲ್ಲಿ ನಾಡು ಕಟ್ಟುವದು ಎನ್ನುವ ಮಾತು. ಈವೊತ್ತು ಕನ್ನಡ ಸಂಘ ಸಂಸ್ಥೆಗಳು ಮಾಡಬೇಕಾದ ಮುಖ್ಯ ಕೆಲಸ ಅಂದರೆ ಕನ್ನಡದ ಪ್ರಜ್ಞೆಯುಳ್ಳ ಕಾರ್ಯಕರ್ತರಿಗೆ ಸರಿಯಾದ ತರಬೇತಿಯನ್ನು ಕೊಡುವುದು. ಅವರ ಒಂದು ಪಡೆಯನ್ನೇ - ಹಿಂದೆ ಮಾಸ್ತಿಯವರು ಹೇಳಿದರಲ್ಲ, ತಮ್ಮಡಿ, ಅಂತಹ ಕಾರ್ಯಕರ್ತರ ಪಡೆಯನ್ನು ನಿರ್ಮಾಣ ಮಾಡುವುದು ಅಗತ್ಯ ಇದೆ. ಅಂತಹ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ. ನಮ್ಮ ಪರಂಪರೆ ಅನ್ನುವಂಥಾದ್ದು ರಾಧಾಕೃಷ್ಣನ್ ಒಂದು ಕಡೆ ಹೇಳುತ್ತಾರೆ - ಪರಂಪರೆ ಎನ್ನುವಂಥಾದ್ದು ಇತಿಹಾಸಕ್ಕೂ ಹೆಚ್ಚು ವ್ಯಾಪ್ತಿಯನ್ನು ಪಡೆದದ್ದು. ಏಕೆಂದರೆ ಒಂದು ಇತಿಹಾಸ ಒಂದು ಚರಿತ್ರೆಯನ್ನು ಮಾಡುವುದಕ್ಕೆ ಎಷ್ಟೋ ವರ್ಷಗಳು ಬೇಕಾಗುತ್ತವೆ. ಆದರೆ ಪರಂಪರೆಯನ್ನು ನಿರ್ಮಾಣ ಮಾಡಬೇಕಾದರೆ ಅಂತಹ ಇತಿಹಾಸದ ಅಂತಹ ಚರಿತ್ರೆಯ ಎಷ್ಟೋ ಶತಮಾನಗಳು ಬೇಕಾಗುತ್ತವೆ ಅಂತ. ಈ ದೃಷ್ಟಿ ಜನಜೀವನದ ಪರಂಪರೆ ಅನ್ನುವಂಥಾದ್ದು ತುಂಬ ಮಹತ್ತ್ವದ್ದು. ಈವೊತ್ತು ಜನಜೀವನದ ಎಲ್ಲಾ ರಂಗಗಳಲ್ಲಿ ಆಡಳಿತದಲ್ಲಿ ಶಿಕ್ಷಣದಲ್ಲಿ ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ನಾವು ಸಂಪೂರ್ಣವಾಗಿ ಕನ್ನಡದ ಪ್ರತಿಷ್ಠಾಪನೆ ಮಾಡದೇ ಹೋದರೆ ನಿಜವಾಗಿಯೂ ನಮ್ಮ ಪ್ರಜಾಪ್ರಭುತ್ವ ಸರ್ವೋದಯ ಇತ್ಯಾದಿ ಮಾತುಗಳಿಗೆ ಯಾವುದೇ ಅರ್ಥವಿಲ್ಲದೇ ಹೋಗುತ್ತದೆ ಎಂದು ನಾನು ಭಾವಿಸುತ್ತೇನೆ. ಇಂತಹ ಅಭಿನಂದನ ಸಮಾರಂಭದಲ್ಲಿ ಪಾಲ್ಗೊಳ್ಳುವುದರೊಂದಿಗೆ ಈವೊತ್ತಿನ ಕನ್ನಡಪರ ಸಂಘಗಳ ಸಮಾವೇಶದ ಅಧ್ಯಕ್ಷತೆಯ ಗೌರವವನ್ನು ನನಗೆ ದಯಪಾಲಿಸಿದ ಅಭಿನಂದನ ಸಮಿತಿಯ ಗೌರವಾಧ್ಯಕ್ಷರು, ಸದಸ್ಯರು, ಹಾಗೂ ನನ್ನ ಭಾಷಣವನ್ನು ಸಹಿಸಿಕೊಂಡಿರುವ ಸಹೃದಯರು ಎಲ್ಲರಿಗೂ ಕೃತಜ್ಞತಾಪೂರ್ವಕ ಧನ್ಯವಾದವನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

'ಅವತಂಸ' ೨೦೧೨

ಆರ್.ಎಲ್.ಎಸ್. ಹಾಯ್‌ಸ್ಕೂಲ್ : ಮರೆಯಲಾರದ ಕೆಲವು ನೆನಪುಗಳು

ನಾನು ಮುಲ್ಕೀ ಪರೀಕ್ಷೆ ಪಾಸಾಗಿ ೧೯೪೧ರಲ್ಲಿ ಹಾಯ್‌ಸ್ಕೂಲ್ ಶಿಕ್ಷಣಕ್ಕಾಗಿ ಧಾರವಾಡಕ್ಕೆ ಬಂದೆ. ಮುರುಘಾಮಠದ ಉಚಿತ ಪ್ರಸಾದನಿಲಯದಲ್ಲಿ ನನಗೆ ಪ್ರವೇಶ ದೊರೆಯಿತು, ಹಾಗೆಯೇ ಆರ್.ಎಲ್.ಎಸ್. ಹಾಯ್‌ಸ್ಕೂಲಿನಲ್ಲಿ ಕೂಡ. ರಾಜಾ ಲಖಮಗೌಡ ಸರದೇಸಾಯಿ ಹಾಯ್‌ಸ್ಕೂಲನ್ನು ಹೀಗೆ ಇಂಗ್ಲಿಷ್‌ನಲ್ಲಿ ಸಂಕ್ಷಿಪ್ತವಾಗಿ ಕರೆಯಲಾಗುತ್ತಿತ್ತು. ಸಾಮಾನ್ಯವಾಗಿ ಪ್ರಾಥಮಿಕ ಶಾಲೆಯಲ್ಲಿ ನಾಲ್ಕನೆಯ ಇಯತ್ತೆ ಪಾಸಾದ ಮೇಲೆ ಕೆಲವು ವಿದ್ಯಾರ್ಥಿಗಳು ಹಾಯ್‌ಸ್ಕೂಲಿನ ಪ್ರಥಮ ತರಗತಿಗೆ ಸೇರಿಕೊಳ್ಳುತ್ತಿದ್ದರು. ಕನ್ನಡ ಮುಲ್ಕೀಪರೀಕ್ಷೆ ಪಾಸಾದ ನಮಗೆ ಇಂಗ್ಲಿಷ್ ವಿಷಯವೊಂದನ್ನೇ ಒಂದು ವರ್ಷ ಕಲಿಯಬೇಕಾಗುತ್ತಿತ್ತು. ಅದಕ್ಕೆ ಪಿ.ಎಸ್.ಎಲ್.ಸಿ. (Primary school leaving certificate) ಕ್ಲಾಸ್ ಎಂದು ಕರೆಯಲಾಗುತ್ತಿತ್ತು. ಆಗ ಆರ್.ಎಲ್.ಎಸ್. ಹಾಯ್‌ಸ್ಕೂಲಿನಲ್ಲಿ ನಮ್ಮ ಕ್ಲಾಸನ್ನು ಪ್ರತ್ಯೇಕ ಕೋಣೆಯಲ್ಲಿ ತೆಗೆದುಕೊಳ್ಳುತ್ತಿದ್ದರು. ಆ ಕೋಣೆ ಆಗಿನ ಮುಖ್ಯದ್ವಾರದ ಬದಿಗೆ, ಲಿಂಗಾಯತ ಟೌನ್‌ಹಾಲಿನ ಸಮೀಪ ಎದುರಿಗಿತ್ತು. (ಅದಕ್ಕೆ 'ಹಡ್ಸನ್ ಲೈಬ್ರರಿ' ಎಂದೂ ಹೆಸರಿತ್ತು.) ಆ ಕೋಣೆಯ ಎದುರಿಗೆ ಲಿಂಗರಾಜ ದೇಸಾಯಿಯವರ ಎದೆಮಟ್ಟದ ಹಾಲುಗಲ್ಲಿನ ಪ್ರತಿಮೆ ಇತ್ತು. (ಈಗಲೂ ಇದೆ)

ನಮ್ಮ ವರ್ಗಕ್ಕೆ ಸಿದ್ಧವೀರಣ್ಣ ಮಾಸ್ತರರೊಬ್ಬರೇ ಇಂಗ್ಲಿಷ್ ಬೋಧಿಸುತ್ತಿದ್ದರು. ಅವರು ಕೇವಲ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾಗಿದ್ದರೂ ಇಂಗ್ಲಿಷನ್ನು ಚೆನ್ನಾಗಿಯೇ, ಕಲಿಸುತ್ತಿದ್ದರು. ಧೋತರ, ಕೋಟು, ರುಮಾಲು ಅವರ ಸಾಮಾನ್ಯ ವೇಷವಾಗಿತ್ತು. ಪ್ರಿನ್ಸಿಪಾಲ್ ಶಿರೋಳ ಒಬ್ಬರೇ ಸೂಟ್ ಹಾಕಿ, ಟಾಯ್ ಕಟ್ಟುತ್ತಿದ್ದರು. ಹೆಡ್‌ಮಾಸ್ಟರ್ ವೀ.ರು. ಕೊಪ್ಪಳ ಸದಾ ಖಾದಿ ತೊಡುತ್ತಿದ್ದರು. ಮೂರು 'ರೀಡರ್' ಮತ್ತು ಅಂಕಲೆ ಭಾಷಾಂತರದ (ಇಂಗ್ಲಿಷ್-ಕನ್ನಡ) ಎರಡು ಪುಸ್ತಕಗಳನ್ನು ಸಿದ್ಧವೀರಣ್ಣ ಮಾಸ್ತರು ಒಂದೇ ವರ್ಷದಲ್ಲಿ ಕಲಿಸಿ ಮುಗಿಸುತ್ತಿದ್ದರು. ಅಂದರೆ, ಅದು ಹಾಯ್‌ಸ್ಕೂಲ್ ಮೂರನೆಯ ತರಗತಿಯ ಇಂಗ್ಲಿಷಿಗೆ ಸಮಾನವಾಗಿತ್ತು. ನಮ್ಮ ಕ್ಲಾಸಿನಲ್ಲಿ ೪೦-೫೦ ವಿದ್ಯಾರ್ಥಿಗಳಾದರೂ ಇರುತ್ತಿದ್ದೆವು. ನಾವು ಕುಳಿತುಕೊಳ್ಳುವ ಡೆಸ್ಕಿನ ಎರಡೂ ಮೂಲೆಯಲ್ಲಿಯೇ ಮಸಿದೌತಿಯನ್ನು ಇಡುವ ವ್ಯವಸ್ಥೆಯಿತ್ತು.

ಅದರಲ್ಲಿಯೇ ಲೇಖನಿ(ಟಾಕು) ಅದ್ದಿ ನಾವು ಬರವಣಿಗೆ ಮಾಡುತ್ತಿದ್ದೆವು. ಆಗ ಪೌಂಟನ್‌ಪೆನ್ನಿಗೆ ಒಂದು ಬಗೆಯ ನಿಷೇಧವಿತ್ತು. ನಾವು ಕ್ಲಾಸಿಗೆ ಬರುವಷ್ಟರಲ್ಲಿ ಸ್ಕೂಲಿನ ಜವಾನ (ಸಿಪಾಯಿ) ದೌತಿಯಲ್ಲಿ ಮಸಿ ಹಾಕಿ ಇಟ್ಟಿರುತ್ತಿದ್ದ.

ಸಿದ್ದವೀರಣ್ಣ ಮಾಸ್ತರು ಕೇಳಿದ ಪ್ರಶ್ನೆಗಳಿಗೆಲ್ಲ ನಾನು ಸರಿಯಾದ ಉತ್ತರ ಹೇಳುತ್ತಿದ್ದೆನಾದ್ದರಿಂದ ನನ್ನ ಮೇಲೆ ಅವರಿಗೆ ಹೆಚ್ಚು ಪ್ರೀತಿ ಮತ್ತು ಅಭಿಮಾನವಿತ್ತು. ಮೂರನೆಯ ತರಗತಿಯ ವಿದ್ಯಾರ್ಥಿಗಳಂತೆ ನಮಗೂ ಸರಕಾರದ ಸ್ಕಾಲರ್‌ಶಿಪ್ ಪರೀಕ್ಷೆಗೆ ಕುಳಿತುಕೊಳ್ಳುವ ಅವಕಾಶವಿತ್ತು. ಆಗ ಆ ಪರೀಕ್ಷೆಗೆ ಎ.ಕೆ. ಗರ್ಲ್ಸ್ ಹಾಯ್‌ಸ್ಕೂಲಿನಲ್ಲಿ (ಈಗಿನ ಯುನಿವ್ಹರ್ಸಿಟಿ ಪಬ್ಲಿಕ್ ಸ್ಕೂಲ್) ವ್ಯವಸ್ಥೆ ಮಾಡಿರುತ್ತಿದ್ದರು. ನಾನು ಆ ಪರೀಕ್ಷೆಯಲ್ಲಿ ಇಂಟರ್ ಮೀಡಿಯೇಟ್ ವರ್ಗದಲ್ಲಿ ಪ್ರಥಮ ರ್‍ಯಾಂಕ್ ಪಡೆದು ಪಾಸಾಗಿದ್ದೆ. ಇದು ಶಿಕ್ಷಕರಿಗೆಲ್ಲ ಅಭಿಮಾನದ ವಿಷಯವಾಗಿತ್ತೆಂದು ಸ್ಟಾಫ್‌ರೂಮಿನಿಂದ ಬಂದ ಸಿದ್ಧವೀರಣ್ಣ ಮಾಸ್ತರು ನನಗೆ ಹೇಳಿದರು. ಯಾಕೆಂದರೆ ಹಾಯ್‌ಸ್ಕೂಲಿನ ಮುಖ್ಯ ಕಟ್ಟಡದ ಕಡೆಗೆ ನಮಗೆ ಹೋಗುವ ಪ್ರಸಂಗವೇ ಬರುತ್ತಿರಲಿಲ್ಲ. ಆಗ ಗವ್ಹರ್ಮೆಂಟ್ ಸ್ಕಾಲರಶಿಪ್ ೫ ರೂ. ಇರುತ್ತಿತ್ತು. ಮುಂದೆ ಕಾಲೇಜಿಗೆ ಹೋದ ಮೇಲೆ ಅದು ಹೆಚ್ಚಾಯಿತು. ಆ ಮಾತು ಬೇರೆ. ಶಿರಸಂಗಿ-ಲಿಂಗಾಯತ ಫಂಡಿನಿಂದಲೂ ನನಗೆ ಪ್ರತಿ ತಿಂಗಳು ವಿದ್ಯಾರ್ಥಿ ವೇತನ ದೊರೆಯುತ್ತಿತ್ತು. ಅದೇನೂ ಅಷ್ಟು ಹೆಚ್ಚಿರಲಿಲ್ಲ. ನನ್ನ ತಂದೆಯವರು ಪ್ರಾಥಮಿಕ ಶಾಲಾ ಶಿಕ್ಷಕ ವೃತ್ತಿಯಿಂದ ಆ ಹೊತ್ತಿಗೆ ನಿವೃತ್ತರಾಗಿದ್ದರು. ಅವರಿಗೆ ಕೇವಲ ೧೮ರೂ. ಪಿಂಚಣಿ ಹಣ ಬರುತ್ತಿತ್ತು. ಬೇರೆ ಯಾವ ಸಂಪನ್ಮೂಲಗಳೂ ಅವರಿಗೆ ಇರಲಿಲ್ಲ. ಮನೆಯಿಂದ ನನ್ನ ಶಿಕ್ಷಣಕ್ಕೆ ಅವರು ಏನೂ ಖರ್ಚು ಮಾಡುವ ಪ್ರಸಂಗ ಬರಲಿಲ್ಲ. ಪಿ.ಎಸ್.ಎಲ್.ಸಿ. ಪರೀಕ್ಷೆ ಪಾಸಾದ ನಂತರ ಹಾಯ್‌ಸ್ಕೂಲ್ ನಾಲ್ಕನೆಯ ತರಗತಿಗೆ ಯಥಾ ಪ್ರಕಾರ ಪ್ರವೇಶ ದೊರೆಯಿತು. ನಾನು ಈ ಪರೀಕ್ಷೆಯನ್ನೂ ಹಿಡಿದು ಮ್ಯಾಟ್ರಿಕ್ ಪರೀಕ್ಷೆ ಮುಗಿಯುವವರೆಗೂ ಯಾರಿಗೂ ಪ್ರಥಮ ಸ್ಥಾನವನ್ನು ಬಿಟ್ಟುಕೊಟ್ಟಿರಲಿಲ್ಲ.

ನಾನು ಪಿ.ಎಸ್.ಎಲ್.ಸಿ. ಕ್ಲಾಸಿನಲ್ಲಿದ್ದಾಗಲೆ ಹಾಯ್‌ಸ್ಕೂಲ್ ಮಿಸೆಲೆನಿ(ಲೇಖನಗಳ ಸಂಕಲನ ಸಂಚಿಕೆ) ಮುದ್ರಣವಾಗಲು ಪ್ರಾರಂಭವಾಯಿತು. ಅದಕ್ಕಾಗಿ ವಿದ್ಯಾರ್ಥಿಗಳೂ ತಮ್ಮ ಬರೆಹಗಳನ್ನು ಕಳಿಸಬಹುದೆಂಬ ನೋಟೀಸನ್ನು (ಸೂಚನಾಪತ್ರ) ಎಲ್ಲ ಕ್ಲಾಸುಗಳಿಗೂ ಕಳಿಸಲಾಗಿತ್ತು. ಆ ವರ್ಷ ನನ್ನ ಎರಡು ಕವಿತೆಗಳು ಒಂದು ಲೇಖನವೂ ಮಿಸೆಲೆನಿಯಲ್ಲಿ ಪ್ರಕಟವಾದವು. ಮುಂದೆ ಪ್ರತಿವರ್ಷ ನನ್ನ ಗದ್ಯ-ಪದ್ಯಗಳನ್ನು ಪ್ರಕಟಿಸಿ, ಮುಖ್ಯಾಧ್ಯಾಪಕರಾದ ವೀ.ರು.ಕೊಪ್ಪಳ ಅವರು ನನ್ನ ಬರವಣಿಗೆಗೆ ಪ್ರೋತ್ಸಾಹ ನೀಡಿದರು, ಹಾಗೂ ಹಾಯ್‌ಸ್ಕೂಲ್ ಲೈಬ್ರರಿಯಿಂದ

ಮಧುರ ಚೆನ್ನರ 'ನನ್ನ ಗಲ್ಲ' ಕುವೆಂಪು ಅವರ 'ನವಿಲು' ಬೇಂದ್ರೆಯವರ 'ಗರಿ' ಕವನ ಸಂಕಲನಗಳನ್ನು ಓದಲು ನೀಡಿದರು. ಬಿ.ಎಂ. ಶ್ರೀಯವರು ಸಂಪಾದಿಸಿದ 'ಕನ್ನಡ ಬಾವುಟ' ನನಗೆ ಬಹುಮಾನವಾಗಿ ದೊರೆತಿತ್ತು. ಇವೆಲ್ಲವುಗಳ ಓದು ನನಗೆ ಕವಿತೆ ಬರೆಯಲು ಹೆಚ್ಚಿನ ಪ್ರೇರಣೆ ನೀಡಿದವು. ನಾನು ಪ್ರತಿದಿನ ಕ್ಲಾಸು ಮುಗಿದೊಡನೆ ಕರ್ನಾಟಕ ವಿದ್ಯಾವರ್ಧಕ ಸಂಘದ ಶಾಂತೇಶ ವಾಚನಾಲಯಕ್ಕೆ ಹೋಗಿ, ದಿನಪತ್ರಿಕೆ, ವಾರ ಪತ್ರಿಕೆ, ಮಾಸ ಪತ್ರಿಕೆಗಳನ್ನು ತಿರುವಿ ಹಾಕುತ್ತಿದ್ದೆ. (ಅದಕ್ಕೀಗ ರಾ.ಹ. ದೇಶಪಾಂಡೆ ಸಭಾಗೃಹವೆಂದು ನಾಮಕರಣ ಮಾಡಲಾಗಿದೆ.) ಸಂಘದ ಅಟ್ಟದ ಮೇಲಿನ ಹಾಲಿನಲ್ಲಿ ಆಗೀಗ ಭಾಷಣಗಳು ನಡೆಯುತ್ತಿದ್ದವು. ಬೇಂದ್ರೆ, ಬೆಟಗೇರಿ, ಅ.ನ.ಕೃ. ಮೊದಲಾದವರ ಭಾಷಣಗಳನ್ನು ನಾನು ಅಲ್ಲಿಯೇ ಕೇಳಿದ್ದು, ಏನೇ ಕಾರ್ಯಕ್ರಮವಿದ್ದರೂ ಕೊನೆಯಲ್ಲಿ ಕಾವ್ಯಗಾಯನವಂತೂ ಇದ್ದೇ ಇರುತ್ತಿತ್ತು. ನಾನು ವಾಸಮಾಡುತ್ತಿದ್ದ ಮುರುಘಾಮಠಕ್ಕೂ ಪ್ರೊ. ಬಸವನಾಳರು, ಪ್ರೊ. ಮಾಳವಾಡರು, ಉತ್ತಂಗಿ ಚೆನ್ನಪ್ಪನವರು ಆಗಾಗ ಬಂದು ಭಾಷಣ ಮಾಡುತ್ತಿದ್ದರು. ಮಲ್ಲಿಕಾರ್ಜುನ ಮನಸೂರ, ಬಸವರಾಜ ರಾಜಗುರು ಅವರ ವಚನ ಸಂಗೀತವೂ ಶ್ರಾವಣ ಮಾಸದಲ್ಲಿ ಇರುತ್ತಿದ್ದವು. ನನ್ನ ವಚನಸಾಹಿತ್ಯದ ಅಭ್ಯಾಸಕ್ಕೆ ಇವೆಲ್ಲ ಪ್ರಚೋದನೆ ನೀಡಿದವು.

ನಾನು ನಾಲ್ಕನೆಯ ತರಗತಿಯಲ್ಲಿದ್ದಾಗಲೇ (೧೯೪೨) ಕ್ವಿಟ್ ಇಂಡಿಯಾ ಚಳವಳಿ ಪ್ರಾರಂಭವಾಯಿತು. ಶಾಲೆ, ಕಾಲೇಜುಗಳ ಕೆಲವು ವಿದ್ಯಾರ್ಥಿಗಳು ಹರತಾಳ ಸುರು ಮಾಡಿದ್ದರಿಂದ ನಮ್ಮ ಹಾಯ್‌ಸ್ಕೂಲಿಗೂ ಕೆಲ ದಿನ ರಜೆ ಕೊಟ್ಟಿದ್ದರು. ಕಡಪಾ ಮೈದಾನದಲ್ಲಿ ರಾಜಕೀಯ ಧುರೀಣರ ಭಾಷಣ ಕೇಳಲು ನಾನೂ ಹೋಗುತ್ತಿದ್ದೆ. ಮುಂದೆ ಕೆಲ ಕಾಲದ ನಂತರ ಯಥಾಪ್ರಕಾರ ತರಗತಿಗಳು ಪ್ರಾರಂಭವಾದವು. ನಮಗೆ ಸಾಯನ್ಸ ಹೇಳುತ್ತಿದ್ದ ಪ್ರಿನ್ಸಿಪಾಲ್ ಶಿರೋಳ ಅವರು ಪಕ್ಕದ ಹಾಲಿನಲ್ಲಿಯ ಲ್ಯಾಬೋರೇಟರಿಯಲ್ಲಿ ಪ್ರಯೋಗಗಳನ್ನು ಮಾಡಿಸುತ್ತಿದ್ದರು. ಕೆಲ ದಿನಗಳ ನಂತರ ಅವರು ಬೆಳಗಾವಿಯ ಲಿಂಗರಾಜ ಕಾಲೇಜಿಗೆ ಲೆಕ್ಚರರ್ ಎಂದು ಹೋದ ಮೇಲೆ ಪ್ರಿನ್ಸಿಪಾಲ್ ಹುದ್ದೆಯನ್ನೇ ತೆಗೆದು ಹಾಕಲಾಯಿತು. ಮುಖ್ಯಾಧ್ಯಾಪಕರಾದ ಕೊಪ್ಪಳ ಅವರು ಕೊನೆಯವರೆಗೂ ನಮಗೆ ಕನ್ನಡ ಮತ್ತು ಸಂಸ್ಕೃತ ವಿಷಯಗಳನ್ನು ಹೇಳಿದರು. ಎರಡರಲ್ಲಿಯೂ ಅವರು ಬಲ್ಲಿದರಾಗಿದ್ದರು. ೫, ೬ ಮತ್ತು ೭ನೆಯ ತರಗತಿಗಳಿಗೆ ದೇಸಾಯಿ ಮಾಸ್ತರು ಮಥೆಮೆಟಿಕ್ಸ್ ವಿದ್ಯಾರ್ಥಿಗಳಿಗೆ ತಿಳಿಯುವಂತೆ ಹೇಳುತ್ತಿದ್ದರು. ಆಗ ಸಂಸ್ಕೃತ ಕಠಿಣವೆನಿಸಿದರೆ ಅರ್ಧಮಾಗದಿ(ಪ್ರಾಕೃತ) ತೆಗೆದುಕೊಳ್ಳಲು ಅವಕಾಶವಿತ್ತು. ಅದನ್ನು ಬೇರೊಬ್ಬ ಶಿಕ್ಷಕರು ಹೇಳುತ್ತಿದ್ದರು. ಎಸ್.ಎಂ. ಹುಣಶ್ಯಾಳ ಎಂಬವರು ಇಂಗ್ಲಿಷ್ ಮತ್ತು ಇತಿಹಾಸ ಹೇಳುತ್ತಿದ್ದರು. ಅವರು ಎಂ.ಎನ್. ರಾಯ್

ಅವರ ರ್‍ಯಾಡಿಕಲ್ ಡೆಮೊಕ್ರಟಿಕ್ ಪಕ್ಷದ ಸದಸ್ಯರಾಗಿದ್ದರೆಂದು ತೋರುತ್ತದೆ. ಆ ಪಕ್ಷದ ಕಛೇರಿ ಸುಭಾಷ್ ರೋಡಿನಲ್ಲಿತ್ತು. 'ಬೆಳಕು' ಎಂಬ ವಾರಪತ್ರಿಕೆಯನ್ನು ಕಛೇರಿಯಿಂದ ಹೊರಡಿಸುತ್ತಿದ್ದರು. ಅದರಲ್ಲಿ ಹುಣಶ್ಯಾಳ ಅವರ ಲೇಖನಗಳೂ ಪ್ರಕಟವಾಗುತ್ತಿದ್ದವು. ಮುಂದೆ ಅವರು ರಾಯಚೂರಿನ ಹಮ್‌ದರ್ದ್ ಹಾಯ್‌ಸ್ಕೂಲಿನ ಪ್ರಿನ್ಸಿಪಾಲರಾಗಿ ಹೋದರು. ಇಲ್ಲಿದ್ದಾಗಲೇ Unification of Karnatak ಎಂಬ ಚಿಕ್ಕ ಪುಸ್ತಕವನ್ನು ಬರೆದಿದ್ದರು.

ಹಾಯ್‌ಸ್ಕೂಲಿನ ಎಡಗಡೆಗೆ ಕೊನೆಯ ಹಾಲ್‌ನಲ್ಲಿ ಡ್ರಾಯಿಂಗ್‌ಕ್ಲಾಸ್ ನಡೆಯುತ್ತಿದ್ದವು. ಗಿರಿಯಪ್ಪನವರ ಚಿತ್ರಕಲೆಯ ಶಿಕ್ಷಕರಾಗಿದ್ದರು. ಅದು ಐಚ್ಛಿಕ ವಿಷಯವಾಗಿದ್ದು ಆಸ್ಥೆ ಇದ್ದ ವಿದ್ಯಾರ್ಥಿಗಳು ಮಾತ್ರ ಆ ಕ್ಲಾಸಿಗೆ ಹೋಗುತ್ತಿದ್ದರು. ಪರೀಕ್ಷೆ ಮಾತ್ರ ಸರಕಾರ ನಡೆಸುತ್ತಿತ್ತು. ಚಿತ್ರಕಲೆ ವಿಷಯದಲ್ಲಿ ನನಗೆ ಆಸ್ಥೆ ಇತ್ತು. ಎಲಿಮೆಂಟರಿ ಮತ್ತು ಇಂಟರ್‌ಮೀಡಿಯೇಟ್ ಡ್ರಾಯಿಂಗ್ ಪರೀಕ್ಷೆಯಲ್ಲಿ ನಾನೂ ಪಾಸಾದೆ. ನನ್ನ ಇಬ್ಬರು ಆತ್ಮೀಯ ಗೆಳೆಯರಾದ ಇಚ್ಚಂಗಿ ಮತ್ತು ಬೆಟಗೇರಿಯವರೂ ಪಾಸಾಗಿದ್ದರು. ಯಾವತ್ತೂ ನಾವು ಮೂವರೂ ಕೂಡಿಯೇ ಇರುತ್ತಿದ್ದೆವು. ನಮ್ಮ ಕ್ಲಾಸಿನ ಕೆಲವು ವಿದ್ಯಾರ್ಥಿಗಳು ನಮಗೆ 'ತ್ರಿ ಮಸ್ಕೆಟಿಯರ್ಸ್' ಎಂದು ತಮಾಷೆ ಮಾಡುತ್ತಿದ್ದರು. ಗಿರಿಯಪ್ಪನವರ ಮಾಸ್ತರು ಡ್ರಾಯಿಂಗ್ ಕ್ಲಾಸಿನ ವಿದ್ಯಾರ್ಥಿಗಳನ್ನ ಹಾಲಭಾವಿ ಆರ್ಟ್ಸ್ ಸ್ಟುಡಿಯೋಗೆ ಒಮ್ಮೆ ಕರೆದುಕೊಂಡು ಹೋಗಿದ್ದರೆಂದು ನೆನಪು. ಮಂಗಳವಾರ ಸ್ಕೂಲಿಗೆ ಒಪ್ಪೊತ್ತು ಇರುತ್ತಿದ್ದುದರಿಂದ ಅಂದು ಬೆಳಿಗ್ಗೆ ದೈಹಿಕ ಶಿಕ್ಷಕರಾಗಿದ್ದ(ಪಿ.ಟಿ.) ಪಟ್ಟಣಶೆಟ್ಟಿಯವರು ಕಡ್ಡಾಯವಾಗಿ ಸಾಮೂಹಿಕ ಡ್ರಿಲ್ ಮಾಡಿಸುತ್ತಿದ್ದರು. ನೋಡಲು ಸ್ವಲ್ಪ ದಪ್ಪವಾಗಿದ್ದ ಅವರು ತಮ್ಮ ಕೆಲಸದಲ್ಲಿ ಬಹಳ ಕಟ್ಟುನಿಟ್ಟಾಗಿರುತ್ತಿದ್ದರು.

ರೀಗಲ್ ಮತ್ತು ವಿಜಯ ಟಾಕೀಜುಗಳು ನಮ್ಮ ಮನರಂಜನೆಯ ಸ್ಥಳಗಳಾಗಿದ್ದವು. ನಾದಿರಾಳ ಸ್ಟಂಟ್ ಚಿತ್ರಗಳನ್ನು ನೋಡಿದಾಗ ಅಚ್ಚರಿಯಾಗುತ್ತಿತ್ತು. ಆಗಲೇ ಕನ್ನಡ ಸಿನೆಮಾಗಳು ಒಂದೊಂದಾಗಿ ಬರತೊಡಗಿದ್ದವು. ಸುಭದ್ರಾ, ಜೀವನನಾಟಕ, ಚಂದ್ರಹಾಸ, ವಸಂತಸೇನೆ, ಸತ್ಯಹರಿಶ್ಚಂದ್ರ ಮೊದಲಾದ ಕನ್ನಡ ಚಲನಚಿತ್ರಗಳ ಎಷ್ಟೋ ಹಾಡುಗಳೂ ಸಂಭಾಷಣೆಗಳೂ ನನಗೆ ಬಾಯಿಪಾಠವಾಗಿರುತ್ತಿದ್ದವು. ಕ್ಲಾಸಿನಲ್ಲಿ ಆಫ್ ಪೀರಿಯಡ್ ಇದ್ದಾಗ ಬೇರೆ ಶಿಕ್ಷಕರು ಬಂದಾಗ ವಿದ್ಯಾರ್ಥಿಗಳ ಕನ್ನಡ ಸಿನಿಮಾ ಸಂಭಾಷಣೆಗಳ ಮತ್ತು ಹಾಡುಗಳ ಪ್ರದರ್ಶನ ನಡೆಯುತ್ತಿತ್ತು. ಧಾರವಾಡದ ಎಲ್ಲ ಹಾಯ್‌ಸ್ಕೂಲುಗಳ ಒಂದು 'ಬೋರ್ಡ್' ಇತ್ತೆಂದು ತೋರುತ್ತದೆ. ವಾರ್ಷಿಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳೆಲ್ಲ ಅಲ್ಲಿಂದಲೇ ಬರುತ್ತಿದ್ದವು.

ಮ್ಯಾಟ್ರಿಕ್ ಪರೀಕ್ಷೆಯ ಮೊದಲು ಪ್ರಿಲಿಮ್ನರಿ ಪರೀಕ್ಷೆಯೊಂದು ನಡೆಯುತ್ತಿತ್ತು. ಆ ಪರೀಕ್ಷೆಯಲ್ಲಿ ಪಾಸಾದವರಿಗೇ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ದೊರೆಯುತ್ತಿತ್ತು. ಆಗ ಪರೀಕ್ಷೆಯನ್ನು ಮುಂಬಯಿ ವಿಶ್ವವಿದ್ಯಾಲಯವೇ ನಡೆಸುತ್ತಿತ್ತು. ಭಾಗೀರಥಿ ದೇವಿ ಹಾಸ್ಟೆಲ್‌ನಲ್ಲಿ ನಾನು ಎರಡು ವರ್ಷವಿದ್ದೆ. ಮೊದಲನೆಯ ವರ್ಷ ವ್ಹಿ.ಎಫ್. ಗಂಗಾಧರಮಠ ಅವರು ಸಹಪಾಠಿಯಾಗಿ ನನ್ನ ಜೊತೆಗಿದ್ದರು. ಮರು ವರ್ಷ ಶಿವಪುತ್ರ ಅನಾಡ ಅವರು ಸಹಪಾಠಿಯಾಗಿ ನನ್ನ ಕೋಣೆಯಲ್ಲಿದ್ದರು. ಇಬ್ಬರೂ ನನ್ನ ಆತ್ಮೀಯ ಗೆಳೆಯರು. ಗಂಗಾಧರಮಠರ ತಂದೆಯವರು ಹೆಬ್ಬಳ್ಳಿಯಿಂದ ಆಗಾಗ ಅವರನ್ನು ಭೆಟ್ಟಿಯಾಗಿ ಯೋಗಕ್ಷೇಮವನ್ನು ವಿಚಾರಿಸಲು ಬರುತ್ತಿದ್ದರು. ಅನಾಡರು ಬೈಲಹೊಂಗಲದವರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ, ಕೆಲದಿನ ಜೈಲುವಾಸವನ್ನೂ ಅನುಭವಿಸಿದ್ದರು. ನಾವಿಬ್ಬರೂ ಒಂದೇ ಬಣ್ಣದ ಖಾದಿ ಜುಬ್ಬ ತೊಡುತ್ತಿದ್ದೆವು. ಸಾಹಿತ್ಯದ ನನ್ನ ಓದುವ ಹವ್ಯಾಸ ಅವರಿಗೂ ಬಡಿದುಕೊಂಡಿತು. ಅ.ನ.ಕೃ. ಕಾದಂಬರಿಗಳೆಂದರೆ ಅನಾಡರಿಗೆ ವಿಪರೀತ ಹುಚ್ಚು. ಬಸವರಾಜ ಕಟ್ಟೀಮನಿಯವರು ಸಂಪಾದಕರಾಗಿದ್ದ 'ಉಷಾ' ಮಾಸಪತ್ರಿಕೆ ಪ್ರಗತಿಶೀಲ ಸಾಹಿತಿಗಳ ಲೇಖನಗಳನ್ನೊಡಗೊಂಡಿರುತ್ತಿತ್ತು. ನಾವಿಬ್ಬರೂ ಅದನ್ನು ತಪ್ಪದೆ ಓದುತ್ತಿದ್ದೆವು.

ಸಾಹಿತ್ಯದಲ್ಲಿ ಆಸಕ್ತಿಯಿದ್ದ ನಾವು ಕೆಲವು ಗೆಳೆಯರು ಕೂಡಿ 'ಕಿರಿಯರಬಳಗ' ಎಂಬ ಸಂಘವನ್ನು ಮಾಡಿಕೊಂಡು, ಕೈಬರೆಹದ ಪತ್ರಿಕೆಯನ್ನೂ ಆಗಾಗ ತರುತ್ತಿದ್ದೆವು. ಪ್ರೊ. ಶಿ.ಶಿ. ಬಸವನಾಳರು ರಬಕವಿಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಿಯೋಜಿತ ಅಧ್ಯಕ್ಷರಾದಾಗ (೧೯೪೪) 'ಬಳಗ'ದ ವತಿಯಿಂದ ಲಿಂಗಾಯತ ಟೌನ್‌ಹಾಲಿನಲ್ಲಿ ಅವರಿಗೆ ಸನ್ಮಾನ ಸಮಾರಂಭವೊಂದನ್ನು ಏರ್ಪಡಿಸಿದ್ದೆವು. ಈ ಕಾರ್ಯಕ್ರಮ ಎಲ್ಲರಿಗೂ ಬಹಳ ಮೆಚ್ಚಿಗೆಯಾಯಿತು. ಆ ಸಂದರ್ಭದಲ್ಲಿ ನಾನೂ ಮಾತನಾಡಿ ಬಸವನಾಳರ ಬಗ್ಗೆ ನಾನು ಬರೆದ ಕವಿತೆಯನ್ನೂ ಓದಿದೆ. ನಾನು ಇಬ್ಬರು ಗೆಳೆಯರೊಂದಿಗೆ ರಬಕವಿ ಸಾಹಿತ್ಯ ಸಮ್ಮೇಳನಕ್ಕೂ ಹೋಗಿದ್ದೆ, ಹಿರಿಯ ಸಾಹಿತಿಗಳಾದ ಬಿ.ಎಂ.ಶ್ರೀ. ಮಾಸ್ತಿ, ಜಿ.ಪಿ. ರಾಜರತ್ನಂ, ವಿ.ಕೃ. ಗೋಕಾಕ, ಸಿಂಪಿಲಿಂಗಣ್ಣ ಮೊದಲಾದ ಸಾಹಿತಿಗಳನ್ನು ಅಲ್ಲಿಯೇ ಮೊದಲು ನೋಡಿದ್ದು.

ಪ್ರೊ. ಬಸವನಾಳರ ಜೊತೆಗೆ ಬುದ್ದಯ್ಯ ಸ್ವಾಮಿ ಪುರಾಣಿಕಮಠ, ವೀರಭದ್ರಪ್ಪ, ಹಾಲಭಾವಿ, ಚನ್ನಪ್ಪ ಉತ್ತಂಗಿಯವರು ದಿನವೂ ಸಂಜೆ ಲಿಂಗಾಯತ ಟೌನ್‌ಹಾಲಿನಲ್ಲಿ ಕೂಡುತ್ತಿದ್ದರು. ಅವರ ಜೊತೆಗೆ ಪ್ರೊ. ಮಾಳವಾಡ, ಎನ್.ಪಿ. ಪಾಟೀಲು ವಕೀಲರು, ವೀ.ರು. ಕೊಪ್ಪಳ, ಕಗಿದೆಪ್ಪ ಹುರಳಿ, ಎಂ.ಜಿ. ವಿರುಪಾಕ್ಷನ್, ಮೊದಲಾದವರು

ಮಾತುಕತೆಯಾಡುತ್ತ, ಚರ್ಚಿಸುತ್ತ ಕುಳಿತಿರುತ್ತಿದ್ದರು. ಇವರೆಲ್ಲರಿಗೂ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ಮಲ್ಲಾಬಾದಿ ವೀರಭದ್ರಪ್ಪನವರು ಹಾಯ್‌ಸ್ಕೂಲ್ ಕಂಪೌಂಡಿನಲ್ಲಿಯ ಒಂದು ಚಿಕ್ಕ ಮನೆಯಲ್ಲಿ ಸಂಸಾರದೊಂದಿಗೆ ಇರುತ್ತಿದ್ದರು. ನಾವು ಕ್ಲಾಸು ಮುಗಿಸಿ ಸಂಜೆಗೆ ಮರಳಿ ಹೋಗುತ್ತಿದ್ದಾಗ ಅವರ ಮಾತುಗಳ ಕಿವಿಗೆ ಬೀಳುತ್ತಿದ್ದವು.

ಶಾಲೆಯಲ್ಲಿದ್ದ ಇಬ್ಬರು ಮೂವರು ಸಿಪಾಯಿಗಳಲ್ಲಿ ಪ್ರತಿಯೊಂದು ಪೀರಿಯಡ್ ಮುಗಿದೊಡನೆ ಗಂಟೆ ಹೊಡೆಯುವ ಕೆಲಸವನ್ನು ಸೀನಿಯರ್ ಪ್ಯೂನ್ ಮಡಿವಾಳಪ್ಪನದಾಗಿತ್ತು. ಅವನು ಒಳ್ಳೆಯವನಾಗಿದ್ದರೂ ವಿದ್ಯಾರ್ಥಿಗಳ ಮೇಲೆ ಸ್ವಲ್ಪ ಅಧಿಕಾರವನ್ನೂ ಚಲಾಯಿಸುತ್ತಿದ್ದ. ನಮ್ಮ ಆಟದ ಸಾಮಾನುಗಳನ್ನಿಡುವ ಕೋಣೆಯ ಕೀಲಿಕೈ ಅವನ ಕಡೆಗೇ ಇರುತ್ತಿತ್ತು. ನಾವು ಕೆಲ ವಿದ್ಯಾರ್ಥಿಗಳು ಅವನನ್ನು ಕಾಡಿ, ಬೇಡಿ ಹಾಕಿಸ್ಟಿಕ್ಕು, ಫುಟ್‌ಬಾಲು ಮೊದಲಾದ ಆಟದ ಸಾಮಾನುಗಳನ್ನು ಪಡೆಯುತ್ತಿದ್ದೆವು. ನಾನು ಎರಡೂ ಆಟಗಳನ್ನು ಆಡುತ್ತಿದ್ದೆ. ಭಾಗೀರಥಿ ದೇವಿ ಹಾಸ್ಟೆಲ್‌ನ ಬದಿಯ ಹಿಂದಿನ ತಗ್ಗಿನಲ್ಲಿ ನಮ್ಮ ಆಟದ ಮೈದಾನವಿತ್ತು. ಸಮೀಪದಲ್ಲಿಯೇ ದುರ್ಗಾದೇವಿ ಗುಡಿಯಿತ್ತು. ಗುಡಿಗೆ ಹೋಗುವವರು ನಮ್ಮ ಪ್ಲೇಗ್ರೌಂಡಿನ ಅಂಚಿನ ಹಾದಿಯಲ್ಲಿ ಹಾದು ಹೋಗುತ್ತಿದ್ದರು. ಆಟ ಮುಗಿದ ಮೇಲೆ ಆಟದ ಸಾಮಾನುಗಳೆಲ್ಲವನ್ನು ಮಡಿವಾಳಪ್ಪನಿಗೆ ಒಪ್ಪಿಸಿ ಹೋಗುತ್ತಿದ್ದೆವು. ಆ ಮೈದಾನದಲ್ಲೀಗ ಹುರಕಡ್ಲಿ ಅಜ್ಜ ಮಹಿಳಾ ಮಹಾವಿದ್ಯಾಲಯ ಮತ್ತು ಬೇರೆ ಕಟ್ಟಡಗಳು ಬಂದಿವೆ. ನಮ್ಮ ಹಾಯ್‌ಸ್ಕೂಲಿನ ಹಾಕಿ ಟೀಮು ಆಗ ಬಹಳ ಬಲಶಾಲಿಯಾಗಿತ್ತು. ಪ್ರತಿ ವರ್ಷ ಧಾರವಾಡದ ಹಾಯ್‌ಸ್ಕೂಲ್ ಹಾಕಿ ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದವು. ಆಗ ಧಾರವಾಡ ಜೈಲಿನ ಹಾಕಿ ಗ್ರೌಂಡ್ ಚೆನ್ನಾಗಿ ಸುಸ್ಥಿತಿಯಲ್ಲಿದ್ದುದರಿಂದ ಅದನ್ನೇ ಸ್ಪರ್ಧೆಗೆ ಆಯ್ಕೆ ಮಾಡಲಾಗುತ್ತಿತ್ತು.

ಆಗ ಹಾಯ್‌ಸ್ಕೂಲ್ ಕಂಪೌಂಡಿನಲ್ಲಿ ಲಿಂಗಾಯತ ಟೌನ್‌ಹಾಲ್ ಮತ್ತು ಭಾಗೀರಥಿ ದೇವಿ ಹಾಸ್ಟೆಲ್ ಬಿಟ್ಟರೆ ಬೇರಾವ ಕಟ್ಟಡಗಳು ಇದ್ದಿಲ್ಲವಾದ್ದರಿಂದ ಸಾಕಷ್ಟು ಬಯಲಿತ್ತು. ಆಗಿನ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಪಟ್ಟಾಭಿಸೀತಾರಾಮಯ್ಯನವರ ಸಾರ್ವಜನಿಕ ಭಾಷಣವನ್ನು ಅಲ್ಲಿ ಏರ್ಪಡಿಸಲಾಗಿತ್ತು. ನವಕಲ್ಯಾಣ ಮಠದ ಕುಮಾರ ಸ್ವಾಮಿಗಳ ಉಪನ್ಯಾಸಗಳೂ ಒಮ್ಮೊಮ್ಮೆ ನಡೆಯುತ್ತಿದ್ದವು.

ಎಲ್ಲಕ್ಕೂ ಮಿಗಿಲಾದದ್ದೆಂದರೆ, ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ, ೩೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ೧೯೫೭ರಲ್ಲಿ, ಕುವೆಂಪು ಅವರ ಅಧ್ಯಕ್ಷತೆಯಲ್ಲಿ ಇದೇ ಸ್ಥಳದಲ್ಲಿ ಮೂರು ದಿನ ನಡೆಯಿತು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಎಸ್.

ನಿಜಲಿಂಗಪ್ಪನವರು ಆ ಸಮ್ಮೇಳನವನ್ನು ಉದ್ಘಾಟಿಸಿದರು. ಆಗ ಕುಲಪತಿಗಳಾಗಿದ್ದ ಡಾ. ಡಿ.ಸಿ. ಪಾವಟೆಯವರು ಅಮೇರಿಕೆಗೆ ಹೋಗಿದ್ದರಿಂದ ಪ್ರಭಾರಿ ಕುಲಪತಿಗಳಾಗಿದ್ದ ಡಾ. ಶಿ.ಚ. ನಂದೀಮಠರು ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿ ಕೆಲಸ ಮಾಡಿದರು. ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕನಾಗಿದ್ದ ನನಗೆ ಆ ಸಾಹಿತ್ಯ ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗುವ ಯೋಗ ಒದಗಿತ್ತು. ಆರ್.ಎಲ್.ಎಸ್. ಹಾಯ್‌ಸ್ಕೂಲಿನ ಅಂದಿನ ನೆನಪುಗಳಲ್ಲಿ ಇದು ಬಹಳ ಮಹತ್ವದ್ದೆಂದು ನಾನು ಭಾವಿಸಿದ್ದೇನೆ.

'ಶತಮಾನೋತ್ಸವ' ಗ್ರಂಥ
೨೦೧೯

ಒಂದು ಗಡಿ ಉತ್ಸವದ ಉದ್ಘಾಟನೆ

(ಹನೂರು : ಚಾಮರಾಜನಗರ ಜಿಲ್ಲೆ, ೨೪ ಮತ್ತು ೨೫ ಮಾರ್ಚ ೨೦೧೧)

ಕನ್ನಡ ಬಂಧುಗಳಿಗೆ ನನ್ನ ನಮಸ್ಕಾರ. ಕರ್ನಾಟಕದ ಉತ್ತರ ಗಡಿ ಜಿಲ್ಲೆಯಾದಂತಹ ಬೆಳಗಾವಿಯಲ್ಲಿ "ವಿಶ್ವಕನ್ನಡ ಸಮ್ಮೇಳನ" ನಡೆದಂತಹ ಈ ತಿಂಗಳಲ್ಲಿಯೇ ದಕ್ಷಿಣ ಗಡಿಜಿಲ್ಲೆಗಳಲ್ಲಿ ಒಂದಾಗಿರುವಂತಹ ಚಾಮರಾಜನಗರ ಜಿಲ್ಲೆಯ ಹನೂರಿನಲ್ಲಿ ಗಡಿನಾಡ ಸಾಂಸ್ಕೃತಿಕ ಸಂಘದ ಈ ಸಾಂಸ್ಕೃತಿಕ ಉತ್ಸವ ನಡೆಯುತ್ತಿರುವುದು ನಿಜವಾಗಿ ತುಂಬಾ ಔಚಿತ್ಯಪೂರ್ಣವಾಗಿದೆ. ಮಾನ್ಯ ಜಿಲ್ಲಾಧಿಕಾರಿಗಳೂ ಕೂಡ ಅದರ ಬಗ್ಗೆ ಹೇಳಿದ್ದಾರೆ. ಬೆಳಗಾವಿಯ ಮೂಲಕ ಕನ್ನಡ ವಿಶ್ವದೆಲ್ಲೆಡೆಗೆ ತನ್ನ ಬೆಳಕನ್ನು ಬೀರಿದ ಹಾಗೆ ಇವತ್ತು ಹನೂರಿನಲ್ಲಿ. ನಾನು ಇದಕ್ಕೆ ಹೊನ್ನೂರು ಎಂದು ಕರೆಯುತ್ತೇನೆ. ಇದು ಹನೂರು ಎಂದು ಯಾಕೆ ಬಂತೋ ಗೊತ್ತಿಲ್ಲ. ಬಂಗಾರದಂತಹ ಊರು ಹೊನ್ನೂರು ಎಂದು ಕರೆಯಬಯಸುತ್ತೇನೆ. ಇಲ್ಲಿ ಈ ಸಾಂಸ್ಕೃತಿಕ ಉತ್ಸವ ನಡೆಯುತ್ತಿರುವುದು ಸಂತೋಷ. ಕನ್ನಡ ಜಾನಪದವನ್ನು ಅಪ್ಪಟ ಚಿನ್ನವಾಗಿ ಬೆಳೀಲಿಕ್ಕೆ ಕಾರಣವಾದಂತಹ ಈ ಹನೂರು ಮತ್ತು ಈ ಪ್ರದೇಶ ಅಂತ ಭಾವಿಸುತ್ತೇನೆ. ಆದ್ದರಿಂದ ವಿಶ್ವ ಕನ್ನಡ ಸಮ್ಮೇಳನದ ಹಾಗೆಯೇ ಈ ಗಡಿನಾಡ ಸಾಂಸ್ಕೃತಿಕ ಉತ್ಸವಕ್ಕೂ ಕೂಡ ತನ್ನದೇ ಆದಂತಹ ಒಂದು ವೈಶಿಷ್ಟ್ಯ ಇದೆ. ನಾಡಿನ ಎಲ್ಲ ಗಡಿಗಳಲ್ಲಿಯೂ ಕೂಡ ಇಂತಹ ಉತ್ಸವಗಳಿಗೆ ಮತ್ತು ಬೇರೆ ಬೇರೆ ಅನೇಕ ಚಟುವಟಿಕೆಗಳನ್ನು ಅಭಿವೃದ್ದಿ ಕಾರ್ಯಗಳನ್ನು ಅವುಗಳ ಯೋಜನೆಯನ್ನು ಹಾಕಿಕೊಂಡಿರುವಂತಹ ಗಡಿನಾಡ ಅಭಿವೃದ್ಧಿ ಪ್ರಾಧಿಕಾರದ ಹಲವಾರು ಯೋಜನೆಗಳನ್ನು ಹಾಕಿಕೊಂಡು ಈಗಾಗಲೇ ಸದ್ದಿಲ್ಲದೇ ಎಷ್ಟೋ ಕೆಲಸಗಳನ್ನು ಪೂರೈಸಿದೆ. ನಿತ್ಯವೂ ಅದೇ ಚಿಂತನೆಯಲ್ಲಿ ತೊಡಗಿರುವಂತಹ ಜನಪ್ರಿಯ ಶಾಸಕರಾದಂತಹ ಮತ್ತು ಪ್ರಾಧಿಕಾರದ ಅಧ್ಯಕ್ಷರಾದಂತಹ ಶ್ರೀ ಚಂದ್ರಕಾಂತ ಬೆಲ್ಲದ ಅವರಿಗೆ ಮತ್ತು ಆ ಸಮಿತಿಯ ಎಲ್ಲ ಸದಸ್ಯರಿಗೆ ತಮ್ಮೆಲ್ಲರ ಪರವಾಗಿ ಮತ್ತೊಮ್ಮೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಹಾಗೆಯೇ ಈ ಸಾಂಸ್ಕೃತಿಕ ಉತ್ಸವಕ್ಕೆ ಕಾರಣರಾಗಿರುವಂತಹ ಎಲ್ಲಾ ನಮ್ಮ ಜಿಲ್ಲಾ ಆಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಎಲ್ಲದರಲ್ಲಿಯೂ ಕೂಡ ಹೆಚ್ಚಿನ ಶ್ರೇಯಸ್ಸು ಇದೆಯೆಂದು ನಾನು ಭಾವಿಸಿದ್ದೇನೆ.

ಈ "ಕನ್ನಡ" ಅಥವಾ "ಕರ್ನಾಟಕ" ಇದು ಒಂದು ಭಾಷೆಯ ಹೆಸರು ಮಾತ್ರವಾಗಿರದೆ ಇಡೀ ಭೌಗೋಳಿಕ ಪ್ರದೇಶದಲ್ಲಿ ವಾಸವಾಗಿರುವಂತಹ ಜನಸಮುದಾಯದ ರಾಜಕೀಯ, ಸಾಮಾಜಿಕ ಸಾಂಸ್ಕೃತಿಕ ಬದುಕಿನ ಒಂದು ಇತಿಹಾಸದ ದಾಖಲೆ "ಕರ್ನಾಟಕ" ಅನ್ನುವಂತದ್ದು. ಆ ಜನಸಮುದಾಯದ ಒಂದು ವರ್ತಮಾನವನ್ನು ಸಾವಿರ ಸಾವಿರ ನಾಲಿಗೆಗಳ ಮೂಲಕ ರೂಪಿಸಿದೆ. ಅದನ್ನು ರೂಪಿಸುವಂತಹ ಮುಖಾಂತರ ಭವಿಷ್ಯದ ಅನಂತ ಸಾಧ್ಯತೆಗಳನ್ನು ತಿಳಿಯುವ ಮಾಧ್ಯಮ ಕನ್ನಡ ಅಥವಾ ಕರ್ನಾಟಕ ಆಗಿದೆ ಎಂದು ಹೇಳಬಹುದು. ಕನ್ನಡ ಚಳುವಳಿ ಅನ್ನುವಂತದ್ದು ಕೇವಲ ಭಾಷೆಯ ಬಗೆಗಿನ ಚಳುವಳಿ ಆಗಿರದೆ, ಭಾಷೆಯನ್ನು ಒಳಗೊಂಡ ಹಾಗೆ ಬದುಕಿನ ಎಲ್ಲ ವಲಯಗಳಿಗೂ ಸಂಬಂಧಪಟ್ಟಂತಹ ಪ್ರಜ್ಞಾಪೂರ್ವಕ ಸಮಷ್ಠಿ ಪ್ರಯತ್ನವಾಗಿರುತ್ತದೆ. ಇಂದು ಭಾರತದ ಅನೇಕ ಭಾಗಗಳಲ್ಲಿ ನಡೆದಿರುವಂತಹ ಜನಾಂದೋಲನಗಳಿಗೆ, ಆರ್ಥಿಕ, ಸಾಮಾಜಿಕ, ರಾಜಕೀಯ ಆಯಾಮಗಳಿರುವ ಹಾಗೆಯೇ ಅವಕ್ಕೆಲ್ಲ ಮೂಲಭೂತವಾಗಿರುವಂತೆ ಈ ಭಾಷೆಯ ಆಯಾಮವೂ ಕೂಡ ಅದಕ್ಕೆ ಇದೆ ಎಂದು ನನ್ನ ಅನಿಸಿಕೆ. ಭಾರತ ಒಂದು ಏಕಮುಖ ಸಂಸ್ಕೃತಿಯ ನೆಲೆಯಾಗಿರದೆ, ಅನೇಕ ಸಂಸ್ಕೃತಿಗಳ ಒಟ್ಟುಗೂಡುವಿಕೆ. ವೈದಿಕಶಾಹಿಯ ಮೂಲಪ್ರಚಾರ ಮಾಧ್ಯಮವಾಗಿದ್ದಂತಹ ಸಂಸ್ಕೃತದ ವಿರುದ್ಧ ಸಿಡಿದೇಳುತ್ತಲೇ, ಜನಭಾಷೆಗಳು ನೂರಾರು ವರ್ಷಗಳಿಂದ ನಮ್ಮ ಸಂಸ್ಕೃತಿಯನ್ನು ಬೆಳೆಸುತ್ತಾ ಬಂದಿವೆ. ಮೊದಲು ೨೨ ಆಡಳಿತಗಳಲ್ಲಿ ನಂತರ ೫ ಆಡಳಿತಗಳಲ್ಲಿ ಹಂಚಿಕೊಂಡಂತಹ ಕನ್ನಡ ಭಾಷಿಕರಾದ ನಾವು ಕರ್ನಾಟಕವಾಗಿ ಒಂದೇ ಆಡಳಿತ ಕ್ಷೇತ್ರದಡಿ ಬರಬೇಕು ಎಂದು ತಿಳಿದುಕೊಂಡು ನಡೆಸಿದಂತಹ ಏಕೀಕರಣದ ಹೋರಾಟ ಮತ್ತು ಭಾರತ ಸ್ವಾತಂತ್ರ್ಯದ ಹೋರಾಟ ಅವು ಒಂದಕ್ಕೊಂದು ಪರಸ್ಪರ ಪೂರಕವಾಗಿವೆ ಮತ್ತು ಒಂದು ಇನ್ನೊಂದರ ಭಾಗವಾಗಿವೆ ಅಂತಾನೂ ಹೇಳಬಹುದು. ೧೯೪೭ ರಲ್ಲಿ ಸ್ವಾತಂತ್ರ್ಯ ಪಡೆದ ಈ ದೇಶ, ಮುಂದೆ ೯ ವರ್ಷಗಳ ನಂತರ ಭಾಷಾವಾರು ಪ್ರಾಂತ್ಯ ರಚನೆ ಅನಿವಾರ್ಯವಾದಂತಹ ಒಂದು ಸಹಜ ಪ್ರಕ್ರಿಯೆಯ ಫಲ ಎಂದೂ ಹೇಳಬಹುದು. ಆಡಳಿತ ದೃಷ್ಟಿಯಿಂದ ಆಯಾ ಭಾಷಾ ರಾಜ್ಯಗಳು ನಿಜವಾಗಿಯೂ ಬಲಿಷ್ಠವಾಗಿರಬೇಕು ಮತ್ತು ಕೇಂದ್ರ ಈ ಬಲಿಷ್ಠ ರಾಜ್ಯಗಳನ್ನು ಸಮತೋಲನದಿಂದ ಪರಸ್ಪರ ಸಂಘರ್ಷಗಳನ್ನು ತಪ್ಪಿಸುವಂತಹ ಶೋಷಣೆಗಳನ್ನು ನಿಯಂತ್ರಿಸುವಂತಹ ಒಂದು ವ್ಯವಸ್ಥೆಯಾಗಬೇಕು. ಅದು ಈ ಪ್ರಕ್ರಿಯೆಯ ಮೂಲಗುರಿ. ಕರ್ನಾಟಕ ಏಕೀಕರಣದಲ್ಲಿ ಭಾಷಾವಾರು ರಾಜ್ಯಗಳ ಮುಖ್ಯವಾದಂತಹ ಗುರಿ ಇದಾಗಿತ್ತು. ಈ ಗುರಿ ಮುಟ್ಟದ್ದರಿಂದಲೇ ಇಂದು ದೇಶದ ತುಂಬೆಲ್ಲಾ ಪ್ರಾದೇಶಿಕ ಅಸಮಾನತೆಯ

ಕೂಗು ಕೇಳುತ್ತಾ ಇದ್ದದ್ದು. ಪ್ರಾದೇಶಿಕತೆ ಅನ್ನುವಷ್ಟು ಮಟ್ಟಿನ ಜನಾಂದೋಲನವನ್ನು ಅತಿ ಕೋಲಾಹಲವನ್ನು ಉಂಟು ಮಾಡಿದೆ. ನಮ್ಮ ನೆರೆಹೊರೆಯ ರಾಜ್ಯಗಳಲ್ಲಿ ಹಾಗೆ ನೋಡಿದರೆ ಕರ್ನಾಟಕದಲ್ಲಿ ಇರುವ ಹಾಗೆ ಅಕಾಡೆಮಿಗಳಾಗಲೀ ಅಥವಾ ಅಭಿವೃದ್ಧಿ ಪ್ರಾಧಿಕಾರಗಳಾಗಲೀ ಒಡೆದು ಕಾಣುವ ಹಾಗೆ ಅಸ್ತಿತ್ವದಲ್ಲಿ ಇಲ್ಲ. ಅಲ್ಲಿ ಆಯಾ ಜನಭಾಷೆಯ ಅನುಷ್ಠಾನ ಸರ್ಕಾರಿ ಆಡಳಿತ ಯಂತ್ರದ ಸಹಜತೆಯಲ್ಲಿ ಅದು ಅವರಿಗೆ ಬಹಳ ಸಹಜವಾಗಿ ಬಿಟ್ಟಿದೆ. ಯಾವ ಭಾಷೆ ಯಾವ ರಾಜ್ಯಗಳಿವೆ ಆಯಾ ಭಾಷೆಯಲ್ಲಿ ಅವರು ಆಡಳಿತ ನಡೆಸತಕ್ಕಂತಹುದು. ಆದರೆ ಕನ್ನಡ ನಾಡಿನಲ್ಲಿ ಇಂತಹ ಸಹಜ ಶೈಲಿ ಇಲ್ಲದೆ ಇರುವುದು ನಮ್ಮ ದುರಂತ. ಕನ್ನಡ ಚಳುವಳಿಯನ್ನು ಸುತ್ತಲೂ ಇರುವ ತುಳು, ಕೊಡವ, ಕೊಂಕಣಿ ಇತ್ಯಾದಿ ವಿಶಿಷ್ಟ ಉಪಸಂಸ್ಕೃತಿಗಳ ವೈಶಿಷ್ಟ್ಯವನ್ನು ಕಾಪಾಡಲೂ ಕೂಡಾ ನಾವು ಕನ್ನಡಿಗರು ಪ್ರಯತ್ನ ಮಾಡುತ್ತಾ ಇದ್ದೇವೆ. ಕರ್ನಾಟಕದ ಭೂಗೋಳದ ವಿಕಾಸ ನಮಗೆ ಬೇಕಾಗಿಲ್ಲ. ಆದರೆ ನಮ್ಮದೇ ಆದ ನೆಲವನ್ನು ಯೋಜನೆಗಳನ್ನು ನೆರೆಯವರು ನುಂಗಿಹಾಕುವ ಅನ್ಯಾಯವನ್ನು ನಾವು ಪ್ರತಿಭಟಿಸಲೇಬೇಕು. ಸಂಘರ್ಷಕ್ಕಿಂತ ನ್ಯಾಯಬದ್ಧವಾದ ಸಂಧಾನವನ್ನು ಯಾವಾಗಲೂ ಕರ್ನಾಟಕ ಬಯಸುತ್ತಾ ಇದೆ. ಅದನ್ನು ದೌರ್ಬಲ್ಯ ಎಂದು ಇತರ ರಾಜ್ಯಗಳು, ಭಾಷಿಕರು ಭಾವಿಸಬಾರದು. ನಮ್ಮ ಸಾಂಸ್ಕೃತಿಕ ಕರ್ನಾಟಕ ಹಾಗೆ ನೋಡಿದರೆ ವಿಶ್ವವ್ಯಾಪಿಯಾಗಿದೆ. ನಾವು ನಿರಂತರ ಎಚ್ಚರವಾಗಿದ್ದುಕೊಂಡು ನಮ್ಮ ಜನಪ್ರತಿನಿಧಿಗಳನ್ನು ಹಾಗೂ ಸರ್ಕಾರವನ್ನು ಸದಾ ಎಚ್ಚರಿಸುತ್ತಾ ನಾಡು ಕಾಲಕಾಲಕ್ಕೆ ಕಂಡಂತಹ ಕ್ರಾಂತಿ ಪರಂಪರೆಯನ್ನು ಜೀವಂತವಾಗಿ ಇಟ್ಟುಕೊಂಡರೆ ವರ್ತಮಾನದ ಆತಂಕಗಳನ್ನು ನಿವಾರಿಸಿಕೊಂಡು ನಾಡಿನ ಕಿಟಕಿ ಬಾಗಿಲುಗಳನ್ನು ಹೊಸ ಹೊಸ ಬೆಳಕುಗಳಿಗೆ ತೆರೆದಿಡಲಿಕ್ಕೆ ಇದರಿಂದ ಸಾಧ್ಯವಾಗುತ್ತದೆ. ಕರ್ನಾಟಕದಲ್ಲಿ ಕನ್ನಡ ಭಾಷೆಗೇ ಸಾರ್ವಭೌಮ ಸ್ಥಾನ. ಇಲ್ಲಿ ಇತರ ಭಾಷಿಕರು ಇದ್ದರೂ ಅವರು ಈ ಪ್ರದೇಶದಲ್ಲೇ ಇರುವವರಾದ್ದರಿಂದ ಅವರ ಭಾಷೆಯೂ ಕೂಡ ಕನ್ನಡವೇ. ಕರ್ನಾಟಕದಲ್ಲಿ ಶಿಕ್ಷಣ, ಆಡಳಿತ, ಕಾನೂನು ಎಲ್ಲ ರಂಗಗಳಲ್ಲಿಯೂ ಕನ್ನಡವೇ ಮುಖ್ಯ. ಇಂಗ್ಲೀಷ್ ಭಾಷೆ ಒಂದೂವರೆ ಎರಡು ಶತಮಾನಗಳಷ್ಟು ಕಾಲ ಚಾಲ್ತಿಯಲ್ಲೇ ಇದ್ದರೂ ಕೂಡಾ ಅದರ ಗುಣಾತ್ಮಕ ಅಂಶವನ್ನು ಒಪ್ಪಿಕೊಂಡರೂ ಉಚ್ಚ ಜಾತಿಯವರು, ಶ್ರೀಮಂತರ, ನೌಕರ ಶಾಹಿಗಳ ನಿಯಂತ್ರಣದಲ್ಲಿ ಇರುವ ಶೋಷಕರ ಆಯುಧವಾಗಿ ಈ ಭಾಷೆ ಈವರೆಗೆ ಬಳಸಲ್ಪಟ್ಟದ್ದೇ ಹೊರತು ರೈತ ಕಾರ್ಮಿಕರ, ಬಡವರ ಅಭಿವ್ಯಕ್ತಿಯಾಗಿ, ಈ ರಾಜ್ಯದಲ್ಲಿ ಇಂಗ್ಲೀಷ್ ಭಾಷೆ ಉಳಿದುಕೊಂಡಿಲ್ಲ. ಸ್ವಾತಂತ್ರ್ಯ, ಸಮಾನತೆ, ಘನತೆಗಳ ಮೌಲ್ಯಗಳ ವಾಹಕವಾಗಿ ಅದು ಬಂದಿದ್ದರೂ ಕೂಡಾ ಆ ಭಾಷೆಯ ಮಾಲೀಕರೆಲ್ಲಾ ಇಂದಿಗೂ

ಉಚ್ಚವರ್ಗದವರೇ ಆಗಿದ್ದಾರೆ. ನಮ್ಮ ದೇಶದಲ್ಲಿ ಶತಮಾನಗಳ ಇತಿಹಾಸವಿರುವಂತಹ ಅನೇಕ ಸಮೃದ್ಧ ಭಾಷೆಗಳಿವೆ. ಇಲ್ಲಿ ಭಾಷೆಗಳ ಮಟ್ಟದಲ್ಲಿ ಇಂಗ್ಲೀಷ್ ಬದುಕುವುದು ಸಾಧ್ಯವೂ ಇಲ್ಲ; ಮತ್ತು ಅದು ಅಪೇಕ್ಷಣೀಯವೂ ಅಲ್ಲ. ರಾಷ್ಟ್ರಭಾಷೆಯೊಂದಿಗೆ ಸಂಘರ್ಷಮಯ ಸಹಜೀವನ ಹಾಗೂ ಅಂತರರಾಷ್ಟ್ರೀಯ ಭಾಷೆಯೊಂದಿಗೆ ವ್ಯಾವಹಾರಿಕ ಸಂಪರ್ಕ, ಇವು ಇಂದಿನ ಅನಿವಾರ್ಯ ಕ್ರಮಗಳಾಗಿವೆ. ಕನ್ನಡವನ್ನು ಅತಿಕ್ರಮಣ ಮಾಡುವಂತಹ ಯಾವ ಶಕ್ತಿಯನ್ನೂ ನಾನು ವಿರೋಧಿಸಬಲ್ಲೆ ಎಂಬ ಸಹಜ ಅಭಿಮಾನ ನಮ್ಮಲ್ಲಿ ಗಟ್ಟಿಯಾಗಿ ನೆಲೆಗೊಂಡರೆ ಯಾವ ಭಾಷೆಯೂ ನಮಗೆ ಏನು ಮಾಡೋದಕ್ಕೂ ಸಾಧ್ಯ ಆಗೋದಿಲ್ಲ. ತಮಿಳರಿಗೆ ಉಗ್ರವಾದಂತಹ ಭಾಷಾಭಿಮಾನ ಇದೆ. ಮಲೆಯಾಳಿಯರಿಗೂ ಅಷ್ಟೇ. ಆದರೆ ಕನ್ನಡಿಗರಿಗೆ ಹಾಗಿಲ್ಲ. ಇದೇ ಒಂದು ವ್ಯತ್ಯಾಸ. ಈ ಭಾಷಾಭಿಮಾನದ ಪ್ರಮಾಣಕ್ಕೆ ಭಾಷೆಯ ಸ್ವರೂಪ ಕಾರಣವಲ್ಲ. ಕನ್ನಡಿಗರು ಸ್ವಭಾವತಃ ಸೌಮ್ಯರು; ಇದಕ್ಕೆ ಐತಿಹಾಸಿಕ, ರಾಜಕೀಯ ಕಾರಣಗಳು ಇವೆ. ಆದರೆ ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಇವರು ಉಗ್ರರೂ ಆಗಬಲ್ಲರು. ಕವಿರಾಜಮಾರ್ಗಕಾರ ಕನ್ನಡಿಗರ ಅನೇಕ ಗುಣಲಕ್ಷಣಗಳನ್ನು ಹೇಳುತ್ತಾನೆ.

> **ಸುಭಟರ್ಕಳ ಚಲುವರ್ಕಳ್**
> **ಅಭಿಮಾನಿಗಳ್ ವಿವೇಕಿಗಳ್**

ಹೀಗೆ ಹೇಳುವಾಗ "ಅತ್ಯುಗ್ರರ್" ಎಂಬ ಮಾತನ್ನು ಬಳಸುತ್ತಾನೆ. ಈಗ ಉಗ್ರರು ಅನ್ನುವುದಕ್ಕೆ ಬೇರೆಯೇ ಅರ್ಥ ಬಂದುಬಿಟ್ಟಿದೆ. ....ಅನ್ನುವಂಥದ್ದು. ಆ ಮಾತು ಬಿಡೋಣ. ಆ ರೀತಿ ಉಗ್ರತೆ ಅಲ್ಲ. ನಮ್ಮ ಮೇಲೆ ಆಗುವಂತಹ ಅನ್ಯಾಯವನ್ನು ಶೋಷಣೆಯನ್ನು ಪ್ರತಿಭಟನೆ ಮಾಡಿ ಹೋರಾಡತಕ್ಕಂತಹ ಒಂದು ಉಗ್ರತೆ. ಅದೇ ಮಾತನ್ನು ಬಹಳ ಪ್ರಾಚೀನವಾದಂತಹ ಶಾಸನದಲ್ಲಿ ನಾವು ಕಾಣುತ್ತೇವೆ. ಕನ್ನಡಿಗರ ಸ್ವಭಾವ. ಈ ಜನ ಎಂಥವರು ಅಂದರೆ,

> **"ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ**
> **ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್?"**

ಇವರು ಬಹಳ ಭಯಂಕರವಾಗಿ ಅದರ ಜೊತೆಗೆ ಸಾಧುಗಳಿಗೆ ಸಾಧುಗಳಾಗಿರುತ್ತಾ, ಮಾಧುರ್ಯವಾಗಿ ಮಧುರದಿಂದ ಕೂಡಿರುವಂಥವರಿಗೆ ಮಧುರವಾಗೇ ನಡೆದುಕೊಳ್ಳುತ್ತಾರೆ. ಆದರೆ ಯಾರಾದರೂ ಬಾಧೆ ಮಾಡಬೇಕು ನಮ್ಮ ಅಸ್ತಿತ್ವಕ್ಕೆ ಸಂಚಕಾರವನ್ನು ತರುವಂತಹ ಸಂದರ್ಭದಲ್ಲಿ ಮಾತ್ರ ಇವರು ಉಗ್ರರಾಗಿ

ಹೋರಾಡಬಲ್ಲರು ಅನ್ನೋ ಅಂಥದ್ದನ್ನು ನಮ್ಮ ಇತಿಹಾಸದುದ್ದಕ್ಕೂ ಕೂಡ ಕೆಲವು ಕಡೆ ನಾವು ಕಂಡಿದ್ದೇವೆ. ಗೋಕಾಕ್ ಚಳುವಳಿಯ ನಂತರದ ವರ್ಷಗಳಲ್ಲಿ ಈ ಜಾಗೃತಿ ಪ್ರಮಾಣ ನಿಜವಾಗಿಯೂ ಗಣನೀಯವಾಗಿ ಹೆಚ್ಚಿದೆ. ಇದು ಈಗ ಇನ್ನಷ್ಟು ತೀವ್ರಗೊಳ್ಳುವಂತಹ ಅವಶ್ಯಕತೆ ಇದೆ. ಏಕೀಕರಣ ಚಳುವಳಿಯಿಂದ ಇವತ್ತಿನವರೆಗೂ ಕನ್ನಡ ಚಳುವಳಿಗೆ ಒಂದು ಭಾವನಾತ್ಮಕವಾದಂತಹ, ವೈಚಾರಿಕವಾದಂತಹ, ಕ್ರಿಯಾತ್ಮಕವಾದಂತಹ ಒಂದು ಭೂಮಿಕೆಯನ್ನು ಒದಗಿಸಿರುವವರು ನಮ್ಮ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ಗಣ್ಯರೇ ಎಂಬುದನ್ನು ನಾವು ಮರೆಯಬಾರದು. ಸಂಸ್ಕೃತಿ ಮತ್ತು ಮೌಢ್ಯ ಅಂಧಾನುಕರಣ ಇವೆರಡೂ ಶಬ್ದಗಳು ಒಟ್ಟಿಗೆ ಹೋಗೋದೆ ಇಲ್ಲ. ನಿಜವಾದ ಸಂಸ್ಕೃತಿ ಸದಾ ಚಲನಶೀಲವಾಗಿರುತ್ತದೆ. ಆಯಾ ಕಾಲಘಟ್ಟದ ಅನಿವಾರ್ಯತೆಗೆ ತಕ್ಕ ಹಾಗೆ ಅದು ತನ್ನ ತನ್ನ ಮೌಲ್ಯಗಳನ್ನು ನಿರ್ಮಿಸಿಕೊಳ್ಳುತ್ತಾ ಇರುತ್ತದೆ. ಹರಿಯುವ ನದಿಯೂ ಕೂಡ ಮಹಾಪೂರ ಬಂದಾಗ ತನಗೆ ಬೇಡವಾದ ವಸ್ತುಗಳನ್ನು ಹೇಗೆ ದಂಡೆಗೆ ಚೆಲ್ಲಿಬಿಡುತ್ತದೆ, ಎಸೆದು ಬಿಡುತ್ತದೆ ಹಾಗೆ ಸಂಸ್ಕೃತಿ ತನಗೆ ಬೇಡವಾದಂತಹ ಮೌಲ್ಯಗಳನ್ನು ತಿರಸ್ಕರಿಸುತ್ತದೆ ಇಲ್ಲ ನವೀಕರಣಗೊಳಿಸುತ್ತದೆ. ನಮ್ಮ ರಾಜಧಾನಿ ಬೆಂಗಳೂರಿಗೆ ತೀರ ಹತ್ತಿರವಿರುವ ಗಡಿ ಎಂದರೆ ತಮಿಳುನಾಡಿನದು. ದಿನವೂ ನಾವು ನೋಡ್ತಾ ಇರುತ್ತೇವೆ ಸಾವಿರಾರು ಕುಟುಂಬಗಳು ನೂರಾರು ಬಸ್ಸುಗಳಲ್ಲಿ ಬೆಂಗಳೂರಿಗೆ ಬಂದು ಅಲ್ಲಿಯೇ ತಮ್ಮ ಬೀಡನ್ನು, ಬಿಡಾರವನ್ನು ಮಾಡಿಕೊಳ್ಳುತ್ತಾರೆ. ತಮ್ಮ ಅಸ್ತಿತ್ವವನ್ನು ಅವರು ಗಟ್ಟಿಯಾಗಿ ಬದುಕಿಗಾಗಿ ಅಲ್ಲಿ ಗುರುತಿಸಿಕೊಂಡು ಬಿಡುತ್ತಾರೆ. ಆದರೆ ಸ್ವಲ್ಪ ತೆಲುಗಿನವರು ಹಾಗಲ್ಲ. ಹಾಲಿನಲ್ಲಿ ನೀರು ಬೆರೆತ ಹಾಗೆ ಸ್ವಲ್ಪ ಬೆರೆತುಕೊಳ್ಳುವ ಗುಣ ತೆಲುಗರಲ್ಲಿ ನಾವು ಕಂಡಿದ್ದೇವೆ. ಏನೇ ಆದರೂ ಕೂಡ ನಮ್ಮ ಗಡಿ ಜಿಲ್ಲೆಗಳ ಅಂತ್ಯದ ಪ್ರದೇಶಗಳಲ್ಲಿ ಆ ಪ್ರದೇಶಗಳು ಈಗ ನಮ್ಮದಾಗಿ ಉಳಿದಿಲ್ಲ. ಕರ್ನಾಟಕ ಐದು ನೆರೆಯ ರಾಜ್ಯಗಳಿಗೆ ತೆರೆದುಕೊಂಡಿರುವಂತದ್ದು ಭಾರತದಲ್ಲಿಯೇ ಬಹಳ ಅಪರೂಪವಾದಂತಹ ಒಂದು ರಾಜ್ಯ ಇದು. ಈಗ ನೋಡಿ, ಈ ಕಡೆ ಆಂಧ್ರ, ತಮಿಳುನಾಡು, ಕೇರಳ, ಮಹಾರಾಷ್ಟ್ರ ಮತ್ತು ಗೋವಾ ಹೀಗೆ ಐದು ಬೇರೆ ಬೇರೆ ಭಾಷೆಯ ರಾಜ್ಯಗಳಿಗೆ ತನ್ನನ್ನು ತೆರೆದುಕೊಂಡಿರುವಂತಹ ರಾಜ್ಯ ಅಂದರೆ ಕರ್ನಾಟಕ ಒಂದೇ. ಹಾಗೆ ಇರುವುದರಿಂದ ನಿಜವಾಗಿಯೂ ಸಾಹಿತ್ಯಿಕವಾಗಿ ಸಾಂಸ್ಕೃತಿಕವಾಗಿ ಬಹಳ ಮಧುರವಾದಂತಹ ಬಾಂಧವ್ಯ ಮತ್ತು ಮಾದರಿ. ಇಡೀ ದೇಶಕ್ಕೆ ಮಾದರಿಯಾದಂತಹ ಒಂದು ನಾಡು ಇದಾಗಬೇಕಿತ್ತು. ಆದರೆ ಕನ್ನಡಿಗರ ಬಯಕೆ ಕೂಡಾ ಇದೇ ಆಗಿದೆ. ಆದರೆ ಅವರೆಲ್ಲರೂ ಒಳಗೆ ನುಗ್ಗಲಿಕ್ಕೆ ಪ್ರಯತ್ನಿಸುತ್ತಾರೆ. ಕೊಡುಕೊಳೆ ಅನ್ನೋವಂಥದ್ದು ಸಾಂಸ್ಕೃತಿಕ ಕೊಡುಕೊಳೆ

ಆಗಬೇಕು. ಸಾಂಸ್ಕೃತಿಕ ಅಥವಾ ಸಾಹಿತ್ಯಕ ಕೊಡುಕೊಳೆಗೆ ರಾಜಕೀಯ ಅನ್ನುವಂಥದ್ದು ಆಸ್ಪದವನ್ನು ಕೊಡುವುದಿಲ್ಲ. ಹೆಚ್ಚಾಗಿ ನಮ್ಮ ಭೂಮಿಯನ್ನೇ ಅವರು ತಮ್ಮದಾಗಿಸಿಕೊಂಡು ಬಿಡುತ್ತಾರೆ. ನಾವು ಕೂಲಿಯಾಳುಗಳ ಹಾಗೆ ಅವರ ಕೈಯಲ್ಲಿ ದುಡಿಯುತ್ತಾ ಇರುತ್ತೇವೆ. ಅವರ ಆರ್ಥಿಕ ಬಲ ಎಷ್ಟೆಷ್ಟು ಬೆಳೆಯುತ್ತಾ ಹೋಗುತ್ತದೆ. ಹಾಗಾಗೇ ಈ ವಲಸಿಗರು ಬಂದು ನೆಲೆಸಿದಂಥ ಸ್ಥಳಗಳೆಲ್ಲಾ ಒಂದೊಂದು ದ್ವೀಪಗಳಾಗಿ ಬಿಡುತ್ತವೆ. ಪರಿಚಯ ಇರುವಂಥ ಹೊರಗಿನವರು ಒಳಹೊಕ್ಕು ಒಳಗಿರುವರನ್ನೇ ಹೊರಗೆ ಹಾಕುವಂತಹ ಪರಿಸ್ಥಿತಿ ನಮ್ಮ ಗಡಿ ಭಾಗದಲ್ಲೆಲ್ಲಾ ನಡೆದಿರತಕ್ಕಂತಹ ಒಂದು ವಾಸ್ತವವಾದಂತಹ ಸಂಗತಿ. ರಾಜಕೀಯ ವಿದ್ಯಮಾನಗಳು ಹೇಗೆ ಒಂದಕ್ಕೊಂದು ತೊಡಕು ಹಾಕಿಕೊಂಡು ಬಿಡುತ್ತವೆ ಎಂಬುದಕ್ಕೆ ವೀರಪ್ಪನ್ ಪ್ರಕರಣವೇ ಸಾಕ್ಷಿ ಎಂದು ಹೇಳಬಹುದು. ರಾಜಕುಮಾರ್ ಅಪಹರಣ ನಡೆದದ್ದು ತಮಿಳುನಾಡಿನಲ್ಲಿ. ಅಪಹರಣ ಮಾಡಿದ್ದ ವೀರಪ್ಪನ್ ಒಬ್ಬ ತಮಿಳಿಗ ರಾಜ್ ಮತ್ತು ಸಂಗಡಿಗರನ್ನು ಅಡಗಿಸಿಟ್ಟಿದ್ದು ಕೂಡಾ ತಮಿಳುನಾಡಿನ ಅರಣ್ಯದಲ್ಲಿ. ಇಡೀ ಪ್ರಕರಣವನ್ನು ನಿಭಾಯಿಸುವಂತಹ ಅಥವಾ ಕೊನೆಗಾಣಿಸುವಂತಹ ಹೊಣೆಗಾರಿಕೆ ನಿಜವಾಗಿಯೂ ತಮಿಳುನಾಡಿನದ್ದು ಆಗಬೇಕಾಗಿತ್ತು. ಆದರೆ ಆದದ್ದೇನು? ರಾಜಧಾನಿ ಬೆಂಗಳೂರಿನಲ್ಲಿ ಗಲಭೆ, ಹೋರಾಟ, ಕೋಲಾಹಲ ಇತ್ಯಾದಿಗಳೆಲ್ಲ ನಡೆಯಿತು. ಅಲ್ಲದೇ ವೀರಪ್ಪನ್‌ಗೆ ಸಂಬಂಧವೇ ಇರದಂಥ ಬೇಡಿಕೆಗಳು ಸುಮಾರು ಏನೋ ೪೦೫ ಕೋಟಿ ಕೊಟ್ಟು, ತನ್ನ ಸಹಚರರನ್ನು ಜೈಲಿಗೆ ಹಾಕಿದವರನ್ನು ಬಿಡಿಸಿಬಿಡಿ. ಇಷ್ಟೇ ಅವನ ಬೇಡಿಕೆ ಮೂಲ ಇದ್ದದ್ದು ನಿಜವಾಗಿ. ಆದರೆ ಬರಬರುತ್ತಾ ಅವನ ಬೇಡಿಕೆಯನ್ನು ನೋಡಿದರೆ ಆಶ್ಚರ್ಯ ಆಗುತ್ತದೆ. ಅಂದರೆ ರಾಜಕಾರಣ ಹೇಗೆ ಇದರ ಹಿಂದೆ ಪ್ರಬಲವಾಗಿ ಇರುತ್ತದೆ ಅನ್ನೋದಕ್ಕೆ ಇದು ಸಾಕ್ಷಿ. ಕಾವೇರಿ ವಿವಾದ ನೀರಿನ ಹಂಚಿಕೆಯಲ್ಲಿ ಒಂದು ಬೇಡಿಕೆ ಕರ್ನಾಟಕದಲ್ಲಿ ತಮಿಳಿಗೆ ಎರಡನೇ ಭಾಷಾ ಸ್ಥಾನ ಕೊಡಬೇಕು ಎಂದು ಇನ್ನೊಂದು ಬೇಡಿಕೆ. ಮತ್ತೊಂದು ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆ ಸ್ಥಾಪನೆ. ಇವೆಲ್ಲ ವೀರಪ್ಪನ್‌ಗೆ ಹೇಗೆ ಹೊಳೆದವು? ಹೇಳಲಿಕ್ಕೆ ಬರಲೊಲ್ಲದು. ಏಕೆಂದರೆ ಅವನದು ಯಾವ ಊರು? ಗೋಪಿನಾಥಂ ಅವನ ಈ ಪಟ್ಟಿಯಲ್ಲಿ ಸೇರಿಕೊಂಡಂತಹ ಈ ಅಂಶಗಳ ಹಿಂದೆ ಈ ಅಪಹರಣದ ಸುತ್ತಮುತ್ತ ಮೆಟ್ಟಿಕೊಂಡಂತಹ ತಮಿಳುನಾಡು ರಾಜಕೀಯ ಪದರಗಳ ವಾಸನೆ ಅಡಗಿದ್ದನ್ನು ನಾವು ಸ್ಪಷ್ಟವಾಗಿ ನೋಡಬಹುದು. ಇದರ ಬೆನ್ನ ಹಿಂದೇನೇ ಕರುಣಾನಿಧಿ ಬಹಳ ಅಭಯಹಸ್ತದಿಂದ ಯಥಾಪ್ರಕಾರ ಮುಗುಳ್ನಗುತ್ತಾ ಇದ್ದರು. ಆ ಮುಗುಳ್ನಗೆಯ ಮಂದಹಾಸದ ಅರ್ಥ ಏನು ಅನ್ನೋದು ಎಲ್ಲರಿಗೂ ಗೊತ್ತಾಗುವ ರೀತಿಯಲ್ಲಿತ್ತು.

ಈ ಕಾಡುಗಳ್ಳನೊಂದಿಗೆ ಈ ತಮಿಳು ಉಗ್ರಗಾಮಿಗಳು ಸೇರಿಕೊಂಡು ಇಡೀ ಪರಿಸ್ಥಿತಿಯನ್ನು ನಡೆಸುತ್ತಾ ಇರುವ ಹಾಗೆ ಆಗ ನಮಗೆಲ್ಲ ಕಂಡು ಬಂದಿತು. ಅದೆಲ್ಲ ಈಗ ಇತಿಹಾಸ. ಅದನ್ನು ಮರೆತುಬಿಡೋಣ. ಈಗ ಸದ್ಯಕ್ಕೆ ನಾನು ಮುಖ್ಯವಾಗಿ ಹೇಳಬೇಕಾದದ್ದು ಭಾಷೆ ಮತ್ತು ಸಂಸ್ಕೃತಿಯ ಆಧಾರದ ಮೇಲೆ ನಿಂತಿರುವಂತಹ ಚಳುವಳಿಗಳು ಏನಿವೆ, ಅಂತಹ ಚಳುವಳಿಗಳ ವೈಚಾರಿಕ ನೆಲೆಯ ನಾಯಕತ್ವದೊಂದಿಗೆ ಕಾರ್ಯಕರ್ತರಿಗೆ ಪ್ರಜ್ಞೆಯನ್ನು ಮೂಡಿಸಬೇಕು. ಅದು ಬಹಳ ಮೊದಲನೆಯ ಕೆಲಸ ನಾವು ಮಾಡಬೇಕಾದ್ದು. ಅದರ ಜೊತೆಗೆ ಅವರ ಪಾಲುಗಾರಿಕೆಗೆ ಅರ್ಥವನ್ನು ತಂದುಕೊಡುವಂತಹ ನಿರಂತರ ತರಬೇತಿ ಕೇಂದ್ರಗಳು ಅಗತ್ಯವಾಗಿ ಬೇಕು. ಯಾವ ರೀತಿಯಲ್ಲಿ ಕನ್ನಡ ಕೆಲಸಗಳು ಆಗಬೇಕು ಅವರಿಗೆ ಕಾರ್ಯಕರ್ತರನ್ನು ತಯಾರು ಮಾಡಬೇಕು ನಾವು. ಎಲ್ಲಿ ಕಾರ್ಯಕರ್ತರು ಇದ್ದಾರೆ. ಎಲ್ಲಾ ಕ್ಷೇತ್ರದಲ್ಲಿಯೂ ಕೂಡ ಮುಖ್ಯವಾದ ಕೊರತೆ ಏನೆಂದರೆ ಎಲ್ಲಿ ದುಡ್ಡಿದೆ, ಹಣ ಇದೆ, ಯೋಜನೆ ಇದೆ ಸರ್ಕಾರ ಕೊಡುತ್ತದೆ ಎಲ್ಲ ಆಯ್ತು. ಆದರೆ ನಿಜವಾದ ಕಾರ್ಯಕರ್ತರು ಕನ್ನಡದ ಕಾಳಜಿಯಿಂದ ಆತ್ಮೀಯವಾಗಿ ನಿರ್ವಹಿಸತಕ್ಕಂತ ಕಾರ್ಯಕರ್ತರ ಕೊರತೆಯೇ ಇದೆ. ಅದಕ್ಕಾಗಿ ಇಂತಹ ಕಾರ್ಯಕರ್ತರ ತರಬೇತಿ ಕೇಂದ್ರಗಳು ನಮಗೆ ನಿರ್ಮಾಣವಾಗಬೇಕು. ಅನ್ಯಭಾಷೆಯನ್ನು ಅಥವಾ ಅನ್ಯಭಾಷೆಯವರನ್ನು ವೈರಿಗಳು ಎಂದು ತಿಳಿದುಕೊಂಡು ನಾವು ಬೆಟ್ಟು ಮಾಡಿ ತೋರಿಸುವುದೇ ಕನ್ನಡ ಚಳುವಳಿ ಎಂಬ ಈವರೆಗಿನ ಅಭಿಪ್ರಾಯ. ಬೇರೆ ಬೇರೆ ಭಾಷಿಕರು ನಮ್ಮ ವೈರಿಗಳು ಅನ್ನುವ ರೀತಿಯೇ ಕನ್ನಡ ಚಳುವಳಿಯೇನೋ ಎನ್ನುವ ಒಂದು ಆಭಾಸವನ್ನು ಉಂಟುಮಾಡಿರುವಂತಹ ಕೆಲವು ಸಂದರ್ಭಗಳು ಇರಬಹುದಾದರೆ ಅದರ ಬದಲಾಗಿ ರಾಜ್ಯದ ಎಲ್ಲ ಭಾಷಿಕರನ್ನು ಪ್ರೀತಿಯಿಂದ ಒಳಗು ಮಾಡಿಕೊಂಡು ಕನ್ನಡ ಚಳುವಳಿಯನ್ನು ಕಟ್ಟಬೇಕು. ಇದು ಈ ಹೊಸ ನೆಲೆಗಟ್ಟಿಗೆ ನಾವು ಇಂದು ಬರಬೇಕಾಗಿದೆ.

'ಹಣತೆ'ಯೇ ದೀಪಾವಳಿಗೆ ಸಂಕೇತ

ದೀಪಾವಳಿಗೆ ಸಂಬಂಧಿಸಿದಂತೆ ಪೌರಾಣಿಕ ಕಥೆಗಳೇನೇ ಇದ್ದರೂ, 'ಜಾತಿಹೀನನ ಮನೆಯ ಜ್ಯೋತಿ ತಾ ಹೀನವೆ?' ಎಂಬ ಸರ್ವಜ್ಞನ ಮಾತಿನ ಹಿನ್ನೆಲೆಯಲ್ಲಿ ದೀಪಾವಳಿಯ ನಿಜವಾದ ಪ್ರತೀಕವೆಂದರೆ ಹಣತೆಯೇ, ಎನ್ನಬಹುದು. [ಉತ್ತರ ಕರ್ನಾಟಕದ ಭಾಷೆಯಲ್ಲಿ 'ಪಣತಿ'] ಮಹಡಿ-ಮಹಲುಗಳಲ್ಲಿ, ಭವ್ಯ ದೇವಾಲಯಗಳಲ್ಲಿ ನಿಜವಾದ ದೀಪೋತ್ಸವ ಜರುಗುವದು ಗುಡಿಸಲಿನ ಈ ಹಣತೆಗಳಿಂದಲೇ. ರವೀಂದ್ರರ ಹನಿಗವನವೊಂದು ಹೀಗಿದೆ: ಮುಳುಗುತ್ತಿರುವ ಸೂರ್ಯ ಇರುಳಿನಲ್ಲಿ ತನ್ನ ಕರ್ತವ್ಯವನ್ನು ಮುಂದುವರಿಸುವವರು ಯಾರೂ ಇಲ್ಲವೆಂದು ಚಿಂತೆಗೀಡಾಗಿರುವಾಗ ಮೂಲೆಯಲ್ಲಿದ್ದ ಹಣತೆಯೆಂದು ನಮ್ರವಾಗಿ ನುಡಿಯುತ್ತದೆ: "ನನ್ನೊಡೆಯಾ, ನನ್ನ ಕೈಲಾದುದನ್ನು ನಾನು ಮಾಡಬಲ್ಲೆ".

ಪರಕೀಯ ಸಂಸ್ಕೃತಿಯ ದಾಳಿಯ ಬಿರುಗಾಳಿ ಬಲವಾಗಿ ಬೀಸುತ್ತಿದ್ದರೂ ದೀಪಾವಳಿ ಹಬ್ಬದ ಸಂಭ್ರಮವನ್ನು ಪ್ರಶಾಂತವಾಗಿ ಬೆಳಗುವ ಹಣತೆ ಇದುವರೆಗೆ ಹೇಗೋ ಆರದಂತೆ ಉಳಿಸಿಕೊಂಡಿದೆ. ಇದು ಉಳಿಯಲಿಕ್ಕೆ ಮುಖ್ಯ ಕಾರಣ ಕೃಷಿಮೂಲವಾದ ಭಾರತೀಯ ಸಂಸ್ಕೃತಿ. ಹಣತೆ ಈ ನೆಲದ ಮಣ್ಣಿನಿಂದ ಮಾಡಿದ್ದು, ಬತ್ತಿಗೆ ಮೂಲ ರೈತ ಹೊಲದಲ್ಲಿ ಬೆಳೆದ ಹತ್ತಿ, ಎಣ್ಣೆಯ ಕಾಳುಗಳನ್ನು ಬಿತ್ತಿ ಬೆಳೆದವನೂ ಅವನೇ. ಮಕ್ಕು ಬಂದಾಗ ತೆಗೆದು, ತಿದ್ದಿ ತೀಡಿ ಅದನ್ನು ಇನ್ನಷ್ಟು ಉಜ್ವಲಗೊಳಿಸಬಹುದು. ಆದರೆ ಈ ಅನುಕೂಲತೆ ವಿದ್ಯುದ್ದೀಪಕ್ಕೆ ಇಲ್ಲ. ವಿದ್ಯುಚ್ಛಕ್ತಿ ಕೈಕೊಟ್ಟರೆ ಬಲ್ಬಿಗೆ ಬೆಳಕೇ ಇಲ್ಲ. ಇದು ಈಚೆಗೆ ನಮ್ಮ ನಿತ್ಯಾನುಭವ, ವಿದ್ಯುದ್ದೀಪ ನಾಗರಿಕತೆಯ ಸಂಕೇತವಾಗಿದ್ದರೆ, ಹಣತೆ ನಮ್ಮ ಸಂಸ್ಕೃತಿಯ ಕುರುಹಾಗಿದೆ.

ದೀಪಾವಳಿ ಹಬ್ಬ ನಾಗರಿಕರಲ್ಲಿ ಪೌರಾಣಿಕ ಪ್ರಮಾಣಗಳನ್ನು ಪಡೆದುಕೊಂಡಿದ್ದರೆ, ಜಾನಪದ ಸಂಪ್ರದಾಯಕ್ಕನುಸರಿಸಿ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ದೀವಳಿಗೆ, 'ಹಟ್ಟಿಯಹಬ್ಬ' ಎಂದು ಹೆಸರಾಗಿದೆ. ಗವಳಿಗರ ಅಥವಾ ದನಗಾಹಿಗಳ ಸಂಸ್ಕೃತಿ ಪರಂಪರೆಯೆ ಇಲ್ಲಿ ಒಡೆದು ಕಾಣುತ್ತದೆ. 'ಆಣೆ ಪೀಣೆ ಜಾಣೆಗೋ' ಹಾಡು ಬೆಳುವಲ ಸೀಮೆಯಂತೆ ಮಲೆನಾಡಿನ ಒಕ್ಕಲು ಮಕ್ಕಳಿಂದಲೂ ಕೇಳಿಬರುತ್ತದೆ. ಮನೆಗಳ ಮುಂದೆ 'ಶಿವನಬುಟ್ಟಿ' ತೂಗಿದರೆ, ಬಾಂದಳದಲ್ಲಿ 'ಆಕಾಶಬುಟ್ಟಿ'ಗಳು ತೇಲಿ ಹಾರುತ್ತವೆ. 'ಸ್ವಾತಿ' ಮಳೆಯ ಜೊತೆಗೇ ಕಾರ್ತಿಕ ಮಾಸವು ಬರುವುದರಿಂದ ಹಿಂಗಾರಿ ಬೆಳೆಗಳಿಗೆ 'ಸ್ವಾತಿ' ಅಮೃತಪ್ರಾಯವಾದುದು. ಅಂತೆಯೇ ಬಿಳಿಜೋಳದ ತೆನೆಗಳಲ್ಲಿ

ಸ್ವಾತಿಮುತ್ತಿನಂಥ ಕಾಳು ಕಂಗೊಳಿಸುತ್ತವೆ.

ನಮ್ಮ ಕನ್ನಡ ಕಾವ್ಯದುದ್ದಕ್ಕೂ ದೀಪ ಅಥವಾ ದೀವಿಗೆ ವಿವಿಧ ಸಂದರ್ಭಗಳಲ್ಲಿ ಸಂಸ್ಕೃತಿಯ ಅಥವಾ ಆಧ್ಯಾತ್ಮಿಕ ಶಕ್ತಿಯ ಪ್ರತೀಕ ಇಲ್ಲವೆ ಪ್ರತಿಮೆಯಾಗಿ ವಿಶೇಷಾರ್ಥವನ್ನು ನೀಡುತ್ತ ಬಂದಿದೆ. ಭೀಷ್ಮರ ಅವಸಾನ ಕಾಲದಲ್ಲಿ ಕಂಡ ಸೂರ್ಯಾಸ್ತವನ್ನು 'ಪಡುವಣ ಶೈಲ ವಿಪುಲಸ್ತಂಭ ದೀವಿಗೆಯಂತೆ ರವಿ ಮೆರೆದ' ಎಂದು ವರ್ಣಿಸುತ್ತದೆ ಕುಮಾರವ್ಯಾಸನ ಪ್ರತಿಭೆ. ನಮ್ಮ ಆಧುನಿಕ ಕನ್ನಡ ಕವಿಗಳ ಕವನ ಸಂಗ್ರಹಗಳ ಹೆಸರನ್ನೇ ನೋಡಿ: ಪು.ತಿ.ನ. ಅವರ ಪ್ರಥಮ ಕವನ ಸಂಗ್ರಹದ ಹೆಸರೇ 'ಹಣತೆ', ವಿ.ಸೀ. ಯವರ ಕವನ ಸಂಗ್ರಹವೊಂದರ ಶೀರ್ಷಿಕೆ 'ದೀಪಗಳು', ಕೆ.ಎಸ್.ನ. ಅವರದು 'ದೀಪದ ಮಲ್ಲಿ', ಜಿ.ಎಸ್.ಎಸ್. ಅವರದು 'ದೀಪದ ಹೆಜ್ಜೆ' ಮತ್ತು 'ಕಾರ್ತೀಕ', ನನ್ನದು 'ದೀಪಧಾರಿ'. ಗೋವಿಂದ ಪೈಯವರದು (ಮರಣೋತ್ತರ ಸಂಗ್ರಹ) 'ನಂದಾದೀಪ', ಬೇಂದ್ರೆಯವರ ಸುಂದರ ಭಾವಗೀತೆಗಳಲ್ಲಿ 'ದೀಪ'ವೂ ಒಂದು. - ಹೀಗೆ ದೀಪ, ದೀಪಾರಾಧನೆ, ದೀಪೋತ್ಸವ, ದೀಪಲಕ್ಷ್ಮಿ, ದೀಪದಾನ ಮುಂತಾದವು ಭಾರತೀಯರ ಹಾಗೆಯೇ ಕನ್ನಡಿಗರ ಬದುಕಿನ ಜೀವಾಳವಾಗಿ ಬಿಟ್ಟಿವೆ.

ದೀಪಾವಳಿ ಅಥವಾ ಬೆಳಕನ್ನು ವಸ್ತುವಾಗಿಸಿಕೊಂಡು ನಾನು ಅನೇಕ ಕವಿತೆಗಳನ್ನು ಬರೆದದ್ದುಂಟು. ಹಾಗೆಯೇ ಬೆಳಕು ರೂಪಕವಾಗಿ, ಸಂಕೇತವಾಗಿ ಬಿಡಿಬಿಡಿಯಾಗಿಯೂ ನನ್ನ ಕಾವ್ಯದಲ್ಲಿ ಅಲ್ಲಲ್ಲಿ ಕಾಣಿಸಿಕೊಂಡಿದೆ. ಇದನ್ನು ಗಮನಿಸಿಯೇ ಹಿರಿಯ ವಿಮರ್ಶಕರಾದ ಡಾ. ಜಿ.ಎಸ್. ಆಮೂರ ಅವರು ನನ್ನ ಸಮಗ್ರಕಾವ್ಯಕ್ಕೆ ಬರೆದ ಪ್ರಸ್ತಾವನೆಯಲ್ಲಿ ಹೀಗೆ ಬರೆದಿದ್ದಾರೆ. "ಸಮರ್ಪಣೆ, ಸಮದರ್ಶನ, ಸ್ವೀಕೃತಿ, ಮಹದ ಅಭೀಪ್ಸೆ, ಆತ್ಮಕೃಷಿ ಇಂಥ ಮೌಲ್ಯಗಳ ಉಪಾಸನೆಯ ಸಂಕಲ್ಪ ಕಣವಿಯವರ ಮೊದಲ ಹಂತದ ಕಾವ್ಯದ ಮುಖ್ಯ ಪ್ರೇರಣೆಯಾಗಿದೆ. ಅವರ ಕಾವ್ಯದ ಕೇಂದ್ರಸ್ಥಾನದಲ್ಲಿರುವ 'ಬೆಳಕು' ಈ ಎಲ್ಲ ಮೌಲ್ಯಗಳನ್ನು ಒಳಗೊಳ್ಳುವ ಆದರ್ಶದ ಪ್ರತೀಕ. ಬೆಳಕಿನ ಸಂಕೇತ ವೇದಕಾಲದಷ್ಟು ಪೂರ್ವದ್ದಾದರೂ ರೊಮ್ಯಾಂಟಿಕ್ ಕಾವ್ಯದಲ್ಲಿ ಅದಕ್ಕೆ ವಿಶೇಷವಾದ ಪ್ರಾಧ್ಯಾನ್ಯವಿದೆ."

ಕವಿತೆಯ ವಸ್ತು-ಭಾವ-ಶೈಲಿಯ ಸಮಗ್ರೀಕರಣದಲ್ಲಿ ಒಂದಾಗಿಬಿಟ್ಟಿರುವ ರೂಪಕ, ಸಂಕೇತಗಳನ್ನು ಪ್ರತ್ಯೇಕವಾಗಿ ಬಿಡಿಸಿಡುವದು ಕಷ್ಟವಾದರೂ ಕೆಲವೊಂದು ನನ್ನ ಕವಿತೆಯ ನುಡಿಗಳನ್ನು ('ಬೆಳಕಿ'ಗೆ ಸಂಬಂಧಪಟ್ಟಂತೆ) ಇಲ್ಲಿ ಉದಾಹರಿಸಬಹುದು:

ಹೊಗೆ ತುಂಬಿ, ಸಗೆ ತುಂಬಿ
ಬಣ್ಣ ಬಣ್ಣದ ಸವಿರು ಕಾಗದದ ಬುಟ್ಟಿಯಲಿ
ಜೀವ ತುಂಬಿ
ದೂರ ಹಾರುವದೆಂಬ ಭರವಸೆಯ ನಂಬಿ,

ನಮ್ಮ ಹಿರಿಯಾಸೆಗಳ ಉರಿವ ಕಕ್ಕಡವಿಟ್ಟು
ಉತ್ಸಾಹ, ಸಾಹಸಕೆ ರೂಪುಗೊಟ್ಟು
ಮೇಲುನಾಡಿಗೆ ತೇಲಬಿಟ್ಟೆವಿದೊ
ಚೈತನ್ಯದಾಕಾಶಬುಟ್ಟಿ

('ಆಕಾಶಬುಟ್ಟಿ' ೧೯೬೩)

* * *

ಜಗವ ತುಂಬಿದ ಬೆಳಕು ನಮಗೇಕೊ ನಾಲದಿದೆ
ಎನಿತು ಮಾನವನೆದೆಯ ಆಳ, ಅಗಲ!
ಬಂದಷ್ಟು ಇಂಗುತಿದೆ, ಮತ್ತೆ ಬರಿದಾಗುತಿದೆ
ಎಷ್ಟು ಸೆಲೆಯೊಡೆದರೂ ವಿಫಲ ವಿಫಲ!

('ಚಿರಂತನ ದಾಹ' ೧೯೫೩)

* * *

ನೂರು ಹೃದಯದ ಮೇರು ಭಾವಗಳ
ನೂರಾರು ಸಾಲು ದೀಪ
ಹೊತ್ತಿ ಉರಿದಿವೆ ಸುತ್ತು ಕತ್ತಲೆಯ ಕೂಪದಲಿ-
ಒಂದು ಚಣ ಬೆಳಕು, ನಗೆ, ನಲಿವು ಸಲ್ಲಾಪ,
ಮರುಗಳಿಗೆ 'ಆ' ಎಂದು ಅಂಧಕಾಸುರ ಬಂದು
ಕೊಳ್ಳೆ ಹೊಡೆಯಲು ಕೇಳಿ ಬರುವುದೊಂದೇ ಸೊಲ್ಲು
ಅಣುಕಣದ ವಿಪ್ರಲಾಪ!

('ಪಣತಿ' ೧೯೫೬)

* * *

ಎಷ್ಟು ಹಣತೆಗಳಿಂದ ಕತ್ತಲೆಯು ಕರಗುವದು?
ಎಷ್ಟು ಕವಿತೆಗೆ ಜಗದ ಕಣ್ಣು ತೆರೆಯುವದು?-
ಒಂದಿದ್ದರೂ ಸಾಕು, ಮನೆಗೆ ಬೆಳಕಾಗುವದು
ಒಂದು ಕವಿತೆಗು ಕೂಡ ಮನ ಕರಗಬಹುದು

('ಒಂದು-ಹಲವು' ೧೯೪೯)

ಸರ್ವಜ್ಞ ಕವಿಯು, 'ಜಾತಿ'-'ಜ್ಯೋತಿ'ಯನ್ನು ಮುಖಾಮುಖಿಯಾಗಿಸಿದ ಪ್ರತಿಮೆಯಿಂದ ಪ್ರಾರಂಭವಾದ ಈ ಲೇಖನವನ್ನು ಅವನದೇ ಅರ್ಥಪೂರ್ಣವಾದ ತ್ರಿಪದಿಯೊಂದನ್ನು ಉದಾಹರಿಸಿ ಮುಗಿಸಬಹುದು. ಯಾಕೆಂದರೆ ಅವನ ಪ್ರತಿಯೊಂದು ತ್ರಿಪದಿಯೂ ಒಂದೊಂದು ಹಣತೆಯೇ.

ಧ್ಯಾನದಾ ಹೊಸ ಬತ್ತಿ | ಮೌನದಾ ತಿಳಿದುಪ್ಪ
ಸ್ವಾನುಭವವೆಂಬ ಬೆಳಗಿನಾ ಜ್ಯೋತಿ
ಅಜ್ಞಾನವನು ಸುಡುಗು ಸರ್ವಜ್ಞ ||

೧೯೫೭ರಲ್ಲಿ ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ : ನೆನಪಿನ ಒಂದು ಇಣುಕು ನೋಟ

೧೯೫೫ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ, ಕನ್ನಡ ಸಾಹಿತ್ಯಸಮ್ಮೇಳನ ಯಶಸ್ವಿಯಾಗಿ ನೆರವೇರಿತ್ತು. ಶಿವರಾಮ ಕಾರಂತರು ಆ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಬಿ. ಶಿವಮೂರ್ತಿಶಾಸ್ತ್ರಿಗಳು, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ. ಡಿ.ಸಿ. ಪಾವಟೆಯವರನ್ನು ಭೆಟ್ಟಿಯಾಗಿ, ಮೈಸೂರಿನಂತೆ ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಧಾರವಾಡದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನೆರವೇರಿಸಲು ಬಿನ್ನವಿಸಿ ಪಾವಟೆಯವರನ್ನು ಒಪ್ಪಿಸಿದರು. ಅವರು ವಿಶ್ವವಿದ್ಯಾಲಯದ ಸಿಂಡಿಕೇಟಿನ ಒಪ್ಪಿಗೆ ಪಡೆದು, ಸಿಂಡಿಕೇಟಿನ ಸದಸ್ಯರಾದ ಎನ್.ಕೆ. ದೀಕ್ಷಿತ ವಕೀಲರ ಅಧ್ಯಕ್ಷತೆಯಲ್ಲಿ ಸ್ಥಾನಿಕ ಸಮಿತಿಯೊಂದನ್ನು ನಿಯಮಿಸಿ, ಪ್ರಸಾರಾಂಗದ ನಿರ್ದೇಶಕನಾಗಿದ್ದ ನನ್ನನ್ನು ಪ್ರಧಾನ ಕಾರ್ಯದರ್ಶಿಯಾಗಿಯೂ, ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎಸ್. ದೀಕ್ಷಿತ ಅವರನ್ನು ಸಹಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಲು ನಿಯೋಜಿಸಲಾಯಿತು.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನು ಆಯ್ಕೆಮಾಡಲು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸಭೆಯನ್ನು ಉದಕಮಂಡಲದ (ಊಟಿ) ಕರ್ನಾಟಕ ಸಂಘದಲ್ಲಿ ಕರೆಯಲಾಯಿತು. ಮುಂಬರುವ ಧಾರವಾಡ ಸಾಹಿತ್ಯಸಮ್ಮೇಳನದ ಕಾರ್ಯದರ್ಶಿಯಾದ ನನ್ನನ್ನೂ ಆ ಸಭೆಗೆ ಆಮಂತ್ರಿಸಿದರು. ಎಲ್ಲರೂ ಸಭೆಗೂಡಿ ಕುವೆಂಪು ಅವರನ್ನು ಒಮ್ಮತದಿಂದ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಆಯ್ಕೆ ಮಾಡಲಾಯಿತು. ಉದಕಮಂಡಲದಿಂದ ತಿರುಗಿ ಬರುವಾಗ, ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳ ಕಚೇರಿಗೆ ಹೋಗಿ, ಕುವೆಂಪು ಅವರನ್ನು ಕಂಡು, ಧಾರವಾಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಅವರನ್ನು ಒಪ್ಪಿಸಲಾಯಿತು. ಶಿವಮೂರ್ತಿ ಶಾಸ್ತ್ರಿಗಳು, ಆಗ ತಮ್ಮ ದೇಹದ ತೂಕಕ್ಕೆ ತಕ್ಕಂತೆ ಗಡುತರವಾದ ಬೆತ್ತವೊಂದನ್ನು ಹಿಡಿದಿರುತ್ತಿದ್ದರು. ಆ ಸಂದರ್ಭದಲ್ಲಿ ಕುವೆಂಪು ಅವರು, "ಅಂತೂ ಅಧ್ಯಕ್ಷತೆಗೆ ಒಪ್ಪಿಸಲು ಶಾಸ್ತ್ರಿಗಳು ದಂಡಧಾರಿಗಳಾಗಿಯೇ ಬಂದಂತೆ ಕಾಣುತ್ತದೆ" ಎಂದು ಹಾಸ್ಯಮಾಡಿ ಎಲ್ಲರನ್ನೂ ನಗಿಸಿದರು. ಆಗ ನಮ್ಮ ಜೊತೆಗೆ ಪರಿಷತ್ತಿನ

ಕಾರ್ಯಕಾರಿ ಸಮಿತಿಯ ಸದಸ್ಯರಾದ 'ಸಂಯುಕ್ತಕರ್ನಾಟಕ'ದ ವ್ಹಿ.ಬಿ. ನಾಯಕರೂ ಇದ್ದರು.

೧೯೫೭ ಮಾರ್ಚ್ ತಿಂಗಳಲ್ಲಿ ಮಾಡಬೇಕೆಂದಿದ್ದ ಸಮ್ಮೇಳನವನ್ನು ಸಕಲ ಸಿದ್ಧತೆಗಾಗಿ, ಮೇ ತಿಂಗಳಿಗೆ ಮುಂದೂಡಲಾಯಿತು. ಕುಲಪತಿಗಳಾಗಿದ್ದ ಡಾ. ಡಿ.ಸಿ. ಪಾವಟೆಯವರು ಕೇಂದ್ರ ಸರಕಾರದ ಶಿಕ್ಷಣ ಆಯೋಗದ ಧುರೀಣರಾಗಿ ಆರು ತಿಂಗಳು ಅಮೇರಿಕೆಗೆ ಹೋಗಬೇಕಾಗಿ ಬಂದದ್ದರಿಂದ ಪ್ರಭಾರಿ ಕುಲಪತಿಗಳಾದ ಡಾ. ಶಿ.ಚ. ನಂದೀಮಠ ಅವರು ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ವಿಶ್ವವಿದ್ಯಾಲಯದ ಮುಖ್ಯ ಕಚೇರಿ ಮತ್ತು ಸ್ನಾತಕೋತ್ತರ ಶಿಕ್ಷಣ ವಿಭಾಗಗಳು ಹೊಸ ಆವರಣದ ಕಟ್ಟಡಗಳಿಗೆ ಸ್ಥಳಾಂತರಗೊಂಡಿದ್ದರೂ ಗ್ರಂಥಾಲಯ ಮಾತ್ರ ಇನ್ನೂ ಸರಕಾರಿ ಟ್ರೇನಿಂಗ್ ಕಾಲೇಜಿನಲ್ಲಿಯೇ (ಈಗಿನ ಡಾಯೆಟ್) ಇತ್ತು. ಸಾಹಿತ್ಯ ಸಮ್ಮೇಳನದ ಕಚೇರಿಯನ್ನು ಅಲ್ಲಿಯೇ ಒಂದು ದೊಡ್ಡ ಕೋಣೆಯಲ್ಲಿ ತೆರೆಯಲಾಯಿತು. ನಾನು ಪ್ರತಿದಿನ ಪ್ರಸಾರಾಂಗದ ಕೆಲಸ ಮುಗಿಸಿಕೊಂಡು ಟ್ರೇನಿಂಗ್ ಕಾಲೇಜಿನ ಸಮ್ಮೇಳನದ ಕಚೇರಿಗೆ ಹೋಗಿ ಅಲ್ಲಿಯ ಕೆಲಸವನ್ನು ಪೂರೈಸುತ್ತಿದ್ದೆ. ವಿವಿಧ ಸಮಿತಿಗಳ ಕಾರ್ಯಕಲಾಪಗಳಲ್ಲಿಯೂ ಅವಶ್ಯವಿದ್ದಷ್ಟು ಭಾಗವಹಿಸುತ್ತಿದ್ದೆ.

೧೯೫೭ ಮೇ ತಿಂಗಳಿನಲ್ಲಿ ದಿನಾಂಕ ೭, ೮, ೯ ರಂದು ಮೂರು ದಿನ ಕುವೆಂಪು ಅವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನ ಅತ್ಯಂತ ಸಂಭ್ರಮದಿಂದಲೇ ನೆರವೇರಿತು. ಕರ್ನಾಟಕ ಏಕೀಕರಣವಾದ ಮೇಲೆ ಇದೇ ಪ್ರಥಮ ಸಮ್ಮೇಳನವಾದ್ದರಿಂದಲೂ ಕುವೆಂಪು ಅವರಂಥ ಮಹಾಕವಿ ಮತ್ತು ಹಿರಿಯ ಸಾಹಿತಿಗಳು ಅಧ್ಯಕ್ಷರಾದುದರಿಂದಲೂ ಸಮಾರಂಭ ಮೂರು ದಿನವೂ ಕಿಕ್ಕಿರಿದು ತುಂಬಿಕೊಂಡಿತ್ತು. ಕರ್ನಾಟಕದ ಮೂಲೆಮೂಲೆಗಳಿಂದಲೂ ಹಿರಿ-ಕಿರಿಯ ಸಾಹಿತಿಗಳೂ, ಪತ್ರಿಕಾಕರ್ತರೂ, ಶಿಕ್ಷಕ ವರ್ಗದವರೂ, ಸಾಮಾನ್ಯ ಸಾಹಿತ್ಯಾಸಕ್ತರೂ ಬಹುಸಂಖ್ಯೆಯಲ್ಲಿ ನೆರೆದು ತೃಪ್ತಿಪಟ್ಟರು.

ಕುವೆಂಪು ಅವರು ಮೆರವಣಿಗೆಯನ್ನು ಬೇಡವೇ ಬೇಡವೆಂದು ನಿರಾಕರಿಸಿದ್ದರಿಂದ ಸಮಾರಂಭದ ಮಹಾದ್ವಾರದಿಂದ ಓಲಗದೊಂದಿಗೆ ವೇದಿಕೆಗೆ ಬರಮಾಡಿ ಕೊಳ್ಳಲಾಯಿತು. ವೇದಿಕೆಯ ಮೇಲೆ ಸ್ವಾಗತಾಧ್ಯಕ್ಷರಾದ ಡಾ. ಶಿ.ಚ. ನಂದೀಮಠರು, ಹಿಂದಿನ ವರ್ಷದ ರಾಯಚೂರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಶ್ರೀರಂಗರು, ಆಲೂರು ವೆಂಕಟರಾಯರು, ಬೇಂದ್ರೆಯವರು, ವಿ.ಕೃ.ಗೋಕಾಕರು, ಉತ್ತಂಗಿ ಚೆನ್ನಪ್ಪನವರು, ಹುಯಿಲಗೋಳ ನಾರಾಯಣರಾಯರು, ಎನ್.ಕೆ. ದೀಕ್ಷಿತರು, ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಿ. ಶಿವಮೂರ್ತಿ ಶಾಸ್ತ್ರಿಗಳು, ಪರಿಷತ್ತಿನ ಕಾರ್ಯದರ್ಶಿಗಳಾದ ಕೆ. ಗೋಪಾಲಕೃಷ್ಣರಾಯರು-ಇವರೇ ಮೊದಲಾದ ಹಿರಿಯರು,

ಸಾಹಿತಿಗಳು ಆಸೀನರಾಗಿ ಅದಕ್ಕೊಂದು ಘನತೆಯನ್ನು ತಂದುಕೊಟ್ಟಿದ್ದರು.

ಮುಖ್ಯಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪನವರು ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿದ ನಂತರ ಕುವೆಂಪು ಅವರ "ಸಂಸ್ಕೃತಿ ಕರ್ನಾಟಕ" ಕುರಿತ ಅಧ್ಯಕ್ಷೀಯ ಭಾಷಣವನ್ನು ಸಭಿಕರು ಏಕಾಗ್ರಚಿತ್ತದಿಂದ ಆಲಿಸಿದರು. ವಿವಿಧ ಗೋಷ್ಠಿಗಳನ್ನು ಮುಖ್ಯ ವೇದಿಕೆಯನ್ನೂ ಒಳಗೊಂಡಂತೆ ಸಮೀಪವೇ ಇದ್ದ ಬೇರೆ ಬೇರೆ ಸ್ಥಳಗಳಲ್ಲಿ ನಡೆಸುವ ಹೊಸ ಉಪಕ್ರಮವನ್ನು ಅಂದಿನಿಂದಲೇ ಪ್ರಾರಂಭಿಸಲಾಯಿತು. ಮೂರೂ ದಿನ ವಿವಿಧ ಗೋಷ್ಠಿಗಳಲ್ಲದೆ, "ಸಾಹಿತ್ಯಕ್ಕೆ ಆಧ್ಯಾತ್ಮಿಕತೆಯ ಆವಶ್ಯಕತೆಯಿದೆಯೆ?" ಎಂಬ ವಿಷಯವನ್ನು ಕುರಿತು ವಿಚಾರಸಂಕಿರಣವನ್ನೂ ವಿ.ಕೃ. ಗೋಕಾಕರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. (ಆಗ ಗೋಕಾಕರು ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರೂ ಆಗಿದ್ದರು). ವಿಚಾರಸಂಕಿರಣದ ವಿಷಯ ಕೇಳುಗರಲ್ಲಿ ಮೊದಲೇ ಕುತೂಹಲ ಹುಟ್ಟಿಸುವಂತಿತ್ತು.

ಮಹಾಕವಿಗಳೇ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾದ್ದರಿಂದ, ಅವರ ಪೂರ್ವಸಮ್ಮತಿಯನ್ನು ಪಡೆದು, ಅವರ ಅಧ್ಯಕ್ಷತೆಯಲ್ಲಿಯೇ ಕವಿಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು. ಸಮಗ್ರ ಕರ್ನಾಟಕದ ವಿವಿಧ ಭಾಗಗಳಿಂದ ಆಯ್ದು ನಾಲ್ವತ್ತು ಕವಿಗಳು ಕವಿಗೋಷ್ಠಿಯಲ್ಲಿ ಭಾಗವಹಿಸಿ ತಮ್ಮ ಕವಿತೆಯನ್ನು ತಮ್ಮದೇ ಆದ ಧಾಟಿಯಲ್ಲಿ ಹಾವಭಾವದೊಂದಿಗೆ ಹಾಡಿದ್ದು ನನಗಿನ್ನೂ ನೆನಪಿದೆ. ಕಾಸರಗೋಡಿನ ಕಯ್ಯಾರ ಕಿಞ್ಞಣ್ಣರೈಯವರು ಹೊಸತಾಗಿ ಬರೆದ 'ಬೆಂಕಿ ಬಿದ್ದಿದೆ ಮನೆಗೆ' ಎಂಬ ಕವಿತೆಯನ್ನು ಸ್ವಲ್ಪ ಆಕ್ರೋಶದಿಂದಲೇ ಓದಿದರು. ರಾಜ್ಯ ಪುನರ್ವಿಂಗಡಣಾ ಸಮಿತಿಯವರು ಕಾಸರಗೋಡ ತಾಲೂಕನ್ನು ಇಡಿಯಾಗಿ ಕೇರಳದಲ್ಲಿ ಸೇರಿಸಿದ್ದರ ಪ್ರತಿಭಟನೆಯೇ ಅವರ ಕವಿತೆಯ ವಸ್ತುವಾಗಿತ್ತು. ಕೊನೆಯಲ್ಲಿ ಕುವೆಂಪು ಅವರು ಒಂದೆರಡು ಮಾತಾಡಿ 'ಮನೆ ಮನೆಯ ತಪಸ್ವಿನಿಗೆ' ಎಂಬ ತಮ್ಮ ಕವಿತೆಯನ್ನು ಭಾವಪೂರ್ಣವಾಗಿ ವಾಚಿಸಿದರು.

ಸಮ್ಮೇಳನದ ಅಧ್ಯಕ್ಷರೇ ಕವಿಗೋಷ್ಠಿಯ ಅಧ್ಯಕ್ಷರಾದದ್ದು ಸಾಹಿತ್ಯ ಸಮ್ಮೇಳನದ ಇತಿಹಾಸದಲ್ಲಿಯೇ ಅದೇ ಪ್ರಥಮ ಹಾಗೂ ಅದೇ ಕೊನೆ. ಹೇಗೂ ಚಂದ್ರಶೇಖರ ಕಂಬಾರರಂಥ ಕವಿಗಳೇ ಆಳನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವಾಗ ಅವರನ್ನೇ ಒಂದು ಕವಿಗೋಷ್ಠಿಯ ಅಧ್ಯಕ್ಷರನ್ನಾಗಿ ಮಾಡಿದರೆ ಧಾರವಾಡ ಸಾಹಿತ್ಯ ಸಮ್ಮೇಳನದ ವೈಶಿಷ್ಟ್ಯವನ್ನು ಪುನಃ ಎತ್ತಿಹಿಡಿದಂತಾಗುತ್ತದೆಂದು ಸಂಘಟಕರಿಗೆ ನಾನೇ ಸೂಚಿಸಿದ್ದೆ.

ಬಹಳ ಜನ ಪ್ರೇಕ್ಷಕರ ಅಪೇಕ್ಷೆಯಂತೆ ಕವಿಗೋಷ್ಠಿಯ ಪ್ರಾರಂಭದಲ್ಲಿ,

ಕುವೆಂಪು ಅವರ ಕುಟುಂಬದ ಎಲ್ಲ ಸದಸ್ಯರನ್ನು ವೇದಿಕೆಯ ಮೇಲೆ. ಸ್ವಲ್ಪ ಸಮಯದ ಮಟ್ಟಿಗೆ ಮಾತ್ರ ಕೂರಿಸಲಾಗಿತ್ತು. ಪೂರ್ಣಚಂದ್ರ ತೇಜಸ್ವಿಯವರು ಆಗಿನ್ನೂ ಬಹಳ ಚಿಕ್ಕವರಿದ್ದರು. ಅವರೆಲ್ಲರನ್ನೂ ವಿಶ್ವವಿದ್ಯಾಲಯದ ಅತಿಥಿಗೃಹದಲ್ಲಿ ಇಳಿಸಲಾಗಿತ್ತು. ಅವರ ಜೊತೆಗೆ ಬಂದ ಪ್ರೊ. ದೇ. ಜವರೇಗೌಡ ಮುಂತಾದ ಇತರರಿಗೆ ಖಾಲಿಯಿದ್ದ ಪ್ರಾಧ್ಯಾಪಕರ ನಿವಾಸದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಕುವೆಂಪು ಅವರು ವಿಶ್ವವಿದ್ಯಾಲಯದ ಈಗಿರುವ ಸ್ಥಳವನ್ನು ಮತ್ತು ಸುತ್ತುಮುತ್ತಿನ ನಿಸರ್ಗದ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಸಮ್ಮೇಳನದ ಪ್ರಾರಂಭದ ಹಿಂದಿನ ದಿನ, ಹುಬ್ಬಳ್ಳಿಯ ಜನತೆ ಅಲ್ಲಿಯ ಟೌನ್‌ಹಾಲ್‌ನಲ್ಲಿ ಕುವೆಂಪು ಅವರಿಗೆ ಪೌರಸನ್ಮಾನವನ್ನು ನೀಡಿ ಗೌರವಿಸಿದರು. ಆ ಸಂದರ್ಭದಲ್ಲಿ ಕವಿಗಳಾದ ವಾಲಿ ಗಂಗಪ್ಪನವರು ತಾವು ಕುವೆಂಪು ಅವರನ್ನು ಕುರಿತು ಬರೆದ ಕವಿತೆಯೊಂದನ್ನು ಹಾಡಿದರು.

ಸಮ್ಮೇಳನದ ಕೊನೆಯ ದಿನ ಸಮಾರೋಪದ ಸಂದರ್ಭದಲ್ಲಿ ಕರ್ನಾಟಕದ ವಿವಿಧ ಭಾಗಗಳಿಂದ ಬಂದ ಆಯ್ದ ಪ್ರತಿನಿಧಿಗಳಿಗೆ ಸಮ್ಮೇಳನದ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸಲು ಪ್ರತಿಯೊಬ್ಬರಿಗೂ ಐದು ನಿಮಿಷದ ಅವಧಿಯ ಅವಕಾಶವನ್ನು ಕೊಡಲಾಗಿತ್ತು. ಸಮ್ಮೇಳನದ ಬಗ್ಗೆ ಬಹುಶಃ ಎಲ್ಲರೂ ಮೆಚ್ಚಿಗೆಯ ಮಾತುಗಳನ್ನೇ ಆಡಿದರು. ಶ್ರೀಮತಿ ಅನುಪಮಾ ನಿರಂಜನ ಅವರು ತಮ್ಮ ಮಾತು ಮುಗಿಸುವ ಪೂರ್ವದಲ್ಲಿ ತಮ್ಮ ಜೊತೆಗೆ ಬಂದಿದ್ದ ತ್ರಿವೇಣಿಯವರನ್ನು ಪರಿಚಯಿಸಿ ಪ್ರೇಕ್ಷಕರ ಪ್ರಶಂಸೆಗೆ ಪಾತ್ರರಾದರು.

ಕುವೆಂಪು ಹಾಗೂ ಅವರ ಜೊತೆಗೆ ಬಂದವರಿಗೆ ಮತ್ತು ಕೆಲವು ಸಾಹಿತಿಗಳಿಗೆ ಒಂದು ದಿನ ಪ್ರೊ. ಗೋಕಾಕರು ಹಾಗೂ ಮತ್ತೊಂದು ದಿನ ಪ್ರೊ. ಮಾಳವಾಡರು ಭೋಜನ ಕೂಟವನ್ನು ಏರ್ಪಡಿಸಿದ್ದರು. ಗೋಕಾಕರು "ಆಗು ನೀ ಅನಿಕೇತನ' ಎಂಬ ಕುವೆಂಪು ಕವಿತೆಯನ್ನು ತಾವೇ ಇಂಗ್ಲಿಷಿಗೆ ಅನುವಾದಿಸಿ ಅದರ ಪ್ರತಿಯನ್ನು ಕುವೆಂಪು ಅವರಿಗೆ ಕೊಟ್ಟರು. ಕುವೆಂಪು ಅದನ್ನು ಕೃತಜ್ಞತೆಯಿಂದ ಸ್ವೀಕರಿಸಿ ಸಂತೋಷಪಟ್ಟರು.

ಆಗ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಸುಮಾರು ಐದಾರು ಲಕ್ಷ ರೂ. ಖರ್ಚಾಗಿರಬಹುದು. ಸರಕಾರದ ನೆರವಿನೊಂದಿಗೆ, ಸ್ವಾಗತ ಸಮಿತಿ ಕೆಲವು ಸಂಘಸಂಸ್ಥೆಗಳಿಂದ ಹಾಗೂ ನಗರಸಭೆಯಿಂದ ಸ್ವೀಕರಿಸಿದ ಕೊಡುಗೆಯೂ ಸೇರಿತ್ತು. ಎಲ್ಲ ಖರ್ಚುವೆಚ್ಚ ಕಳೆದ ಮೇಲೆ ಉಳಿದ ಹಣವನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಕೊಡಬೇಕೆಂಬ ನಿಯಮದ ಪ್ರಕಾರ ಪರಿಷತ್ತಿಗೆ ಸಂದಾಯ ಮಾಡಲಾಯಿತು.

ಸಾಮಾನ್ಯವಾಗಿ, ಮರುವರ್ಷ ಸಾಹಿತ್ಯ ಸಮ್ಮೇಳನ ನಡೆಸಲು ಕೆಲವು ಸ್ಥಳಗಳಿಂದ

ಆಮಂತ್ರಣ ಬರುವದುಂಟು. ಹಾಗೆ ಬಂದವುಗಳನ್ನು ಸಮ್ಮೇಳನದ ಕೊನೆಯ ದಿನ, ಪರಿಷತ್ತಿನ ಕಾರ್ಯಕಾರಿ ಸಮಿತಿ ನಿರ್ಧರಿಸುವದುಂಟು. ಆ ಸಂದರ್ಭದಲ್ಲಿ ಬಳ್ಳಾರಿ ಸೂಕ್ತಸ್ಥಳವೆಂದು ನಿರ್ಧರಿಸಿ ಸಭೆಯಲ್ಲಿ ಪ್ರಕಟಿಸಲಾಯಿತು.

೧೯೫೮ರಲ್ಲಿ, ವಿ.ಕೃ. ಗೋಕಾಕರ ಅಧ್ಯಕ್ಷತೆಯಲ್ಲಿ ಬಳ್ಳಾರಿಯ ೪೦ನೇ ಸಾಹಿತ್ಯ ಸಮ್ಮೇಳನ ಎಂದಿನಂತೆ ಯಶಸ್ವಿಯಾಗಿಯೇ ನೆರವೇರಿತು. ಗೋಕಾಕರ ಅಧ್ಯಕ್ಷ ಭಾಷಣದ ವಿಷಯ 'ವಿಶ್ವಮಾನವನಾಗಬೇಕಾದ ಕನ್ನಡಿಗ' ಎಂದಿತ್ತು.

'ವಿಜಯಕರ್ನಾಟಕ' ದಿನಪತ್ರಿಕೆ ೨೦೧೯

ನಾಡ ಹಬ್ಬ ಮೈಸೂರು ದಸರಾ ಉತ್ಸವ : ೨೦೧೬

೧-೧-೨೦೧೬

ಉದ್ಘಾಟನ ಭಾಷಣ

ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಗೆ ಮತ್ತು ದಸರಾ ಮಹೋತ್ಸವ ಸಮಿತಿಯ ಎಲ್ಲ ಸದಸ್ಯರಿಗೆ

ಗೌರವಾನ್ವಿತ ಆಮಂತ್ರಿತರಿಗೆ, ಮಾನ್ಯ ಸಭಿಕರಿಗೆ-ಎಲ್ಲರಿಗೂ ನಮಸ್ಕಾರ.

ಈ ವರ್ಷದ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಗೆ ನನ್ನನ್ನು ಬಹಳ ಪ್ರೀತಿಯಿಂದ ಬರಮಾಡಿಕೊಂಡು ಗೌರವಿಸಿದ್ದೀರಿ ಅದಕ್ಕಾಗಿ ತಮ್ಮೆಲ್ಲರಿಗೂ ಕೃತಜ್ಞತಾಪೂರ್ವಕ ಧನ್ಯವಾದಗಳು.

ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಿ ಹಾಗೂ ನಾಡ ದೇವತೆ ಶ್ರೀ ಕನ್ನಡ ಭುವನೇಶ್ವರಿ ದೇವಿ ಇವರ ಪವಿತ್ರ ಸನ್ನಿಧಿಯಲ್ಲಿ ಈ ವರ್ಷದ ಮೈಸೂರು ದಸರಾ ಮಹೋತ್ಸವವನ್ನು ನಿಮ್ಮೆಲ್ಲರ ಸಮ್ಮುಖದಲ್ಲಿ ಅತ್ಯಂತ ಸಂತೋಷದಿಂದ ಉದ್ಘಾಟಿಸಿದ್ದೇನೆ.

ಇಂದಿಗೆ ೭೪ ವರ್ಷಗಳ ಹಿಂದೆ, ೧೯೪೨ರಲ್ಲಿ ನಾನು ಮೊಟ್ಟಮೊದಲು ದಸರಾ ಉತ್ಸವವನ್ನು ನೋಡಿದ್ದು ಇನ್ನೂ ಕಣ್ಣಿಗೆ ಕಟ್ಟಿದಂತಿದೆ.

ನಾನು ನಾಲ್ಕನೆಯ ತರಗತಿಯಲ್ಲಿದ್ದಾಗ ಗೆಳೆಯರೊಡನೆ ಬಂದಿದ್ದೆ.

ಆಗ ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ ಆಗಲೇ ಜೋರಾಗಿ ಸಾಗಿತ್ತು ಮೈಸೂರು ಸಂಸ್ಥಾನಕ್ಕೂ ಅದರ ಬಿಸಿ ಆಗಲೇ ತಟ್ಟಿತ್ತು.

ಆಗ ನಾವೆಲ್ಲ ವಿದ್ಯಾರ್ಥಿಗಳು ಗಾಂಧೀಟೊಪ್ಪಿಗೆ ಹಾಕುತ್ತಿದ್ದೆವು.

ಇದೇ ಕಾರಣಕ್ಕಾಗಿ ಪ್ರೇಕ್ಷಣೀಯ ಸ್ಥಳಗಳಿಗೆ ಎಲ್ಲಿ ಹೋಗಬೇಕಾದರೂ ಮೊದಲೇ ಅನುಮತಿ ಪಡೆಯಬೇಕಾಗುತ್ತಿತ್ತು.

ಮುಖ್ಯವಾಗಿ ನನಗೆ ಚಾಮುಂಡಿ ಬೆಟ್ಟದಲ್ಲಿಯ 'ಲಲಿತಾದ್ರಿ'ಯನ್ನು ನೋಡಬೇಕಾಗಿತ್ತು.

ಕುವೆಂಪು ಅವರು ಬರೆದ 'ಲಲಿತಾದ್ರಿ' ಕವಿತೆಯನ್ನು ನಾನು ಹೈಸ್ಕೂಲಿನಲ್ಲಿದ್ದಾಗಲೇ ಓದಿ ಮೆಚ್ಚಿಕೊಂಡಿದ್ದೆ.

ಮೈಸೂರಿನ ಸೊಬಗನ್ನು ಸವಿಯಬೇಕಾದರೆ 'ಲಲಿತ ಲಲಿತಾದ್ರಿಯಲಿ ನಿಂತು

ನೋಡು' ಎಂದಿದ್ದರು ಕುವೆಂಪು

ಆ ಕವಿತೆಯ ಕೆಲವು ಸಾಲುಗಳು ಇನ್ನೂ ನನ್ನ ನೆನಪಿನಲ್ಲಿವೆ.

"ತಾರೆಗಳ ತವರೂರು
ಸಿಂಗರದ ಮೈಸೂರು
ಕನ್ನಡದ ಕುಶಲತೆಗೆ
ಕನ್ನಡದ ರಸಿಕತೆಗೆ
ಕನ್ನಡದ ನಿಪುಣತೆಗೆ
ಕನ್ನಡಿಯು ಮೈಸೂರು"

ಕರ್ನಾಟಕ ರಾಜ್ಯೋದಯದ ನಂತರ, ಮೈಸೂರು ದಸರಾ ಕವಿಗೋಷ್ಠಿಯಲ್ಲಿ ನಾನು ೩-೪ ಸಲ ಭಾಗವಹಿಸಿದ್ದುಂಟು.

೨೦೦೫ರಲ್ಲಿ ದಸರಾ ಕವಿಗೋಷ್ಠಿಯ ಉದ್ಘಾಟನೆಯನ್ನೂ ನೆರವೇರಿಸಿದ್ದೆ.

೭೪ ವರ್ಷಗಳ ಹಿಂದೆ ಕುವೆಂಪು ಪ್ರೇರಣೆಯಿಂದ ನಾನು ಯಾವ ಲಲಿತಾದ್ರಿಯಲ್ಲಿ ನಿಂತು ಮೈಸೂರಿನ ಸೊಬಗನ್ನು ಸವಿದಿದ್ದೇನೋ, ಅದೇ ಚಾಮುಂಡಿ ಬೆಟ್ಟದಲ್ಲಿ ಈ ಸಲದ ದಸರಾ ಮಹೋತ್ಸವವನ್ನು ಉದ್ಘಾಟಿಸುವ ಭಾಗ್ಯ ನನ್ನದಾಗಿದೆ.

ಇಂಥ ಅಪರೂಪದ ಅವಕಾಶವನ್ನೊದಗಿಸಿದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಗೂ, ದಸರಾ ಮಹೋತ್ಸವ ಸಮಿತಿಯ ಎಲ್ಲಾ ಸದಸ್ಯರಿಗೂ ನಾನು ಮತ್ತೊಮ್ಮೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ರಾಜ್ಯದಲ್ಲಿ ಬರಗಾಲದ ಛಾಯೆ ದಟ್ಟವಾಗಿ ಆವರಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಈ ಸಲದ ದಸರಾ ಉತ್ಸವವನ್ನು ಸರಳವಾದ 'ಸಾಂಪ್ರದಾಯಕ' ರೀತಿಯಲ್ಲಿ ಆಚರಿಸಲು ನಿರ್ಧರಿಸಿದೆ, ಕರ್ನಾಟಕ ಸರಕಾರ ಯೋಗ್ಯವಾದ ನಿರ್ಣಯವನ್ನೇ ತೆಗೆದುಕೊಂಡಿದೆ. ಈಗಷ್ಟೇ ಅಲ್ಲ, ಇನ್ನು ಮುಂದೆಯೂ ಸರಕಾರದ ಯಾವುದೇ ಕಾರ್ಯಕ್ರಮ, ನಿರಾಡಂಬರವಾಗಿ ಜರುಗಿ, ಸರಳತೆಯ ಸಹಜ ಸೌಂದರ್ಯವನ್ನು ಕಾಪಾಡಿಕೊಳ್ಳುವುದೆಂದು ನಾನು ಆಶಿಸಿದ್ದೇನೆ. ರಾಮಕೃಷ್ಣ ಪರಮಹಂಸರು ತಮ್ಮ ಶಿಷ್ಯರಿಗೆ ಸದಾಕಾಲ ಹೇಳುತ್ತಿದ್ದರು: "ಮನುಷ್ಯ ಸರಳನಾಗುವುದು, ಅಷ್ಟೇನೂ ಸುಲಭವಲ್ಲ. ಅದು ಅನೇಕ ಜನ್ಮಗಳ ತಪಸ್ಸಿನ ಫಲ" ಎಂದು 'ಶ್ರೀ ಸಾಮಾನ್ಯನೇ ಭಗವನ್ಮಾನ್ಯಂ' ಎಂಬ ಕುವೆಂಪು ವಾಣಿಯನ್ನು ಈ ಸಂದರ್ಭದಲ್ಲಿ ನೆನೆಯಬಹುದು.

ಒಂದು ಕಾಲಕ್ಕೆ ಕನ್ನಡ ನಾಡು, ತನ್ನ ರಾಜಕೀಯ ಸ್ವಾತಂತ್ರ್ಯವನ್ನು ಕಳೆದುಕೊಂಡು, ಪರದಾಸ್ಯದ ನೊಗವನ್ನು ಹೊತ್ತು ನಿಂತಾಗ, ಈ ನಾಡಿನ ಬಹುಭಾಗ

ತುಂಡು ತುಂಡುಗಳಾಗಿ, ಬೇರೆ ಬೇರೆ ಆಡಳಿತಕ್ಕೆ ಸೇರಿ, ಕನ್ನಡಿಗರಲ್ಲಿ ಪರಸ್ಪರ ಬಾಂಧವ್ಯ ಏರ್ಪಡದೆ, ತಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಂದ ದೂರವಾಗುವ ದುರ್ಭರ ಪ್ರಸಂಗವನ್ನು ಎದುರಿಸಬೇಕಾಯಿತು. ಪರಭಾಷೆ, ಪರಕೀಯ ಸಂಸ್ಕೃತಿಗಳ ಒತ್ತಡಕ್ಕೆ ಒಳಗಾಗಿ ಕನ್ನಡ ಜನ, ತಮ್ಮ ಅಸ್ತಿತ್ವದ ವಾಸ್ತವ ಸ್ವರೂಪವನ್ನೇ ಮರೆತುಬಿಟ್ಟಿದ್ದರು. ಇಂತಹ ಕಾಲದಲ್ಲಿ ನಾಡಿನ ಜನರನ್ನೆಲ್ಲ ಒಂದುಗೂಡಿಸಿ ನಲಿಯುವ ನಾಡಹಬ್ಬದ ಆಚರಣೆಗೆ ಅವಕಾಶವೆಲ್ಲಿ?

ಮೈಸೂರಿನ ಒಡೆಯರು ದಸರಾ ಉತ್ಸವದ ಪರಂಪರೆಯನ್ನು ಮುಂದುವರಿಸಿದ್ದ ರಾದರೂ, ತಮ್ಮತನವನ್ನು ಮರೆತಿದ್ದ ಮಿಕ್ಕೆಡೆಯ ಕನ್ನಡಿಗರನ್ನು ತನ್ನೆಡೆಗೆ ಆಕರ್ಷಿಸಲು ಅದು ಅಷ್ಟು ಸಮರ್ಥವಾಗಿರಲಿಲ್ಲ. ಒಂದು ಕಾಲದಲ್ಲಿ ಕನ್ನಡಿಗರ ಹೃದಯಗಳನ್ನೆಲ್ಲ ತನ್ನೆಡೆಗೆ ಸೆಳೆದುಕೊಂಡಿದ್ದ ಹಂಪೆಯ ತುಂಗಭದ್ರೆ, ಕಾಲದ ದುರ್ವಿಪಾಕದ ಕಾರಣವಾಗಿ ಮೈಸೂರು ಪ್ರದೇಶದಿಂದ ಮಿಕ್ಕ ಕನ್ನಡ ಪ್ರದೇಶವನ್ನು ವಿಭಾಗಿಸಿ ಗೆರೆಕೊರೆದಂತೆ ಪರಸ್ಪರ ಪರಿಚಯ ತಪ್ಪಿಹೋಗುವಂತೆ ಮಾಡಿದ್ದಳು. ಸರ್ವಸಂಪದ್ಭರಿತ ಭಾಷೆ, ಪ್ರಭಾವಶಾಲಿಯಾದ ಸಾಹಿತ್ಯ, ವೀರ ವೈಭವದ ಇತಿಹಾಸ - ಇಷ್ಟೆಲ್ಲ ತಮ್ಮವಾಗಿದ್ದರೂ ಅದರ ಅರಿವು ಯಾರಿಗೂ ಇರದಂಥ ಪರಿಸ್ಥಿತಿ ಒದಗಿದ್ದಿತು.

ಇಂಥ ಸಂದರ್ಭದಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆಗೊಂಡು, ಅಖಿಲ ಕರ್ನಾಟಕ ಏಕೀಕರಣದ ಕನಸನ್ನು ಕಂಡು ಅದಕ್ಕಾಗಿ ಸಾಂಸ್ಕೃತಿಕ ಹೋರಾಟವನ್ನು ಪ್ರಾರಂಭಿಸಿತು. ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ' ಗ್ರಂಥ ಬೆಳಕಿಗೆ ಬಂದು, ಕನ್ನಡಿಗರ ಸ್ವಾಭಿಮಾನ, ಸಂಸ್ಕೃತಿ, ಪ್ರಜ್ಞೆಯನ್ನು ಬಡಿದೆಬ್ಬಿಸಿತು. 'ಕರ್ನಾಟಕತ್ವದ ವಿಕಾಸ' ಎಂಬ ಪರಿಕಲ್ಪನೆಯನ್ನು ಕೊಟ್ಟ ಆಲೂರು ವೆಂಕಟರಾಯರು, ರಾಜಕಾರಣ, ಧರ್ಮ, ವಾಙ್ಮಯ, ಇತಿಹಾಸ, ಕಲೆ ಉದ್ದಿಮೆ ಮೊದಲಾದ ಯಾವತ್ತು ವಿಷಯಗಳನ್ನು 'ಕರ್ನಾಟಕತ್ವ' ಎಂಬ ಒಂದು ಶಬ್ದದಲ್ಲಿ ಸೇರ್ಪಡೆ ಮಾಡಿ ಕನ್ನಡಿಗರಿಗೆ ದಾರಿ ತೋರಿಸಿದರು. 'ಕರ್ನಾಟಕತ್ವ' ಎಂಬುದು ಫೋಕಸ್ಸಿಂಗ್ ಲೆನ್ಸ್ ಇದ್ದ ಹಾಗೆ, ಕಿರಣಕೇಂದ್ರದ ಆ ಗಾಜಿನೊಳಗಿಂದ ಭರತಭೂಮಿ ಮಾತ್ರವೇ ಏಕೆ ವಿಶ್ವವೇ ನಮಗೆ ಗೋಚರಿಸಬಲ್ಲದು. ಕನ್ನಡಿಗರು ಈ ಬಗೆಯ ಕರ್ನಾಟಕತ್ವವನ್ನು ಬೆಳಿಸಿಕೊಳ್ಳದೆ ಪೂರ್ಣ ಭಾರತೀಯರಾಗುವುದು ಸಾಧ್ಯವಿಲ್ಲವೆಂಬುದನ್ನು ಅವರು ಖಚಿತಪಡಿಸಿದರು.

ಕರ್ನಾಟಕದ ಸಾಂಸ್ಕೃತಿಕ ಕೇಂದ್ರಗಳಲ್ಲಿ ಒಂದಾದ ಮೈಸೂರಿನಲ್ಲಿ ನಡೆಯುತ್ತಿರುವ ಈ ದಸರಾ ಮಹೋತ್ಸವ ವಸುಧೆಯ ಒಳಗಿನ ಒಂದು ಬಿಂದುವಾಗಿ ತನ್ನೊಳಗೆ ಆ ವಸುಧೆಯನ್ನೇ ಅರಗಿಸಿಕೊಂಡ 'ಕನ್ನಡ'ದ ಒಂದು ಭವ್ಯ ಪ್ರತಿಮೆಯಾಗಿ

ಕಂಗೊಳಿಸುತ್ತಿದೆ. ಇಂಥ ಈ ಕನ್ನಡ ನಾಡಿಗೆ ಅನೇಕ ಶತಮಾನಗಳ ಒಂದು ಸುದೀರ್ಘವಾದ ಚರಿತ್ರೆಯಿದೆ, ಪರಂಪರೆಯಿದೆ. ಇದನ್ನು ಕಟ್ಟಿಬೆಳೆಸಿದ ಒಂದು ಹಿರಿಯ ಸಮುದಾಯವಿದೆ. ಈ ಸಮುದಾಯದ ಮನಸ್ಸು ಕಂಡ ಕನಸುಗಳು, ಆದರ್ಶಗಳು, ಚಿಂತನೆಗಳು, ಸವಾಲುಗಳು, ಸಾಧನೆಗಳು - ಇವೆಲ್ಲವುಗಳಿಂದ ರೂಪಿತವಾದ ಒಂದು ಮನೋಧರ್ಮವಿದೆ. ಒಂದು ಜೀವನ ಕ್ರಮವಿದೆ. ಅದನ್ನೇ 'ಕನ್ನಡ ಸಂಸ್ಕೃತಿ' ಎಂದು ನಾವು ಕರೆಯಬಹುದು.

ಮೈಸೂರು ಒಡೆಯರು ನೆರವೇರಿಸುತ್ತ ಬಂದ ದಸರಾ ಉತ್ಸವಕ್ಕೆ ಮೂಲವಾದ, ವಿಜಯನಗರದ ರಾಜರ ನವರಾತ್ರಿ ಉತ್ಸವದ ಚಿತ್ರ, ಧಾರವಾಡದ ನಮ್ಮ ಹಿರಿಯ ಸಾಹಿತಿಗಳ ಹಾಗೂ ಚಿಂತಕರ ಮನದಲ್ಲಿ ಮೂಡಿ ಆಚರಣೆಯಲ್ಲಿ 'ನಾಡಹಬ್ಬ' ಎಂದು ಹೆಸರಾಯಿತು. ೧೯೨೫ ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಪ್ರಾರಂಭವಾದ ನಾಡಹಬ್ಬ, ಉತ್ತರ ಕರ್ನಾಟಕ, ನಿಜಾಮ ಕರ್ನಾಟಕ ಹಾಗೂ ಹೊರನಾಡುಗಳಲ್ಲಿ ವರ್ಷದಿಂದ ವರ್ಷಕ್ಕೆ ಲೋಕಪ್ರಿಯವಾಗಿ ಜನತೆಯಲ್ಲಿ ಸಾಂಸ್ಕೃತಿಕ ಜಾಗೃತಿಗೆ ಕಾರಣವಾಯಿತಲ್ಲದೆ ಕರ್ನಾಟಕ ಏಕೀಕರಣದ ಧ್ವನಿಯನ್ನು ಅದು ಗಟ್ಟಿಗೊಳಿಸಿತು. ಕೇವಲ ರಾಜಕೀಯ ಕಾಯಿದೆಗಳು ಜನರನ್ನು ಸುಸಂಸ್ಕೃತರನ್ನಾಗಿ ಮಾಡಲಾರವು. ಸಂಸ್ಕೃತಿ ಪ್ರಸಾರವಾಗದೆ ಜನರಲ್ಲಿ ಸುಖ, ಸಮಾಧಾನಗಳು ನೆಲೆಯೂರಿ ನಿಲ್ಲಲಾರವು. ಆದ್ದರಿಂದ ದಸರಾ ಸಂದರ್ಭದಲ್ಲಿ ಮೈಸೂರಿನಲ್ಲಿ ನಡೆಯುತ್ತಿರುವ ಈ ಸಾಂಸ್ಕೃತಿಕ ಮಹೋತ್ಸವ ಕರ್ನಾಟಕದ ಎಲ್ಲಾ ಜಿಲ್ಲಾ ಸ್ಥಳಗಳಲ್ಲಿಯೂ ಆಯಾ ಪ್ರಾದೇಶಿಕ ವೈಶಿಷ್ಟ್ಯಗಳೊಂದಿಗೆ ನಡೆಯುವಂತೆ ಆರ್ಥಿಕ ನೆರವಿನೊಂದಿಗೆ ಸರಕಾರ ನೋಡಿಕೊಳ್ಳುವುದೆಂದು ನಾನು ಆಶಿಸಿದ್ದೇನೆ.

ಕನ್ನಡ ನಾಡಿನ ಇತಿಹಾಸ, ಧರ್ಮ, ಸಾಹಿತ್ಯ, ಕಲೆ - ಹೀಗೆ ಎಲ್ಲಾ ರಂಗಗಳಲ್ಲಿ ಸಮನ್ವಯದ ಅಂಶವೇ ಪ್ರಮುಖವಾಗಿ ಕಂಡು ಬರುತ್ತದೆ. 'ಪರವಿಚಾರವನ್ನೂ ಪರಧರ್ಮವನ್ನೂ ಸೈರಿಸಿಕೊಂಡ ಬಾಳು ಬಂಗಾರವಾಗುತ್ತದೆ' ಎಂಬ ಮಾತು ೯ನೇ ಶತಮಾನದ 'ಕವಿರಾಜಮಾರ್ಗ'ದಲ್ಲಿಯೇ ವ್ಯಕ್ತವಾಗಿದೆ. ಪ್ರಾದೇಶಿಕ ಭೇದಗಳೇನಿದ್ದರೂ ಈ ಸಂಸ್ಕೃತಿಯ ಅಭಿವ್ಯಕ್ತಿಗೆ ವೈವಿಧ್ಯವನ್ನು ಒದಗಿಸುತ್ತಲೇ ಬಂದಿವೆ. ಹೀಗಿದ್ದೂ ಇಂದು ದೇಶದಲ್ಲಿ ವಿಚ್ಛಿದ್ರಕಾರಕ ಶಕ್ತಿಗಳ ಪ್ರಾಬಲ್ಯ, ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಬಹಳ ಆತಂಕಕಾರಿಯಾಗಿದೆ. ಒಡೆದು ಹೋಗುತ್ತಿರುವ ಮನುಷ್ಯ ಸಂಬಂಧಗಳನ್ನು ಮಾನವೀಯತೆಯ ಸೂತ್ರದಿಂದ ಬೆಸೆಯುವ ಕಾರ್ಯ ನಿರಂತರ ಮುಂದುವರೆಯಬೇಕಾಗಿದೆ. ಈ ದೇಶದ ಸಂಸ್ಕೃತಿಯ ಬಹುಮುಖತ್ವವನ್ನು ಕಾಪಾಡಿಕೊಂಡು ಹೋಗುವುದರಿಂದ ಮಾತ್ರ, ಭಾರತೀಯರ ಬದುಕು ಭದ್ರವೂ

ಸುಂದರವೂ ಆಗಬಲ್ಲದು.

ಕನ್ನಡಿಗರು ಎಂದೂ ಭಾಷಾಂಧರಾಗಿರಲಿಲ್ಲ. 'ಸರ್ವಭಾಷಾ ಸರಸ್ವತಿ' ಎಂಬ ಪರಿಕಲ್ಪನೆಯನ್ನು ಜಗತ್ತಿಗೇ ಕೊಟ್ಟವರು ಕನ್ನಡಿಗರು. ಆದರೂ ಅಗ್ರಪೂಜೆ ಸಲ್ಲಬೇಕಾದದ್ದು ನಮ್ಮ ತಾಯ್ನಾಡಿಗೆ. ಕನ್ನಡವನ್ನು ಪೂರ್ತಿ ತೊರೆದು ಬಿಟ್ಟು 'ಇಂಗ್ಲಿಷ್ ಒಂದೇ ನಮ್ಮ ಪರಮ ದೈವ' ಎಂದರೆ ಮಾತ್ರ ದುರಂತ ತಪ್ಪಿದ್ದಲ್ಲ. ದೇಶಭಾಷೆಗಳ ವಿಷಯದಲ್ಲಿ ಗಾಂಧೀಜಿ ಆಡಿದ ಒಂದು ಮಾತನ್ನು ಇಲ್ಲಿ ನೆನೆಯಬಹುದು. "ಯಾರು ಎಷ್ಟೇ ಪರೋಪಕಾರ ಬುದ್ಧಿಯಿಂದ ಯಾವ ತರಹದ ಸ್ವರಾಜ್ಯವನ್ನೇ ಕೊಡಲಿ, ನಮ್ಮ ತಾಯಂದಿರಾಡುವ ಭಾಷೆಯ ವಿಷಯದಲ್ಲಿ ನಮ್ಮ ಮನದಲ್ಲಿ ಆದರ ಬುದ್ಧಿ ಇಲ್ಲದಿದ್ದರೆ ನಾವು ನಿಜವಾದ ಸ್ವರಾಜ್ಯ ಭೋಗಿಗಳಾಗಲಾರೆವು". ಇಂದು ಕನ್ನಡ ಪ್ರಜ್ಞೆ ತನ್ನ ಸ್ವೋಪಜ್ಞತೆಯಿಂದ ವಿಶ್ವಪ್ರಜ್ಞೆಯಾಗಿ, ವಿಶ್ವಪ್ರಜ್ಞೆ ಕನ್ನಡ ದೇಶೀಪ್ರಜ್ಞೆಯೊಂದಿಗೆ ಪ್ರವಹಿಸಿ ಸಮನ್ವಯಗೊಂಡು ಸಾಕ್ಷಾತ್ಕಾರಗೊಳ್ಳುವ ಅಗತ್ಯವಿದೆ. ಮೈಸೂರಿನ ಈ ದಸರಾ ಉತ್ಸವ ನೀಡಬೇಕಾದ ಸಂದೇಶಗಳಲ್ಲಿ ಇದು ಬಹಳ ಮುಖ್ಯವಾದುದು ಎಂದು ನಾನು ಭಾವಿಸಿದ್ದೇನೆ.

ಇದೇ ಸಂದರ್ಭದಲ್ಲಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, 'ರಾಷ್ಟ್ರೀಯ ಶಿಕ್ಷಣ ನೀತಿ - ೨೦೧೬'ರ ಕರಡನ್ನು ಸಾರ್ವಜನಿಕರ ಚರ್ಚೆಗೆ ಬಿಡುಗಡೆ ಮಾಡಿದೆ. ಅದರಲ್ಲಿ ಕೆಲವು ವಿವಾದಾಸ್ಪದ ಸಂಗತಿಗಳಿದ್ದರೂ, ಶಿಕ್ಷಣದ ಪ್ರಾಥಮಿಕ ಹಂತದಲ್ಲಿ ಬೋಧನ ಮಾಧ್ಯಮವಾಗಿ ಮಾತೃಭಾಷೆ ಅಥವಾ ಸ್ಥಳೀಯ ಭಾಷೆಯಿರಬೇಕೆಂದೂ, ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ (ಎಲ್.ಕೆ.ಜಿ., ಯು.ಕೆ.ಜಿ.) ಶಿಕ್ಷಣವನ್ನು ಪ್ರಾರಂಭಿಸಬೇಕೆಂದೂ ಸೂಚಿಸಿರುವುದು ಸ್ವಾಗತಾರ್ಹ. ರಾಜ್ಯ ಸರ್ಕಾರಗಳು ಆಯಾ ರಾಜ್ಯಗಳ ರಾಜ್ಯ ಭಾಷೆಯನ್ನೇ ಕಡ್ಡಾಯವಾಗಿ ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಮಾಧ್ಯಮವಾಗಿ ಮಾಡಬೇಕು. ಅವಶ್ಯವೆನಿಸಿದಲ್ಲಿ ಸಂವಿಧಾನದ ತಿದ್ದುಪಡಿಯನ್ನೂ ಮಾಡಬಹುದಾಗಿದೆ.

ಇದೇ ರೀತಿ ಕೇಂದ್ರ ಸರಕಾರ 'ರಾಷ್ಟ್ರೀಯ ಜಲನೀತಿ'ಯೊಂದನ್ನು ರೂಪಿಸುವುದು ಅತ್ಯಂತ ಅಗತ್ಯವಾಗಿದೆ. ಭಾರತದ ಎಲ್ಲಾ ನದಿಗಳ ಬಗೆಗೂ ಅಂತರರಾಜ್ಯ ವಿವಾದಗಳಿವೆ. ಪ್ರಸ್ತುತ ಕರ್ನಾಟಕದಲ್ಲಿ ಮಹಾದಾಯಿ ಕಳಸಾಬಂಡೂರಿ ನಾಲಾ ಜೋಡಣೆಗೆ ಸಂಬಂಧಪಟ್ಟ ಹೋರಾಟವಂತೂ ನಿರಂತರ ಒಂದು ವರ್ಷದಿಂದ ಜನಾಂದೋಲನವಾಗಿ ನಡೆದಿದ್ದು ನಾಡಿನಲ್ಲಿ ಅತ್ಯಂತ ಪ್ರಕ್ಷುಬ್ಧ ಪರಿಸ್ಥಿತಿ ತಲೆದೋರಿದೆ. ಮಹಾದಾಯಿ ನದಿ ನೀರಿನ ಹಂಚಿಕೆ ವಿವಾದವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳುವುದು ಸೂಕ್ತವೆಂದು, ಈಚೆಗೆ ಮಹಾದಾಯಿ ನ್ಯಾಯಮಂಡಳಿಯು

ಮೂರೂ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಸೂಚಿಸಿದ್ದು, ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಅದನ್ನು ಸಂತೋಷದಿಂದ ಸ್ವಾಗತಿಸಿದ್ದಾರೆ. ನ್ಯಾಯಮಂಡಳಿಯ ಈ ಸಲಹೆಯನ್ನು ರಾಜಕೀಯಕ್ಕೆ ಬಳಸಿಕೊಳ್ಳದೇ, ಪ್ರಧಾನಿಯವರು ಮಧ್ಯಸ್ಥಿಕೆ ವಹಿಸಿ ಸೌಹಾರ್ದತೆಯಿಂದ ಬಗೆಹರಿಸಿ ಪರಸ್ಪರ ಬಾಂಧವ್ಯವನ್ನು ಹೆಚ್ಚಿಸುವರೆಂದು ಎಲ್ಲರ ಅಪೇಕ್ಷೆಯಾಗಿದೆ. ಕಾವೇರಿ ಸಂದರ್ಭದಲ್ಲಿ ತಮಿಳುನಾಡು ಮಗ್ಗುಲ ಮುಳ್ಳಾಗಿ ಆಗಾಗ ಚುಚ್ಚುತ್ತಲೇ ಇರುತ್ತದೆ. ಸದ್ಯಕ್ಕೆ 'ಸಂಕಷ್ಟ ಸೂತ್ರ'ವೊಂದನ್ನು ಸಿದ್ಧಗೊಳಿಸುವುದೇ ಇದಕ್ಕೆ ತುರ್ತು ಪರಿಹಾರವೆಂದು ತೋರುತ್ತದೆ. ಪ್ರಧಾನಿಯವರ ಮಧ್ಯಸ್ಥಿಕೆಗೆ ಕಾನೂನಿನಲ್ಲಿಯೂ ಅವಕಾಶವಿದೆ. ನ್ಯಾಯಾಲಯ ಕೂಡ ಮಾನವೀಯ ದೃಷ್ಟಿಯಿಂದ ಇದನ್ನು ಪರಿಶೀಲಿಸುವ ಅಗತ್ಯವಿದೆ. ಹಾಗೆಯೇ ತಮ್ಮ ಪಕ್ಷದ ಹಿತಕ್ಕಿಂತ ರಾಜ್ಯದ ಹಿತ ಮುಖ್ಯವೆಂದು ನಮ್ಮ ರಾಷ್ಟ್ರೀಯ ಪಕ್ಷಗಳು ಭಾವಿಸಬೇಕು.

ಅಂತರರಾಜ್ಯ ನೀರು ಹರಿಯುವ ಪ್ರದೇಶದಲ್ಲಿ ಪ್ರತಿ ರಾಜ್ಯಕ್ಕೆ ತನ್ನ ಪ್ರದೇಶದೊಳಗೆ ಒಂದು ಸಮುಚಿತ ಸಮತೋಲನದ ನೀರಿನ ಪಾಲು ಬಳಸಿಕೊಳ್ಳುವ ಹಕ್ಕಿದೆ ಎಂದು, ೧೯೬೬ ರಲ್ಲಿ ಹೆಲ್ಸಿಂಕಿಯಲ್ಲಿ ನಡೆದ ಅಂತರಾಷ್ಟ್ರೀಯ ಕಾನೂನು ಸಂಘದ ೫೨ನೇ ಸಮಾವೇಶದಲ್ಲಿ ನೀರು ಹಂಚಿಕೆ ಕುರಿತು ಅಂತರಾಷ್ಟ್ರೀಯ ನೀತಿಯನ್ನು ರೂಪಿಸಲಾಗಿದೆ. ಅದರ ಆಧಾರದ ಮೇಲೆ ತಕ್ಕ ಮಾನದಂಡಗಳನ್ನು ರೂಪಿಸಿ ಅಂತರರಾಜ್ಯ ಜಲವಿವಾದಗಳನ್ನು ಕೇಂದ್ರ ಸರಕಾರ ಬಗೆಹರಿಸಬಹುದಾಗಿದೆ.

ಸುಸಂಸ್ಕೃತವೆಂದು ಹೇಳಿಕೊಳ್ಳುವ ನಮ್ಮ ನಾಡಿನಲ್ಲಿ ಆಗಬಾರದ ದುರ್ಘಟನೆಗಳು ಸಂಭವಿಸಿ ಜನಜೀವನ ತಲ್ಲಣಗೊಂಡಿದೆ. ಕನ್ನಡ ನಾಡಿನ ಶ್ರೇಷ್ಠ ಸಂಶೋಧಕರಲ್ಲಿ ಒಬ್ಬರಾದ ಡಾ. ಎಂ.ಎಂ. ಕಲಬುರ್ಗಿಯವರ ಅಮಾನುಷ ಹತ್ಯೆ. ಅಸಹಿಷ್ಣುತೆಯ ದ್ಯೋತಕವಾಗಿ ಇಡೀ ಪ್ರಪಂಚದ ತುಂಬ ಚರ್ಚೆಗೆ ಕಾರಣವಾಗಿದೆ. ಬಹುಮುಖಿ ಸಮಾಜದ ಭಾರತದ ಬಹುತ್ವವನ್ನು ನಾವು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಆದರೆ ಅದನ್ನು ಕಾಪಾಡಿಕೊಳ್ಳಲು ಪರಸ್ಪರ ಸಹನೆ, ಸೈರಣೆ, ಪ್ರೀತಿ, ವಿಶ್ವಾಸ, ಗೌರವಗಳಿರಬೇಕು. ಪ್ರಜಾಪ್ರಭುತ್ವದ ನಿಜವಾದ ಮೌಲ್ಯಗಳೇ ಇವು. ವಿಚಾರವಾದ, ಅಭಿವ್ಯಕ್ತಿ ಸ್ವಾತಂತ್ರ್ಯ ನಾಗರಿಕ ಸಮಾಜದ ಮೂಲಭೂತ ಅವಶ್ಯಕತೆಗಳಾಗಿವೆ. ಅವುಗಳ ರಕ್ಷಣೆ ಪ್ರಜ್ಞಾವಂತ ಸಮಾಜದ ಲಕ್ಷಣ. ವೈಚಾರಿಕವಾಗಿ ಪ್ರಬುದ್ಧವಾದ ಸಮಾಜ ಎಂಥ ಸಂದಿಗ್ಧತೆಗಳನ್ನು ಧೈರ್ಯವಾಗಿ ಎದುರಿಸಬಲ್ಲದು. ಡಾ. ಕಲಬುರ್ಗಿಯವರು ಇಂದು ಭೌತಿಕವಾಗಿ ನಮ್ಮೆದುರು ಇರಲಿಕ್ಕಿಲ್ಲ. ಆದರೆ ಅವರೊಳಗಿನ ಸತ್ಯ ಶೋಧಕ, ದಿಟ್ಟ ಚಿಂತಕ ಉನ್ನತ ಧ್ಯೇಯವಾದಿ ಚಿರಂಜೀವಿಯಾಗಿಯೇ ನಮ್ಮ ಜೊತೆಗಿದ್ದಾನೆ.

ಡಾ. ಕಲಬುರ್ಗಿಯವರ ಹತ್ಯೆ ನಡೆದು ಒಂದು ವರ್ಷವೇ ಕಳೆದಿದ್ದರೂ ಅದರ ತನಿಖೆ ಪೂರ್ಣಗೊಳ್ಳದಿರುವುದು ಅತ್ಯಂತ ವಿಷಾದದ ಸಂಗತಿ. ಸರಕಾರ ಶೀಘ್ರವಾಗಿ ತನಿಖೆಯನ್ನು ಪೂರ್ಣಗೊಳಿಸಿ ಅಪರಾಧಿಗಳನ್ನು ಬಂಧಿಸಲು ತ್ವರಿತ ಕ್ರಮಕೈಗೊಳ್ಳಬೇಕೆಂಬುದು ನಮ್ಮೆಲ್ಲರ ಅಗ್ರಹದ ಅಪೇಕ್ಷೆ.

ಸಾಂಪ್ರದಾಯಕವಾದ ಹಲವಾರು ಅವೈಚಾರಿಕ ಸಂಗತಿಗಳು, ಮೂಢನಂಬಿಕೆಗಳು ಇಂದಿಗೂ ನಮ್ಮ ಬದುಕನ್ನು ವ್ಯಾಪಿಸಿಕೊಂಡು ನಾಡಿನ ಪ್ರಗತಿಗೆ ಕಾಲ್ತೊಡಕಾಗಿ ಪರಿಣಮಿಸಿವೆ. ಸಾಮಾಜಿಕ ನ್ಯಾಯ, ಸಮತೆ, ಜಾತ್ಯತೀತತೆ ಮೊದಲಾದವು ಸಂವಿಧಾನದಲ್ಲಿ ಘೋಷಿತಗೊಂಡಿದ್ದರೂ ಅವು ಬದುಕಿನ ಮೌಲ್ಯಗಳಾಗಿ ಪರಿಣಮಿಸಿಲ್ಲ. ವಿಜ್ಞಾನದಿಂದ ಅನೇಕ ಸೌಲಭ್ಯಗಳನ್ನು ಪಡೆದಿದ್ದೇವೆಯೇ ಹೊರತು ವೈಜ್ಞಾನಿಕ ಮನೋಧರ್ಮವನ್ನು ನಮ್ಮ ಜೀವನಕ್ರಮದಲ್ಲಿ ಅಳವಡಿಸಿಕೊಳ್ಳುವ ಆಸಕ್ತಿ ತೋರಿಸಿಲ್ಲ. ಆದ್ದರಿಂದ ಪ್ರಶ್ನಿಸುವ, ಪರೀಕ್ಷಿಸುವ ಸತ್ಯಾಸತ್ಯತೆಗಳನ್ನು ಪರಿಶೀಲಿಸುವ ಗುಣಕ್ಕೆ ನಾವು ಹೊರತಾಗಿಬಿಟ್ಟಿದ್ದೇವೆ. ನಮ್ಮ ಧರ್ಮವನ್ನು ಚರಿತ್ರೆಯನ್ನು ಸಂಸ್ಕೃತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಎಷ್ಟೋ ಅನರ್ಥಗಳನ್ನು ಇಂದು ಎದುರಿಸಬೇಕಾಗಿ ಬಂದಿದೆ. ಧರ್ಮದ ಸೋಗಿನಲ್ಲಿ ಆಚರಿಸುವ ನಾನಾ ರೀತಿಯ ಕಂದಾಚಾರಗಳನ್ನು ನಿಷೇಧಿಸುವುದು ಅತ್ಯಂತ ಅಗತ್ಯವಿದೆ.

ಬಾಳಿಗೊಂದು ನಂಬಿಕೆ ಬೇಕು ನಿಜ. ಈ ನಂಬಿಕೆಗಳು ವ್ಯಕ್ತಿಗತ ನೆಲೆಯಲ್ಲಿರುತ್ತವೆ. ಅಂಥವುಗಳನ್ನು ಯಾವ ವೈಚಾರಿಕರೂ ವಿರೋಧಿಸುವುದಿಲ್ಲ. ಆದರೆ ಜನಸಾಮಾನ್ಯರನ್ನು ಶೋಷಣೆಗೆ ಒಳಪಡಿಸುವ ಮೂಢ ನಂಬಿಕೆಗಳನ್ನು ನಾಗರಿಕ ಸಮಾಜ ವಿರೋಧಿಸಲೇಬೇಕು. ಬುದ್ಧ ಹೇಳಿದ್ದು ಧರ್ಮವೇ ಹೊರತು ಮತಧರ್ಮವಲ್ಲ. ಅದು ಕಾಲಕಾಲಕ್ಕೆ ತನ್ನನ್ನು ಪುನಃ ಕಟ್ಟಿಕೊಳ್ಳುತ್ತಿರುವ ಧರ್ಮ. ಬಸವಣ್ಣನದು, ವರ್ಗಭೇದ, ವರ್ಣಭೇದ, ಲಿಂಗಭೇದಗಳನ್ನು ನಿವಾರಿಸಿ ಸಕಲ ಜೀವಾತ್ಮರಿಗೆ ಲೇಸಬಯಸುವಂಥದು. ಸತ್ಯ, ಅಹಿಂಸೆ, ಸತ್ಯಾಗ್ರಹ - ಇವು ಗಾಂಧೀಜಿಯವರ ಚಿಂತನೆಯ ಕ್ರಿಯಾ ರೂಪಕಗಳು. 'ಎಲ್ಲಿಯವರೆಗೆ ಜಾತಿ ಮತಾಧಾರಿತ ತಾರತಮ್ಯವಿರುತ್ತದೆಯೋ ಅಲ್ಲಿ ಸ್ವಾತಂತ್ರ್ಯಕ್ಕೆ ಅಪಾಯವಿದೆ' ಎಂಬ ಎಚ್ಚರಿಕೆ ಕೊಟ್ಟವರು ಡಾ. ಅಂಬೇಡ್ಕರರು, ಅರ್ಥಹೀನವಾದ ಮೂಢ ಆಚರಣೆಗಳ ಸೀಗೆ ಮೆಳೆಯಲ್ಲಿ ಸಿಕ್ಕಿಕೊಂಡ ಮನುಷ್ಯನನ್ನು ಮತ್ತು ಸಮಾಜವನ್ನು ಮುಕ್ತಗೊಳಿಸ ಬೇಕಾದರೆ, ಮೌಢ್ಯಚರಣೆ ನಿಷೇಧ ಕಾಯ್ದೆ ತರಬೇಕೆಂಬ ಧೋರಣಾ ನಿರ್ಣಯವನ್ನು ಕರ್ನಾಟಕ ಸರಕಾರ ತೀವ್ರ ಕಾರ್ಯಗತಗೊಳಿಸಬೇಕು. ಆ ಪೂರ್ವದಲ್ಲಿ ಕಾನೂನ ತಜ್ಞರು, ವಿಜ್ಞಾನಿಗಳು, ಮನಶ್ಶಾಸ್ತ್ರಜ್ಞರು, ನಿಜವಾದ ಆಧ್ಯಾತ್ಮದಲ್ಲವರು ಇವರೊಡನೆ

ಸಾರ್ವಜನಿಕವಾಗಿ ಚರ್ಚಿಸಿ ಈ ದಿಸೆಯಲ್ಲಿ ಸೂಕ್ತಕ್ರಮ ಕೈಗೊಳ್ಳಬಹುದಾಗಿದೆ. ಎಲ್ಲ ಧರ್ಮದವರು ಇದನ್ನು ತಮ್ಮ ಸಾಮಾಜಿಕ ಜವಾಬ್ದಾರಿಯೆಂದು ಭಾವಿಸಬೇಕು.

ನಾಡಿನ ಕಲೆ, ಸಂಸ್ಕೃತಿಯನ್ನು ಜಾಗತಿಕ ಮಟ್ಟದಲ್ಲಿ ಬಿಂಬಿಸುವ ನಾಡಹಬ್ಬ ಮೈಸೂರು ದಸರಾ ಈ ಬಾರಿ 'ಹಸಿರು ದಸರಾ' ಆಗಿ ವಿಶ್ವದ ಗಮನ ಸೆಳೆಯಲು ಸಜ್ಜಾಗಿರುವುದು ಅತ್ಯಂತ ಸಂತೋಷದ ಸಂಗತಿ. ೮೦ ವರುಷಗಳ ಹಿಂದೆಯೇ ಕುವೆಂಪು ಅವರು ಬರೆದ 'ಹಸುರು' ಎಂಬ ಕವಿತೆಯಲ್ಲಿ 'ಹಸುರ್ಗಟ್ಟಿತು ಕವಿಯಾತ್ಮಂ, ಹಸುರ್ ನೆತ್ತರ್ ಒಡಲಿನಲಿ' ಎಂಬ ತಾದಾತ್ಮ್ಯ ಭಾವವನ್ನು ತಾಳಿದ್ದು ಇಂದಿಗೂ ಹಸಿರಾಗಿದೆ. ಅನೇಕ ಬಗೆಯ ಮಾಲಿನ್ಯದ ಇಂದಿನ ಕಲುಷಿತ ವಾತಾವರಣದಲ್ಲಿ ಒಳಹೊರಗಿನ ತಾಪಮಾನವನ್ನು ತಣಿಸಲು ಜಲ ಸಂರಕ್ಷಣೆಯೊಂದಿಗೆ 'ಹಸಿರು ದಸರಾ' ವರುಷದುದ್ದಕ್ಕೂ ಕಾರ್ಯರೂಪದಲ್ಲಿ ಕಂಗೊಳಿಸುವಂತಾಗಬೇಕು.

ಜಾತಿ-ಮತ-ಪಂಥಗಳನ್ನು ಮೀರಿದ ನಾಡಿನ ಸರ್ವಶಕ್ತಿಯ ಸಂಕೇತವೇ 'ಕನ್ನಡಭುವನೇಶ್ವರಿ' ಕನ್ನಡ ನಾಡಿನಲ್ಲಿ ಬಾಳಿ ಬದುಕುತ್ತಿರುವ ಎಲ್ಲರ ಹೃದಯೇಶ್ವರಿ ಆಕೆ. 'ಕರ್ನಾಟಕ'ಎಂಬುದು ಕೇವಲ ಒಂದು ಭೂಪ್ರದೇಶದ ನಕಾಶೆಯಲ್ಲ.

"ಕರ್ನಾಟಕ ಎಂಬುದೇನು
ಹಸರೆ ಬರಿಯ ಮಣ್ಣಿಗೆ?
ಮಂತ್ರಕಣಾ! ಶಕ್ತಿಕಣಾ!
ತಾಯಿಕಣಾ! ದೇವಿಕಣಾ!
ಋಷಿಯ ಕಾಂಬ ಕಣ್ಣಿಗೆ"

('ಅಖಂಡ ಕರ್ನಾಟಕ' - ಕುವೆಂಪು)

ಇಂಥ 'ಅಖಂಡ ಕರ್ನಾಟಕ'ದ ಸರ್ವತೋಮುಖ ಏಳಿಗೆಗಾಗಿ ನಾಡಿನ ಜನತೆಯ ಸರ್ವೋದಯಕ್ಕಾಗಿ ದುಡಿಯಲು ನವರಾತ್ರಿಯ ಈ ಶುಭ ಸಂದರ್ಭದಲ್ಲಿ ನಾವೆಲ್ಲರೂ ಪ್ರತಿಜ್ಞೆಗೈಯೋಣ.

ಕರ್ನಾಟಕದ ಸಮೃದ್ಧಿಯಲ್ಲಿಯೇ ಭಾರತದ ಅಭಿವೃದ್ಧಿಯೂ ಅಡಗಿದೆ.

ಜಯ್ ಹಿಂದ! ಜಯ್ ಕರ್ನಾಟಕ !

ಶರಣ ಸಾಹಿತ್ಯ ಪರಿಷತ್ತಿನ ಈಚಿನ ಪ್ರಕಟಣೆಗಳ ಲೋಕಾರ್ಪಣೆ

ಶರಣ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳ ಲೋಕಾರ್ಪಣೆಗೈಯುವ ಪವಿತ್ರ ಕಾಯಕದ ಅವಕಾಶವನ್ನು ಒದಗಿಸಿದ ಪರಿಷತ್ತಿಗೆ ಹಾಗೂ ಸ್ವಾಗತ ಸಮಿತಿಗೆ ನನ್ನ ಧನ್ಯವಾದಗಳು.

ಈ ಗ್ರಂಥಗಳ ವಸ್ತುವಿನಲ್ಲಿ ವೈವಿಧ್ಯವಿದ್ದರೂ ಸಾಮಾನ್ಯವಾಗಿ ವಚನ ವಾಙ್ಮಯದ ವಿವಿಧ ಆಯಾಮಗಳನ್ನು ತೌಲನಿಕವಾಗಿ, ವೈಚಾರಿಕವಾಗಿ, ಹೊಸ ದೃಷ್ಟಿಕೋನದಿಂದ ಇಲ್ಲಿ ವಿವೇಚಿಸಲಾಗಿದೆ. ಸಮಯದ ಈ ಇಕ್ಕಟ್ಟಿನ ಸಂದರ್ಭದಲ್ಲಿ ಹೇಳಬೇಕೆಂದಿದ್ದ ಎಷ್ಟೋ ಮಾತುಗಳನ್ನು ಸಂಕ್ಷಿಪ್ತಗೊಳಿಸುವದು ಅನಿವಾರ್ಯವಾಗಿದೆ.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಶರಣರ, ಅದರಲ್ಲೂ ೧೨ನೇ ಶತಮಾನದ ಶರಣರ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಆಧುನಿಕ ತಲೆಮಾರಿಗೆ ಪರಿಚಯ ಮಾಡಿಕೊಡುವ ತನ್ನ ಧ್ಯೇಯದಲ್ಲಿ ಸಾಕಷ್ಟು ಯಶಸ್ವಿಯಾಗಿ ಮುನ್ನಡೆದಿರುವುದು ಇದುವರೆಗೆ ಪ್ರಕಟವಾದ ಗ್ರಂಥಗಳನ್ನು ನೋಡಿದರೆ ಗೊತ್ತಾಗುತ್ತದೆ. ಪರಿಷತ್ತು ನಡೆಸುತ್ತಿರುವ ಹಲವಾರು ಚಟುವಟಿಕೆಗಳಲ್ಲಿ ಈ ಗ್ರಂಥ ಪ್ರಕಟಣೆ ಒಂದು ಮಹತ್ವದ ಭಾಗವಷ್ಟೇ ಅಲ್ಲ, ಕೊನೆಬಾಳುವಂಥದು. ಯಾಕೆಂದರೆ ನಾವು ಅಳಿಯಬಹುದು, ಆದರೆ ವಿಚಾರಗಳಿಗೆ ನಾವೆಲ್ಲ, ಚರ್ಚೆಗಳಿಗೂ ಎಡೆಗೊಟ್ಟು ಅವು ಮುಂದುವರಿಯಬಹುದು. ಕಳೆದ ೧೭-೧೮ ವರ್ಷಗಳಲ್ಲಿ ಎಂಬತ್ತಕ್ಕೂ ಹೆಚ್ಚು ಗ್ರಂಥಗಳು ಬೆಳಕು ಕಂಡಿರುವುದು, ಗೊ.ರು.ಚ. ಅವರ ಕಾರ್ಯದಕ್ಷತೆಗೆ ಮತ್ತು ಪುಸ್ತಕ ಸಂಸ್ಕೃತಿ ಸಂವರ್ಧನೆಗೆ ಸಾಕ್ಷಿಯಾಗಿದೆ. ಕನ್ನಡೇತರ ಭಾಷೆಗಳಲ್ಲೂ-ಇಂಗ್ಲಿಷ್, ಹಿಂದಿ, ತೆಲುಗು, ತಮಿಳು, ಮುಂ, ಏಳೆಂಟು ಗ್ರಂಥಗಳು ಪ್ರಕಟಗೊಂಡಿರುವುದರಿಂದ ಶರಣ ಸಾಹಿತ್ಯ-ಸಂಸ್ಕೃತಿ ಪ್ರಸಾರಕ್ಕೂ ಇಂಬುಗೊಟ್ಟಂತಾಗಿದೆ.

ಈಗ ಬಿಡುಗಡೆಗೊಂಡ ಕೃತಿಗಳಲ್ಲಿ ವಿಚಾರಸಂಕಿರಣದ ಪ್ರಬಂಧಗಳಿವೆ, ಶರಣರು-ಸಂತರು, ಶರಣರು-ಸೂಫಿಗಳು, ಶರಣ ಚಳುವಳಿ-ಲೋಹಿಯಾ ಚಿಂತನೆ ಇತ್ಯಾದಿಗಳನ್ನು ತೌಲನಿಕವಾಗಿ ಪ್ರತಿಪಾದಿಸಲಾಗಿದೆ. 'ಮಹಾಮನೆ' ಪತ್ರಿಕೆಗಳು ವರ್ಗೀಕೃತ ಲೇಖನ ಸೂಚಿ ಅಭ್ಯಾಸಿಗಳಿಗೆ ಉಪಯುಕ್ತವಾಗಿದೆ. ವಚನಗಳಲ್ಲಿ ಜ್ಞಾನ-ವಿಜ್ಞಾನದ ಶೋಧವಿದೆ, ಆಧುನಿಕವೆನ್ನಬಹುದಾದ 'ವೃತ್ತಿಬದ್ಧತೆ ಮತ್ತು ಸಾಮಾಜಿಕ

ಹೊಣೆಗಾರಿಕೆ'ಯ ಹಿನ್ನೆಲೆಯಲ್ಲಿ ಶರಣರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ 'ಕಾಯಕ' ಮತ್ತು 'ದಾಸೋಹ'ದ ಪರಿಕಲ್ಪನೆಗಳನ್ನು ಎತ್ತಿ ತೋರಿಸಲಾಗಿದೆ, ಮಹಾದೇವಿಯಕ್ಕನ 'ಯೋಗಾಂಗ ತ್ರಿವಿಧಿ'ಯನ್ನು ಬಹುಶಃ ಪ್ರಥಮ ಬಾರಿಗೆ ಚಿಕ್ಕಪುಸ್ತಕದಲ್ಲಿ ವ್ಯಾಖ್ಯಾನಿಸಲಾಗಿದೆ. ಗೊ.ರು.ಚ. ಅವರು 'ಮಹಾಮನೆ-ಸಂಪಾದನೆ' ಅಂಕಣ ಬರೆಹಗಳ ಸಂಗ್ರಹದಲ್ಲಿ ತಮ್ಮ ಜೀವನಾನುಭವವನ್ನು ಓದುಗರಿಗೆ ತುತ್ತು ಮಾಡಿ ಉಣಿಸಿದ್ದಾರೆ. ಡಾ. ಉಷಾಕಿರಣ್ ಅವರು ತಮ್ಮ ಸಂಪ್ರಬಂಧದಲ್ಲಿ ಬಸವಣ್ಣನವರ ವಚನಗಳ ಪ್ರತಿಮಾ ವಿಧಾನವನ್ನು ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಕಾವ್ಯ ಮೀಮಾಂಸೆಯ ಹಿನ್ನೆಲೆಯಲ್ಲಿ ಕಂಡರಿಸಿದ್ದಾರೆ.

ವಚನ ವಾಙ್ಮಯವನ್ನು ಕುರಿತು ಇದುವರೆಗೆ ಬಂದಿರುವ ಕೃತಿಗಳಲ್ಲಿಯೇ ಒಂದು ಮಹತ್ವದ, ಅಪರೂಪದ ಗ್ರಂಥವೆಂದರೆ, ವಿದ್ವಾನ್ ಡಾ. ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ಅತ್ಯಂತ ಪರಿಶ್ರಮದಿಂದ ಸಿದ್ಧಗೊಳಿಸಿದ 'ವಚನಗಳಲ್ಲಿ ಸಂಸ್ಕೃತೋಕ್ತಿಗಳು' ಗ್ರಂಥ. ಅನೇಕ ಶರಣರ ವಚನಗಳಲ್ಲಿ ಉಲ್ಲೇಖಗೊಂಡಿರುವ ಸಂಸ್ಕೃತದ ಉಕ್ತಿಗಳನ್ನು ನಾವೆಲ್ಲ ಸುಮ್ಮನೆ ಓದಿಕೊಂಡು ಬಂದಿದ್ದೇವೆ. ಈ ಉಕ್ತಿಗಳ ಮೂಲದ ಬಗ್ಗೆ ಹೆಚ್ಚು ಜನ ತಲೆಕೆಡಿಸಿಕೊಂಡಿರಲಿಲ್ಲ. ಈ ಮೂಲವನ್ನು ಶೋಧಿಸುವ ಕಾರ್ಯ ಈ ಪ್ರಮಾಣದಲ್ಲಿ, ಇದುವರೆಗೆ ಯಾರಿಂದಲೂ ನಡೆದಿರಲಿಲ್ಲ. ಡಾ. ಶಿವಬಸವ ಸ್ವಾಮಿಗಳು ಸಂಸ್ಕೃತ ಸಾಹಿತ್ಯದಲ್ಲಿ ನಡೆಸಿದ ಆಳವಾದ ಸಂಶೋಧನೆ ಮತ್ತು ಘನವಾದ ಪಾಂಡಿತ್ಯದಿಂದಾಗಿ ಇದೊಂದು ಅದ್ಭುತವಾದ ಆಕರಗ್ರಂಥವಾಗಿ ಪರಿಣಮಿಸಿದೆ.

ವೇದ, ಆಗಮ, ಸ್ಮೃತಿ, ಉಪನಿಷತ್ತು, ರಾಮಾಯಣ, ಮಹಾಭಾರತ ಹಾಗೂ ಇತರ ಪುರಾಣಗಳು - ಹೀಗೆ ಅನೇಕ ಪ್ರಾಚೀನ ಗ್ರಂಥಗಳನ್ನು ಪೂಜ್ಯರು ಬಹುಶಃ ಒಂದು ಪುಟವನ್ನು ಬಿಡದಂತೆ ಅವಲೋಕಿಸಿದ್ದಾರೆ ಎನಿಸುತ್ತದೆ. ಇಷ್ಟೇ ಅಲ್ಲ, ವಚನಗಳಲ್ಲಿ ಉಲ್ಲೇಖಗೊಂಡ ಸಂಸ್ಕೃತ ಶ್ಲೋಕಗಳಲ್ಲಿದ್ದ ಪಾಠ ದೋಷಗಳನ್ನು ಸರಿಪಡಿಸಿದ್ದಾರೆ. ಇದು ನಾನೂರು ಪುಟಗಳ ಮೊದಲ ಸಂಪುಟ. ಇನ್ನು ಒಂದು ಸಂಪುಟ ಬರಲಿದೆ. ಈ ಅಪೂರ್ವ ಶೋಧನೆಯ ಫಲವಾಗಿ ಗ್ರಂಥಕರ್ತರು ಮುಂದೆ ಕಾಣಿಸಿದಂತೆ ಕೆಲವು ಮಹತ್ವದ ನಿರ್ಧಾರಕ್ಕೆ ಬಂದಿದ್ದಾರೆ:

ಕನ್ನಡ ಭಾಷೆಗೆ ಜಾಗತಿಕ ಮಟ್ಟದ ಸಾಹಿತ್ಯದಲ್ಲಿ ಒಂದು ಉನ್ನತ ಸ್ಥಾನವನ್ನು ಶರಣ ಸಾಹಿತ್ಯ ಕಲ್ಪಿಸಿಕೊಟ್ಟಿದೆ. ಸಾಂಸ್ಕೃತಿಕ ಭಾಷೆಯಾದ ಸಂಸ್ಕೃತವನ್ನು ಶರಣರು ವಿರೋಧಿಸಿದ್ದರೆ, ಬಹಳ ಜಾಣ್ಮೆಯಿಂದ ಅದನ್ನು ಹೀಗೆ ಬಳಸಿಕೊಳ್ಳುತ್ತಿರಲಿಲ್ಲ. ವೇದಾಗಮ ಪುರಾಣಗಳನ್ನು ತಲಸ್ಪರ್ಶಿಯಾಗಿ ಅಭ್ಯಸಿಸಿದ್ದ ಬಸವಣ್ಣನವರು ಅದರ ಪರಿಶುದ್ಧವಾದ ಅಂಶಗಳನ್ನು ಉಳಿಸಿಕೊಂಡು, ಅಮಾನವೀಯ ಹಾಗೂ ಅನೀತಿಯುಕ್ತ

ಅಂಶಗಳನ್ನು ತ್ಯಜಿಸಿದರು. ಅಹಿಂಸೆಯ ನಿಲುವಿನಲ್ಲಿ ಯಜ್ಞಯಾಗಾದಿಗಳನ್ನು ವಿರೋಧಿಸಿದರು. ಮಾನವ ಸಮಾನತೆಗೆ ವಿರೋಧವಾಗಿದ್ದ ಶೋಷಣೆಯ ವಾಹಕವಾಗಿದ್ದ ವರ್ಣಾಶ್ರಮ ಧರ್ಮವನ್ನು ಈ ಹಿನ್ನೆಲೆಯಲ್ಲಿ ಧಿಕ್ಕರಿಸಿದರು.

ಸ್ವಾಮೀಜಿಯವರು ಮಂಥನ ಮಾಡಿದಂತೆ ಶರಣರು ಸಂಸ್ಕೃತ ವಿರೋಧಿಗಳಲ್ಲ. ವೇದೋಪನಿಷತ್ತುಗಳನ್ನು ಅವರು ತಿರಸ್ಕರಿಸಿಯೂ ಇಲ್ಲ. ಶ್ರೇಷ್ಠ ವೈಚಾರಿಕರಾದ ಶರಣರು ಉಪನಿಷತ್ತುಗಳಂತಹ ಉನ್ನತ ಜ್ಞಾನ ಸಂಪತ್ತನ್ನು ಹೊಂದಿರುವ, ವೇದಗಳ ಜ್ಞಾನಕಾಂಡವನ್ನು ಆದರದಿಂದ ಕಂಡಿದ್ದಾರೆ. ಇಲ್ಲದಿದ್ದರೆ ಅವರು ತಮ್ಮ ವಚನಗಳಲ್ಲಿ ಸಂಸ್ಕೃತೋಕ್ತಿಗಳನ್ನು ಉಲ್ಲೇಖಿಸುತ್ತಲೇ ಇರಲಿಲ್ಲ. ಷಣ್ಮುಖ ಶಿವಯೋಗಿಗಳ ನೂರಾರು ವಚನಗಳು ಸ್ವಾಮೀಜಿಯವರು ಕಂಡುಕೊಂಡಂತೆ ಆಗಮಶ್ಲೋಕಗಳ ಭಾವಾನುವಾದವೇ ಆಗಿದೆ. ಅಲ್ಲಮಪ್ರಭುವನ್ನು ಒಳಗೊಂಡು ಹಲವು ವಚನಕಾರರ ಕೆಲವು ವಚನಗಳು ಈ ರೀತಿ ಉಪನಿಷತ್ತುಗಳ ಭಾವಾನುವಾದಗಳಂತೆ ತೋರುತ್ತವೆ. ಇನ್ನು ಕೆಲವು ವಚನಗಳು ವೇದಾದಿಗಳನ್ನು ವಿರೋಧಿಸುತ್ತಿರುವಂತೆ ಭಾಸವಾಗುತ್ತದೆ. ಇದು ಶರಣರ ವೈಚಾರಿಕ ಸ್ವಾತಂತ್ರ್ಯದ ಫಲ ಎನ್ನುವ ಅವರ ಅಭಿಪ್ರಾಯ ಸಮಂಜಸವೆನಿಸುತ್ತದೆ. ಶರಣರ ಷಟ್‌ಸ್ಥಲದ ವಚನಗಳಲ್ಲಿ ಸಂಸ್ಕೃತೋಕ್ತಿಗಳು ಕಡಿಮೆ ಸಂಖ್ಯೆಯಲ್ಲಿದ್ದರೆ 'ಹೆಚ್ಚಿನ ವಚನಗಳು' ಎಂದು ನಾವೇನು ವಿಭಾಗ ಮಾಡಿದ್ದೇವೆ, ಅವುಗಳಲ್ಲಿಯೇ ಈ ಉಕ್ತಿಗಳು ಅಧಿಕವಾಗಿವೆ. ಈ ಬಗೆಯ ಶ್ರೀಗಳವರ ಆಮೂಲಾಗ್ರ ಶೋಧನೆಯಿಂದ ಪ್ರಕ್ಷಿಪ್ತ ವಚನಗಳು ಯಾವುವು ಎಂಬುದನ್ನು ಗುರುತಿಸಲು ಸಾಧ್ಯವಾಗಬಹುದು.

ಪೂಜ್ಯ ಇಮ್ಮಡಿ ಶಿವಬಸವ ಸ್ವಾಮಿಗಳು ತಮ್ಮ ಅನಾರೋಗ್ಯದ ಸ್ಥಿತಿಯಲ್ಲಿಯೂ ಇಂಥ ಅಮೌಲ್ಯ ಕೃತಿಯೊಂದನ್ನು ಕೊಟ್ಟದ್ದಕ್ಕೆ ಕನ್ನಡಿಗರು ಅವರಿಗೆ ಉಪಕೃತರಾಗಿದ್ದಾರೆ. ಈ ಗ್ರಂಥಕ್ಕೆ ಜೋಡಿಸಿದ ಅನುಬಂಧಗಳು ಹಾಗೂ ಆಕರ ಗ್ರಂಥಗಳ ಪಟ್ಟಿಯನ್ನು ನೋಡಿದರೆ ನಿಜಕ್ಕೂ ದಿಗ್ಭ್ರಮೆಯುಂಟಾಗುತ್ತದೆ.

ಒಟ್ಟಿನಲ್ಲಿ ಸಂಸ್ಕೃತ ಭಾಷೆಯ ಬಗೆಗೆ, ವೇದೋಪನಿಷತ್ತುಗಳನ್ನು ಕುರಿತು ಶರಣರು ಇಟ್ಟುಕೊಂಡಿದ್ದ ಭಾವನೆ ಏನಿತ್ತು ಎಂಬುದಕ್ಕೆ ಅವರು ಉರಿಲಿಂಗಪೆದ್ದಿಗಳ 'ಓಂಕಾರವೆಂಬ ವೃಕ್ಷದಲ್ಲಿ' ಎಂದು ಪ್ರಾರಂಭವಾಗುವ ವಚನವನ್ನು ಉದಾಹರಿಸಿ ತಮ್ಮ ಅಭಿಪ್ರಾಯವನ್ನು ಸಮರ್ಪಕವಾಗಿ ಸಮರ್ಥಿಸಿಕೊಂಡಿದ್ದಾರೆ. ಪ್ರಸ್ತಾವನೆಯ ಕೊನೆಯಲ್ಲಿ ಅವರು ಒಂದು ಮಾತನ್ನು ಹೇಳುತ್ತಾರೆ: "ನನ್ನ ಅನಾರೋಗ್ಯದ ದೆಸೆಯಿಂದ ಈ ಕಾರ್ಯವನ್ನು ಮಾಡುವಲ್ಲಿ ಹಲವೆಡೆ ಕೆಲವು ದೋಷಗಳು ಉಂಟಾಗಿರಬಹುದು. ಮುಂದೆ ಪ್ರಕಟವಾಗಲಿರುವ ಉಳಿದ ಸಮಗ್ರ ವಚನ ಸಂಪುಟಗಳ ಸಂಸ್ಕೃತೋಕ್ತಿಗಳ

ಮೂಲ ಮತ್ತು ಆಕರಗಳನ್ನು ಹೊಂದಿರುವ ಆವೃತ್ತಿಯಲ್ಲಿ ಅವುಗಳಲ್ಲಿ ಸರಿಪಡಿಸಲಾಗುತ್ತದೆ. ಪ್ರಾಜ್ಞರು ಅಗತ್ಯ ಸಲಹೆಗಳನ್ನು ನೀಡಿದರೆ ಸ್ವೀಕರಿಸಲು ಸದಾ ಸಿದ್ಧ" ಈ ವಿನಯ ಶ್ರೀಗಳವರ ವಿದ್ವತ್ತಿನ ಶಿರೋಮಣಿಯಂತಿದೆ.

ಅ.ಭಾ. ಶರಣ ಸಾಹಿತ್ಯ ಪರಿಷತ್ತು ಇದುವರೆಗೆ ಪ್ರಕಟಿಸಿದ ಗ್ರಂಥಗಳಲ್ಲಿ 'ಶರಣ ಕ್ಷೇತ್ರ ದರ್ಶನ'ದಂಥ ಇನ್ನು ಕೆಲವು ಮಹತ್ವದ ಗ್ರಂಥಗಳಿವೆ. ಇದೇ ರೀತಿ ಹೊಸ ಸಂಶೋಧನೆಗಳಿಗೆ, ಹೊಸ ವಿಚಾರಗಳಿಗೆ ಇಂಬುಗೊಡುತ್ತ, ಉನ್ನತ ಮಟ್ಟವನ್ನು ಕಾಯ್ದುಕೊಂಡು ಪರಿಷತ್ತು ಮುಂದುವರಿಯಲಿ, ಪರಿಷತ್ತಿನ ಗೌರವಾಧ್ಯಕ್ಷರಾದ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಪ್ರೋತ್ಸಾಹ ಎಂದಿನಂತೆ ನಿರಂತರವಾಗಿರಲಿ ಎಂದು ಹಾರೈಸುತ್ತೇನೆ.

(ಅಖಿಲ ಭಾರತ ೧೧ನೆಯ ಶರಣ ಸಾಹಿತ್ಯ ಸಮ್ಮೇಳನ ಧಾರವಾಡದಲ್ಲಿ ನೆರವೇರಿದ ಸಂದರ್ಭದಲ್ಲಿ ದಿ. ೨೭-೧೨-೨೦೧೩ರಂದು, ಪರಿಷತ್ತಿನ ಪ್ರಕಟಣೆಗಳನ್ನು ಲೋಕರ್ಪಣೆಗೈದ ನಾಡೋಜ ಡಾ. ಚೆನ್ನವೀರ ಕಣವಿಯವರು ಮಾಡಿದ ಭಾಷಣದ ಸಾರ ಸಂಗ್ರಹ)

ಖೂನಿ ವೈಶಾಖಿ

ಜಾಲಿಯನ್‌ವಾಲಾಬಾಗ್ ನರಮೇಧಕ್ಕೆ ಈಗ ನೂರು ವರುಷ

ನಾನಕಸಿಂಗನ ಮೊಮ್ಮಗ ನವದೀಪ ಸೂರಿ ೧೯೨೦ರಲ್ಲಿಯೇ ಪ್ರಕಟವಾದ ನಾನಕಸಿಂಗನ ಪಂಜಾಬಿ ಕವನ ಸಂಗ್ರಹ 'ಖೂನಿವೈಶಾಖಿ'ಯನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಆ ದುರಂತಕ್ಕೆ ನೂರು ವರುಷ ಸಂದ ಸಂದರ್ಭದ ಸಮಾರಂಭದಲ್ಲಿ (೧೩-೪-೨೦೧೯) ಈ ಇಂಗ್ಲಿಷ್ ಕೃತಿಯನ್ನು ಬಿಡುಗಡೆಗೊಳಿಸಲಾಯಿತು.

ನವದೀಪ ಸೂರಿ ೧೯೮೩ರಲ್ಲಿಯೇ ಭಾರತದ ವಿದೇಶೀ ರಾಜ್ಯಭಾರದ ನೌಕರಿಯನ್ನು ಸೇರಿ, ನಾನಾ ಉಚ್ಚ ಹುದ್ದೆಗಳಲ್ಲಿ ಸೇವೆಗೈದು ಸದ್ಯಕ್ಕೆ ಯುಎಇ ರಾಯಭಾರಿಯಾಗಿ ಕೆಲಸ ಮಾಡುತ್ತಿದ್ದಾರೆ.

ಕವಿತೆಗಳ ಜೊತೆಗೆ ಇನ್ನೂ ಕೆಲವು ಲೇಖನಗಳನ್ನೊಳಗೊಂಡ ಈ ಭಾಷಾಂತರಿತ ಕೃತಿಯನ್ನು ಆಧರಿಸಿ, ಆ ದುರಂತದ ಒಂದು ಸಂಕ್ಷಿಪ್ತ ಚಿತ್ರವನ್ನು ಓದುಗರ ಮುಂದಿಡಲು ಇಲ್ಲಿ ಪ್ರಯತ್ನಿಸಲಾಗಿದೆ.

ನಾನಕಸಿಂಗ್ (೧೮೯೭-೧೯೭೧) ಪಂಜಾಬದ ಒಂದು ಬಡ ಹಿಂದೂ ಕುಟುಂಬದಲ್ಲಿ ೪.೭.೧೮೯೭ರಲ್ಲಿ ಜನಿಸಿದ. ಅವನು ಹುಟ್ಟಿದ ಚೇಲಂ ಜಿಲ್ಲೆಯ ಚಾಕ್ ಹಮೀದ್ ಎಂಬ ಚಿಕ್ಕಗ್ರಾಮ ಈಗ ಪಾಕಿಸ್ತಾನದಲ್ಲಿದೆ. ಅವನಿಗೆ ಹೆಸರಿಟ್ಟದ್ದು ಹಂಸರಾಜ ಎಂದು. ಮುಂದೆ ಶಿಖ್‌ಧರ್ಮದ ಪ್ರಭಾವಕ್ಕೊಳಗಾಗಿ ೧೯೧೫ರಲ್ಲಿ ಮತಾಂತರಗೊಂಡು ನಾನಕಸಿಂಗ್ ಎಂದು ಹೆಸರು ಬದಲಾಯಿಸಿಕೊಂಡ. ಪ್ರಾಥಮಿಕ ನಾಲ್ಕನೆಯ ತರಗತಿಯವರೆಗೆ ಮಾತ್ರ ಅವನು ಶಿಕ್ಷಣ ಪಡೆದಿದ್ದ.

ಪಂಜಾಬಿ ಕಾದಂಬರಿಯ ಜನಕನೆಂದೇ ಪ್ರಖ್ಯಾತಿ ಪಡೆದ ನಾನಕಸಿಂಗ್ ಒಟ್ಟು ೫೯ ಕೃತಿಗಳನ್ನು ರಚಿಸಿದ. ಅವುಗಳಲ್ಲಿ ೩೮ರಷ್ಟು ಕಾದಂಬರಿಗಳೇ ಇದ್ದು ಉಳಿದವು ಕೆಲವು ನಾಟಕಗಳು, ಸಣ್ಣಕಥೆಗಳು, ಕವಿತೆಗಳು, ಪ್ರಬಂಧಗಳು ಅಲ್ಲದೆ ಕೆಲವು ಅನುವಾದಗಳೂ ಸೇರಿವೆ. ಅವನ 'ಇಕ್‌ಮ್ಯಾನ್ ದೋ ತಲವಾರಾನ್' ಎಂಬ ಪಂಜಾಬಿ ಕಾದಂಬರಿಗೆ ೧೯೬೨ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆಯಿತು. 'ಪವಿತ್ರ ಪಾಪಿ' ಎಂಬ ಕಾದಂಬರಿ ೧೯೬೮ರಲ್ಲಿ ಚಲನಚಿತ್ರವಾಗಿ ಜನಪ್ರಿಯವಾಗಿತ್ತು. 'ಚಿತ್ತಲಾಹು' ಎಂಬ ಪಂಜಾಬಿ ಕಾದಂಬರಿಯನ್ನು ನಟಾಷಾ ಟಾಲ್‌ಸ್ಟಾಯ್ ರಷ್ಯನ್ ಭಾಷೆಗೆ ಭಾಷಾಂತರಿಸಿದಳು. ಅವನ ಕಾದಂಬರಿಗಳು ಅತ್ಯಂತ ಜನಪ್ರಿಯವಾಗಿದ್ದು

ಎಷ್ಟೋ ಜನ ಅವುಗಳನ್ನು ಓದಲೆಂದೇ ಗುರುಮುಖಿ ಲಿಪಿಯನ್ನೂ ಪಂಜಾಬಿ ಭಾಷೆಯನ್ನೂ ಕಲಿತದ್ದುಂಟು. ಮೊಮ್ಮಗ ನವದೀಪ ಸೂರಿ ಪಂಜಾಬಿ ಕಾದಂಬರಿ 'ಪವಿತ್ರ ಪಾಪಿ'ಯನ್ನು The watch maker ಎಂಬ ಹೆಸರಿನಲ್ಲಿ ಅನುವಾದಿಸಿ ೨೦೦೮ರಲ್ಲಿ ಅದನ್ನು ಪೆಂಗ್ವಿನ್ ಇಂಡಿಯಾದ ಮೂಲಕ ಪ್ರಕಟಿಸಿದರು.

'ಖೂನಿ ವೈಶಾಖಿ' ೧೯೨೦ರಲ್ಲಿ ಪ್ರಕಟವಾದೊಡನೆ ಬ್ರಿಟಿಷ್ ಸರಕಾರ ಅದನ್ನು ನಿಷೇಧಿಸಿ ಅದರ ಎಲ್ಲ ಪ್ರತಿಗಳನ್ನೂ ನಾಶಗೊಳಿಸಿತು.

'ಯಾರನ್ನೂ ಜೇಲಿಗೆ ಹಾಕಬಹುದು ಅಥವಾ ವಿಚಾರಣೆ ನಡೆಸದೆ ಎಷ್ಟು ದಿನವಾದರೂ ಬಂಧನದಲ್ಲಿ ಇಡಬಹುದು' ಎಂಬುದು ರೌಲಟ್ ಆಕ್ಟಿನ ಮುಖ್ಯ ಆಶಯವಾಗಿತ್ತು. ಲಂಡನ್ನಿನಲ್ಲಿ ನ್ಯಾಯಾಧೀಶನಾಗಿದ್ದ ಸಿಡ್ನಿ ರೌಲಟ್‌ನನ್ನು ರಾಜದ್ರೋಹ ಸಮಿತಿಯ (Sedition Commitee) ಚೇರ್‌ಮನ್ ಆಗಿ ಬ್ರಿಟಿಷ್ ಸರಕಾರ ನೇಮಿಸಿತ್ತು. ಅವನೇ ಈ ಶಾಸನದ ಪ್ರವರ್ತಕನಾಗಿದ್ದ. ಯುದ್ಧ ಸಂಭವಿಸಿದಾಗ ಈ ಆಕ್ಟನ್ನು ಹೇಗೋ ಸಹಿಸಬಹುದಾದರೂ ಶಾಂತಿಕಾಲದಲ್ಲಿಯೂ ಅದು ಜಾರಿಯಾದಾಗ ಹಿಂದೂಸ್ತಾನದಲ್ಲಿ ಅದಕ್ಕೆ ಭಾರಿ ಪ್ರತಿಭಟನೆ ವ್ಯಕ್ತವಾಯಿತು. ಮಹಾತ್ಮಾ ಗಾಂಧಿಯವರು ತಮ್ಮ ಸತ್ಯಾಗ್ರಹವನ್ನು ರೌಲಟ್ ಆಕ್ಟಿನ ಪ್ರತಿಭಟನಾರ್ಥವಾಗಿ ಹಿಂದೂಸ್ತಾನದಲ್ಲಿ ಅದನ್ನು ಪ್ರಥಮವಾಗಿ ಪ್ರಯೋಗಿಸಿದರು. ಇದನ್ನು Black Act ಎಂದು ಅವರು ಕರೆದರು. ಈ ಸತ್ಯಾಗ್ರಹವೇ ಗಾಂಧೀಜಿಯನ್ನು ನಿಜವಾದ ಅರ್ಥದಲ್ಲಿ 'ರಾಷ್ಟ್ರೀಯ ನಾಯಕ' ನನ್ನಾಗಿಸಿತು. ಎಂದು ಹೇಳಬಹುದು. ಮಹಾತ್ಮಾಗಾಂಧಿಯವರ ಮೊಮ್ಮಗ ತುಷಾರ ಗಾಂಧಿ ಸಿಡ್ನಿ ರೌಲಟ್‌ನ ಮೊಮ್ಮಗ ಜಸ್ಟಿನ್ ರೌಲಟ್‌ನಿಗೆ ಸ್ನೇಹಪರವಾಗಿ ಹೇಳಿದನಂತೆ. "ಬ್ರಿಟಿಷ್ ಸಾಮ್ರಾಜ್ಯದ ಶವದ ಪೆಟ್ಟಿಗೆಗೆ ಮೊದಲ ಮೊಳೆಯನ್ನು ಹೊಡೆಯಲು ಅವಕಾಶ ಒದಗಿಸಿಕೊಟ್ಟದ್ದಕ್ಕೆ ನಿಮ್ಮ ತಾತನನ್ನು ಶ್ಲಾಘಿಸುತ್ತೇನೆ" ಎಂದು. ಈ 'ಖೂನಿವೈಶಾಖಿ' ಭಾಷಾಂತರಿತ ಕೃತಿಗಾಗಿಯೇ ಜಸ್ಟಿನ್ ರೌಲಟ್ 'The sins of the great grand father' ಎಂಬ ಲೇಖನವನ್ನು ಬರೆದು ಕೊಟ್ಟದ್ದಕ್ಕೆ ನವದೀಪ ಸೂರಿ ಕೃತಜ್ಞತೆ ಸೂಚಿಸಿದ್ದಾರೆ. ಪ್ರಸ್ತುತ ಲೇಖನ ಅವನ ವೈಯಕ್ತಿಕ ದೃಷ್ಟಿಕೋನವನ್ನೂ ಸೂಕ್ಷ್ಮ ಸಂವೇದನೆಯನ್ನೂ ವ್ಯಕ್ತಪಡಿಸುತ್ತದೆ.

ರೌಲಟ್ ಆಕ್ಟನ್ನು ಪ್ರತಿಭಟಿಸಲು ಜಾಲಿಯನ್ ವಾಲಾಬಾಗ್‌ನಲ್ಲಿ ಕೂಡಿದ ರ್‍ಯಾಲಿಯಲ್ಲಿ ಭಾಗವಹಿಸಲು ನಾನಕಸಿಂಗ್ ಇಬ್ಬರು ಸ್ನೇಹಿತರೊಂದಿಗೆ ಹೋಗಿದ್ದನು. ಯಾವ ಮುನ್ನೆಚ್ಚರಿಕೆಯನ್ನೂ ನೀಡದೆ ಜನರಲ್ ಡಾಯರ್‌ನ ಗುಂಡಿನ ದಾಳಿ ನಡೆದಾಗ ನಾನಕಸಿಂಗ್ ಆ ಗದ್ದಲದಲ್ಲಿ ಕಾಲ್ತುಳಿತಕ್ಕೆ ಸಿಕ್ಕು ಪ್ರಜ್ಞೆತಪ್ಪಿ ಬಿದ್ದಿದ್ದನು. ಅಲ್ಲಿ ಬಿದ್ದ ಹೆಣಗಳ ರಾಶಿಯಲ್ಲಿ ಇವನು ಸತ್ತೇ ಹೋದನೆಂದು ಜನ ಭಾವಿಸಿದ್ದರು. ಮುಂದೆ

ಕೆಲಹೊತ್ತಿನ ನಂತರ ಪ್ರಜ್ಞೆ ಬಂದು ಹೇಗೋ ಸಾವರಿಸಿಕೊಂಡು ಹೊರಗೆ ಬಂದಿದ್ದನು. ಇವನ ಜೊತೆಗೆ ಬಂದ ಇಬ್ಬರು ಸ್ನೇಹಿತರು ಆಗಲೇ ಗುಂಡು ಬಡಿದು ಸತ್ತಿದ್ದರು. ಬಾಲುಜಿಗೆ (ಮನೆಯಲ್ಲಿ ಪ್ರೀತಿಗೌರವಗಳಿಂದ ನಾನಕಸಿಂಗ್‌ನಿಗೆ ಹಾಗೆ ಕರೆಯುತ್ತಿದ್ದರು.) ಈ ದಾಳಿಯಿಂದ ಎಡಗಿವಿಗೆ ಧಕ್ಕೆಯಾಗಿ ಕೊನೆಯವರೆಗೂ ಆ ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ.

ಇಂಟೀರಿಯಲ್ ದಾಖಲೆಯ ಪ್ರಕಾರ ೧೬೫೦ ಸುತ್ತು ಗುಂಡು ಹಾರಿಸಲಾಯಿತು. ಈ ಗುಂಡಿನ ದಾಳಿಯಲ್ಲಿ ೩೭೯ ಮಂದಿ ಮರಣಹೊಂದಿ, ೧೧೩೭ ಜನ ಗಾಯಗೊಂಡರು. ಈ ಸಂಖ್ಯೆ ಇನ್ನೂ ಹೆಚ್ಚಿತ್ತು ಎಂದು ಭಾರತೀಯ ಮೂಲಗಳೇ ಹೇಳಿವೆ.

ಜಾಲಿಯನ್‌ವಾಲಾಬಾಗ್ ದುರಂತವನ್ನು ಅವನು ಪ್ರತ್ಯಕ್ಷ ನೋಡಿದ್ದು ನಾನಕಸಿಂಗ್‌ನ ಜೀವನದಲ್ಲಿ ಒಂದು ಪ್ರಮುಖ ಮೈಲುಗಲ್ಲು ಎಂದು ಹೇಳಬಹುದು. ಅವನು ಬ್ರಿಟಿಷ್ ಆಡಳಿತದ ವಿರೋಧಿಯಾಗಿದ್ದ. ರಾಷ್ಟ್ರೀಯತೆಗೆ ಬಲವಾಗಿ ಬೆಂಬಲ ನೀಡುತ್ತಿದ್ದ. ಈ ಹಿಂದೆ ೧೯೨೨ರಲ್ಲಿ ಅವನ ಮಾರ್ಗದರ್ಶಿಯಾಗಿದ್ದ ಗ್ಯಾನಿಬಾಗ್ ಸಿಂಗನ ಉಪದೇಶದಂತೆ 'ಗುರುಕಾಬಾಗ್ ಚಳುವಳಿ'ಯಲ್ಲಿ ಭಾಗವಹಿಸಿ ಅವನು ಬಂಧಿಸಲ್ಪಟ್ಟಿದ್ದ. ಲಾಹೋರಿನ ಕುಖ್ಯಾತ ಬೋರ್ಸ್ಟಲ್ ಜೇಲಿನಲ್ಲಿ ಕೆಲವು ತಿಂಗಳು ಕಳೆಯಬೇಕಾಯಿತು. ಆ ಅವಧಿಯಲ್ಲಿ ಅವನಿಗೆ ವೈಯಕ್ತಿಕವಾಗಿ ಪರಿವರ್ತನೆಗೊಳ್ಳಲು ಹಾಗೂ ಲೇಖಕನಾಗಿ ವಿಕಾಸಹೊಂದಲು ಅನುವು ಮಾಡಿತು. ಆಗಿನ ಕಾಂಗ್ರೆಸ್ ಪಕ್ಷದ ಧುರೀಣ ಪಂಡಿತ ಜಗನ್ನಾಥನ ಗಾಢ ಸಂಪರ್ಕ ಒದಗಿತು. ಅವನು ಟ್ರಂಕಿನ ತುಂಬ ಪುಸ್ತಕಗಳನ್ನು ಜೇಲಿನಲ್ಲಿದ್ದ ಇವನಿಗೆ ಕಳಿಸಿಕೊಡುತ್ತಿದ್ದ.

ಈ ಗ್ರಂಥಗಳಲ್ಲಿ ಮುನ್ಶಿ ಪ್ರೇಮಚಂದರ ಕೆಲವು ಕಾದಂಬರಿಗಳೂ ಇದ್ದವು. ದೇವನಾಗರಿ ಲಿಪಿ ಮತ್ತು ನಾನಕಸಿಂಗನಿಗಿದ್ದ ಹಿಂದಿ ಭಾಷೆಯ ಅಲ್ಪ ಪರಿಚಯದಿಂದಲೇ ಆ ಕಾದಂಬರಿಗಳನ್ನೋದಿದ. ಅದರ ಪರಿಣಾಮವಾಗಿ ಸಮಾಜ ಸುಧಾರಣೆಗಾಗಿ ಕಾದಂಬರಿ ಬರೆಯಬೇಕೆಂದು ಅವನೊಳಗೆ ತುಡಿದಂತಾಯಿತು. ಆಮೇಲೆ ನಾನಕಸಿಂಗ್ ಅನೇಕ ಕಾದಂಬರಿಗಳನ್ನು ಬರೆಯಲು ಆರಂಭಿಸಿ ಪ್ರಖ್ಯಾತನೂ ಆದನು. ಅವನ ಪ್ರಥಮ ಕಾದಂಬರಿ 'ಮಾತ್ರಾಯಿ ಮಾ' ೧೯೨೪ರಲ್ಲಿ ಪ್ರಕಟವಾಗಿ ಬಹಳ ಜನಪ್ರಿಯತೆ ಗಳಿಸಿತು. ಮುಂದೆ ೫೦ ವರ್ಷಗಳವರೆಗೂ ಅವನು ತಿರುಗಿ ನೋಡಿದ್ದೇಯಿಲ್ಲ. ೧೯೪೭ರಲ್ಲಿ ದೇಶ ಇಬ್ಭಾಗವಾದಾಗ ನಡೆದ ಹಿಂಸೆಯಿಂದ ಇವನ ಹೃದಯ ನಡುಗಿ, ಮೂರು ಕಾದಂಬರಿಗಳಲ್ಲಿ ಅದರ ಭಯಂಕರತೆಯನ್ನು ಚಿತ್ರಿಸಿದ.

೧೯೯೬-೯೭ರಲ್ಲಿ ನಾನಕಸಿಂಗ್‌ನ ಜನ್ಮಶತಮಾನೋತ್ಸವವನ್ನು ದಿಲ್ಲಿಯಲ್ಲಿ

ಅದ್ದೂರಿಯಾಗಿ ಆಚರಿಸಲಾಯಿತು. ಭಾರತದ ಪ್ರಥಮ ಪಂಜಾಬಿ ಪ್ರಧಾನಮಂತ್ರಿಯಾಗಿದ್ದ ಇಂದರಕುಮಾರ ಗುಜ್ರಾಲ್ ಬಹುಶ್ರುತ ವ್ಯಕ್ತಿಯಾಗಿದ್ದು ಬಾಉಜಿಯ ಸಾಹಿತ್ಯ ಸಂಪತ್ತಿನ ಉಪಾಸಕನಾಗಿದ್ದ. ಅವನೇ ಆಸ್ಥೆ ವಹಿಸಿ ದೊಡ್ಡ ಪ್ರಮಾಣದಲ್ಲಿ ನಾನಕಸಿಂಗನ ಜನ್ಮಶತಮಾನೋತ್ಸವ ಸಮಾರಂಭವನ್ನು ದಿಲ್ಲಿಯಲ್ಲಿ ಆಚರಿಸಿದ್ದಲ್ಲದೆ, ಅದರ ಸ್ಮಾರಕವಾಗಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದನು.

ಈ ಸಂದರ್ಭದಲ್ಲಿ 'ಖೂನಿವೈಶಾಖಿ' ಕವನ ಸಂಗ್ರಹವನ್ನು ಕುರಿತು ಇನ್ನೂ ಒಂದು ಮಾತನ್ನು ಹೇಳಬೇಕು. ೧೯೨೦ರಲ್ಲಿ ಪ್ರಕಟವಾದೊಡನೆ ಇದನ್ನು ಬ್ರಿಟಿಷ್ ಸರಕಾರ ನಿಷೇಧಿಸಿದ ನಂತರ ಅದರ ಒಂದು ಪ್ರತಿಯೂ ಯಾರ ಕಣ್ಣಿಗೂ ಬಿದ್ದಿರಲಿಲ್ಲ. ಮುಂದೆ ಹೊಸಿಯಾರಪುರದ ಕಾಲೇಜಿನಲ್ಲಿ ಪಂಜಾಬಿ ಭಾಷೆಯ ಅಧ್ಯಾಪಕನಾಗಿದ್ದ ಡಾ. ಕೇಸರಸಿಂಗ್ ಗುಪ್ತಾನ ಅಜ್ಜ ಅತ್ಯಂತ ಪುಸ್ತಕ ಪ್ರೇಮಿಯಾಗಿದ್ದ. ಅವರ ಹಳೆಯ ಮನೆಯಲ್ಲಿದ್ದ ಹಳೆಯ ಪೆಟ್ಟಿಗೆಗಳನ್ನು ಝಾಡಿಸಿ ತೆಗೆಯುವಾಗ 'ಖೂನಿವೈಶಾಖಿ'ಯ ಕೈಬರಹದ ಮೂಲಪ್ರತಿಯೊಂದು ಸಿಕ್ಕಿತು. ಆದರೆ ಅಚ್ಚಾದ ಪ್ರತಿಯಲ್ಲ. ಹೀಗಾಗಿ ಅದರ ಪ್ರಕಾಶಕರು ಯಾರೆಂಬುದು ಆಗ ಗೊತ್ತಾಗಿರಲಿಲ್ಲ. ನವದೀಪ ಸೂರಿಯ ತಂದೆ ಕುಲವಂತಸಿಂಗ್ ಸೂರಿ ಪಂಜಾಬಿ ಪುಸ್ತಕಗಳ ಒಬ್ಬ ದೊಡ್ಡ ಪ್ರಕಾಶಕನಾಗಿದ್ದ. 'ಖೂನಿವೈಶಾಖಿ' ಒಳ್ಳೆಯ ಕಾವ್ಯವೆ. ಆದರೆ ಅನೇಕ ಮಹತ್ವದ ಐತಿಹಾಸಿಕ ಅಂಶಗಳನ್ನು ಒಳಗೊಂಡಿದ್ದರಿಂದ ಅದರ ಮಹತ್ವ ಇನ್ನೂ ಹೆಚ್ಚಾಗಿತ್ತು. ಡಾ. ಗುಪ್ತಾನನ್ನು ಸಂಪರ್ಕಿಸಿ ಅವನಿಂದಲೇ ಪ್ರಸ್ತಾವನೆ ಬರೆಸಿ ೧೯೮೦ರಲ್ಲಿ ಅದನ್ನು ಪ್ರಕಟಿಸಿದ. ಆಗ ಸಾಹಿತ್ಯಿಕ ಪತ್ರಿಕೆಯೆಂದು ಪಂಜಾಬದಲ್ಲಿ ಹೆಸರಾಗಿದ್ದ 'ಜಾಗೃತಿ'ಯಲ್ಲಿ ಅದರ ಬಗ್ಗೆ ಒಂದು ವಿಮರ್ಶಾತ್ಮಕ ಲೇಖನವೂ ಪ್ರಕಟವಾಯಿತು. 'ಖೂನಿವೈಶಾಖಿ'ಯ ಅಚ್ಚಾದ ಪ್ರತಿ ಅದುವರೆಗೂ ಸಿಕ್ಕಿರಲಿಲ್ಲ. ಆರು ದಶಕಗಳ ನಂತರ ಅದರ ಹೊದಿಕೆ (cover)ಯನ್ನು ನವದೀಪ ಸೂರಿ ಹೇಗೊ ದೊರಕಿಸಿದ. 'The Bagh, The book and our Bauji' ಎಂಬ ಅವನ ಲೇಖನದಲ್ಲಿ ಅದನ್ನು ಹೀಗೆ ಹೇಳುತ್ತಾನೆ: 'It gave ೩೦ May ೧೯೨೦ as the date of publication, Bhai Nanak Singh Kirpal Singh Booksellers as the publishers and Bhai Nanak Singh of Satguru Mehma fame as the author".

ಶಿಖ್‌ಪಂಥಕ್ಕೆ ವೈಶಿಷ್ಟ್ಯಪೂರ್ಣವಾದ ಕೊಡುಗೆಯನ್ನು ನೀಡಿದವರಿಗೆ ಮಾತ್ರ 'ಭಾಯಿ' ಎಂದು ಅವರ ಹೆಸರಿನ ಮೊದಲಿಗೆ ಹಚ್ಚುತ್ತಾರೆ. ಸ್ಥಳೀಯ ಗುರುದ್ವಾರದ ಧರ್ಮಪರಾಯಣನೂ ವಿದ್ವಾಂಸನೂ ಆದ ಗ್ಯಾನಿ ಭಾಗ್ ಸಿಂಗ್‌ನ ಪ್ರಭಾವ ನಾನಕಸಿಂಗನ ಮೇಲೆ ಅಧಿಕವಾಗಿತ್ತು. ೧೯೧೮ರಲ್ಲಿ ಅಮೃತಸರದಲ್ಲಿ ಪ್ರಕಟವಾದ

'ಸತ್ಗುರು ಮೆಹಮಾ'ದಲ್ಲಿ ಶಿಖ್ ಗುರುಗಳನ್ನು ಕೊಂಡಾಡುವ ಸ್ತುತಿಗೀತಗಳಿವೆ. ಮುಂದಿನ ಕೆಲವೇ ವರ್ಷಗಳಲ್ಲಿ ಅದರ ಸಾವಿರಾರು ಪ್ರತಿಗಳು ಮಾರಾಟಗೊಂಡು ಅವನಿಗೆ ಆರ್ಥಿಕ ಭದ್ರತೆಯನ್ನೊದಗಿಸಿದವು. ಅಷ್ಟೇ ಅಲ್ಲ, ಅವನನ್ನು 'ಭಾಯಿ' ಎಂದೂ 'ಕವಿ' ಎಂದೂ ಅಂದಿನಿಂದಲೇ ಕರೆಯಲಾಯಿತು.

'ಖೂನಿ ವೈಶಾಖಿ'ಯಲ್ಲಿ ಮೊದಲು ಗುರುಗೋವಿಂದನ ಬಗ್ಗೆ ಪ್ರಾರ್ಥನಾ ಪದ್ಯವಿದೆ. ಶಾಂತಿಸ್ಥಾಪನೆಯ ಎಲ್ಲ ಪ್ರಯತ್ನಗಳೂ ಮುಗಿದ ಮೇಲೆ ಗುರುಗೋವಿಂದಸಿಂಗ್ ಬಲಾತ್ಕಾರವನ್ನು ತಡೆಯಲು ಕತ್ತಿಯನ್ನು ಕೈಗೊಂಡಂತೆ ನಾನಕಸಿಂಗ್ ಲೆಕ್ಕಣಿಕೆ ಹಿಡಿದು ಬ್ರಿಟಿಷರನ್ನು ತಡೆಯಲು ಕತ್ತಿಯನ್ನು ಕೈಗೊಂಡಂತೆ ನಾನಕಸಿಂಗ್ ಲೆಕ್ಕಣಿಕೆ ಹಿಡಿದು ಬ್ರಿಟಿಷರನ್ನು ಎದುರಿಸಿದ. ಪ್ರಾರ್ಥನಾ ಪದ್ಯದ ನಂತರ ರೌಲಟ್ ಬಿಲ್ಲನ್ನು ಜಾರಿಯಲ್ಲಿ ತರುವುದರಿಂದ ಜನಸಾಮಾನ್ಯರಿಗೆ ಆದ ನಿರಾಶೆಯನ್ನು ವರ್ಣಿಸುವುದರಿಂದ ಹಿಡಿದು ಜಾಲಿಯನ್ ವಾಲಾಬಾಗ್ ದುರಂತದವರೆಗಿನ ಎಲ್ಲ ಐತಿಹಾಸಿಕ ಸಂಗತಿಗಳನ್ನು ಒಳಗೊಂಡ ೨೪ ಪದ್ಯಗಳಿವೆ. "ಈ ಕೃತಿಯ ವೈಶಿಷ್ಟ್ಯವೆಂದರೆ, ಐತಿಹಾಸಿಕ ವಿವರಗಳ ನಿರೂಪಣೆಯೊಂದಿಗೆ ಅದಕ್ಕೆ ಸಮತೂಕದಲ್ಲಿ ಕಾವ್ಯದ ರೂಪ ಹಾಗೂ ಧ್ವನಿಯನ್ನು ಕಾಪಾಡಿಕೊಂಡುದು". ಎಂದು ಅಮೃತಸರದ ಗುರುನಾನಕದೇವ ವಿಶ್ವವಿದ್ಯಾಲಯದ ಭಾಷಾ ವಿಭಾಗದ ಮುಖ್ಯಸ್ಥರಾದ ಪ್ರೊ. ಎಚ್.ಎಸ್. ಭಾಟಿಯಾ ಹೇಳುತ್ತಾರೆ.

ನಾನು ಇಲ್ಲಿ ಉದಾಹರಣೆಗೆಂದು ಆರು ಕವಿತೆಗಳನ್ನು ಆಯ್ದು ಅವುಗಳ ಭಾವಾನುವಾದವನ್ನು ಕೊಟ್ಟಿದ್ದೇನೆ:

೧. ವಿವಾದಾಸ್ಪದ ರೌಲಟ್ ಆಕ್ಟ್

ರೌಲಟ್ ಆಕ್ಟ್‌ನ್ನು ಜಾರಿಯಲ್ಲಿ ತಂದು
ಕಣಜದ ಗೂಡನ್ನೆ ಕೆಣಕಿದಂತಾಯ್ತು.
ದೇಶದುದ್ದಕ್ಕೂ ಖಿನ್ನತೆಯ ಜ್ವಾಲೆ ಹಬ್ಬಿಸಿ
ಕುದಿಯುವ ಕೊಪ್ಪರಿಗೆಯಾಯ್ತು ಹಿಂದುಸ್ತಾನ.
ಅದನ್ನು ಗ್ರಹಿಸಲು ಸ್ವಲ್ಪವೂ ಜನಕೆ ಬಿಡುವು ಕೊಟ್ಟಿರಲಿಲ್ಲ.
ದೀರ್ಘ ಸೇವೆಗೆ, ಆಜ್ಞೆಯನ್ನು ತಪ್ಪದೆ ಪಾಲಿಸಿದ್ದಕ್ಕೆ
ಅದೊಂದು ಇನಾಮು ಇರಬೇಕೆಂದು ಭಾವಿಸಿದ್ದರು ಜನತೆ.
ಈ ಕಾನೂನು ಹೊಸಬಂಧನದ ಬೇಡಿ ಎಂದು ಹೊಳೆದಾಗ
ಆಶೆ ಭರವಸೆಗಳೆಲ್ಲ ಮಣ್ಣುಗೂಡಿದವು.

೨. ಹಿಂದು-ಮುಸ್ಲಿಂ ಐಕ್ಯಸಾರುವ ರಾಮನವಮಿ ಹಬ್ಬ

ಹಿಂದುಗಳು, ಮುಸಲ್ಮಾನರು ಒಗ್ಗೂಡಿ ಒಂದೆಡೆ ಸೇರಿದರು
ಹಬ್ಬದ ಸಂಭ್ರಮ, ನನ್ನ ಸ್ನೇಹಿತರೆ.
ಮುಸಲ್ಮಾನರು ಅಂದು ಬಾಂಧವ್ಯ ಸಾರಿದರು
ನಂಬಲಾಗದಷ್ಟು ನನ್ನ ಸ್ನೇಹಿತರೆ.
ಅದು ಹಿಂದೂಗಳ ಹಬ್ಬ ಎನಿಸಿದರೂ
ತಮ್ಮದೇ ಎಂದುಕೊಂಡರು ಮುಸಲ್ಮಾನರು, ನನ್ನ ಸ್ನೇಹಿತರೆ.

ಈ ಹೊಸ ಭಾವನೆಯ ಮಾತಿನಲ್ಲಿ ಬಣ್ಣಿಸಲಾಗದು
ಅದು ಪವಾಡಸದೃಶ, ನಿಜ, ನನ್ನ ಸ್ನೇಹಿತರೆ.
ಸೈಫುದ್ದೀನ್, ಸತ್ಯಪಾಲ ವೈದ್ಯರೊಡಗೂಡಿ
ಐಕ್ಯಪಥವ ತುಳಿದರು, ನನ್ನ ಸ್ನೇಹಿತರೆ.
ಹೂಮಾಲೆ ಹಾಕಿ ಸನ್ಮಾನ ನಮ್ಮ ಧೀರರಿಬ್ಬರಿಗೂ
ಸ್ವಚ್ಛ ಸಂದೇಶ ಬೀರಿದರು. ನನ್ನ ಸ್ನೇಹಿತರೆ.
ತಮ್ಮ ಸ್ನೇಹ ಎಷ್ಟು ಗಟ್ಟಿ ಎಂಬುದನು ತೋರಿದರು
ಹಿಂದು-ಮುಸ್ಲಿಂ ಎಲ್ಲ ಒಂದೇ, ನನ್ನ ಸ್ನೇಹಿತರೆ.
ಹಿಂದೆ ಎಂದೂ ಇಂಥ ಸಾಮರಸ್ಯ ಕಂಡಿರಲಿಲ್ಲ
ಈ ಜಗತ್ತು ಸೃಷ್ಟಿಯಾದಂದಿನಿಂದ, ನನ್ನ ಸ್ನೇಹಿತರೆ.
ಎರಡು ಪಂಥಗಳ ನಡುವಿನ ಸ್ನೇಹದ ಬೀಜ
ಸ್ವರ್ಗದಿಂದಲೇ ಅವತರಿಸಿತ್ತು. ನನ್ನ ಸ್ನೇಹಿತರೆ.
ವಿರೋಧ, ತಾರತಮ್ಯಭಾವ ಅಳಿಸಿಹೋಗಿತ್ತು
ಪರಸ್ಪರರು ಸೋದರರಂತೆ ಕಂಡರು, ನನ್ನ ಸ್ನೇಹಿತರೆ
ನೀರು ಕುಡಿಯಲು ಒಂದೆ ಗ್ಲಾಸು ಹಂಚಿಕೊಂಡರು
ಒಟ್ಟಾಗಿಯೇ ಊಟಕ್ಕೆ ಕುಳಿತರು, ನನ್ನ ಸ್ನೇಹಿತರೆ.
ಜನ್ಮತಃ ದಾಯಾದಿಗಳಂತೆ ಪ್ರತ್ಯೇಕವಾಗಿದ್ದವರು
ಅದ್ಭುತ! ಈಗ ಒಟ್ಟಾಗಿ ನಿಂತಿಹರು ನನ್ನ ಸ್ನೇಹಿತರೆ.
ಹಿಂದು-ಮುಸ್ಲಿಂ ಸ್ನೇಹದಲಿ ಒಬ್ಬರಿಗಿಂತ ಒಬ್ಬರು ಮಿಗಿಲು
ಎಲ್ಲರಿಗೂ ಸಿಹಿಪಾನಕವ ನೀಡಿದರು, ನನ್ನ ಸ್ನೇಹಿತರೆ.
ನಿಂತರೆಲ್ಲರು ಹಿಂದುವಿನ ಜೊತೆಗಾರರಾಗಿ

ಎಲ್ಲ ಭಕ್ತರ ಮೇಲು ಹೂವನೆರಚಿದರು, ನನ್ನ ಸ್ನೇಹಿತರೆ
ಹಬ್ಬದ ಮಾರ್ಗದಲಿ ಗುಂಪುಗೂಡಿ ಸಾಲಾಗಿ ನಿಂತರು
ಹಿಗ್ಗಿನ ಹಿಂದೂ ಮೆರವಣಿಗೆ ಹುರುಪುಗೊಳಿಸಿ ನನ್ನ ಸ್ನೇಹಿತರೆ
ಸ್ವತಃ ಕೃಷ್ಣನೂ ಈ ದೃಶ್ಯ ಕಂಡು ಆಕರ್ಷಿತ
ಬೃಂದಾವನದಲಿ ಹೋಳಿಯಾಡಿದಂತೆ, ನನ್ನ ಸ್ನೇಹಿತರೆ.
ವಿಧಿ ಮಾತ್ರ ಬೇರೊಂದನೇ ಯೋಚಿಸಿತು
ಅಂಗಡಿಗಳನೇಕೆ ತೆರೆದಿರಿ ಇಂದು? ನನ್ನ ಸ್ನೇಹಿತರೆ.
ನಗರದಲ್ಲೆಲ್ಲ ನಾಳೆ ಹರತಾಳವಾಚರಿಸುವರು
ಗುಂಡಿನ ಸುರಿಮಳೆಗೆ ಈಡಾಗುವಿರಿ, ನನ್ನ ಸ್ನೇಹಿತರೆ.

೩. ಬ್ರಿಗೇಡಿಯರ್ ಜನರಲ್ ಡಾಯರ್ ಮತ್ತು ಗುಂಡು

ಗಡಿಯಾರ ಸರಿಯಾಗಿ ಐದೂವರೆಗಂಟೆ ಬಾರಿಸಿತು
ಜಾಲಿಯನ್‌ವಾಲಾಬಾಗ್ ಜನರಿಂದ ತುಂಬಿ ತುಳುಕಿತು. ನನ್ನ ಸ್ನೇಹಿತರೆ.
ದೇಶದ ದುಃಖ ತೋಡಿಕೊಳಲೆಂದು ಬಂದ ಮುಖಂಡರು
ಒಬ್ಬೊಬ್ಬರೂ ಗಟ್ಟಿ ದನಿಯಲ್ಲಿ ಮಾತನಾಡಿದರು. ನನ್ನ ಸ್ನೇಹಿತರೆ.
ತಮ್ಮ ಅಸಮಾಧಾನ, ಸಿಟ್ಟು, ತೊಂದರೆ, ದುಃಖಕ್ಕೆ ದನಿಗೊಟ್ಟರು
ಯಾರೂ ಕಿವಿಗೊಟ್ಟು ಕೇಳುವವರೇ ಇಲ್ಲ, ನನ್ನ ಸ್ನೇಹಿತರೆ.
ಏನು ಮಾಡಬಲ್ಲೆವು ನಾವು? ನಮ್ಮ ಆಯ್ಕೆಗಳೇನು?
ಬೆಳಕಿನ ಕಿರಣವೊಂದೂ ಕಾಣಲೊಲ್ಲದು, ನನ್ನ ಸ್ನೇಹಿತರೆ.
ಮುಚ್ಚು ಮರೆಯಿಲ್ಲದೆ ಹತಾಶೆಯ ನುಡಿಗಳಾಡಿದರು ಮುಖಂಡರು ಸೈನಿಕರು
ಕೆಳಗಿಳಿದು ಗುಡುಗುತ್ತ ಬಂದರು, ನನ್ನ ಸ್ನೇಹಿತರೆ.
ಡಾಯರ್‌ನ ಆಜ್ಞೆಗನುಸರಿಸಿ ಆ ಗುರ್ಖಾ ತಂಡಗಳು
ಮತ್ತೆ ಬಿಗಿಯಾಗಿ ಗುಂಪುಗೂಡಿದರು. ನನ್ನ ಸ್ನೇಹಿತರೆ.
ನಿರಂಕುಶ ಪ್ರಭುವಿನಾಣತಿಯಂತೆ ಅವರು ಗುಂಡಿಕ್ಕಿದರು
ಮುಗ್ಧ ಜನರ ಎದೆಗಳಿಗೆ ನೇರವಾಗಿ, ನನ್ನ ಸ್ನೇಹಿತರೆ.
ಹಾರಿಸಿಯೇ ಹಾರಿಸಿದರವರು ಸತತ ಗುಂಡುಗಳ
ಸಾವಿರ, ಸಾವಿರ ಗುಂಡುಗಳನ್ನು, ನನ್ನ ಸ್ನೇಹಿತರೆ.
ಗುಂಡಿನ ಸುರಿಮಳೆಗೆ ನಮ್ಮ ಯುವಕರು ಧರೆಗುರುಳಿದರು
ಹಿಂದೆಂದೂ ಕಾಣದಂಥ ಬಿರುಗಾಳಿ, ನನ್ನ ಸ್ನೇಹಿತರೆ.

ಜರಡಿಯಾದವು ಅವರ ಎದೆ ನೆಲಕ್ಕೆ ಜಾರಿದವು ದೇಹಗಳು
ಪ್ರತಿಯೊಬ್ಬರೂ ಗುರಿಗೆ ಈಡಾದರು. ನನ್ನ ಸ್ನೇಹಿತರೆ
ಸಹಾಯ ಯಾಚಿಸಿದ ಆರ್ತ ದನಿ ಮುಗಿಲುಮುಟ್ಟಿತು
ಬಂದೂಕುಗಳ ಬಾಯಿಂದ ಮೇಲೆದ್ದಿತು ಹೊಗೆ, ನನ್ನ ಸ್ನೇಹಿತರೆ.
ಅವರೆಲ್ಲ ಕೇಳಿದ್ದು ಒಂದೇ ಒಂದು ತೊಟ್ಟು ನೀರು
ಧೀರ ಯುವಕರು ಮಣ್ಣೊಳಗೆ ಸತ್ತುಬಿದ್ದರು. ನನ್ನ ಸ್ನೇಹಿತರೆ.

ತೀರ ಇಕ್ಕಟ್ಟಿನದು ಬಾಗ್‌ನ ಬಾಗಿಲ ದಾರಿ
ಡಾಯರ್‌ನ ಆಜ್ಞೆ, ಅದೂ ಒಂದು, ನನ್ನ ಸ್ನೇಹಿತರೆ
ಹಿಂದೆ ಎತ್ತರದ ಗೋಡೆ, ಹೊರಗೆ ಹೋಗಲು ದಾರಿಯೇ ಇಲ್ಲ
ಜಾಲಿಯನ್‌ವಾಲಾಬಾಗ್ ಮೃತ್ಯುವಿನ ಬಲೆ, ನನ್ನ ಸ್ನೇಹಿತರೆ.
ಕೆಲವರು ಸುದೈವಿಗಳು ಹೇಗೋ ಜೀವಂತ ಉಳಿದರು
ಇದ್ದು ಬಿದ್ದಲ್ಲೇ ಸತ್ತುಹೋದರು ಬಹಳಷ್ಟು, ನನ್ನ ಸ್ನೇಹಿತರೆ.
ಕೆಲವರೋಡಿದರು ಎದೆಯ ಸೀಳಿದ ಗುಂಡು ಸಮೇತ
ಎಡವಿ ಬಿದ್ದರು, ಪ್ರಾಣ ಹಾರಿಹೋಯಿತು. ನನ್ನ ಸ್ನೇಹಿತರೆ.
ಚಣದಲ್ಲಿ ಬಾಗ್ ತುಂಬ ಚೆಲ್ಲಾಪಿಲ್ಲಿ ಹೆಣಗಳು
ಯಾರ ಗುರುತೂ ಹತ್ತದೆ ಹೋಯ್ತು. ನನ್ನ ಸ್ನೇಹಿತರೆ.
ಬಹಳ ಜನ ಅವರಲ್ಲಿ ಶಿಖ್‌ರ ಹಾಗೆ ತೋರಿದರು
ನಡುವೆ ಹಿಂದು ಮುಸಲ್ಮಾನರೆಷ್ಟೊ, ನನ್ನ ಸ್ನೇಹಿತರೆ.
ಇನ್ನೂ ಹರೆಯದ ನಮ್ಮ ಕೆಚ್ಚೆದೆಗಳು ಬಿದ್ದವು
ಕೊನೆಯುಸಿರು, ಮೇಲುಸಿರು ಎಳೆಯುತ್ತ, ನನ್ನ ಸ್ನೇಹಿತರೆ.
ಉದ್ದಕೂದಲು ರಕ್ತದ ಕೆಸರಲ್ಲಿ ತೊಯ್ದು ತಪ್ಪಡಿ
ದೀರ್ಘನಿದ್ರೆ ಅವರನಾವರಿಸಿತು, ನನ್ನ ಸ್ನೇಹಿತರೆ.
ನಾನಕಸಿಂಗ್ ನುಡಿದ : ಅವರ ಸ್ಥಿತಿಯನಾರುಬಲ್ಲರು?
ದೇವರೊಬ್ಬನೇ ಬಲ್ಲ ಎಲ್ಲವನು, ನನ್ನ ಸ್ನೇಹಿತರೆ.

೪. ಹುತಾತ್ಮರ ಆಹ್ವಾನ

ನಮ್ಮ ಬಾಗ್ ನೋಡಲು ಒಂದಿಷ್ಟು ವೇಳೆ ಉಳಿಸಿಕೊಳ್ಳಿ
ಈ ಧೀರಾತ್ಮರ ಕಥೆ ಪ್ರತಿಧ್ವನಿಸುತ್ತವೆ, ಓ ಸ್ನೇಹಿತರೆ

ಭಾರವಾದ ಹೃದಯಗಳಿಂದ ನಮ್ಮ ದೇಶವನಣಕಿಸುವರು
ನಿಮ್ಮ ಪ್ರೀತಿ ಅಪಾರ, ಅದಕೆ ನಮ್ಮ ಧನ್ಯವಾದ, ಓ ಸ್ನೇಹಿತರೆ.
ತಾಯ್ನಾಡಿಗಾಗಿ ನಮ್ಮನ್ನೆ ತೆತ್ತುಕೊಂಡೆವು ನಾವು
ಮನೆ-ಮಾರು ಬಿಟ್ಟು, ಬಂಧುಬಳಗ ತೊರೆದು, ಓ ಸ್ನೇಹಿತರೆ.
ನಿಮ್ಮಂತೆಯೇ ನಾವೂ ಕೂಡ ಜನಸಾಮಾನ್ಯರೆ
ಬದುಕ ಪ್ರೀತಿಸಿ ವಿನೋದಕೂಟದಲಿ ಭಾಗಿ, ಓ ಸ್ನೇಹಿತರೆ.
ದೇಹ ಈಡಾಡಿದೆವು ಅವರ ನಿರ್ದಿಷ್ಟ ಗುರಿಸಾಧನೆಗೆ
ಅವರ ಗುಂಡಿಗೆ ಎದೆಯನೊಡ್ಡಿದೆವು, ಓ ಸ್ನೇಹಿತರೆ.
ಜರಡಿಯಂತಾದ ಈ ದೇಹ ಅವಲೋಕಿಸಿರಿ.
ಕಿಕ್ಕಿರಿದಿವೆ ಸಾವಿರ ಘಾಯ, ಓ ಸ್ನೇಹಿತರೆ.
ನೀವೆಲ್ಲ ಮನೆಹಿಡಿದು ಸಮ್ಮೋದದಲ್ಲಿದ್ದಿರಿ
ಹೃದಯದಿಂದ ನಮಗೆ ಗಡೀಪಾರು ಮಾಡಿದಿರಿ, ಓ ಸ್ನೇಹಿತರೆ.
ನೀವೇ ವಚನಕೊಟ್ಟು ಮರೆತುಬಿಟ್ಟಿರಿ ಹೇಗೆ?
ತಿಳಿಯದು ನಿಮ್ಮ ನುಡಿಗೆಂತು ಗೌರವಿಸುವದು, ಓ ಸ್ನೇಹಿತರೆ,
ಮಾಳಿಗೆ ಹತ್ತಿಸಿ ನಿಚ್ಚಣಿಕೆ ತೆಗೆದುಬಿಟ್ಟಿರಿ ಬಂಧುಗಳೆ
ಅಷ್ಟು ನಿಷ್ಠಾವಂತರಾಗಿ ಉಳಿದಿರಿ ನೀವು, ಓ ಸ್ನೇಹಿತರೆ.
ತುತ್ತುತುದಿಗೊಯ್ದು ನಮ್ಮ ನೂಕಿದಿರಿ ಮೇಲೆ
ಎಷ್ಟೊಂದು ನೋವಾಯ್ತು! ಅದನೆಲ್ಲ ಮರೆತುಬಿಟ್ಟಿರಿ, ಓ ಸ್ನೇಹಿತರೆ.
ಮುಕ್ತರಾಗಬೇಕಿದೆ ನೀವು ಭಾರಿ ಋಣಭಾರದಿಂದ
ಸದ್ಯ ಅದರ ಇತ್ಯರ್ಥವಾಗಲೆಬೇಕು, ಓ ಸ್ನೇಹಿತರೆ.
ಅಲಂಕಾರ ಫಲಕ ಬೇಡ, ಪ್ರತಿಮೆ ಸ್ಮಾರಕಗಳೂ ಬೇಡ
ನಾವು ಸತ್ತ ಸ್ಥಳದ ಯಾವ ಕುರುಹೂ ಬೇಡ, ಓ ಸ್ನೇಹಿತರೆ.
ಸಿದ್ಧರಾಗಿರಿ ಈಗ, ತೆಗೆದುಕೊಳ್ಳಿ ಈ ಮಾನಸಿಕ ಭಾರ
ಕಾಲ ಬಂದಿದೆ ನಿಮ್ಮ ಅವಿವೇಕವನು ತ್ಯಜಿಸಿ, ಓ ಸ್ನೇಹಿತರೆ.
ಮನುಷ್ಯರಾಗಿರಿ ಮೊದಲು, ದೇಶಸೇವೆಗೆ ಕಂಕಣಬದ್ಧರಾಗಿ
ಈ ವಚನ ಪಾಲಿಸಲು ಹಿಂದೆಗೆಯದಿರಿ, ಓ ಸ್ನೇಹಿತರೆ
ನಾನಕಸಿಂಗ್ ನುಡಿದ : ಒಂದಲ್ಲ ಒಂದು ದಿನ ನೀವು ಸತ್ತೇ ಸಾಯುವಿರಿ
ದೇಶಕ್ಕಾಗಿ ಯಾಕೆ ಸಾಯಬಾರದು ಹೇಳಿ, ಓ ಸ್ನೇಹಿತರೆ.

೫. ಕವಿಯ ಚಿಂತನೆ

ನಾಳೆಯ ಬಗ್ಗೆ ನಾನೇನು ಹೇಳಬಲ್ಲೆ?
ಪಿಸುಗುಟ್ಟದಿರು ಎಂದು ಹೃದಯ ಎಚ್ಚರಿಸುತಿದೆ.
ಪ್ರತಿ ಮೂಲೆಗೂ ಸಾಲು ಸಾಲು ದೇಹ ಚೆಲ್ಲಾಡಿವೆ.
ಹೆಣಗಳ ಪೇಟೆಯಲ್ಲಿ ಮಾರುವವರೇ ಕಾಣೆಸರು,
ಸಾವೂ ತನ್ನ ಮುಖವ ತಿರುಗಿಸಿದ ಹಾಗೆ ತೋರುವದು
'ಸಾಕು' ಹೇಳಿತದು. 'ಅವು ಇದ್ದಲ್ಲೆ ಬಿದ್ದಿರಲಿ'
ಬಿಳಿ ಅರಿವೆ ಅವರ ಗಾಢ ನಿದ್ರೆಯನು ಮುಚ್ಚಿತು
ನನಗಾಗಿ ತಮ್ಮ ಮುಖ ಮೇಲೆತ್ತಿ ಕಣ್ಣು ತೆರೆಯರು
ತಾಯಂದಿರ ಕರುಳ ಆ ಕೋಮಲ ಬಾಲಕರು
ಸುಡು ಬಿಸಿಲಲ್ಲಿ ಮಲಗಿವೆ, ನೆರಳಿಗೊಂದು ಗಿಡವಿಲ್ಲ.
ಹಿಂದಿನ ದಿನ ಸಂತೋಷದಿಂದಲೆ ಮನೆ ಬಿಟ್ಟರವರು
ಈಗ ಕೈಬಿಟ್ಟರು. ಹೆಸರುಗಳು ಯಾರಿಗೂ ಗೊತ್ತಿಲ್ಲ.
ಮನೆ ಬಿಟ್ಟು ಬಂಧುಬಳಗವ ತೊರೆದ ಸನ್ಯಾಸಿಗಳ ಹಾಗೆ
ಕಣ್ಮರೆಯಾಗಿ ಹೋದರು ಬೇರೆ ಮತ್ತೊಂದು ವಲಯಕ್ಕೆ.
ನುಡಿದ ನಾನಕಸಿಂಗ್. ಅವರಲ್ಲಿ ಪ್ರತಿಯೊಬ್ಬರಿಗೂ
ಗುಂಡು ತಾಗಿ ಅವರ ಹೆಸರನ್ನೂ ಜೊತೆಗೆ ಒಯ್ದುಬಿಟ್ಟವು.

೬. ಕೊನೆಯ ಬೀಳ್ಕೊಡುಗೆ

ಎಂದೆಂದಿಗೂ ನಮ್ಮ ನೆನಪಿರಲಿ ನಿಮಗೆ
ಗೆಳೆಯರನು ನೀವು ಮರೆಯಬಹುದು. ನಿಮ್ಮ ವೀರರನ್ನಲ್ಲ.
ಪರಿಸ್ಥಿತಿ ಎನಿತು ನಿಸ್ತೇಜವಾದರೂ ಎಂದೂ ನಿರಾಶರಾಗದಿರಿ.
ಕಾಯಲು ಸಿದ್ಧರಾಗಿ, ಲವಲೇಶವೂ ಕಾಳಜಿ ಮಾಡದಿರಿ
ನಮ್ಮ ಸತ್ಯವಚನದಲಿ ಎಂದಾದರೂ ಸಂದೇಹ ಬಂದರೆ ನಿಮಗೆ
ನಮ್ಮ ದೇಹಗಳ ಹೊಕ್ಕಿರುವ ಗುಂಡುಗಳ ನೋಡಿ
ನಿಮಗಿದೊ ನಮ್ಮ ಕೊನೆಯ ವಿದಾಯ
ನಾವು ಕಲಿಸಿದ ಪಾಠ ಎಂದೆಂದೂ ಮನಸ್ಸಿನಲ್ಲಿರಲಿ.

'ಹೊಸತು' ಮಾಸಪತ್ರಿಕೆ ೨೦೧೯

ನನ್ನ ಜೋಡಿ ಅದೇ ಕಾವ್ಯ, ಅದೇ ಸೋನೆಮಳೆ

ಧಾರವಾಡವೆಂಬ ಪುಟ್ಟ ಗೂಡಿನಲ್ಲಿ ಮಲೆನಾಡನ್ನು ಕಂಡವರು ಚೆನ್ನವೀರಕಣವಿ. ಚಂಬೆಳಕಿನ ಕವಿ. ಅಜಾತಶತ್ರು, ಹೂಮನಸ್ಸಿನ ಕವಿಯೆಂಬ ಇವರ ಹಿರಿಮೆಯೊಳಗೆ ಕುವೆಂಪು ಅವರ ಪ್ರಕೃತಿಪ್ರೇಮ, ಬೇಂದ್ರೆಯ ಜಾನಪದ ಸತ್ವ, ಕೆಎಸ್‌ನ ಪ್ರೇಮದ ಠೇಂಕಾರವು ಆಕಾಶ ಮಲ್ಲಿಗೆಯಂತೆ ಹಬ್ಬಿದೆ. ಇತ್ತೀಚೆಗೆ ಒಡನಾಡಿ ಗಿರಡ್ಡಿ ಗೋವಿಂದರಾಜು ಅವರನ್ನು ಕಳಕೊಂಡ ದುಃಖದಲ್ಲಿರುವ ಕಣವಿ, ತಮಗೆ ತಾವೇ ಸಾಂತ್ವನ ಹೇಳುತ್ತಾ, ಕಾವ್ಯವಾದರು. ಅವರ ಬದುಕನ್ನು ಪುಟ್ಟ ಕವನ ಸಂಕಲನದಂತೆ 'ಉದಯವಾಣಿ'ಯೆದುರು ಪೋಣಿಸಿಟ್ಟರು.

ಚಹಾ ಹೀರುವುದು ನನ್ನೊಳಗಿನ ಜಾತ್ರಿ ಇದ್ದಂಗ, ಉತ್ಸವದ ರೀತಿ ನಂಗ ತೊಂಬಕ್ಕಿಂತ ಹೆಚ್ಚಾಯಿತು ಅನ್ನೂದನ್ನ ಮರೆಸಿದ್ದೇ ಈ ಚಹಾ. ಮುಂಜಾನಿ ಎದ್ದು, ಮನಿಮಂದಿಗೆಲ್ಲ ಖಡಕ್ ಚಾ ಮಾಡೋದು ನಂಗ ರೂಢಿ ಆಗ್ಯಾದ. ಅದರ, ಒಂದೆರಡು ದಿನದಿಂದ ಚಾ ಕುಡಿಯೋಕೂ ಏನೋ ಬ್ಯಾಸರ. ಚಹಾದ ಪಾತ್ರೆ (ಕಪ್) ಹಿಡಿದಾಗ, ಬೆರಳುಗಳಿಗೆ ನಡುಕ ಹುಟ್ಟಾದ. ಆ ಕಂಪನದ ತುದಿ ಹಿಡಿದು ನೋಡಿದ್ರ, ಅಲ್ಲಿ ಗಿರಡ್ಡಿ ಗೋವಿಂದರಾಜು ಕಾಣಿಸ್ತಾರ. ಅವರು ಮೊನ್ನೆ ನಮ್ಮನ್ನೆಲ್ಲ ಬಿಟ್ಟು ಹೊಂಟ್ರು. ಅವರ ಪತ್ನಿ ತರಕಾರಿ ತರೂಕಂತ ಮಾರ್ಕೆಟ್‌ಗೆ ಹೋಗ್ಯಾರ. ಇವರು ಒಂದು ಕಪ್ ಚಾ ಮಾಡಿ, ಅದನ್ನು ಕುಡೀತಾ ಕುರ್ಚಿ ಮ್ಯಾಲೆ ಕುಂತಾರ, ಚಾ ಪೂರಾ ಕುಡುದು, ಹಾಗೆ ಕಪ್ ಹಿಡಕೊಂಡೇ ಪ್ರಾಣ ಬಿಟ್ಟಾರ. ಅವರು ನಮ್ಮನಿ ಬಾಜೂನೇ ಇದ್ರೂ, ಚಾ ಮಾಡ್ತಿದ್ರು ಅಂತ ಗೊತ್ತಾಗಿದ್ದೇ ನಂಗ ಅವಾಗ.

ನನ್ನ ಚಹಾಕ್ಕ ಚರಿತ್ರೆಯೇ ಐತಿ. ಧಾರವಾಡದ ಮಾಳಮಡ್ಡಿಯಲ್ಲಿ ಮೆಟ್ರಿಕ್ಯುಲೇಶನ್ ಓದೋವಾಗ ರೂಮ್ ಮಾಡ್ಕೊಂಡಿದ್ದೆ. ರೂಮಿಗೆ ಯಾವಾಗ್ಲೂ ಬೀಚಿ ಬರ್ತಿದ್ರು. ನನ್ನ ಕೈಯ ಚಾ ಕುಡಿಯೋದು ಅಂದ್ರೆ ಅವರಿಗೇನೋ ಸಂಭ್ರಮ ಇದ್ದಂಗ. ಒಂದ್ಸಲ ಅವರು ಕೇಳಿದ್ರು: 'ನೀವು ಓದು ಮುಗಿದ್ಮೇಲೆ ಏನ್ ಮಾಡ್ಬೇಕು ಅಂತಿದ್ದೀರಿ?' 'ಪ್ರಾಧ್ಯಾಪಕನಾಗ್ಬೇಕು' ಅಂತ ಮುಗ್ಧವಾಗಿ ಉತ್ತರಿಸಿದ್ದೆ. ಅದಕ್ಕವರು, 'ಅದೆಲ್ಲ ಬ್ಯಾಡ್ರೀ... ನೀವು ಚೊಲೊ ಚಾ ಮಾಡ್ತೀರಿ: ಒಂದು ಚಾ ಅಂಗ್ಡಿ ಇಡಿ. ಬೇಕಾದ್ರ ಟೇಬಲ್ ಮ್ಯಾಲೆ ಕುಂತು ರೊಕ್ಕ ಇಸ್ಕೊಳ್ಳೋಕ ನಾ ಬರ್ತೀನಿ' ಅಂದ್ರು.

* * *

ಚಹಾದಂತೆಯೇ ನನ್ನ ಹೃದಯದಾಳಕ್ಕೆ ಧಾರೆಯಾಗಿ ಇಳಿದಿದ್ದು ಪದ್ಯಗಳು. ಕುವೆಂಪು, ಬೇಂದ್ರೆ, ಮಧುರಚೆನ್ನರು, ನರಸಿಂಹಸ್ವಾಮಿಯವರ ಕವಿತೆಗಳು ನನ್ನನ್ನು ಭಾವಜೀವಿಯಾಗಿ ರೂಪಿಸಿದವು. ಬಹುಶಃ ಇವರ ಪ್ರಭಾವವೇ ಇದ್ದಿರಬೇಕು. ಗದಗದಂಥ' ದಟ್ಟ ಬಯಲುಸೀಮೆಯಲ್ಲಿ ಹುಟ್ಟಿ, ಧಾರವಾಡದಂಥ' ಅರಬಯಲುಸೀಮೆಗೆ ಬಂದರೂ, ನನ್ನ ನಾಲಿಗೆಗೆ ಜವಾರಿ ಭಾಷೆ ಅಂಟಿತೇ ವಿನಾಃ ನನ್ನ ಪದ್ಯಗಳಲ್ಲಿ ಅದು ಇಣುಕಲಿಲ್ಲ. ಅದಕ್ಕೆ ಇನ್ನೊಂದು ಕಾರಣ ಈ ಧಾರವಾಡ. ಇಲ್ಲಿ ನಾನು ಪುಟ್ಟ ಮಲೆನಾಡನು ಕಂಡೆ. ಕುವೆಂಪು ಅವರ ನಿಸರ್ಗ ಪ್ರೀತಿ, ಬೇಂದ್ರೆಯ ಜಾನಪದ ಸತ್ವ, ಕೆಎಸ್‌ನ ಪ್ರೇಮದ ಠೇಂಕಾರ, ಇವೆಲ್ಲ ನನ್ನೊಳಗ ಹ್ಯಾಂಗೆ ಪಾಕಗೊಂಡವೋ, ನಾ ಅರಿಯೆ.

ನಾನು ಧಾರವಾಡಕ್ಕೆ ಬಂದು ಎಪ್ಪತ್ತೈದು ವರ್ಷ ಆತು. ಆಗ ತುಂಬಾ ಮರಗಿಡಗಳು ಇದ್ದು, ದ್ವಿಪಥ ರಸ್ತೆ, ಹೆದ್ದಾರಿಗಳು ಇದ್ದಿರಲಿಲ್ಲ. ರಸ್ತೆಯ ಇಕ್ಕೆಲಗಳಲ್ಲಿ ಆಕಾಶ ಮಲ್ಲಿಗೆ ಬಳ್ಳಿಗಳು ಹಬ್ಬಿದ್ದವು. ಆಗ ಮಳೇನೂ ಭಾಳ, ಶ್ರಾವಣ ಮಾಸದಾಗ ಜಿಟಿಜಿಟಿ; ಸೋನೆ ಮಳೆ ಅಂತಾರ ನೋಡ್ರಿ ಅದು. ಬೆರಳು ಸಂಧುಗಳು ಸೆಟೀತಿದ್ದು. ಅಷ್ಟು ಶೀತಲ; ಕೆಂಪನೆ ಕೆಸರು. ಈಗ ನೆಲಕ್ಕೆ ಕಾಂಕ್ರೀಟು ಬಿದ್ದಾದ, ಕಾಲಿಗಿ ಕೆಸರೂ ಮೆತ್ತಂಗಿಲ್ಲ. ಗಿಡಗಳು ಕಮ್ಮಿ ಆಗ್ಯಾವ. ಆಗ ಇದ್ದ ಏಳೆಂಟು ಕೆರೆಗಳು ಈಗ ಕಣ್ಣಿಗೆ ಬೀಳೋದಿಲ್ಲ.

ಒಂದು ಮುಂಜಾವಿನಲ್ಲಿ ಸೋ... ಎಂದು ಶ್ರುತಿಹಿಡಿದು ಸುರಿಯುತ್ತಿದ್ದ ಅದ ಸೋನೆ ಮಳೆಗೆ ಮೋರೆಯೊಡ್ಡಿ ಕುಂತಿದ್ದೆ. ಹಕ್ಕಿಗಳ ಚಿಲಿಪಿಲಿ ಅಲ್ಲೆಲ್ಲೋ ಮೂಲ್ಯಾಗ ದುಂಬಿಯ ಓಂಕಾರ ಕಿವಿಗೆ ಬೀಳುತ್ತಿತ್ತು. ತೆಂಗು ಗರಿಗಳಿಗೆ ಸುಳಿಗಾಳಿ ಸೋಕುತಲಿತ್ತು. ಹಚ್ಚೆಹಸುರಿನ ಪಚ್ಚೆ ಹಸಿರಿನ ಹಾಗೆ ಅಂಗಳ ಕಾಣ್ತಿತ್ತು. ಕಣ್ಣೆದುರೇ ಒಂದು ಬಣ್ಣದ ಚಿಟ್ಟೆ ಕುಣಿಯುತ್ತಿತ್ತು. ಆ ಕ್ಷಣವೇ ನನ್ನೊಳಗೆ ಹುಟ್ಟಿದ ಕವಿತೆ; 'ಒಂದು ಮುಂಜಾವಿನಲಿ ತುಂತುರಿನ ಸೋನೆ ಮಳೆ...' ಸಂಗೀತ ಕಟ್ಟಿ, ಬಿ.ಆರ್. ಛಾಯಾ ಅದನ್ನ ಭಾಳ ಛೊಲೋ ಹಾಡ್ಯಾರ.

ನಾನು ಎಲ್ಲರನ್ನೂ ಓದಿದ್ದೆ ಬೇಂದ್ರೆಯವರನ್ನು ತುಸ ಜಾಸ್ತಿ ಓದಿದ್ದೆ. ಅವರ ಕಾವ್ಯವಾಚನಗಳನ್ನು ಹೈಸ್ಕೂಲ್‌ನ ದಿನಗಳಲ್ಲಿದ್ದಾಗಲೇ ಕೇಳ್ತಿದ್ದೆ. ಕುವೆಂಪು ಅವರ ಕಾವ್ಯಕ್ಕಂತೂ ಆರಾಧಕನಾಗಿದ್ದೆ. ಅವರನ್ನು ನಾನು ಮೊದಲು ಕಂಡಿದ್ದು ಮೈಸೂರಿನ್ಯಾಗ. ಸಾಹಿತ್ಯ ಸಮ್ಮೇಳನದ ವೇಳೆ ಅದು ೧೯೫೫, ಶಿವರಾಮ ಕಾರಂತರು ಆಗ ಸಮ್ಮೇಳನದ ಸರ್ವಾಧ್ಯಕ್ಷರು. ಬಸವರಾಜ ಕಟ್ಟೀಮನಿ ಮತ್ತು ನನಗ ಮಹರಾಜ ಕಾಲೇಜಿನಲ್ಲಿ ವಸತಿ ಕಲ್ಪಿಸಿದ್ರು. ಬೆಳಗ್ಗೆದ್ದು ಚಾ ಕುಡಿತಿದ್ವಿ ಕುವೆಂಪು ಬಂದು ಕದ ಬಡಿದ್ರು.

ಕಟ್ಟೀಮನ ಭಾಳ ಸಿಗರೇಟು ಸೇದೋರು ರೂಮ್ ತುಂಬಾ ಹೊಗೆ. ಬಾಗಿಲು ತೆರೆದಾಕ್ಷಣ, ಕುವೆಂಪು ಅವರ ಮೂಗಿಗೆ ಸಿಗರೇಟಿನ ಹೊಗೆ ರಾಚಿತು. ನಾವು ಗಾಬರಿ ಆದ್ವಿ. ಆದರೆ ಅವರು 'ವ್ಯವಸ್ಥೆ ಸರಿ ಇದೆಯಾ? ರಾತ್ರಿ ಚೆನ್ನಾಗಿ ನಿದ್ದೆ ಮಾಡಿದ್ರಾ? ಚಹಾ ಕುಡಿದ್ರಾ?' ಎಂದು ಕೇಳಿ ವಾಪಸು ಹೋದ್ರು.

೧೯೭೭ರಲ್ಲಿ ಅವರಿಗೆ ನಮ್ಮ ಧಾರವಾಡ ವಿವಿಯಿಂದ ಡಾಕ್ಟರೇಟ್ ಕೊಟ್ಟೆವು. ಆ ಹೊತ್ತಿಗೆ ನಾನು ಬರೆದಿದ್ದ 'ವಿಶ್ವ ವಿನೂತನ ವಿದ್ಯಾಚೇತನ...' ಪದ್ಯ ಎಲ್ಲೆಡೆ ಹಬ್ಬಿತ್ತು. ಇದನ್ನು ಅನಧಿಕೃತ ನಾಡಗೀತೆ ಅಂತ ಹೇಳ್ತೋರೂ ಇದ್ದಾರ. ಆ ಕವಿತೆ ಘಟಿಕೋತ್ಸವ ಗೀತೆಯಾಗಿ ಹಾಡಿದ್ರು. ಅಂದು ಗೆಸ್ಟ್‌ಹೌಸ್‌ನಲ್ಲಿ ತಂಗಿದ್ದ ಕುವೆಂಪು ನನ್ನನ್ನು ಕರೆದು, 'ನಿಮ್ಮ ಕವಿತೆ 'ವಿಶ್ವ ಭಾರತಿಗೆ ಕನ್ನಡದಾರತಿ'ಯ ವಿಶ್ವ ವಿನೂತನ ಹಾಡು ಬಹಳ ಚೆನ್ನಾಗಿದೆ' ಅಂದಾಗ, ನಂಗ ರೋಮಾಂಚನ ಆತು.

* * *

ಅನೇಕರು ನಂಗ ಅಜಾತಶತ್ರು ಪಟ್ಟ ಕಟ್ಯಾರ. ಕೆಎಸ್‌ನರನ್ನು ನೋಡಿದ್ರ ಅಡಿಗರು ಕೆಂಡ ಆಗ್ತಿದ್ರು; ಅಡಿಗರನ್ನು ನೋಡಿದ್ರ ಮೈಸೂರಿನವರಿಗೆ ಆಗ್ತಿರ್ಲಿಲ್ಲ. ಈ ಮುಸಿಮುಸಿ ಗುದ್ದಾಟ ಸಾಹಿತ್ಯದ ಅಂಗಳದಾಗ ಇದ್ದಿದ್ದೇ. ನನ್ನ ಕಣ್ಣಿಗೆ ಕೆಟ್ಟದ್ದು ಎನ್ನುವಂಥದ್ದು ಕಾಣ್ಸೋದೇ ಇಲ್ಲ. ವ್ಯಕ್ತಿಗಳು ಕಂಡಾಗ, ಘಟನೆಗಳನ್ನು ನೋಡಿದಾಗ, ಸನ್ನಿವೇಶಗಳು ಕಣ್ಮುಂದೆ ಕುಣಿದಾಗ ನಾನು ನೋಡೋದು, ಅವುಗಳಲ್ಲಿನ ಒಳ್ಳೇ ಅಂಶಗಳನ್ನಷ್ಟೇ. ವ್ಯಕ್ತಿಗಳು ಎಲ್ಲೂ ಪೂರ್ಣ ಕೆಟ್ಟಿರೋದಿಲ್ಲ. ನಂಗ ಎಲ್ಲರೂ ಬೇಕು; ನವೋದಯದವರೂ ಬೇಕು, ನವ್ಯರೂ ಬೇಕು, ದಲಿತ-ಬಂಡಾಯದವರೂ ಬೇಕು. ಯಾರೊಂದಿಗೂ ನಾನು ದ್ವೇಷ ಕಟ್ಕೊಳ್ಳೋಲ್ಲ. ಬಸವಣ್ಣನವರು ಹೇಳ್ಯಾರಲ್ರೀ, 'ಅನ್ಯರಿಗೆ ಅಸಹ್ಯ ಪಡಬೇಡ, ಇದಿರ ಹಳಿಯಲು ಬೇಡ' ಅಂತ. ಅದೇ ನನ್ನ ಅಂತರಂಗ ಶುದ್ಧಿ.

'ಕಣವಿಯವರಿಗೆ ವಿಮರ್ಶಾ ಲೋಕ ಸರಿಯಾಗಿ ನ್ಯಾಯ ಒದಗಿಸಿಲ್ಲ. ಅವರು ಪ್ರಸಾರಾಂಗ ನಿರ್ದೇಶಕರಾಗಿದ್ದೇ ಇದಕ್ಕೆ ಕಾರಣ. ಪ್ರಾಧ್ಯಾಪಕರಾಗಿರುತ್ತಿದ್ದರೆ, ಅವರಿಗೆ ಜಿಎಸ್ಸೆಸ್, ಅಡಿಗರಂತೆ ಶಿಷ್ಯಕೋಟಿ ಇರುತ್ತಿತ್ತು' ಎನ್ನುವ ಮಾತುಗಳೆಲ್ಲ ಸುಳ್ಳು ಎಷ್ಟೋ ವಿಮರ್ಶಕರು ನನ್ನ ಕವಿತೆಗಳನ್ನು ಎತ್ಕೊಂಡು ನಿಷ್ಪಕ್ಷಪಾತ ವಿಮರ್ಶೆ ಮಾಡ್ಯಾರ. 'ಕಣವಿ ಕಾವ್ಯದ ಅನುಸಂಧಾನ' ಅಂತ ಕೃತಿಯೂ ಬಂದಾದ. ಟೀಚಿಂಗ್ ಲೈನ್‌ನಲ್ಲಿ ಇರಲಿಲ್ಲ ಅಂದಮಾತ್ರಕ್ಕೆ ಶಿಷ್ಯರು ಇಲ್ಲ ಅನ್ನೋಕ ಸಾಧ್ಯವಿಲ್ಲ. ಪ್ರಸಾರಾಂಗದಲ್ಲಿ ಇದ್ದುಕೊಂಡೇ ಹಲವು ಉಪನ್ಯಾಸ ನೀಡಿ, ನನಗ ಒಂದಿಷ್ಟು ಲೇಖಕರು ಪರಿಚಿತರಾದರು.

* * *

ನಂಗೆ ನಂದೇ ಆದ ಒಂದು ಪ್ರಕಾರ ಬೇಕಿತ್ತು. ಅದಕ್ಕೆ ಸಾನ್ನೆಟ್ಟುಗಳನ್ನು ಬೆನ್ನಟ್ಟಿದೆ. ಕುವೆಂಪು-ಬೇಂದ್ರೆ ಕೂಡ ಆ ಕಾಲದಲ್ಲಿ ಸಾನ್ನೆಟ್ಟು ಬರೆದ್ರು. ನನ್ನ ಮೊದಲ ಕವನ ಸಂಗ್ರಹದಲ್ಲಿ ೮-೧೦ ಸಾನ್ನೆಟ್ಟುಗಳಿವೆ. ಅವುಗಳ ಮೇಲೆ ಮೊದಲಿಂದಲೂ ಏನೋ ಪ್ರೀತಿ ಕಾರಣ. ವ್ಯಕ್ತಿಚಿತ್ರ ಸ್ಮರಣೆಯನ್ನು ಸಾನ್ನೆಟ್ಟುಗಳಲ್ಲಿ ಬಹಳ ಸಂಕ್ಷಿಪ್ತವಾಗಿ ಕಟ್ಟಿಕೊಡಬಹುದು. ಭಾವ-ಬುದ್ಧಿಯ ವಿದ್ಯುದ್ವಾಲಿಂಗನ ಅದು. ಭಾವ-ಬುದ್ಧಿಯನ್ನು ೮+೬ ಸಾಲಿನಲ್ಲಿ ಕಟ್ಟಿಕೊಡೋದೆ ಒಂದು ಸವಾಲು. ಷೇಕ್ಸ್‌ಪಿಯರ್, ಸಾನ್ನೆಟ್ಟುಗಳಲ್ಲಿ ಪ್ರಾಸದ ನಿಯಮ್ಮಗಳನ್ನು ಅನುಸರಿಸುತ್ತಿದ್ದ. ಕನ್ನಡದಲ್ಲಿ ಮೊದಲ ಬಾರಿಗೆ ಸಾನ್ನೆಟ್ಟು ಪ್ರಯೋಗಿಸಿದವರು ಗೋವಿಂದ ಪೈಗಳು. ಕಟ್ಟುನಿಟ್ಟಾಗಿ, ಕುವೆಂಪು ಕಟ್ಟುನಿಟ್ಟಾಗಿ ಪ್ರಾಸಗಳನ್ನು ಅನುಸರಿಸುತ್ತಿದ್ದರು. ಬೇಂದ್ರೆಯವರಿಗೂ ಆ ರುಚಿ ಹತ್ತಿತ್ತು.

ಬೇಂದ್ರೆಯವರೂ ಪೂರಾ ಜಾನಪದವನ್ನು ಬಳಸಲಿಲ್ಲ. ಅದಕ್ಕೊಂದು ಸಂಸ್ಕಾರ ಕೊಟ್ಟು ಬಳಸಿದರು. ನಾನು ನನ್ನ ರೀತಿಯನ್ನು ತೋರಿಸಬೇಕಲ್ಲ. ಹಾಗಾಗಿ ಪರಿಸರವನ್ನೇ ಕಾವ್ಯವಾಗಿಸಿಕೊಂಡೆ. ಜೀವನಾನುಭವ ಎನ್ನುವುದು ಪ್ರಕೃತಿಯಿಂದ ನೇರವಾದಂಥ ಒಂದು ಪ್ರಭಾವ. ಅನೇಕರು ಹೇಳ್ತಾರ, 'ಬೇಂದ್ರೆ ಮತ್ತು ಶಂಬಾ ಜೋಷಿಯವರ ಜಗಳಕ್ಕೆ ಕಣವಿ ಹತ್ತಿರದ ಸಾಕ್ಷಿಪ್ರಜ್ಞೆ ಆಗಿದ್ರು' ಅಂತ. ಆದರೆ, ಖರೆ ಹೇಳ್ತೀನಿ... ಬೇಂದ್ರೆ ನನ್ನೆದುರಿಗೆ ಯಾರನ್ನೂ ಟೀಕಿಸುತ್ತಿರಲಿಲ್ಲ. ಶಂಬಾ ಕೂಡ ನನ್ನ ಬಳಿ ಯಾರನ್ನೂ ದೂರುತ್ತಿರಲಿಲ್ಲ. ಇವನು ಕೆಟ್ಟದ್ದನ್ನು ಕಿವ್ಯಾಗ ಹಾಕ್ಕೊಳ್ಳೋನಲ್ಲ, ಇವನಿಗೆ ಹೇಳಿ ಪ್ರಯೋಜನ ಇಲ್ಲಾಂತ ಅಂದ್ಕೊಂಡರೋ ಏನೋ!

ಶಂಬಾ ಅವರ 'ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ, ಧಾರವಾಡದ ವಿದ್ಯಾರಣ್ಯ ಹೈಸ್ಕೂಲಿನಲ್ಲಿ ವಿಚಾರ ಸಂಕಿರಣ ಇತ್ತು. ಆಗ ಬೇಂದ್ರೆಯವರನ್ನೂ ಕರೆದಿದ್ವಿ. ಶಂಭಾ ಮಾತಾಡುವಾಗ, ಯಾರನ್ನೋ ಮನಸ್ಸಿಲ್ಲಿಟ್ಕೊಂಡು ಕೆಲವು ಪದ ಪ್ರಯೋಗಿಸಿದರು. ಥಟ್ಟಂತ ಬೇಂದ್ರೆ ಎದ್ದುನಿಂತು, 'ನನ್ನ ಹೆಸರು ಹೇಳ್ರೀ...ಯಾರೋ ಅಂತ ಹೇಳಿ ಯಾಕ್ ರಾಗ ತೆಗೀತೀರ?' ಎಂದು ಸಿಟ್ಟಾಗಿದ್ರು. ಕೊನೆಗೆ, ನಾನು ಅವರನ್ನು ಸಂತೈಸಿದ್ದೆ.

* * *

ನಂಗ ಈಗಿನ ಸಾಹಿತ್ಯ ಲೋಕದ ಸ್ಥಿತಿ ಚಿಂತೆಗೀಡು ಮಾಡ್ಯಾದ. ತೀರಾ ಎಡ, ತೀರಾ ಬಲ ಇರಬಾರ್ದುರೀ. ಅದಕ್ಕೆ ಬಹುಶಃ ಗಿರಡ್ಡಿ ಅವರು 'ಮಧ್ಯಮ ಮಾರ್ಗ'ದ ಪ್ರಸ್ತಾಪ ಎತ್ತಿದ್ದರು. ಅವರು ಆ ಬಗ್ಗೆ ಕೃತಿ ಬರೀಬೇಕು ಅಂತಲೂ ಇದ್ದರು. ಮನೋಹರ ಗ್ರಂಥಮಾಲ ಅದನ್ನು ಪ್ರಕಟಿಸುವುದಿತ್ತು. ಆದರ, ಅಂದುಕೊಡ್ಡಂಗ ನಡೀಲಿಲ್ಲ. ಸಾಹಿತ್ಯ ರಚನೆಯಲ್ಲಿ ನಮ್ಮ ಅಭಿಮತದಲ್ಲಿ ನಿಷ್ಪಕ್ಷಪಾತತೆ ಮುಖ್ಯ.

ಒಂದು ದುರ್ಬೀನು ಹಿಡಿದು ನೋಡಿದಾಗ, ಯಾವುದು ಒಳ್ಳೇದು, ಯಾವುದು ಕೆಟ್ಟದ್ದು ಅಂತ ಕಾಣ್ತದ. ಆದರೆ, ಮಾಸ್ತಿಯವರು 'ಕೆಟ್ಟದ್ದು' ಎಂಬ ಪದ ಬಳಸುತ್ತಿರಲಿಲ್ಲ. 'ಒಳ್ಳೆಯದ್ದು, ಒಳ್ಳೆಯದಲ್ಲದ್ದು' ಅಂತಿದ್ರು.

* * *

ನಾನು ಕಾವ್ಯ ಜೀವಿ ಖರೆ. ಅದರ, ನನ್ನ ಹೆಂಡ್ತಿ ಶಾಂತಾದೇವಿ ಕಣವಿ ಕತೆಗಾರ್ತಿ. ಅವರಿಗೆ ನನ್ಹಂಗ ಏಕಾಂತ ಬೇಕಿಲ್ಲ ನಂಗ ಕವಿತೆ ಬರೆಯಲು ಪ್ರತ್ಯೇಕ ಕೋಣೆ ಬೇಕು, ಕುರ್ಚಿ-ಟೇಬಲ್ಲು ಬೇಕು. ಆದರ, ಅವಳು ಒಮ್ಮೊಮ್ಮೆ ಅಡುಗೆ ಕೋಣ್ಯಾಗ ಕತೆ ಬರೀತಾಳ. ಸ್ವೆಟರ್ ಹೆಣೆಯುತ್ತಾ, ಕಸೂತಿ ಹಾಕುತ್ತಾ ಕತೆಗೆ ಕಾವುಕೊಡ್ತಾಳ. ಯಾವುದೋ ಪಾತ್ರವನ್ನು ತನ್ನೊಳಗೆ ಸಾಕಿಕೊಂಡೇ ಇರ್ತಾಳ.ಅದೂ ಅವಳೊಂದಿಗೆ ಜೀವಿಸುತ್ತಿರ್ತದ.

* * *

ಇಂದು ಪಕ್ಕದಲ್ಲಿ ಬೇಂದ್ರೆಯಿಲ್ಲ, ಕೀರ್ತಿನಾಥರಿಲ್ಲ. ಶಂಬಾ ಅವರಿಲ್ಲ. ಕಲ್ಬುರ್ಗಿಯವರು ಕಳೆದೇ ಹೋದರು. ಗಿರಡ್ಡಿಯವರು ಕಣ್ಮುಚ್ಚಿದ್ದೇ ಗೊತ್ತಾಗಲಿಲ್ಲ. ಧಾರವಾಡದಾಗ ಸುಮ್ಮನೆ ಅಡ್ಡಾಡುವಾಗ ಹಳೆಯ ನೆನಪುಗಳು ಕಾಲಿಗೆ ಎಡತಾಕ್ತಾವ. ಮನೋಹರ ಗ್ರಂಥಮಾಲೆಯ ಅಟ್ಟದಾಗ ಕೂತಾಗ, ಅದೇ ಗಿರಡ್ಡಿ ಕರಡು ತಿದ್ದುತ್ತಾ ಕುಳಿತಂತೆ ಕಾಣ್ತದ. ಇವತ್ತು ನನ್ನ ಜೋಡಿ ಅದೇ ಕಾವ್ಯ; ಅದೇ ಸೋನೆ ಮಳೆ; ಅದೇ ಖಡಕ್ ಚಾ ಮತ್ತು ನೀವುಗಳಷ್ಟೇ.

'ಮನದ ಮಾತುಕತೆ' : ನಿರೂಪಣೆ : ಕೀರ್ತಿ ಕೋಲ್ಗಾರ್
'ಉದಯವಾಣಿ' : ೨೦೧೯

ಬೇಂದ್ರೆಯವರ 'ಬೆಳಗು' ಕವಿತೆಗೆ ಈಗ ನೂರು ವರುಷ

೧೯೧೮ರ ಸುಮಾರಿಗೆ ಕನ್ನಡದಲ್ಲಿ ಸಾಹಿತ್ಯಕೃಷಿ ಪ್ರಾರಂಭಿಸಿದ ಬೇಂದ್ರೆಯವರು ೧೯೩೨ರಲ್ಲಿ ಪ್ರಕಟವಾದ 'ಗರಿ' ಎಂಬ ತಮ್ಮ ಕವನ ಸಂಗ್ರಹದಿಂದಲೇ 'ವರಕವಿ' ಎಂದು ಪ್ರಸಿದ್ಧರಾದರು. ಜೊತೆಗೆ ವಿಮರ್ಶೆ, ಚಿಂತನೆ, ಸಂಶೋಧನೆ, ಪ್ರಬಂಧ, ನಾಟಕ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಹಲವಾರು ಪ್ರಭಾವಿ ಕೃತಿಗಳನ್ನು ರಚಿಸಿದ ಬೇಂದ್ರೆ ಸವ್ಯಸಾಚಿಯಾಗಿದ್ದರೂ ಅವರ ಮುಖ್ಯ ಮತ್ತು ಬಹುಕಾಲ ನಿಲ್ಲಬಲ್ಲ ಸಾಹಿತ್ಯದ ಕೆಲಸ ನಡೆದದ್ದು ಕಾವ್ಯಕ್ಷೇತ್ರದಲ್ಲಿಯೇ- ಅದರಲ್ಲೂ ಭಾವಗೀತೆಗಳಲ್ಲಿಯೇ ಎಂಬುದು ನಿರ್ವಿವಾದ. ಅವರು ನಮ್ಮ ಕಾಲದ ಮತ್ತು ನಮ್ಮ ದೇಶದ ಅತ್ಯಂತ ಉಚ್ಚ ಮತ್ತು ಸೂಕ್ಷ್ಮ ಭಾವಗೀತಕಾರರಾಗಿದ್ದರಷ್ಟೇ ಅಲ್ಲದೆ, ಕೆಲವು ಪರಿಣತ ಕಾವ್ಯವಿಮರ್ಶಕರ ಪ್ರಕಾರ ಇಡೀ ಪ್ರಪಂಚದ ಉಚ್ಚತಮ ಭಾವಗೀತಕಾರರಲ್ಲಿ ಒಬ್ಬರೆನಿಸಿದ್ದಾರೆ. ಸೂರ್ಯನಿಗೆ ಬೆಳಕು ಹೇಗೆ ಸಹಜ. ಚಂದ್ರನಿಗೆ ಬೆಳದಿಂಗಳು ಹೇಗೆ ಸಹಜ. ಬೇಂದ್ರೆಯವರಿಗೆ ಕಾವ್ಯ ಎಂದರೆ ಅಷ್ಟೇ ಸಹಜ.

'ಬೆಳಗು' ಕವಿತೆ ೧೯೩೨ರಲ್ಲಿ ಪ್ರಕಟವಾದ ಅವರ ಪ್ರಥಮ ಸಂಗ್ರಹ 'ಗರಿ'ಯಲ್ಲಿದೆ. ಇಲ್ಲಿಯ ಕವನಗಳು ೧೯೧೮ರಿಂದ ೧೯೩೨ರವರೆಗೆ ಬರೆದವು ಎಂದು ಬೇಂದ್ರೆಯವರೇ ಅದರ ಮುನ್ನುಡಿಯಲ್ಲಿ ಬರೆದಿದ್ದಾರೆ. ಈ ಕವಿತೆಯ ಭಾವ-ಸಂದರ್ಭ-ಸೂಚನೆಯಲ್ಲಿ ಬೇಂದ್ರೆಯವರು ಈ ರೀತಿ ಹೇಳಿದ್ದಾರೆ: "ಧಾರವಾಡದ ಅತ್ತಿಕೊಳ್ಳದ ಚೆಲುವಿನ ನೋಟದಿಂದ ಪ್ರೇರಿತವಾದದ್ದು. ಸದಾನಂದಿಯಾದ ಜಂಗಮನೊಬ್ಬನು ಹಾಡಿದನೆಂಬಂತೆ ಬರೆದುದು". ೧೯೧೯ರಲ್ಲಿ ಧಾರವಾಡದ 'ಸ್ವಧರ್ಮ' ಪತ್ರಿಕೆಯಲ್ಲಿ ಪ್ರಕಟವಾಯಿತು. ಇಷ್ಟೇ ಅಲ್ಲ, ಈ ಕವಿತೆ ಪ್ರಕಟವಾದಾಗ ಹೊಸ ಕವಿತೆಯನ್ನು ಜನ ಹೇಗೆ ಸ್ವೀಕರಿಸುತ್ತಾರೋ ಎಂಬ ಸಂಶಯದಿಂದ 'ಅಂಬಿಕಾತನಯದತ್ತ' ಎಂಬ ತಮ್ಮ ಕಾವ್ಯನಾಮದ ಬದಲು 'ಸದಾನಂದಿ ಜಂಗಮ' ಎಂಬ ಹೆಸರಿನಿಂದಲೇ ಅವರು ಪ್ರಕಟಿಸಿದ್ದರು.

ಸಹೃದಯರು ಅದನ್ನು ಮನಸಾ ಸ್ವೀಕರಿಸಿದರಷ್ಟೇ ಅಲ್ಲ, ಬೇಂದ್ರೆಯವರು ಬೇರೆ ಬೇರೆ ಸಭೆ-ಸಮಾರಂಭಗಳಲ್ಲಿ ಆ ಕವಿತೆಯನ್ನು ತಮ್ಮದೇ ಆದ ವಿಶಿಷ್ಟ ಧಾಟಿಯಲ್ಲಿ ಹಾಡಿ ತೋರಿಸಿದಾಗ, ಅದರಂತೆಯೇ ಸಹೃದಯ ಗಾಯಕರು ಹಾಡಿ ತಮ್ಮದನ್ನಾಗಿ ಮಾಡಿಕೊಂಡದ್ದು ಈಗ ಇತಿಹಾಸ. 'ಗರಿ'ಯ ಮುನ್ನುಡಿಯಲ್ಲಿ ಬೇಂದ್ರೆಯವರೇ

ಹೇಳಿದ್ದಾರೆ: "ಇಲ್ಲಿ ತುಂಗಭದ್ರೆಯ ಉತ್ತರಾಪಥದ "ದೇಶಿ"ಯ ಮಾರ್ಗವನ್ನು ಹುಡುಕುವ ಹಾಗೆಯೆ ಹುಟ್ಟಿಸುವ ಕುರುಹಿದೆ. ಕನ್ನಡ ಜೀವಾಳವು ಕನ್ನಡಿಗರಿಗಾಗಿ ಕನ್ನಡಿಸಲ್ಪಡಬೇಕಾಗಿದೆ." ಕನ್ನಡಿಗರಿಗೆ ಭಾಷಾ ಪ್ರಜ್ಞೆಯ ಅರಿವು ಮೂಡಿಸಬೇಕಾಗಿದೆ ಎಂಬ ಮಾತು ಇಲ್ಲಿ ಸ್ಪಷ್ಟವಾಗಿದೆ.

'ಬೆಳಗು' ಕವಿತೆಯ ಮೊದಲ ನುಡಿ ನಾದಮಯವಾಗಿ, ಅರ್ಥಪೂರ್ಣವಾಗಿ ಹೀಗೆ ಹೊರಹೊಮ್ಮುತ್ತದೆ :

ಮೂಡಲ ಮನೆಯಾ ಮುತ್ತಿನ ನೀರಿನ
ಎರಕsವ ಹೊಯ್ದಾ
ನುಣ್ಣನ್ನೆರಕವ ಹೊಯ್ದಾ.
ಬಾಗಿಲ ತೆರೆದೂ ಬೆಳಕೂ ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತೊ - ಜಗವೆಲ್ಲಾ ತೊಯ್ದಾ.

ಕೊನೆಯ ನುಡಿ ಹೀಗೆ ಮುಕ್ತಾಯವಾಗುತ್ತದೆ :

ಅರಿಯದು ಅಳವು, ತಿಳಿಯದು ಮನವು
ಕಾಣsದೋ ಬಣ್ಣಾ
ಕಣ್ಣಿಗೆ ಕಾಣದೋ ಬಣ್ಣಾ
ಶಾಂತಿರಸವೇ ಪ್ರೀತಿಯಿಂದಾ
ಮೈದೋರಿತಣ್ಣಾ
ಇದು ಬರಿ-ಬೆಳಗಲ್ಲೋ ಅಣ್ಣಾ

- ಹೊಸ ಪ್ರತೀಕದಿಂದಲೇ ಕವನ ಪ್ರಾರಂಭವಾಗಿ ಕೊನೆಯವರೆಗೂ - ಅಂದರೆ ಏಳು ನುಡಿ ಮುಗಿಯುವವರೆಗೂ ಒಂದು ಹೊಸತಾದ ರಸಾನುಭೂತಿಯನ್ನು ಒದಗಿಸುತ್ತದೆ. 'ಬಣ್ಣಾ' ಎಂಬ ಪದಕ್ಕೆ 'ಅಣ್ಣಾ' ಎಂಬ ಪದ ಕೇವಲ ಪ್ರಾಸಕ್ಕಾಗಿ ಬರದೆ, ಸಲಿಗೆಯ ಮಾತಿನಲ್ಲಿ ಕವಿಗಾದ ಬೆರಗನ್ನು ಸೂಚಿಸುತ್ತದೆ.

ಮಾಸ್ತಿಯವರು 'ನಾದಲೀಲೆ'ಯ ಮುನ್ನುಡಿ (೧೯೩೮)ಯಲ್ಲಿ ಈ ಕವಿತೆಯನ್ನು ಉದಾಹರಿಸಿ, "ಉದಯದ ವರ್ಣನೆಯ 'ಗಿಡಗಂಟೆಯ ಕೊರಳು' ಎಂಬ ಮಾತಿನಿಂದಲೇ ಇದನ್ನು ಉದಾಹರಿಸಬಹುದು. ಗಿಡದ ಆನಂದ, ತನ್ನ ಆನಂದ, ಗಿಡದಲ್ಲಿ ಕುಳಿತ ಹಕ್ಕಿಯ ಆನಂದ, ಬೀಸುವ ಗಾಳಿಯ ಆನಂದ ಇವು ಬೇರೆ ಬೇರೆ ಎಂದು ತಿಳಿದವನು ಅದನ್ನು ಬಿಡಿಸಿ ಬಿಡಿಸಿ ಹೇಳುತ್ತಾನೆ. ಇವುಗಳೆಲ್ಲ ಒಂದು ಆನಂದ, ನಾಲ್ಕು ಕಡೆ ಕಂಡಿರತಕ್ಕದ್ದು ಎಂದು ಬುದ್ಧಿಯಿಂದ ತಿಳಿಯುವವನು ಇದೊಂದು

ವಿಚಾರ ಎಂಬಂತೆ ಹೇಳುತ್ತಾನೆ. ಇದಕ್ಕೂ ಮುಂದಿನ ಒಮ್ಮೈಯನ್ನು ಅರಿತವನು 'ಗಿಡಗಂಟೆಯ ಕೊರಳು' ಆನಂದದಿಂದ ಹಾಡಿತು ಎನ್ನುತ್ತಾನೆ. ಬಾಳೆಲ್ಲ ಒಂದು ಎನ್ನುವದು ತಿಳಿವಿಗೆ ಮಾತ್ರ ಕಂಡಾಗ ಅಲ್ಲ, ಅನುಭವದಿಂದ ಕಂಡಾಗ ಮಾತ್ರ ಈ ಮಾತು ಪ್ರಯತ್ನವಿಲ್ಲದೆ ಬರುತ್ತದೆ. ಇದು ಬರುವ ರೀತಿಯಲ್ಲಿ ಕವಿಗೆ ತನ್ನ ಮಾತು ಎಂಥ ಸಿದ್ಧಿಯ ಮಾತು ಎಂದು ತಿಳಿದಿದೆಯೇ ಇಲ್ಲವೇ ಎನ್ನುವಂಥ ಸಹಜತೆ ಬರುತ್ತದೆ. ...ಇಂಥ ಮಾತಿನಲ್ಲಿ ಮಿಗಿಲಾದ ಚಾತುರ್ಯ ಮಾತ್ರ ಇಲ್ಲ, ಪ್ರಕೃತಿಯನ್ನು ಕುರಿತು ವಿಲಕ್ಷಣ ಭಾವನೆಯಿದೆ. ವರ್ಣನೆಯ ಚಾತುರ್ಯವೆಂದು ಕಾಣುವ ಈ ಉಕ್ತಿಭಂಗಿ ಭಾವನೆಯ ಫಲ. ಈ ಭಾವನೆಯೇ ಬೇಂದ್ರೆಯವರ ಎಲ್ಲ ಕವಿತೆಯ ಬಲದ ಬೇರು" ಎಂದು ವ್ಯಾಖ್ಯಾನಿಸಿದ್ದಾರೆ. ಬೇಂದ್ರೆಯವರ ಅನುಭವದ ತೀವ್ರತೆಗೆ ತಕ್ಕಂತೆ ನಿಶಿತವಾದ ವಿಚಾರಶಕ್ತಿಯೂ ಇದೆ ಎಂಬುದನ್ನು ಈ ವ್ಯಾಖ್ಯಾನ ಪ್ರತಿಬಿಂಬಿಸಿದೆ.

"ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರನ್ನು ಗುರುವಾಗಿ ಸ್ವೀಕರಿಸಿದ ನಂತರ, ಬೇಂದ್ರೆಯವರಲ್ಲಿ ಬೆಳಕಿನ ಹಂಬಲ ತೀವ್ರತೆಯನ್ನು ತಲುಪಿತು ಎನ್ನುವುದು ನಿಜವಾದರೂ ಈ ಹಂಬಲ ಅವರಲ್ಲಿ ಮೊದಲಿನಿಂದಲೂ ಜಾಗೃತವಾಗಿತ್ತು ಎನ್ನುವುದಕ್ಕೆ ಹಲವಾರು ನಿದರ್ಶನಗಳಿವೆ. ಉದಾಹರಣೆಗೆ 'ಗರಿ' ಸಂಗ್ರಹದ 'ಬೆಳಗು' ಕವಿತೆಯನ್ನೇ ನೋಡಬಹುದು" ಎನ್ನುತ್ತಾರೆ ಡಾ. ಜಿ.ಎಸ್. ಆಮೂರ ಅವರು. ಈ ಕವಿತೆಯ ಕೊನೆಯ ಸಾಲುಗಳಲ್ಲಿ ಪರಿವರ್ತನೆಯ ಪ್ರಕ್ರಿಯೆಯ ಸಂಕೇತವನ್ನು ಗುರುತಿಸಬಹುದು:

> **ಶಾಂತೀರಸವೇ ಪ್ರೀತಿಯಿಂದಾ**
> **ಮೈದೋರಿತಣ್ಣಾ**
> **ಇದು ಬರಿ-ಬೆಳಗಲ್ಲೊ ಅಣ್ಣಾ**

ಇಲ್ಲಿ ರಸ ಹಾಗೂ ಬೆಳಕು ಇವುಗಳ ನಡುವೆ ಏರ್ಪಡುವ ಸಂಬಂಧ ಮಹತ್ವದ್ದಾಗಿದೆ. ಬೇಂದ್ರೆ ಕಾವ್ಯದಲ್ಲಿ ರಸಕ್ಕೊಂದು ಪ್ರತೀಕ ಪ್ರಪಂಚವಿದ್ದಂತೆ, ಬೆಳಕಿಗೂ ತನ್ನದೇ ಆದ ಪ್ರತಿಭಾ ಪುಂಜವಿದೆ - ಎನ್ನುತ್ತಾರೆ ಡಾ. ಆಮೂರ ಅವರು.

ವೈವಿಧ್ಯದಲ್ಲಿ, ಸತ್ವದಲ್ಲಿ, ಗುಣದಲ್ಲಿ, ತೇಜಸ್ಸಿನಲ್ಲಿ ಬೇಂದ್ರೆ ಕಾವ್ಯಕ್ಕೆ ಎಟುಕದ ವಸ್ತು ವಿಶೇಷವೇ ಉಳಿಯಲಿಲ್ಲವೆಂದರೂ ನಡೆಯುತ್ತದೆ. ವಸ್ತು ಎಷ್ಟೇ ಸಾಮಾನ್ಯವೆನಿಸಿದರೂ ಅದು ತನ್ನ ವಿಶೇಷತೆಯನ್ನು ಬಿಟ್ಟುಕೊಡದೆ ಭಾವ ಸಂಪತ್ತನ್ನು ಗಳಿಸಿಕೊಂಡೇ ಬರುತ್ತದೆ. ಯಾವ ವಾಗಾಡಂಬರಕ್ಕೂ ಎಡೆಗೊಡದೆ ಕಿರಿದರಲ್ಲಿ ಭಾವಗರ್ಭಿತವಾಗಿ ನಾದ ಮಾಧುರ್ಯದಿಂದ ಧ್ವನಿಪೂರ್ಣವಾಗಿ ಓದುಗರನ್ನು ಅವರ

ಕಾವ್ಯ ರಸಪರವಶರನ್ನಾಗಿ ಮಾಡುತ್ತದೆ. ಸೃಷ್ಟಿಯಲ್ಲಿ ಬಿಡಿಬಿಡಿಯಾಗಿ ಕಾಣುವ ಸೌಂದರ್ಯವನ್ನು ಇಡಿಯಾಗಿ ಅನುಭವಿಸಿ ಆನಂದಿಸುವ ಹಿರಿಯ ಪ್ರವೃತ್ತಿ ಇಲ್ಲಿದೆ. ಬೇಂದ್ರೆಯವರ ಅತ್ಯುಚ್ಚ ಕಲ್ಪನೆ ವಿಶ್ವರೂಪಕಗಳನ್ನು ಬಳಸಿದಾಗ ಅದರ ಭವ್ಯತೆಯ ಅರಿವೂ ನಮಗಾಗುತ್ತದೆ.

ಕವಿತೆಯಲ್ಲಿ ಭಾಷೆಯನ್ನು ಒಂದು ಸೂತ್ರಕ್ಕನುಸರಿಸಿ ಪ್ರಯೋಗಿಸಲಾಗಿದೆ ಎಂದು ಅನಿಸಿದರೂ ನಿಜವಾದ ಕವಿತೆ ಇಂಥ ಪ್ರಯೋಗವನ್ನು ಉಲ್ಲಂಘಿಸಿರುತ್ತದೆ. ಅದರ ವಿಧಾನವನ್ನು ವಿವರಿಸಲೂ ಎಷ್ಟೋ ಸಲ ಸಾಧ್ಯವಾಗುವುದಿಲ್ಲ. ಭಾಷೆಯ ವ್ಯಂಜಕ ಸಾಮರ್ಥ್ಯವನ್ನು ಸೂರೆಗೊಂಡ ಪದಗಳನ್ನು ತಮಗೆ ಬೇಕಾದಂತೆ ಮಾರ್ಪಡಿಸಿಕೊಂಡ ಬೇಂದ್ರೆ ಕಾವ್ಯದ ವಿಷಯದಲ್ಲಂತೂ ಈ ಬಗೆಯ ಉಲ್ಲಂಘನೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ.

ಹೊಸಗನ್ನಡ ಕಾವ್ಯಕ್ಕೆ ಯಾವುದೇ ಸಿದ್ಧಭಾಷೆ ಇನ್ನೂ ರೂಪುಗೊಂಡಿರದ ಸಂದರ್ಭದಲ್ಲಿ, ಭಾಷೆಯ ಮಡಿವಂತಿಕೆಯಿಂದ ಹೊರಬಂದು, ಆಡುನುಡಿಯನ್ನು, ಜನಪದ ಭಾಷೆಯನ್ನು ಕಾವ್ಯಕ್ಕೆ ಒಗ್ಗಿಸಿಕೊಂಡ, ಬಗ್ಗಿಸಿಕೊಂಡ ನಿರ್ಧಾರ ಹಾಗೂ ಅದರಲ್ಲಿ ಪಡೆದ ಕಣ್ಣು ಕುಕ್ಕುವಂಥ ಯಶಸ್ಸು ಕನ್ನಡ ಸಾಹಿತ್ಯದ ದೃಷ್ಟಿಯಿಂದ ಒಂದು ಐತಿಹಾಸಿಕವಾದ ಮಹತ್ವದ ಸಂಗತಿಯಾಗಿದೆ. ಬೇಂದ್ರೆಯವರು ಆಡುಭಾಷೆಯ ಮೂಲಕ್ಕಿರುವ ಕಾವ್ಯಪ್ರಜ್ಞೆಯನ್ನು ಉಪಯೋಗಿಸಿಕೊಂಡು, ಹೊಸ ಕಾವ್ಯವನ್ನು ಸೃಷ್ಟಿಸಿರುವುದು ಅಪೂರ್ವವಾದದ್ದು ಎಂದಿರುವ ಕೀರ್ತಿನಾಥ ಕುರ್ತಕೋಟಿಯವರು ಶಬ್ದ, ಛಂದ, ನಾದ, ಧ್ವನಿ - ಇವು ನಾಲ್ಕೂ ಕೂಡಿಕೊಂಡು ಒಂದು ಸ್ವತಂತ್ರ ರಚನೆಯಾಗಿ ಅವರ ಭಾವಗೀತದ ಶಿಲ್ಪ ರೂಪಗೊಂಡಿರುವುದನ್ನು ಸರಿಯಾಗಿಯೇ ಗುರುತಿಸಿದ್ದಾರೆ. ಈ ಶಿಲ್ಪ ಕೌಶಲ್ಯದಿಂದ ಕಾವ್ಯರೂಪದ ಸಾಧ್ಯತೆಗಳನ್ನು ಬೇಂದ್ರೆಯವರು ವಿಸ್ತರಿಸಿದ್ದಲ್ಲದೆ ಅದರಲ್ಲಿ ತಮ್ಮ ವೈಯಕ್ತಿಕತೆಯನ್ನು ಅನನ್ಯವಾಗಿ ಉಳಿಸಿಕೊಂಡುದನ್ನು 'ಬೆಳಗು' ಕವಿತೆಯಲ್ಲಿಯೂ ನಾವು ಕಾಣಬಹುದು.

ಕಾವ್ಯದಲ್ಲಿ ನಾರಿಕೇಳಪಾಕ, ಕದಳೀಪಾಕ, ದ್ರಾಕ್ಷಾಪಾಕ ಮೊದಲಾದವುಗಳನ್ನು ನಮ್ಮ ಪ್ರಾಚೀನ ಕಾವ್ಯಮೀಮಾಂಸಕರು ಗುರುತಿಸಿದ್ದಾರೆ. ಆಧುನಿಕ ಕನ್ನಡ ಕಾವ್ಯದಲ್ಲಿ ತಮ್ಮದೇ ಆದ ವಿಶಿಷ್ಟ ಗುಣಗಳಿಂದ ಕೂಡಿದ ಒಂದು ಹೊಸ ರುಚಿಯನ್ನು ಒದಗಿಸಬಲ್ಲ 'ಬೇಂದ್ರೆ ಪಾಕ' ಎಂಬುದನ್ನು ಇಲ್ಲಿ ಎತ್ತಿ ಹೇಳಬಹುದಾಗಿದೆ. ಅವರ ಕಾವ್ಯದ ಪದಾರ್ಥವನ್ನು ಅವರ ಅನುಭವದ ರೊಟ್ಟಿಯ ಜೊತೆಗೆ ಸವಿಯಬೇಕಾದದ್ದು. ನಾವು ನುರಿಸಿದಂತೆ ಅದರ ರುಚಿ ಹೆಚ್ಚುತ್ತ ಹೋಗುತ್ತದೆ. ನಮ್ಮ ಪಾಕಶಕ್ತಿಯನ್ನು

ಹೆಚ್ಚಿಸುವ ರೋಚಕತೆಯೂ ಅದಕ್ಕಿದೆ. ನಮ್ಮ ಹಸಿವನ್ನು ಹಿಂಗಿಸಿಕೊಂಡೆವೆಂದರೂ ಬೇಂದ್ರೆ ಪಾಕ ಬೇರೊಂದು ಹಸಿವನ್ನು ಹುಟ್ಟಿಸುತ್ತದೆ. ಹೀಗೆ ನೂರು ವರುಷಗಳ ಹಿಂದೆಯೇ 'ಬೆಳಗು' ಕವಿತೆಯನ್ನು ಬರೆದು, ನವೋದಯಕ್ಕೆ ಬೆಳಕಾಗಿಸಿದ ಬೇಂದ್ರೆಯವರಿಗೆ ಸಾವಿರದ ನಮನಗಳು.

ಈ 'ಬೆಳಗು' ಕವಿತೆಗೆ ಪ್ರೇರಣೆ ನೀಡಿದ್ದು ಧಾರವಾಡದ ಅತ್ತಿಕೊಳ್ಳದ ಚೆಲುವಿನ ನೋಟ. ನೂರು ವರುಷದ ಮೇಲೆ ಈಗ ಅತ್ತಿಕೊಳ್ಳ ಹೇಗೆ ಕಾಣಿಸುತ್ತದೆ ಎಂಬುದನ್ನು 'ಅತ್ತಿಕೊಳ್ಳದಲ್ಲಿ ಸೂರ್ಯ' ಎಂಬ ನನ್ನ ಸಾನೆಟ್ಟಿನಲ್ಲಿ ಅದಕ್ಕೆ ಸೃಜನಶೀಲ ಪ್ರತಿಕ್ರಿಯೆಯಾಗಿ ಚಿತ್ರಿಸಿದ್ದೇನೆ. ಈ ಕವಿತೆ ನನ್ನ 'ಬರೆದು ತೀರದ ಬದುಕು' ಎಂಬ ಸಂಗ್ರಹದಲ್ಲಿ (೨೦೦೦) ಪ್ರಕಟವಾಗಿದೆ:

ಅತ್ತಿಕೊಳ್ಳದಲ್ಲಿ ಸೂರ್ಯ

ಬೇಂದ್ರೆ 'ಬೆಳಗಿ'ನ ಅತ್ತಿಕೊಳ್ಳದಲ್ಲಿ ಸಾವಿರ
ಮಂದಿ ಬಡಬಗ್ಗರು ಮನೆಕಟ್ಟಿ, ಅಲ್ಲಲ್ಲಿ
ಗುಡಿಕಟ್ಟಿ, ಸುತ್ತುಗುಡ್ಡಗಳ ಇಳಿಜಾರಿನಲ್ಲಿ
ಸಂಸಾರ ಹೂಡಿ, ದಸದಸ ತೇಕಿ ಮೇಲೇರ
ಬಯಸುವ ಬಸ್ಸಿನೊಡನೆ ಸೆಣಸಾಡಿ-ಸಂಚಾರ,
ಮೂಡಲ ಮನೆಯ ಬಾಗಿಲ ತೆರೆದು, ಸೂರ್ಯ ಹಣಕಿ-
ದರೆ, ನಳದಲ್ಲಿ ಮುತ್ತಿನ ಹನಿಗೆ ಕೊಡಗಳು ಬಾಕಿ.
ಗಡಬಡಿಸಿ ಶ್ರಾವಣದ ಮೋಡಗಳ ಸಮಾಚಾರ
ಕೇಳಿ, ನಡುನೆತ್ತಿಗೈತಂದು, ಕೊಳಚೆ-ಕೊಂಪೆಗೆ
ಮುಖವ ಸಿಂಡರಿಸಿ, ಹಿಂದಿನ ಗಂಧರ್ವ ಸೀಮೆ
ನೆನೆದು, ಗಿಡಗಂಟೆಗಳ ಕೊರಳ ಹಾಡಿನ ಭ್ರಮೆ-
ಯಲ್ಲಿ, ಸಂಜೆಗೆ ಬಳಿದ ರಾಗ ಮುಗಿಲ ಮಾರಿಗೆ
ಕಾಂಕ್ರೀಟು ಕಾಡಿನಲಿ, ಕಣ್ಣೆ ಬಡಿಯುವ ಬಣ್ಣಾ
ಅರಿಯದಳವಿಗೆ ಟೀವಿಯಲಿ ಮೈದೋರಿತಣ್ಣಾ.

'ಹೊಸತು' ಮಾಸಪತ್ರಿಕೆ : ೨೦೧೮

'ವಾರ್ತಾ ಭಾರತಿ' ಸಂದರ್ಶನ

(೧೦-೩-೨೦೧೯)

ಡಾ. ಎಂ.ಡಿ. ಒಕ್ಕುಂದ

ತೊಂಬತ್ತು ವರುಷಗಳ ತುಂಬು ಬಾಳಿಗೆ, ಏಳು ಏಳೂವರೆ ದಶಕಗಳ ಸಾರ್ಥಕ ಬದುಕಿಗೆ ಗೌರವದ ನಮನಗಳು.

ಒಕ್ಕುಂದ : ಈ ಸುದೀರ್ಘ ಪಯಣದಲ್ಲಿ ಅತ್ಯಂತ ಸ್ಮರಣೀಯ ಸಂದರ್ಭಗಳು ಯಾವುವು?

ಚೆ.ಕ. : ಇಡೀ ನನ್ನ ಬಾಲ್ಯ ಹಾಗೂ ವಿದ್ಯಾರ್ಥಿ ಜೀವನವನ್ನೆ ಈ ಸಂದರ್ಭದಲ್ಲಿ ಪುನಃ ಅವಲೋಕಿಸಬೇಕಾಗುತ್ತದೆ.

ಮೊದಲನೆಯದಾಗಿ, ನನ್ನ ಬಾಲ್ಯಜೀವನದ ನೆನಪುಗಳೆಲ್ಲ ನುಗ್ಗಿ ಬರುತ್ತವೆ. ಗದಗ ತಾಲೂಕಿನ(ಈಗ ಜಿಲ್ಲೆ) ಶಿರುಂದ ಎಂಬ ಹಳ್ಳಿಯಲ್ಲಿ ನನ್ನ ಪ್ರಾಥಮಿಕ ಶಿಕ್ಷಣ ಪ್ರಾರಂಭವಾದದ್ದು, ಈಗ ಎಂಬತ್ತು ವರುಷಗಳ ಹಿಂದಿನ ಹಳ್ಳಿಯ ಜೀವನದ ಬದುಕಿನ ಶೈಲಿಯೇ ಬೇರೆಯಾಗಿತ್ತು. ಸಾಮಾನ್ಯವಾಗಿ ಅಂದಿನ ಎಲ್ಲ ಹಳ್ಳಿಗಳೇ ಹಾಗಿದ್ದವು. ಶಿರುಂದದಲ್ಲಿ ನಾನಾ ವೃತ್ತಿಗಳ ಜನರಿದ್ದರು. ಒಕ್ಕಲಿಗರು, ಕೂಲಿ ಕುಂಬಳಿ ಮಾಡುವವರು ಮುಂಜಾನೆಯಿಂದ ಸಂಜೆಯವರೆಗೂ ದುಡಿಯುತ್ತಿದ್ದರು. ಹೊಲದಲ್ಲಿ ನಟ್ಟು (ಆಳವಾದ ಕರಿಕೆಯ ಬೇರು) ಕಡಿಯಲು ನಸುಕಿನಲ್ಲಿ ಹೋಗುವ ಗಟ್ಟಿಕೂಲಿಯಾಳುಗಳು ಮಧ್ಯಾಹ್ನದ ಉರಿಬಿಸಿಲಿನಲ್ಲಿ ಹತ್ತಿ ಬಿಡಿಸಿಕೊಂಡು, ತಮ್ಮ ಪಾಲಿಗೆ ಬಂದ ದೊಡ್ಡ ದೊಡ್ಡ ಹತ್ತಿಗಂಟುಗಳನ್ನು ಹೊತ್ತು ಹಿಂತಿರುಗುವ ಹೆಣ್ಣುಮಕ್ಕಳು ನನ್ನ ಕಣ್ಣಿಗೆ ಬೀಳುತ್ತಿದ್ದರು. ಕಂಬಾರ, ಕುಂಬಾರ, ಬಡಿಗ, ಅಕ್ಕಸಾಲಿ-ಎಲ್ಲರದೂ ಒಂದೊಂದೇ ಮನೆತನ, ಇಡೀ ಹಳ್ಳಿಯ ಒಕ್ಕಲಿಗರ ಕೆಲಸಗಳನ್ನೆಲ್ಲ ಅವರು ಮಾಡಿಕೊಡಬೇಕು. ಸುಗ್ಗಿಯ ಕಣದಲ್ಲಿ ಅವರಿಗೆಲ್ಲ ಆಯ. ಬೀಸುಕಲ್ಲು, ಒರಳು, ತಿರುವುಗುಂಡು, ಮಾಡಲು ಮರದ ಕೆಳಗಿನ ನೆರಳಿನಲ್ಲಿ ಸದಾಕಲ್ಲು ಕಟೆಯುತ್ತಿದ್ದ ಒಡ್ಡರ ಓಣಿ ಊರಿಗೆ ಹತ್ತಿಕೊಂಡೇ ಹೊರಗೆ, ಅವರ ಹೆಣ್ಣು ಮಕ್ಕಳು ಕುಪ್ಪುಸವನ್ನೇ ಮಾಡುತ್ತಿರಲಿಲ್ಲ. ಊರ ಹೊರಬದಿಗೆ

ಹೊಲೆ ಮಾದಿಗರ ಮನೆಗಳು. ಇಂಥ ಹಳ್ಳಿಯಲ್ಲಿ ಹೊಲ-ಮನೆಗಳಿಲ್ಲದೆಯೇ ಪಗಾರದ ಮೇಲೆಯೆ ಜೀವಿಸುವ ಮಾಸ್ತರ ಮನೆಯೇ 'ಸುಧಾರಿಸಿದವರು' ಎಂದು ಭಾವಿಸಿದ್ದವರು ಹಳ್ಳಿಯ ಜನ. ಎರಡು ಮೂರು ತಲೆಮಾರಿಗೆ ಕಲಿಸಿದ ನಮ್ಮ ತಂದೆ 'ಸಕ್ರಪ್ಪ ಮಾಸ್ತರು' ಊರಿನ ಎಲ್ಲರಿಂದ ಗೌರವಿಸಲ್ಪಟ್ಟವರು. ಹರಗುವದಕ್ಕೆ, ಬಿತ್ತುವುದಕ್ಕೆ, ರಾಶಿಮಾಡಲಿಕ್ಕೆ, - ಎಲ್ಲದಕ್ಕೂ ಪಂಚಾಂಗ ನೋಡಿ ಮುಹೂರ್ತ ಕೇಳಲು ನಮ್ಮ ಮನೆಗೇ ಬರುತ್ತಿದ್ದರು. ನಮ್ಮ ಅವ್ವ ಪಾರ್ವತೆವ್ವ ಮನೆಯ ಕೆಲಸಗಳನ್ನೆಲ್ಲ ಚೊಕ್ಕ ಮಾಡುತ್ತಿದ್ದರು. ನಾವು ನಾಲ್ಕು ಮಕ್ಕಳಲ್ಲಿ ನಾನೇ ಚಿಕ್ಕವನು, ನಮ್ಮ ತಂದೆ ಗುರುಗಳಿಂದ ಲಿಂಗ ದೀಕ್ಷೆ ಪಡೆದಿದ್ದರು. ಗುಡಿಗುಂಡಾರಗಳಿಗೆ ಎಂದೂ ಹೋದವರಲ್ಲ. 'ಜ್ಞಾನಸಿಂಧು'. 'ಅನುಭವಾಮೃತ', ನಿಜಗುಣ ಶಿವಯೋಗಿಗಳ 'ಕೈವಲ್ಯಪದ್ಧತಿ'- ಮೊದಲಾದ ಗ್ರಂಥಗಳನ್ನು ಓದುತ್ತಲಿದ್ದರು.

ಆಗ ನಮ್ಮ ಊರಿನಲ್ಲಿ ಏಕೋಪಾದ್ಯಾಯ ಶಾಲೆ-ಒಂದನೆಯ ಇಯತ್ತೆಯಿಂದ ನಾಲ್ಕನೆಯ ಇಯತ್ತೆಯವರೆಗೆ ಮಾತ್ರ. (ಸಣ್ಣಬಿನ್ ಇಯತ್ತೆ, ದೊಡ್ಡ ಬಿನ್ ಇಯತ್ತೆ ಹಿಡಿದು) ಸರಕಾರಿ ಶಾಲೆಗೆ ಪ್ರತ್ಯೇಕ ಕಟ್ಟಡ ನಿರ್ಮಾಣವಾಗುವವರೆಗೆ ನಮ್ಮ ಶಾಲೆ ಹನುಮಪ್ಪನ ಗುಡಿಯಲ್ಲಿ ನಡೆಯುತ್ತಿತ್ತು. ಅದಕ್ಕಾಗಿ ಶಾಲೆಗೆ 'ಸಾಲಿಗುಡಿ' ಎಂಬ ಹೆಸರೇ ಜನರ ಬಾಯಲ್ಲಿತ್ತು. ನಾಲ್ಕು ಇಯತ್ತೆಗಳಿಗೆ ಎಲ್ಲ ವಿಷಯಗಳನ್ನು ನಮ್ಮ ತಂದೆಯವರೇ ಕಲಿಸುವ ಶಿಕ್ಷಕರು.

ಒಂದು ಕುರ್ಚಿ, ಒಂದು ಮೇಜು, ಒಂದು ಬಾಕು (Bench) ಒಂದು ಸಣ್ಣ ಸಂದೂಕು (ಕಾಗದ ಪತ್ರಗಳನ್ನಿಟ್ಟುಕೊಳ್ಳಲು) - ಇಷ್ಟೇ ಪೀಠೋಪಕರಣಗಳು, ಮೇಜಿನ ಮೆಲೆ ಮಸಿದೌತಿ, ಟಾಕು, ಒಂದು ಇಂಚುಪಟ್ಟಿ, ಒಂದು ರೂಲು ಕಟ್ಟಿಗೆ, ಗೋಡೆಯ ಮೇಲೆ ಗದಗ ತಾಲೂಕು, ಧಾರವಾಡ ಜಿಲ್ಲೆ ಮುಂಬಯಿ ಪ್ರಾಂತದ ನಕಾಶೆಗಳು, ಭೂಗೋಲ ಕಲಿಸಲು ಈ ನಕಾಶೆಗಳು ಸಹಾಯಕವಾಗಿದ್ದವು. ಒಂದು ಕರಿ ಹಲಗೆ (Black Board) ಖಡುವಿನ ತುಂಡುಗಳು (Chalk Pieces) ಬರೆದದ್ದನ್ನೂ ಅಳುಕಿಸಲು ಒಂದು ಅರಿವೆ ತುಂಡು, ಮಕ್ಕಳಿಗೆ ಅ, ಆ, ಇ, ಈ ಕಲಿಸಲು, ಶುದ್ಧ ಬರೆಹ, ಲೆಕ್ಕ ಬಿಡಿಸಲು ಇದರ ಉಪಯೋಗ.

ಊರಿಗೆ ಹತ್ತಿಕೊಂಡೇ ಹೊರಬದಿಗೆ ನಮ್ಮ ಶಾಲೆ, ಶಾಲೆಯ ಹುಡುಗರೇ

ಪಾಳಿ ಪ್ರಕಾರ ಉಡುಗಿ ಸ್ವಚ್ಛ ಮಾಡುವವರು. ವರುಷಕ್ಕೊಮ್ಮೆ ಸಾಲೀ ಸಾಹೇಬರಿಂದ ವಾರ್ಷಿಕ ಪರೀಕ್ಷೆ, ಆಗ ಊರಿನ ಕೆಲ ಹಿರಿಯರೂ ಪರೀಕ್ಷೆ ನೋಡಲು ಬರುತ್ತಿದ್ದರು. ಪಾಸು, ನಪಾಸು ಅಂದೇ ಗೊತ್ತಾಗುತ್ತಿತ್ತು. ನಾಲ್ಕೂ ತರಗತಿಗಳಿಗೆ ನಾನೇ ಒಂದನೇ ನಂಬರು ಬಂದಾಗ ಮುಂದಿನ ವರ್ಷದ ಪಠ್ಯಪುಸ್ತಕ, ಕಂಪಾಸು ಇತ್ಯಾದಿ ಪಾರಿತೋಷಕಗಳು, ಸುತ್ತುಮುತ್ತಲಿನ ಹಳ್ಳಿಗಳ ಶಾಲಾಪರೀಕ್ಷೆಗಳಿಗೆ ನಮ್ಮ ತಂದೆಯವರನ್ನು ಸಾಲಿ ಸಾಹೇಬರು ಕರೆದುಕೊಂಡು ಹೋಗಿ, ಶಿರುಂದ ಶಾಲೆಯ ಮಾದರಿ ಶಿಕ್ಷಕರೆಂದು ಹೇಳುತ್ತಿದ್ದರು.

ಪಗಾರ ಸಿಪಾಯಿ ಪ್ರತಿತಿಂಗಳು ಬಂದು ಪಗಾರ ಬಡವಡೆ ಮಾಡುತ್ತಿದ್ದ. ವಾರಕ್ಕೊಮ್ಮೆ ಪೋಸ್ಟಮನ್ ಬಂದು ಟಪಾಲು ಹಂಚುತ್ತಿದ್ದ. ಕೆಲ ಅನಕ್ಷರಸ್ಥ ಹಳ್ಳಿಗರು ನಮ್ಮ ತಂದೆಯಿಂದಲೇ ಪತ್ರ ಓದಿಸಿ ಉತ್ತರವನ್ನು ಬರೆಸುತ್ತಿದ್ದುದುಂಟು. ನಮ್ಮ ಶಾಲೆಯ ಎದುರಿಗೇ ಲೋಕೋಪಯೋಗಿ ಇಲಾಖೆ ನಿರ್ಮಿಸಿದ ನಾಲ್ಕು ಗಡಗಡೆಯ ಬಾವಿ, ಬಾವಿನಕಟ್ಟೆಯ ಕೆಳಗೆ ಸುತ್ತಲೂ ಹೊಲೆಮಾದಿಗರು ತಮ್ಮ ಮಣ್ಣಿನ ಕೊಡಗಳನ್ನಿಟ್ಟುಕೊಂಡು ಬಾವಿಗೆ ನೀರು ತರಲು ಬರುವವರನ್ನು ಬೇಡಿ ನೀರು ಹಾಕಿಸಿಕೊಳ್ಳುತ್ತಿದ್ದರು. ನಮ್ಮದು ತೋಟಪಟ್ಟಿಯ ಊರು. ನಾನು ಶಾಲೆಯಲ್ಲಿದ್ದಾಗ ತೋಟಕ್ಕೆ ಕಪ್ಪಲಿ(ಯಾತ) ಹೊಡೆಯುವಾಗಿನ ಗಡಗಡೆಯ 'ಗಿರಕೂ' 'ಗಿರಕೂ' ನಾದದ ಕಡೆಗೇ ನನ್ನ ಲಕ್ಷ್ಯ. ಶಾಲಾ ಪಠ್ಯದಲ್ಲಿರುವ ಪದ್ಯಗಳೆಲ್ಲವೂ ನನಗೆ ಬಾಯಿಪಾಠ. ಬೆಳಗಿನಿಂದ ಸಂಜೆಯವರೆಗೂ ನಮಗೆ ಶಾಲೆಯಲ್ಲಿ ತರಗತಿಗಳು, ನಡುವೆ ಒಂದು ತಾಸು ಊಟಕ್ಕೆ ಬಿಡುವು, ಹಾಜರಿಯಲ್ಲಿ ೪೦-೫೦ ಹುಡುಗ-ಹುಡುಗಿಯರ ಹೆಸರು ಇರುತ್ತಿದ್ದರೂ ಸುಗ್ಗಿಯ ಹೊತ್ತಿಗೆ ಹೊಲದ ಕೆಲಸಕ್ಕೆ ಹಚ್ಚುತ್ತಿದ್ದುದರಿಂದ ಸಂಖ್ಯೆ ಒಮ್ಮೆಲೆ ಇಳಿದು ಬಿಡುತ್ತಿತ್ತು.

ಊರಿನಲ್ಲಿ ಎರಿ (ಕಪ್ಪು) ಮಸಾರಿ (ಕೆಂಪು) ಎರಡೂ ಮಣ್ಣಿನ ಹೊಲಗಳು. ಎರಿಯಲ್ಲಿ ಗೋದಿ, ಹತ್ತಿ, ಕುಸುಬೆ, ಅಗಸಿಗಳನ್ನು ಬೆಳೆದರೆ ರೈತರು ಮಸಾರಿ ಭೂಮಿಯಲ್ಲಿ ಜೋಳ, ಅಕ್ಕಡಿ ಕಾಳುಗಳು, ತೊಗರಿ, ನವಣೆ, ರಾಗಿ ಮುಂತಾದುವನ್ನು ಬೆಳೆಯುತ್ತಿದ್ದರು. ಊರ ಗೌಡರು ಕುರುಬರು, ಅವರ ಮನೆಯ ಆವಾರದಲ್ಲಿಯೇ ಗ್ರಾಮದೇವತೆ ಕಟಿಗೇರವ್ವ, ವಾರಕ್ಕೊಮ್ಮೆ ಪಲ್ಲಕ್ಕಿ ಸೇವೆ. ಆಗ ಡೊಳ್ಳು ಬಾರಿಸುವವರಿಗೆ ಹೆಚ್ಚು

ಉತ್ಸಾಹ. ಉಳಿದ ಎಲ್ಲ ಹಬ್ಬಹುಣ್ಣಿವೆಗಳನ್ನು ತಂತಮ್ಮ ಮನೆಯಲ್ಲಿ ಆಚರಿಸುತ್ತಿದ್ದರೆ ಹೋಳಿ ಹಬ್ಬ, ಬನ್ನಿ ಹಬ್ಬ, ಆಲೇ ಹಬ್ಬ (ಮೊಹರಮ್)ಗಳನ್ನು ಸಾರ್ವಜನಿಕವಾಗಿ ಆಚರಿಸುತ್ತಿದ್ದರು. ಕರಡಿ ಮಜಲು ಬಾರಿಸುತ್ತ, ಕಹಳೆ ಊದುತ್ತ ಪಲ್ಲಕ್ಕಿಗಳಲ್ಲಿ ದೇವರನ್ನಿಟ್ಟು ಊರಹೊರಗೆ ಬನ್ನಿಗಿಡಕ್ಕೆ ಹೋಗಿ ಪೂಜೆ ಮಾಡಿ, ಹಿಂತಿರುಗಿದ ಮೇಲೆಯೆ ಬನ್ನಿ ಮುಡಿಯುವದು. ಬೀಸುವಾಗ, ಕುಟ್ಟುವಾಗ, ಕಣದಲ್ಲಿ ಹಂತಿ ಹೊಡೆಯುವಾಗ, ಕಳೆ ತೆಗೆಯುವಾಗ, ಹಬ್ಬ ಹುಣ್ಣಿಮೆ ಆಚರಿಸುವಾಗ - ಸದಾಕಾಲ ಹಾಡುತ್ತಲೇ ಕೆಲಸ ಮಾಡುವದು, ವಾದ್ಯಗಳ ಬಾರಿಸುವಿಕೆ, ಹಳ್ಳಿ ಹಾಡುಗಳು ನನ್ನ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರುತ್ತಿದ್ದವು. ನಮ್ಮ ಊರಲ್ಲಿ ಮೂರು ಮುಸ್ಲಿಂ ಮನೆತನಗಳಿದ್ದರೂ ಅವರಿಗೇ ಆದ ಮಸೀದಿಯೂ ಇರುತ್ತಿತ್ತು. ಆಲೇ ಹಬ್ಬ (ಅಲ್ಲಾ ಹಬ್ಬ)ದಲ್ಲಿ ಊರಿನ ಜನರೆಲ್ಲರು ಭಾಗವಹಿಸುತ್ತಿದ್ದರು. ಡೋರಿಗಳನ್ನು ಊರಿನ ಎಲ್ಲರೂ ಹೊತ್ತು ದೇವರನ್ನು ಹೊಳೆಗೆ ಕಳಿಸಿ ಬರುವವರೆಗೂ ಸಂಭ್ರಮ. ಅಂದು ಎಲ್ಲರ ಮನೆಯಲ್ಲಿಯೂ 'ಚೊಂಗೆ'ಯ ಊಟ, ಪ್ರತಿಯೊಬ್ಬರ ಮನೆಯಲ್ಲಿಯೂ ಚೊಂಗೆಮಣೆಗಳಿದ್ದವು. ನಾವು ಹುಡುಗರೆಲ್ಲ 'ಚೊಂಗೆ ಮಾಡ್ಯಾಳ ಎತ್ತಾರ, ಅದರ ತೆಗೆದಾಳ ಚಿತ್ತಾರ' ಎಂದು ಹಾಡಿ ತಮಾಷೆ ಮಾಡುತ್ತಿದ್ದೆವು.

ಶಿರುಂದಕ್ಕೆ ಮೂರು ಮೈಲಿನ ಮೇಲಿರುವ ಶಿರಹಟ್ಟಿಯಲ್ಲಿಯ ಫಕ್ಕೀರಸ್ವಾಮಿಗಳ ಜಾತ್ರೆ ತಿಂಗಳುಗಟ್ಟಲೆ ದೊಡ್ಡ ಪ್ರಮಾಣದಲ್ಲಿ ಜರುಗುತ್ತಿತ್ತು. ಮಠದ ತೇರನ್ನು ಎಳೆಯುವದೆಂದರೆ ಎಲ್ಲರಿಗೂ ಹುರುಪು, ಮಠದಲ್ಲಿ ಗದ್ದಿಗೆಗೆ ಕಾಯಿ ಒಡೆಸಿ, ನಗಾರ ಖಾನೆಯಲ್ಲಿ ಸಕ್ಕರಿ ಓದಿಸಿ ಬರುವುದೆಂದರೆ ಸಾಮಾನ್ಯ ಜನಕ್ಕೆ ಸಮಾಧಾನ, ಅನೇಕ ಚಕ್ಕಡಿಗಳಲ್ಲಿ ಬರುವ ರೈತರು ವಾರಗಟ್ಟಲೆ ಜಾತ್ರೆಯಲ್ಲೇ ಇದ್ದು, ತಮಗೆ ಬೇಕಾದ ಒಕ್ಕಲತನದ ಸಾಮಾನುಗಳನ್ನು ಖರೀದಿಸಿ ತಮ್ಮ ಊರಿಗೆ ಹೋಗುತ್ತಿದ್ದರು. ದನದ ಪರಿಷೆ ಇಡೀ ತಿಂಗಳು ಇರುತ್ತಿತ್ತು. ನಾಲ್ಕೈದು ನಾಟಕ ಕಂಪನಿಗಳು ಜಾತ್ರೆ ಮುಗಿಯುವವರೆಗೂ ಇದ್ದು, ಮನರಂಜನೆ ನೀಡುತ್ತಿದ್ದವು.

ನಾಲ್ಕನೆಯ ಇಯತ್ತೆ ಮುಗಿಸಿದೆ, ತಂದೆಯವರೂ ಪಿಂಚಣಿ(Pension) ಪಡೆಯ ತೊಡಗಿದರು. ಗ್ರಾಮೀಣ ಜೀವನವನ್ನೆ ಮೈತುಂಬಿಕೊಂಡಿತು. ಇದು ನನ್ನ ಜೀವನದಲ್ಲಿ ಮೊದಲನೆಯ ಮಹತ್ವದ ಘಟ್ಟ. ನೀವು ಕೇಳಿದ

'ಸ್ಮರಣೀಯ ಸಂದರ್ಭ'ಗಳಲ್ಲಿ ಇದೂ ಒಂದು.

ನಮ್ಮ ಭಾವ (ಅಕ್ಕನಗಂಡ)ನಿಗೆ ಮುಂಡರಗಿ ಶಾಲೆಯಿಂದ ಧಾರವಾಡದ ಹತ್ತಿರ ಗರಗದ ಶಾಲೆಗೆ ಮುಖ್ಯಾಧ್ಯಾಪಕರಾಗಿ ಬಡತಿಮೇಲೆ ವರ್ಗವಾಯಿತು. ಅದು ಶಿರುಂದಕ್ಕಿಂತ ದೊಡ್ಡ ಊರಾದ್ದರಿಂದ ಏಳನೆಯ ತರಗತಿಯವರೆಗೆ (ಮುಲ್ಕೀ ಪರೀಕ್ಷೆಯವರೆಗೆ) ಪ್ರಾಥಮಿಕ ಶಾಲೆಯಿತ್ತು. ನಾನು ಅಲ್ಲಿ ಮೂರು ವರ್ಷವಿದ್ದೆ. ಆಗಲೇ ಸ್ವಾತಂತ್ರ್ಯ ಚಳವಳಿ ಹಳ್ಳಿಗಳನ್ನೂ ಆವರಿಸಿತ್ತು. ನಾನು ಆರನೇ ಇಯತ್ತೆಯಲ್ಲಿದ್ದಾಗಲೇ ಗಾಂಧೀಜಿಯವರ ವರ್ಧಾಶಿಕ್ಷಣ ಯೋಜನೆ (Basic Education - ಮೂಲ ಶಿಕ್ಷಣ) ಪ್ರಾಯೋಗಿಕವಾಗಿ ಪ್ರಾರಂಭವಾಗಿತ್ತು. ಧಾರವಾಡ ತಾಲೂಕಿನ ಹದಿನೆಂಟು ಊರಿನ ಶಾಲೆಗಳಿಗೆ ಗರಗದ ಶಾಲೆ ಮಾದರಿಶಾಲೆಯಾಗಿತ್ತು. ಶಿಕ್ಷಕರೆಲ್ಲ ಖಾದಿ ಧರಿಸತೊಡಗಿದರು. ಅನೇಕ ವಿದ್ಯಾರ್ಥಿಗಳು ಅವರನ್ನೇ ಅನುಸರಿಸಿದರು. ರವಿವಾರಕ್ಕೊಮ್ಮೆ ಶಿಕ್ಷಕರ ಜೊತೆಯಲ್ಲಿ ಶಾಲಾ ವಿದ್ಯಾರ್ಥಿಗಳೂ 'ಪ್ರಭಾತಫೇರಿ' ಹೋಗುತ್ತಿದ್ದರು. ಆಗ ದೇಶಭಕ್ತಿಯ ಗೀತೆಗಳು, ನಾಡ ಹಾಡುಗಳನ್ನು ಹಾಡುತ್ತ ಹೋಗುತ್ತಿದ್ದೆವು. 'ಎಂಥಾ ಶ್ಯಾಣೆ ಮಹಾತ್ಮಾಗಾಂಧಿ ಹಿಂದುಸ್ತಾನಕನೇ ತಂದಿ', 'ನಾವು ಚಳುವಳಿ ಮಾಡವರ' 'ಕರುನಾಡು ನಮ್ಮ ನಾಡು, ಚಿನ್ನದಾ ಕರುನಾಡು ನಮ್ಮನಾಡು' ಮುಂತಾದ ಪದ್ಯಗಳು ಇನ್ನೂ ನನಗೆ ನೆನಪಿವೆ. ತುಪರಿಹಳ್ಳದ ದಂಡೆಗೆ ಹತ್ತಿ ಇರುವ, ಸ್ವಲ್ಪ ದೂರವಿರುವ ಮಡಿವಾಳೇಶ್ವರ ಮಠದ ದಾರಿಯನ್ನು ಸ್ವಚ್ಛ ಮಾಡುವದು ಮುಂತಾದ ಸಾರ್ವಜನಿಕ ಕೆಲಸಗಳನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಮಾಡುತ್ತಿದ್ದೆವು ನಾನು ಗರಗದ ಶಾಲೆಯಿಂದಲೇ ಮುಲ್ಕಿ ಪರೀಕ್ಷೆ ಪಾಸಾದದ್ದು - ಧಾರವಾಡ ಕೇಂದ್ರಕ್ಕೆ ಮೊದಲನೇ ನಂಬರು ಬಂದು, ಗಾಂಧೀಜಿಯವರನ್ನು ನಾನು ನೋಡಿರದಿದ್ದರೂ ಅವರ ವಿಧಾಯಕ ಕಾರ್ಯಕ್ರಮಗಳ ಪ್ರಭಾವ ಮೆಲ್ಲಗೆ ಹಳ್ಳಿಗಳನ್ನು ವ್ಯಾಪಿಸಿತ್ತು. ಶಿರುಂದದಲ್ಲಿದ್ದಾಗ ತೋಟದ ಬಾವಿಯಲ್ಲಿ ಈಜು ಕಲಿತಿದ್ದರೆ ಗರಗದಲ್ಲಿದ್ದಾಗ ಸೈಕಲ್ ಕಲಿತೆ.

ನನ್ನ ವಿದ್ಯಾರ್ಥಿ ಜೀವನದ ಮೂರನೇ ಮಹತ್ವದ ಘಟ್ಟವೆಂದರೆ, ೧೯೪೧ರಲ್ಲಿ ಧಾರವಾಡಕ್ಕೆ ಹಾಯ್‌ಸ್ಕೂಲ್ ಶಿಕ್ಷಣಕ್ಕೆ ಬಂದದ್ದು. ಮುರುಘಾಮಠದ ಉಚಿತ ಪ್ರಸಾದ ನಿಲಯದಲ್ಲಿ ಪ್ರವೇಶ ದೊರೆತದ್ದೂ ನನ್ನ ಸುದೈವವೇ. ವೈರಾಗ್ಯ ಮೂರ್ತಿಗಳಾದ ಮೃತ್ಯುಂಜಯಪ್ಪಗಳ

ಸಾನ್ನಿಧ್ಯದಲ್ಲಿ ಪ್ರತಿದಿನ ಸಂಜೆ ನಡೆಯುತ್ತಿದ್ದ ಶಿವಾನುಭವ ಕಾರ್ಯಕ್ರಮಗಳು, ಶ್ರಾವಣಮಾಸದಲ್ಲಿ ಬರುತ್ತಿದ್ದ ಪ್ರೊ. ಶಿ.ಶಿ. ಬಸವನಾಳರು, ಪ್ರೊ. ಮಾಳವಾಡರು, ಉತ್ತಂಗಿ ಚೆನ್ನಪ್ಪನವರ ಉಪನ್ಯಾಸಗಳ ಮಲ್ಲಿಕಾರ್ಜುನ ಮನಸೂರ, ಬಸವರಾಜ ರಾಜಗುರು ಅವರ ವಚನ ಸಂಗೀತ - ಮೊದಲಾದವು ಕನ್ನಡ ಸಾಹಿತ್ಯದ, ಅದರಲ್ಲೂ ವಚನಸಾಹಿತ್ಯದ ಅಭ್ಯಾಸಕ್ಕೆ ನನಗೆ ಪ್ರೇರಣೆ ನೀಡಿದವು.

ಇತ್ತ ಆರ್.ಎಲ್.ಎಸ್. ಹಾಯ್‌ಸ್ಕೂಲಿನ ಮುಖ್ಯಾಧ್ಯಾಪಕರಾದ ವೀ.ರು.ಕೊಪ್ಪಳ ಅವರ ಪ್ರೋತ್ಸಾಹದಿಂದ ಹೈಸ್ಕೂಲ್ ಮಿಸೆಲೆನಿಗೆ ಪ್ರತಿವರ್ಷ ಕವನ-ಲೇಖನಗಳನ್ನು ಬರೆಯತೊಡಗಿದೆ. ಅಲ್ಲದೆ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆಯುತ್ತಿದ್ದ ಸಾಹಿತ್ಯಿಕ ಸಭೆಗಳಿಗೆ ನಾನು ತಪ್ಪದೆ ಹೋಗುತ್ತಿದ್ದೆ. ಅಲ್ಲಿಯೇ ಬೇಂದ್ರೆ, ಆನಂದಕಂದ (ಬೆಟಗೇರಿ ಕೃಷ್ಣಶರ್ಮ), ಅ.ನ.ಕೃ., ಮುಳಿಯ ತಿಮ್ಮಪ್ಪಯ್ಯ - ಮೊದಲಾದ ಹಿರಿಯ ಸಾಹಿತಿಗಳ ಭಾಷಣಗಳನ್ನೂ, ಕಾವ್ಯವಾಚನವನ್ನೂ ನಾನು ಕೇಳಿದ್ದು, ಆಗ ಪ್ರತಿಯೊಂದು ಕಾರ್ಯಕ್ರಮದ ಕೊನೆಗೂ ಕಾವ್ಯ ಗಾಯನ (ಇಂದಿನ ಸುಗಮ ಸಂಗೀತ)ಕಾರ್ಯಕ್ರಮ ಇರುತ್ತಿತ್ತು. ಆ ಕಾರ್ಯಕ್ರಮದಲ್ಲಿಯೇ ಬೇಂದ್ರೆ, ಕುವೆಂಪು, ಕೆ.ಎಸ್. ನರಸಿಂಹಸ್ವಾಮಿ ಮೊದಲಾದ ಕವಿಗಳ ಕವಿತೆಗಳ ಹಾಡುಗಾರಿಕೆಯನ್ನು ಕೇಳಿದ್ದು. ಕಾವ್ಯಾಭ್ಯಾಸಕ್ಕೆ ಕಾವ್ಯ ರಚನೆಗೆ ಪ್ರೇರಣೆ ದೊರೆತದ್ದೂ ಇಲ್ಲಿಯೇ.

೧೯೪೨ರ ಆಗಸ್ಟ ಕ್ರಾಂತಿ ಧಾರವಾಡವನ್ನು ಬಡಿದೆಬ್ಬಿಸಿತು. ಅನೇಕ ರಾಜಕೀಯ ಧುರೀಣರ ಭಾಷಣ ಕೇಳಲು ಕಡಪಾ ಮೈದಾನಕ್ಕೆ ನಾನು ಆಗಾಗ ಹೋಗುತ್ತಿದ್ದೆ. 'ಸ್ವತಂತ್ರ ದೇಶದಲ್ಲಿ ಸ್ವಾಯತ್ತ ಕರ್ನಾಟಕ' ಆಂದೋಲನವೂ ಆಗಲೇ ಪ್ರಾರಂಭವಾದದ್ದು. ಮುಂದೆ ಒಂದೆರಡು ವರ್ಷಗಳಲ್ಲಿ ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯದ ಚಳವಳಿಯೂ ಪ್ರಾರಂಭವಾಯಿತು. ಬಸವರಾಜ ಕಟ್ಟೀಮನಿ ಸಂಪಾದಕತ್ವದ 'ಉಷಾ' ಮಾಸಪತ್ರಿಕೆಯನ್ನು ನಾನು ತಪ್ಪದೆ ಓದುತ್ತಿದ್ದೆ. ೧೯೪೪ರಲ್ಲಿ ರಬಕವಿಯಲ್ಲಿ ಪ್ರೊ. ಬಸವನಾಳದ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೂ ನಾನು ಹೋಗಿದ್ದೆ. ಇದೇ ನಾನು ನೋಡಿದ ಮೊದಲ ಸಾಹಿತ್ಯ ಸಮ್ಮೇಳನ, ಗೋಕಾಕರ ಅಧ್ಯಕ್ಷತೆಯಲ್ಲಿ 'ಪ್ರಗತಿಶೀಲ ಸಾಹಿತ್ಯ' ಕುರಿತು ಒಂದು ವಿಚಾರ ಸಂಕಿರಣವನ್ನೂ ಆ ಸಮ್ಮೇಳನದಲ್ಲಿ

ಏರ್ಪಡಿಸಿತ್ತು. ಅದರಲ್ಲಿ ಅ.ನ.ಕೃ., ತ.ರಾ.ಸು., ನಾಡಿಗೇರ ಕೃಷ್ಣರಾಯ, ಕುಮಾರ ವೆಂಕಣ್ಣ ಮೊದಲಾದವರು ಭಾಗವಹಿಸಿ ಮಾತನಾಡಿದರೆಂದು ನೆನಪು.

ಮ್ಯಾಟ್ರಿಕ್ ಪಾಸಾದೊಡನೆ ಧಾರವಾಡದಲ್ಲಿ ಕರ್ನಾಟಕ ಕಾಲೇಜು ಸೇರಿಕೊಂಡೆ, ಕಾಲೇಜಿನ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದೆ. ೧೯೪೭ ಆಗಸ್ಟ ೧೫ರಂದು ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು. ಮಾಳಮಡ್ಡಿಯ ಒಂದು ಕೋಣೆಯಲ್ಲಿ ಬಾಡಿಗೆಗಿದ್ದ ನಾನು ಅಂದು ರಾತ್ರಿ ಗೆಳೆಯರೊಡನೆ ತಿರುಗಾಡಿದ್ದೇ ತಿರುಗಾಡಿದ್ದು, ಕೆಲ ದಿನಗಳಲ್ಲಿ, ಕರ್ನಾಟಕ ಕಾಲೇಜು ಮೈದಾನದಲ್ಲಿ, ದಿವಾಕರ ಅವರ ಅಧ್ಯಕ್ಷತೆಯಲ್ಲಿ ದೊಡ್ಡ ವಿಜಯೋತ್ಸವದ ಸಾರ್ವಜನಿಕ ಸಭೆ. ಅಂದು ನಾನು 'ಆಗಸ್ಟ ೧೫' ಎಂಬ ಕವಿತೆಯನ್ನು ವಾಚನ ಮಾಡಿದ್ದೆ. ಸಾರ್ವಜನಿಕ ಸಮಾರಂಭದಲ್ಲಿ ನಾನು ಕಾವ್ಯವಾಚನ ಮಾಡಿದ್ದು ಅದೇ ಮೊದಲು. ನನ್ನ ಜೊತೆಗೆ ಪ್ರೊ. ಆರ್ಮಾಂಡೋ ಮೆನೆಜಿಸ್ ಅವರೂ ಇಂಗ್ಲಿಷಿನಲ್ಲಿ 'ವಂದೇ ಮಾತರಂ' ಎಂಬ ಕವಿತೆಯನ್ನೋದಿದರು. ನನ್ನ ಕಾವ್ಯ ವಾಚನ ಅಂದಿನ ಸಭೆಯ ವಿದ್ಯಾರ್ಥಿಗಳಲ್ಲಿ ಸಂಚಲನವನ್ನುಂಟು ಮಾಡಿತ್ತು.

ನಾನು ಕಾಲೇಜಿನಲ್ಲಿದ್ದಾಗಲೇ ನನ್ನ ಪ್ರಥಮ ಕವನ ಸಂಗ್ರಹ 'ಕಾವ್ಯಾಕ್ಷಿ' (೧೯೪೯) ಪ್ರಕಟವಾಯಿತು. ಅದಕ್ಕೆ ಬೇಂದ್ರೆಯವರು (ಆಗ ಅವರು ಸೊಲ್ಲಾಪುರದಲ್ಲಿದ್ದರು) ಮುನ್ನುಡಿ ಬರೆದು ಪ್ರೋತ್ಸಾಹಿಸಿದರು. ಮರುವರುಷ ಎರಡನೆಯ ಖಂಡಕಾವ್ಯಕ್ಕೆ ('ಭಾವಜೀವಿ') ಕೊಲ್ಲಾಪುರದಿಂದ ಶ್ರೀ ಗೋಕಾಕರು ಮುನ್ನುಡಿಯಿತ್ತರು. ಎರಡೂ ಮುನ್ನುಡಿಗಳು ನನ್ನ ಕಾವ್ಯ ಜೀವನಕ್ಕೆ ಮಾರ್ಗದರ್ಶಕವಾಗಿದ್ದವು.

೧೯೫೨ನೇ ಇಸವಿ ನನ್ನ ಜೀವನದಲ್ಲಿ ಬಹಳ ಮಹತ್ವದ್ದು. ಅದೇ ವರ್ಷ ನಾನು ಎಂ.ಎ. ಪಾಸಾಗಿ ಶಾಂತಾದೇವಿಯವರನ್ನು ಮದುವೆಯಾದದ್ದು ಮತ್ತು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಆಗಷ್ಟೇ ಪ್ರಾರಂಭವಾಗಿದ್ದ ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗದಲ್ಲಿ (ಇದೇ ಮುಂದೆ 'ಪ್ರಸಾರಾಂಗ'ಎಂದು ಹೆಸರು ಪಡೆಯಿತು) ಉದ್ಯೋಗಕ್ಕೆ ಸೇರಿದ್ದು. ಮೊದಲು ಕಾರ್ಯದರ್ಶಿಯಾಗಿ ಆಮೇಲೆ ನಿರ್ದೇಶಕನೆಂದು ಬಡತಿ ಪಡೆದೆ (೧೯೫೭). ಮೊದಲು ಕುಲಪತಿಯಾಗಿ ಆಯ್ಕೆಯಾದವರು ಸಿ.ಸಿ. ಹುಲಕೋಟಿಯವರು ೧೯೫೪ರಿಂದ ಡಾ. ಡಿ.ಸಿ. ಪಾವಟೆಯವರು

ಕುಲಪತಿಯಾಗಿ ಬಂದಂದಿನಿಂದ ವಿಶ್ವವಿದ್ಯಾಲಯಕ್ಕೆ ಭದ್ರವಾದ ಬುನಾದಿ ದೊರೆಯಿತು. ಡಾ. ಪಾವಟೆಯವರು ಹಿಂದಿನ ಮುಂಬಯಿ ರಾಜ್ಯದ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದರಿಂದ ವಿವಿಧ ರಾಜ್ಯಗಳ ವಿದ್ವಾಂಸ-ಪ್ರಾಧ್ಯಾಪಕರು ಹಾಗೂ ಶಿಕ್ಷಣ ತಜ್ಞರು ಸಂಪರ್ಕವಿದ್ದು, ಅದರಿಂದ ಕರ್ನಾಟಕ ವಿಶ್ವವಿದ್ಯಾಲಯವನ್ನು ಭದ್ರವಾದ ತಳಹದಿಯ ಮೇಲೆ ಕಟ್ಟಲು ಅವರಿಗೆ ಅನುಕೂಲವಾಯಿತು. ಅವರಿಂದ ಮೊದಲುಗೊಂಡು ಮುಂದೆ ಬಂದ ಕುಲಪತಿಗಳೆಲ್ಲರೂ ವಿಶ್ವವಿದ್ಯಾಲಕ್ಕೆ ಬೋಧನಾಂಗ, ಸಂಶೋಧನಾಂಗದಂತೆ ಪ್ರಸಾರಾಂಗದ ಮಹತ್ವವೂ ತಿಳಿದಿದ್ದರಿಂದ ಎಲ್ಲರೂ ಪ್ರಸಾರಾಂಗವನ್ನು ಬೆಳೆಸಲು ಪ್ರಯತ್ನಿಸಿದರು. ಜೊತೆಗೆ ಸಮಕಾಲೀನ ಮಹತ್ವದ ಕವಿಗಳಲ್ಲಿ ಒಬ್ಬನೆಂದು ನನ್ನನ್ನು ಗುರುತಿಸಿ, ವೈಯಕ್ತಿಕವಾಗಿ ನನ್ನ ಸೃಜನಶೀಲತೆಯನ್ನು ಪೋಷಿಸಲು ಪ್ರಯತ್ನಿಸಿದರು. ನಾನು ೧೯೮೩ರಲ್ಲಿ ನಿವೃತ್ತನಾದೆ. ನಾನು ನಿವೃತ್ತನಾಗುವ ಪೂರ್ವದಲ್ಲಿ, ಒಂದೆರಡು ವರ್ಷ ನನ್ನ ಪ್ರಸಾರಾಂಗದ ಕೆಲಸದ ಜೊತೆಗೆ ಕನ್ನಡ ವಿಭಾಗದ ಗೌರವ ಸಂದರ್ಶಕ ಪ್ರಾಧ್ಯಾಪಕನಾಗಿ ನೇಮಕಗೊಂಡೆ. ಆಗ ಡಾ. ಡಿ.ಎಂ. ನಂಜುಂಡಪ್ಪನವರು ಕುಲಪತಿಗಳಾಗಿದ್ದರು.

ನನ್ನ 'ಸಮಗ್ರ ಗದ್ಯ' ಎರಡು ಸಂಪುಟಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿದೆ. (೨೦೦೯). 'ಕಣವಿ ಸಮಗ್ರ ಕಾವ್ಯ' (೫ನೇ ಆವೃತ್ತಿ) ಮೈಸೂರಿನ 'ಸಂವಹನ ಪ್ರಕಾಶನ'ದಿಂದ ಪ್ರಕಟಿಸಲಾಗಿದೆ. (೨೦೧೮) ನನ್ನ ಆಯ್ದ ಕವಿತೆಗಳ ಇಂಗ್ಲಿಷ್ ಅನುವಾದವನ್ನು 'Inviting life' ಎಂಬ ಹೆಸರಿನಲ್ಲಿ, ನವದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿ (ಸಂ. ಡಾ. ಕೆ. ರಾಘುವೇಂದ್ರರಾವ್) ೨೦೦೩ರಲ್ಲಿ ಪ್ರಕಟಿಸಿದೆ.

ಒಕ್ಕುಂದ : (ಅ) ತಮ್ಮ ಬದುಕು ಮತ್ತು ಸೃಜನಶೀಲತೆಗಳ ಬಹುದೊಡ್ಡ ಗುಣ ಮತ್ತು ದಾರ್ಶನಿಕತೆ ಎಂದರೆ ಸಮತೋಲನ. ಅದು ಹೇಗೆ ಸಾಧ್ಯವಾಯಿತು?

ಚೆ.ಕ. : ಅದಕ್ಕೆ ನನ್ನ ಸ್ವಭಾವವೇ ಕಾರಣ. ನಾನು ಬದುಕಿದ್ದು ಪ್ರಾಥಮಿಕ ಶಾಲಾ ಮಾಸ್ತರನ ಮಗನಾಗಿ, ನಮ್ಮ ತಂದೆ 'ಜ್ಞಾನ ಸಿಂಧು' ಮಹಲಿಂಗರಂಗನ 'ಅನುಭವಾಮೃತ', ನಿಜಗುಣ ಶಿವಯೋಗಿ, ಬಾಲಲೀಲಾ ಮಹಾಂತ ಶಿವಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದವರ ತತ್ವಪದಗಳನ್ನು (ಅನುಭಾವದ ಹಾಡುಗಳು) ಓದುತ್ತಿದ್ದರು. ಗುರುಗಳಿಂದ ದೀಕ್ಷೆ ಪಡೆದು, ಇಷ್ಟಲಿಂಗದ ಪೂಜೆಯ ಹೊರತು ಅವರು ಯಾವ ಗುಡಿ ಗುಂಡಾರಗಳಿಗೂ

ಹೋಗುತ್ತಿರಲಿಲ್ಲ. ಲೌಕಿಕವಾಗಿ ಎಲ್ಲ ವ್ಯವಹಾರ ಮಾಡುತ್ತಿದ್ದರೂ ಒಳಗೆ ಆಧ್ಯಾತ್ಮಿಕ ಸೆಳೆತವಿತ್ತು. ನಮ್ಮ ಊರಿನ ಎರಡು-ಮೂರು ತಲೆಮಾರಿನವರಿಗೆ ಶಿಕ್ಷಣ ನೀಡಿದ್ದರಿಂದ ಜನ ಇವರಿಗೆ ಹೆಚ್ಚು ಗೌರವ ತೋರಿಸುತ್ತಿದ್ದರು. ಹೊಲ-ಮನೆಗಳಿಲ್ಲದೇ ಬರಿ ಪಗಾರದ ಮೇಲೆ ಮನೆತನ ನಡೆಸುತ್ತಿದ್ದರು. ನಮ್ಮ ತಾಯಿ ಮನೆಗೆಲಸಗಳನ್ನೆಲ್ಲ ಚೊಕ್ಕಟವಾಗಿ ಮಾಡುತ್ತಿದ್ದರು. ನಾವು ನಾಲ್ಕು ಜನ ಅಣ್ಣ ತಮ್ಮಂದಿರು. ನಾನೇ ಚಿಕ್ಕವನಾದ್ದರಿಂದ ಎಲ್ಲರೂ ಅಕ್ಕರೆಯಿಂದ ಕಾಣುತ್ತಿದ್ದರು. ಸರಳತೆ ಮೊದಲಿನಿಂದಲೂ ರೂಢಿಯಾಗಿತ್ತು. ನಮ್ಮ ಊಟದ ಬಗ್ಗೆ - 'ಬಿಸಿಬಿಸಿ ರೊಟ್ಟಿ, ಸಪ್ಪನ್ ಬೇಳೆ, ಅಕ್ಕಿಮಮ್ಮು' ಎಂದು ಜನ ತಮಾಷೆ ಮಾಡುತ್ತಿದ್ದರು. ನನ್ನ ಪೂರ್ತಿ ವಿದ್ಯಾರ್ಥಿ ಜೀವನವನ್ನು ಸ್ಕಾಲರ್‌ಶಿಪ್ ಹಣದಿಂದಲೆ ಪೂರೈಸಿದೆನೆಂಬ ತೃಪ್ತಿಯಿದೆ ನನಗೆ.

ಗ್ರಾಮೀಣ ಜೀವನದ ಕಷ್ಟ-ಸುಖಗಳನ್ನು ಪ್ರತ್ಯಕ್ಷ ಕಂಡಿದ್ದೆ. ಬಡತನದಲ್ಲೇ ಹೇಗೆ ಹಂಚಿಕೊಂಡು ಬದುಕಬೇಕು ಎನ್ನುವುದನ್ನು ನನಗೆ ಬದುಕೇ ಕಲಿಸಿತು. ಮುರುಘಾಮಠದಲ್ಲಿದ್ದಾಗ ಶಿಸ್ತು, ಸ್ವಾವಲಂಬನೆ ಮೈಗೂಡಿತು. ವಚನಸಾಹಿತ್ಯದ ಅಭ್ಯಾಸ ಕಾವ್ಯಾಭ್ಯಾಸ - ಒಟ್ಟಿನಲ್ಲಿ ಸಾಹಿತ್ಯದ ಅಭ್ಯಾಸ ನನಗೆ ಸಮಾಧಾನಿಯಾಗಿರಬೇಕು, ಜೀವನದಲ್ಲಿ ಸಮತೋಲನ ಸಾಧಿಸಬೇಕು ಎಂಬುದನ್ನು ಕಲಿಸಿರಬೇಕು. ನನ್ನಲ್ಲಿ ಗುಣಸ್ವೀಕಾರ ದೃಷ್ಟಿ ಮೊದಲಿನಿಂದಲೂ ಇದೆ. ಎಂಥ ಕೆಟ್ಟ ಮನುಷ್ಯನಿಂದಲೂ ಒಂದಾದರೂ ಗುಣ ಕಲಿಯುವದಿದೆ. ಇದರಿಂದಲೇ ಸಮತೋಲನ ಬಂದಿರಬೇಕು. ಅದನ್ನೇ ನೀವು ದೊಡ್ಡದಾಗಿ ಭಾವಿಸಿ 'ದಾರ್ಶನಿಕತೆ' ಎಂದಿರಬೇಕು.

ಒಕ್ಕುಂದ : (ಬ) ವರ್ತಮಾನದ ಅತಿರೇಕಗಳಿಗೆ ನಿಮ್ಮ ಸಮತೋಲನ ದಾರ್ಶನಿಕತೆ ಏನನ್ನು ಹೇಳಬಯಸುತ್ತದೆ?

ಚಿ.ಕ. : ಸಾಮಾನ್ಯವಾಗಿ ವರ್ತಮಾನವನ್ನು 'ಅತಿರೇಕದ ಯುಗ' ವೆಂದೇ ಕರೆಯಬಹುದು. ಎಲ್ಲ ಕ್ಷೇತ್ರಗಳಲ್ಲಿಯೂ ಇದ್ದೇ ಇರಬಹುದಾದರೂ ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಇದು ಹೆಚ್ಚಾಗಿ ಕಂಡುಬರುತ್ತಿದೆ. ಬಹುಶಃ ಭಾರತದಲ್ಲಿರುವಷ್ಟು ಧರ್ಮಗಳು ಯಾವ ದೇಶದಲ್ಲೂ ಇರಲಿಲ್ಲವೆನಿಸುತ್ತದೆ. 'ಧರ್ಮ' ತನ್ನ ವಿಶಾಲತೆಯನ್ನು ಕಳೆದುಕೊಂಡು ಸಂಕುಚಿತ ಅರ್ಥದಲ್ಲಿ ಆದುದೇ ಇದಕ್ಕೆ ಕಾರಣವಿರಬೇಕು. 'ಹಿಂದೂ' ಎನ್ನುವುದು ಧರ್ಮವೇ ಅಲ್ಲ, ಅದು ಒಂದು ಜೀವನ

ವಿಧಾನವೆಂದು ಭಾವಿಸುವದೊಳ್ಳೆಯದು. ನಮ್ಮಲ್ಲಿ ಮತ, ಪಂಥಗಳು ಅನೇಕ. ಎಲ್ಲರೂ ತಮ್ಮ ಮತೀಯ ಆಚರಣೆಗಳನ್ನು ಮನೆಗಳಲ್ಲಿಯಷ್ಟೆ ಆಚರಿಸಿ, ಹೊರಗೆ ವ್ಯವಹಾರದಲ್ಲಿ ಸಾರ್ವಜನಿಕ ಹಿತದೃಷ್ಟಿಯನ್ನು ಕಾಪಾಡಿಕೊಳ್ಳುವದು ಅವಶ್ಯ. ಇಂದು ಕರ್ನಾಟಕದಲ್ಲಿ ಬಾಬಾಬುಡನ್‌ಗಿರಿ ಪ್ರತಿವರ್ಷ ಒಂದು ರಾಜಕೀಯ ರಾದ್ಧಾಂತವೇ ಆಗುತ್ತಿದೆ. ಸಾವಳಗಿ ಮಠ ಮತ್ತು ಶಿರಹಟ್ಟಿಯ ಫಕೀರೇಶ್ವರ ಮಠ ಇದಕ್ಕೆ ಒಂದು ಆದರ್ಶವಾಗಬೇಕು. ಅಯೋಧ್ಯೆಯಲ್ಲಿ ಬಾಬರಿ ಮಸೀದಿಯ ಪ್ರಕರಣವೊಂದು ಇಂಥದೇ ಒಂದು ಅತಿರೇಕದಿಂದ ಕೋರ್ಟಿನ ಮೆಟ್ಟಲೇರಿದೆ. ನಮ್ಮ ನಮ್ಮಲ್ಲೇ ಸಹಾನುಭೂತಿಯಿಂದ ಚರ್ಚಿಸುವದಂತೂ ದೂರವೇ ಉಳಿದು ಅದು ಒಂದು ಇಡೀ ದೇಶದ ಸಮಸ್ಯೆಯಾಗಿ ಬಿಟ್ಟಿದೆ. ಇನ್ನು ರಾಜಕೀಯ ಪಕ್ಷಗಳೆಲ್ಲವೂ ಇದರ ಬೆನ್ನಿಗಿವೆಯೆಂದು ಬೇರೆ ಹೇಳಬೇಕಿಲ್ಲ. ಇಂದು ರಾಜಕೀಯ ಪಕ್ಷಗಳಿಗೆ ಪರಸ್ಪರ ತಿಳಿವಳಿಕೆ ಹೇಳುವ ಯೋಗ್ಯನಾಯಕರೆ ಇಲ್ಲವೆನ್ನಬಹುದು. ಅಲ್ಲೊಬ್ಬರು ಇಲ್ಲೊಬ್ಬರು ಇದ್ದರೂ ಅವರ ದನಿಯೇ ಕೇಳಿಸದಷ್ಟು ಕ್ಷೀಣವಾಗಿದೆ.

ಸಾರ್ವತ್ರಿಕ ಸತ್ಯಗಳನ್ನು ಸಾವಿರಸಲ ಹೇಳಿದರೂ ಅದು ಕ್ಲೀಷೆ ಎನಿಸುವುದಿಲ್ಲ. ಕವಿರಾಜಮಾರ್ಗಕಾರನ (೯ನೇ ಶತಮಾನ) ಮಾತನ್ನು ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ. "ಕಸವರ(ಬಂಗಾರ)ವೆಂಬುದು. ನೆರೆ ಸೈರಿಸಲಾರ್ಪೊಡೆ ಪರ ವಿಚಾರಮುಮಂ ಪರಧರ್ಮಮುಮಂ". ಅನ್ಯರ ವಿಚಾರಗಳನ್ನು ಅನ್ಯ ಧರ್ಮಗಳನ್ನ ಸಹಿಷ್ಣುತೆ, ಸಹಾನುಭೂತಿಗಳಿಂದ ಸಹಿಸಿಕೊಳ್ಳುವದೇ ಬದುಕಿನ ಬಂಗಾರ ಎಂದು ಇದರ ಅರ್ಥ. ಕನ್ನಡ ಸಾಹಿತ್ಯ ಪರಂಪರೆ ಇಂಥ ಮಾತುಗಳಿಂದಲೇ ಪ್ರಾರಂಭವಾಗುತ್ತಿದೆ. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಮಾತುಗಳಿಂದಲೇ ಪ್ರಾರಂಭವಾಗುತ್ತಿದೆ. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪನ (ಹತ್ತನೇ ಶತಮಾನ) ಮಾತು ಪ್ರಖ್ಯಾತವಾಗಿದೆ. ಬಸವಣ್ಣನವರು (೧೨ನೇ ಶತಮಾನ) 'ಕಳಬೇಡ, ಕೊಲಬೇಡ' ಎಂಬ ಪ್ರಸಿದ್ಧ ವಚನದಲ್ಲಿ ಹೇಳಿದ 'ಅನ್ಯರಿಗೆ ಅಸಹ್ಯಪಡಬೇಡ' ಎಂಬ ನುಡಿ ಇಂದು ಅತ್ಯಂತ ಪ್ರಸ್ತುತವಾಗಿದೆ. ಅಸಹ್ಯಪಡುವುದರಿಂದ ದ್ವೇಷ ಪ್ರಾರಂಭವಾಗುತ್ತದೆ. ಅದು ಮುಂದೆ ಹಿಂಸೆಗೂ ಕಾರಣವಾಗಬಹುದು. ಪ್ರತಿಯೊಬ್ಬ ವ್ಯಕ್ತಿಗೆ

ತನ್ನ ಭಾಷೆಯ ಸಾಹಿತ್ಯದ ಪರಿಚಯವೂ ಇರಬೇಕು. ಕಾವ್ಯ, ಸಾಹಿತ್ಯ ಸಂಸ್ಕೃತಿಯ ವಾಹಕ.

ಒಕ್ಕುಂದ : ಡಾ. ಎಂ.ಎಂ. ಕಲಬುರ್ಗಿಯವರಿಲ್ಲದ ಕಲ್ಯಾಣನಗರ ಹೇಗಿದೆ? ಅವರ ಹತ್ಯೆಯನ್ನು ನಿಮ್ಮ ಕವಿ ಮನಸ್ಸು ಹೇಗೆ ಅರಗಿಸಿಕೊಂಡಿತು?

ಚೆ.ಕ. : ಡಾ. ಎಂ.ಎಂ. ಕಲಬುರ್ಗಿಯವರು ನಮ್ಮ ನೆರೆಮನೆಯವರಷ್ಟೇ ಅಲ್ಲ, ಹೃದಯಕ್ಕೆ ಇನ್ನೂ ಹೆಚ್ಚು ಹತ್ತಿರದವರು. ಕಲ್ಯಾಣನಗರದಲ್ಲಿಯೇ ಅವರು ಅತ್ಯಂತ ಕ್ರಿಯಾಶೀಲ ವ್ಯಕ್ತಿ. ಅವರು ನಡೆದರೆ ಸಾದಾ ವ್ಯಕ್ತಿಯಂತೆ ಹೋಗುತ್ತಲೇ ಇರಲಿಲ್ಲ. ಸಮೀಪದ ಟಪಾಲು ಡಬ್ಬಿಗೆ ಪತ್ರ ಹಾಕಲು ಹೋದಾಗಲೂ ವೇಗದಿಂದಲೇ ಹೋಗುತ್ತಿದ್ದರು. ಅವರ ಶ್ರೀಮತಿಯವರು ಹೇಳುತ್ತಿದ್ದರು 'ಊಟಕ್ಕೆ ನೀಡುವಾಗ ಒಂದು ಪಲ್ಲೆ ನೀಡಿ ತಿರುಗಿ ಬರುವಷ್ಟರಲ್ಲಿಯೇ ಪಲ್ಲೆಯನ್ನೇ ಮುಗಿಸುತ್ತಿದ್ದರು'. ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿರುವಾಗ ನಮ್ಮ 'ಪ್ರಸಾರಾಂಗ'ಕ್ಕೆ ಬಂದರೆ, ಯಾವಾಗಲೂ ತಲೆಯಲ್ಲಿ ಹೊಸ ವಿಚಾರಗಳನ್ನುತುಂಬಿಕೊಂಡೇ ಬರುತ್ತಿದ್ದರು. 'ಕರ್ನಾಟಕ ಭಾರತಿ' ತ್ರೈಮಾಸಿಕ ಹುಟ್ಟಿದ್ದೇ ಹೀಗೆ. ಮೈಸೂರು ವಿಶ್ವವಿದ್ಯಾಲಯದ 'ಪ್ರಬುದ್ಧ ಕರ್ನಾಟಕ'ದಂತೆ ನಾವೂ ಒಂದು ಪತ್ರಿಕೆಯ ಮಾಡೋಣ. ಕ.ವಿ.ವಿ.ಯಿಂದ 'ಕರ್ನಾಟಕ ಭಾರತಿ' ಹೊರಟಾಗ ಅದರ ಉಸ್ತುವಾರಿಯನ್ನೆಲ್ಲ ಅವರೇ ನೋಡಿಕೊಳ್ಳುತ್ತಿದ್ದರು.

ತಮ್ಮ ಸಂಶೋಧನೆಯ ಹಾದಿಯಲ್ಲಿ ಯಾವುದೇ ಒಂದು ಹೊಸ ವಿಚಾರ ಹೊಳೆದರೆ, ಕೂಡಲೆ ನಮ್ಮ ಮನೆಗೆ ಬಂದು ಅದರ ಬಗ್ಗೆ ಹೇಳುತ್ತಿದ್ದರು. ವಚನದಲ್ಲಿ ಯಾವುದೋ ಒಂದು ಶಬ್ದ ತಪ್ಪಾಗಿದ್ದರೆ, ಆ ಬಗ್ಗೆ ಚಿಂತಿಸಿ, ಸರಿಯಾದ ಶಬ್ದ ಯಾವುದೆಂಬುದನ್ನು ಸೂಚಿಸುತ್ತಿದ್ದರು. ಈ ನಡುವೆ ಬೆಂಗಳೂರಿನಲ್ಲಿ ಮೂಢನಂಬಿಕೆ ನಿಷೇಧ ಕುರಿತು ಉಪನ್ಯಾಸ ಮಾಡುವಾಗ ಮಾಧ್ಯಮಗಳಲ್ಲಿ ಅಪಪ್ರಚಾರವಾಗಿ, ಅವರ ಮನೆಯ ಮೇಲೆ ಯಾರೋ ಕಲ್ಲೆಸೆದಾಗ ಸರಕಾರ ಅವರ ಮನೆಗೆ ಪೋಲೀಸ್ ಸಂರಕ್ಷಣೆಯನ್ನು ಒದಗಿಸಿದ್ದರು. ಕೆಲ ದಿನಗಳ ಮೇಲೆ 'ನಮ್ಮ ಮನೆಗೆ ಪೋಲೀಸ್ ಸಂರಕ್ಷಣೆಯ ಆವಶ್ಯಕತೆಯಿಲ್ಲ' ಎಂದು ಹೇಳಿ ಹಿಂತಿರುಗಿಸಿದ್ದರು.

ಅದಕ್ಕೆ ಕೆಲವು ದಿನಗಳ ಹಿಂದೆಯೇ (೨೮-೧-೨೦೧೫ರಂದು) ಧಾರವಾಡದ 'ಬಸವರಾಜ ಕಟ್ಟೀಮನಿ ವಿಚಾರವೇದಿಕೆ' ಬೆಳಗಾವಿಯಲ್ಲಿ ಅವರು ಅಧ್ಯಕ್ಷರಾಗಿದ್ದ 'ಕಟ್ಟೀಮನಿ ಪ್ರತಿಷ್ಠಾನ' ಸಂಯುಕ್ತ ಆಶ್ರಯದಲ್ಲಿ

'ಮೂಢ ನಂಬಿಕೆಗಳನ್ನು ವಿರೋಧಿಸಿ ಸರಕಾರಕ್ಕೆ ಸಲ್ಲಿಸಿದ ವರದಿ ಕುರಿತು ಸಂವಾದವನ್ನು ಏರ್ಪಡಿಸಲಾಗಿತ್ತು. ಬೆಂಗಳೂರಿನ ಡಾ. ಜಿ. ರಾಮಕೃಷ್ಣ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ, ಬೆಂಗಳೂರಿನ ಸಭೆಯಲ್ಲಿ ಡಾ. ಕಲಬುರ್ಗಿಯವರ ಭಾಷಣವನ್ನು ಮಾಧ್ಯಮದವರು ಹೇಗೆ ತಿರುಚಿದ್ದಾರೆ ಎನ್ನುವುದನ್ನು ಅವರು ಸ್ಪಷ್ಟಪಡಿಸಿದರು. ಡಾ. ಕಲಬುರ್ಗಿಯವರ ಒಡೆದು ಕಾಣುವ ಒಂದು ಗುಣವೆಂದರೆ ಅವರು ಪಾಲಿಸುತ್ತಿದ್ದ ಅಭಿವ್ಯಕ್ತಿ ಸ್ವಾತಂತ್ರ್ಯ. ತಮ್ಮ ಸಂಶೋಧನೆಯಿಂದ ಯಾವುದನ್ನು ಸತ್ಯ ಎಂದು ಕಂಡುಕೊಂಡಿರುತ್ತಾರೋ ಅದನ್ನು ಭಾಷಣದಲ್ಲಾಗಲಿ ಬರೆಹದಲ್ಲಾಗಲಿ ಎತ್ತಿ ಹೇಳುವರು. ವಚನ ಸಾಹಿತ್ಯದ ಪ್ರಭಾವವೇ ಅದು. 'ಲೋಕ ವಿರೋಧಿ ಶರಣನಾರಿಗೂ ಅಂಜುವವನಲ್ಲ' ಎಂಬ ಧೋರಣೆ ಅವರದು.

ಡಾ. ಕಲಬುರ್ಗಿಯವರ ಹತ್ಯೆಯಿಂದ ನನ್ನ ಮನಸ್ಸಿಗಂತೂ ದೊಡ್ಡದೊಂದು ಶೂನ್ಯ ಆವರಿಸಿಕೊಂಡಂತಾಯಿತು. ದೇಶ ವಿದೇಶಗಳ ಪತ್ರಿಕೆಗಳಲ್ಲಿ ಇದು ಸುದ್ದಿಯಾಗಿ ವಿಚಾರವಾದಿಗಳಿಂದ ಪ್ರತಿಭಟನೆಯೂ ಪ್ರಕಟವಾಯಿತು. ನಿಷ್ಠುರ ವಿಚಾರವಾದಿಗಳನ್ನು ಹೀಗೆ ಹತ್ಯೆಮಾಡುವುದರಿಂದ ನಮ್ಮ ದೇಶದ ಪ್ರಜಾಪ್ರಭುತ್ವಕ್ಕೆ ಬೆಲೆಯೇ ಇಲ್ಲದಂತಾಗಿದೆ.

ಒಕ್ಕುಂದ : ನೀವು ನಿರಂತರ ಸೃಜನಶೀಲರು. ಈ ಸಲದ 'ಹೊಸತು' ವಿಶೇಷ ಸಂಚಿಕೆಯಲ್ಲಿ ನಿಮ್ಮ ಕವಿತೆ ಪ್ರಕಟವಾಗಿದೆ. ಶತಮಾನದ ಬದುಕಿಗೆ ಸಾಗುತ್ತಿರುವ ಈ ಅದ್ಭುತ ಕ್ಷಣಗಳಲ್ಲಿ ಸೃಜನಶೀಲತೆಯೊಂದಿಗಿನ ನಿಮ್ಮ ಒಡನಾಟ ಹೇಗಿದೆ? ಏನನ್ನು ಬರೆಯುವ ಯೋಜನೆ ಹೊಂದಿದ್ದೀರಿ?

ಚೆ.ಕ. : ಮಹಾತ್ಮಾ ಗಾಂಧಿಯನ್ನು ನಾನು ನೋಡಿರದಿದ್ದರೂ ಗಾಂಧೀಯುಗದಲ್ಲಿ ಬದುಕಿದವನು. ಸರಳಜೀವನ, ಸ್ವಾವಲಂಬನೆಯ ವಾತಾವರಣವನ್ನು ಹೀರಿಕೊಂಡವನು. ಅಂದಿನ ಸಾರ್ವಜನಿಕ ಸೇವೆಯ ಮಹತ್ವ ಇಂದು ನಗೆಪಾಟಲಾಗಿದೆ. ರವೀಂದ್ರನಾಥ ಟಾಗೋರರು ರಾಷ್ಟ್ರೀಯತೆಯನ್ನೂ ಮೀರಿ ವಿಶ್ವಮಾನವ ಸಂದೇಶವನ್ನು ಹರಡಿದ್ದರು. ಅವರ ಪ್ರಭಾವವೂ ನನ್ನ ಮೇಲಿದೆ.

ಈ ಡಿಜಿಟಲ್ ಯುಗದಲ್ಲಿ ತಂತ್ರಜ್ಞಾನ ಅದ್ಭುತವಾದ ಬೆಳವಣಿಗೆ ಕಾಣುತ್ತಿರುವಾಗ ನಾನು 'ಹಳಬ'ನಾಗಿ ಬಿಟ್ಟಿದ್ದೇನೆ ಎಂದು ಅನ್ನಿಸಿದೆ.

ಈ ವೇಗದ ಬದಲಾವಣೆಯನ್ನು ಅರಗಿಸಿಕೊಂಡು ಸೃಜನಶೀಲತೆ ಮೆರೆಯಬೇಕಾಗಿದೆ. ಸೃಜನಶೀಲತೆಯೊಡನೆ ನನ್ನ ಒಡನಾಟ ಕಡಿಮೆಯಾಗಿದೆ ಎಂದು ಅನಿಸಿದರೂ ಪೂರ್ಣ ನಿಂತಿಲ್ಲ. ಆಗೊಂದು ಈಗೊಂದು ಕವಿತೆ ಅಥವಾ ಲೇಖನದ ಆಲೋಚನೆ ನಡೆದಿರುತ್ತದೆ. ಮೊದಲಿನ ಸುಪ್ತಶಕ್ತಿ ಹುದುಗಿರುವ ಸಾಮರ್ಥ್ಯ (Potentiality)ವನ್ನು ನೋಡಿದರೆ ಈಗಿನದೇನೂ ಅಲ್ಲವೆನಿಸುತ್ತದೆ.

ನಾನು ಬರೆಯುವಾಗ ಏನನ್ನು ಮೊದಲೇ ಯೋಜನೆ ಹಾಕಿಕೊಳ್ಳುವದಿಲ್ಲ. ಅಂಥ ಮಹತ್ವಾಕಾಂಕ್ಷೆ ನನಗೆ ಮೊದಲಿನಿಂದಲೂ ಇಲ್ಲ. ಬದುಕಿನಲ್ಲಿಯೂ ಹಾಗೆಯೇ. ಬಂದದ್ದನ್ನು ಎದುರಿಸುವದು, ಮತ್ತೆ ಮುಂದೆ ಸಾಗುವದು.

'ಹೊಸತು' ಪತ್ರಿಕೆಯ ಸಂಪಾದಕರಾದ ಸಿದ್ದನಗೌಡ ಪಾಟೀಲರು ಈ ಸಲದ ವಿಶೇಷ ಸಂಚಿಕೆಗೆ ಏನಾದರೂ ಕವಿತೆ ಕಳಿಸಿರಿ ಎಂದು ಕೇಳಿದ್ದರು. ಈಚೆಗೆ ಏನೂ ಬರೆದಿಲ್ಲ. ಹಿಂದೆ ಬರೆದದ್ದರಲ್ಲಿ ಆಯ್ದು ಕಳಿಸಲೆ ಎಂದು ಕೇಳಿದ್ದೆ. ಅದಕ್ಕೆ ಒಪ್ಪಿಕೊಂಡಿದ್ದರು. ನೀವು ನೋಡಿದ 'ನಿತ್ಯ ಪಯಣ' ಹಾಗೆ ಪ್ರಕಟವಾದದ್ದು. ನಿಜವಾದ ಕವಿತೆ ಹೊಸತಾಗಿಯೇ ಬರೆದಂತಿರುತ್ತದೆ. 'ಒಂದೆಡೆ ನೆಲೆಸಿದ್ದರು ನಿತ್ಯವು ಜೀವಕೆ ಪಯಣ' ಆ ಕವಿತೆಯ ಒಂದು ಸಾಲು. ಇಂಥ ಭಾವನೆ ಎಷ್ಟು ಸಮಕಾಲೀನವೋ ಅಷ್ಟೇ ಸಾರ್ವತ್ರಿಕ ಎನಿಸಿದೆ ನನಗೆ.

ಒಕ್ಕುಂದ : ಹೊಸ ತಲೆಮಾರಿನ ಬರಹಗಳನ್ನು ಓದುತ್ತಿದ್ದೀರಾ? ಆ ಕುರಿತು ನಿಮ್ಮ ಅಭಿಪ್ರಾಯಗಳೇನು? ಹೊಸ ತಲೆಮಾರಿಗೆ ನಿಮ್ಮ ಸಂದೇಶಗಳೇನು?

ಚೆ.ಕ. : ಹೊಸ ತಲೆಮಾರಿನ ಬರಹಗಳನ್ನು ಸಾಧ್ಯವಿದ್ದಷ್ಟು ಆಸ್ಥೆಯಿಂದ ಓದುತ್ತಿದ್ದೇನೆ. ಅವರಲ್ಲಿ ಕವಿಗಳೂ ಸಾಕಷ್ಟಿದ್ದಾರೆ. ಹೊಚ್ಚ ಹೊಸ ಪ್ರತಿಭೆಗಳನ್ನು ಕಂಡಾಗ ಹಿರಿ ಹಿರಿ ಹಿಗ್ಗಿದ್ದೇನೆ. ಬಹಳಷ್ಟು ಕವಿಗಳು ಬಹಳ ಅವಸರ ಮಾಡುತ್ತಾರೆ-ಕವನ ಸಂಗ್ರಹ ಪ್ರಕಟಿಸಲು, ಹಿಂದಿನ ತಲೆಮಾರಿನ ತಾಳ್ಮೆ, ಸಂಯಮ ಸ್ವಲ್ಪ ಕಡಿಮೆ, ಒಮ್ಮೊಮ್ಮೆ ಸಂಕೀರ್ಣತೆ ತರಲು ಬಹಳ ಕಷ್ಟ ಪಡುತ್ತಾರೆ. ಅಂಥವರ ಬರೆಹಗಳು ಓದುಗರಿಗೆ ಅರ್ಥವಾಗುವದು ಕಷ್ಟ. ಸಣ್ಣ ಕತೆಗಳ ನಿರೂಪಣಾ ತಂತ್ರದಲ್ಲಿ ಹೊಸತನ ಕಂಡುಬರುತ್ತಿದೆ. ಸಮಕಾಲೀನ ಸಮಸ್ಯೆಗಳು, ಸವಾಲುಗಳನ್ನು ಅರಗಿಸಿಕೊಳ್ಳಲು ಸ್ವಲ್ಪ ಸಮಯ ಬೇಕಾಗುತ್ತದೆ. ಪತ್ರಿಕೆಗಳಲ್ಲಿಯೂ

ಮೊದಲಿನಷ್ಟು ವಿಮರ್ಶೆ ಈಗ ಬರುತ್ತಿಲ್ಲ. ಬಂದರೂ ನಾಲ್ಕಾರು ಸಾಲಿನಲ್ಲಿ ಮುಗಿದು ಬಿಡುತ್ತಿದೆ. ಹೊಸ ತಲೆಮಾರಿನ ಲೇಖಕರಿಗೆ ಇದರಿಂದ ಸ್ವಲ್ಪಮಟ್ಟಿಗೆ ಹಿನ್ನಡೆಯೆಂದೇ ಹೇಳಬಹುದು.

ಹೊಸ ತಲೆಮಾರಿಗೆ ಸಂದೇಶ ನೀಡುವಷ್ಟು ನಾನು ದೊಡ್ಡವನೆಂದು ಭಾವಿಸಿಲ್ಲ. ಆದರೆ ಇಷ್ಟು ಮಾತ್ರ ಹೇಳಬಹುದು. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸಾವಿರಾರು ವರ್ಷದ ಪರಂಪರೆಯಿದೆ. ಶ್ರೇಷ್ಠ ಕಾವ್ಯಗಳನ್ನು ಸಾಧ್ಯವಿದ್ದಷ್ಟು ಓದಿ ಅದರ ಸಾರವನ್ನು ಹೀರಿಕೊಳ್ಳಿ. ಈ ಕಾಲಕ್ಕೆ ಒಳ್ಳೆಯದಲ್ಲಿದ್ದನ್ನು ಜನಪರವಲ್ಲದ್ದನ್ನು ನಿರಾಕರಿಸಿ, ಓದಿದಷ್ಟೂ ಭಾಷೆ ಹದಗೊಳ್ಳುತ್ತದೆ. ಗುಣಸ್ವೀಕಾರ ದೃಷ್ಟಿಯಿರಲಿ. ಅಧ್ಯಯನಶೀಲರಾಗಿ. ಜೀವನದಲ್ಲಿ ಪರಮಸುಖವೆಂದರೆ ಓದಿನ ಸುಖ. ಬರವಣಿಗೆಯೆಂದರೆ ತನ್ನ ಅನುಭವವನ್ನು ತನಗೇ ಸ್ಪಷ್ಟಗೊಳಿಸಿಕೊಳ್ಳುವದು. 'ಪದವಿಟ್ಟಳುಪದ ಒಂದಗ್ಗಳಿಕೆ' ಮಹಾಕವಿಗಳಿಗೇ ಮೀಸಲಾಗಿರಲಿ. ಬದುಕಿನಲ್ಲಿ ಹೇಗೋ ಹಾಗೆಯೇ ಬರೆಹದಲ್ಲಿಯೂ ಕೊನೆಯವರೆಗೂ ತಿದ್ದಿತೀರುವದು ಇದ್ದೇ ಇದೆ.

ಉನ್ನತ ಶಿಕ್ಷಣ ಅಕಾಡಮಿಗಾಗಿ
ಚೆಂಬೆಳಕಿನ ಕವಿ ಚೆನ್ನವೀರ ಕಣವಿ ಸಂದರ್ಶನ

ಸಂದರ್ಶಕರು : ಡಾ. ಜಿ.ಎಂ. ಹೆಗಡೆ

ಕನ್ನಡದ ಹಿರಿಯ ಕವಿಗಳಾದ ನಾಡಿನ ನಾಡೋಜ ಡಾ. ಚೆನ್ನವೀರ ಕಣವಿ ಅವರು ಕವಿ ಸಂದರ್ಶನ ಕಾರ್ಯಕ್ರಮಕ್ಕೆ ಆಗಮಿಸಿದ್ದಾರೆ. ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಅಕಾಡೆಮಿಯ ಪರವಾಗಿ ಅವರಿಗೆ ಹಾರ್ದಿಕವಾದ ಸ್ವಾಗತವನ್ನು ಕೋರುತ್ತೇನೆ. ಚೆಂಬೆಳಕಿನ ಕವಿ ಚೆನ್ನವೀರ ಕಣವಿ ಅವರು ಕನ್ನಡಿಗರ ಪ್ರೀತಿಯ ಕವಿ. ಅವರ ಸಮಗ್ರ ಕಾವ್ಯ ಐದು ಮುದ್ರಣಗಳನ್ನು ಕಂಡು ಜನತೆಯ ಪ್ರೀತಿಗೆ ಪಾತ್ರವಾಗಿದೆ. ಕಣವಿಯವರ 'ಹೂವು ಹೊರಳುವವು ಸೂರ್ಯನ ಕಡೆಗೆ' ಆರು ಬಾರಿ ಮುದ್ರಣಗೊಂಡು ಜನಪ್ರಿಯ ವಾಗಿದೆ. ಸುಗಮ ಸಂಗೀತ ಕಲಾವಿದರ ಮೂಲಕ ಕಣವಿಯವರ ಭಾವಗೀತೆಯ ನಾಲ್ಕು ಧ್ವನಿ ಸುರುಳಿಗಳು ಕನ್ನಡಿಗರ ಕಿವಿಯಲ್ಲಿ ಅನುರಣಿಸುತ್ತಿವೆ. 'ಹೂವು ಹೊರಳುವವು ಸೂರ್ಯನ ಕಡೆಗೆ', 'ಹೆಸರಾಯಿತು ಕರ್ನಾಟಕ', 'ವಿಶ್ವವಿನೂತನ ವಿದ್ಯಾಚೇತನ' ಮೊದಲಾದ ಕವಿತೆಗಳನ್ನು ಕೇಳದ ಕನ್ನಡಿಗರಿಲ್ಲ. ಆರು ನೂರಕ್ಕೂ ಹೆಚ್ಚು ಕವಿತೆ ರಚಿಸಿರುವ ಕಣವಿಯವರ ಗದ್ಯ ಸಾಹಿತ್ಯದ ಎರಡು ಬೃಹತ್ ಸಂಪುಟಗಳು ಪ್ರಕಟವಾಗಿವೆ. ಸ್ನೇಹ, ಪ್ರೀತಿ, ಸಜ್ಜನಿಕೆ, ಅಂತಃಕರಣ, ವಾತ್ಸಲ್ಯದ ಅಪರೂಪದ ವ್ಯಕ್ತಿತ್ವ ಕಣವಿಯವರದು. ಅವರೊಡನೆ ಸಂವಾದ ನಡೆಸುವದೆಂದರೆ ಕಾವ್ಯಾನುಸಂಧಾನ ನಡೆಸಿದ ಅನುಭೂತಿಯುಂಟಾಗುತ್ತದೆ. ಕಣವಿಯವರು ನವೋದಯ ಪ್ರಗತಿಶೀಲ, ನವ್ಯ, ನವ್ಯೋತ್ತರ ಕಾಲಘಟ್ಟದಲ್ಲಿ ನಿರಂತರವಾಗಿ ಕವಿತೆ ರಚಿಸುತ್ತ ಒಂದು ಕಾವ್ಯ ಪರಂಪರೆಯ ನಿರ್ಮಾಪಕರೇ ಆಗಿದ್ದಾರೆ. ಕವಿಗಳಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದಾರೆ.

೧. ಚೆಂಬೆಳಕಿನ ಕವಿ ಕಣವಿ ಸಂದರ್ಶನ

ತಾವು ೯೪ ವರ್ಷಗಳ ಕಾಲ ಸಾರ್ಥಕ ಬಾಳು ನಡೆಸಿದ ಕನ್ನಡದ ಸೃಜನಶೀಲ ಪ್ರತಿಭೆಯ ಅನನ್ಯ ಚೇತನವಾಗಿದ್ದೀರಿ. ನಿಮ್ಮ ಜೀವನವೇ ಕಾವ್ಯ, ಕಾವ್ಯವೇ ಜೀವನ ಎಂಬಂತೆ ಬಾಳಿದ ತಮಗೆ ನಡೆದು ಬಂದ ದಾರಿಯ ಕಡೆಗೆ ಹಿಂತಿರುಗಿ ನೋಡಿದಾಗ ಏನನ್ನಿಸುತ್ತದೆ?

ಇದಕ್ಕೆ ಉತ್ತರಿಸಲು ನಾನು, ನನ್ನ ಬಾಲ್ಯ ಜೀವನಕ್ಕೆ ಹೋಗಬೇಕು.

ನಾನು ಹುಟ್ಟಿದ್ದು ಹೊಂಬಳದಲ್ಲಾದರೂ, ನನ್ನ ಬಾಲ್ಯ ಕಳೆದದ್ದು ಗದಗಿನಿಂದ ೧೨ ಮೈಲು ದೂರವಿದ್ದ ಶಿರುಂದ ಗ್ರಾಮದಲ್ಲಿ. ನನ್ನ ತಂದೆ ಅಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದರು. ಅದು ಏಕೋಪಾಧ್ಯಾಯ ಶಾಲೆ, ೧ ರಿಂದ ೪ನೆಯ ಇಯತ್ತೆಯವರೆಗೆ ಮಾತ್ರ ಅಲ್ಲಿ ಇದ್ದದ್ದು. ಈಗ ೮೦-೯೦ ವರ್ಷಗಳ ಹಿಂದಿನ ಮಾತು, ಆ ಕಾಲದ ಹಳ್ಳಿಯ ರೀತಿಯೇ ಬೇರೆ. ನನ್ನ ಪ್ರಾಥಮಿಕ ಶಾಲೆ ಪ್ರಾರಂಭವಾದದ್ದು ಹನುಮಂತನಗುಡಿಯಲ್ಲಿ, ಅನಂತರ ಬೇರೆ ಸ್ಥಳಕ್ಕೆ ಹೋದದ್ದು.

೨. ನಮ್ಮ ತಂದೆ, ನಾಲ್ಕನೆಯ ಇಯತ್ತೆಯವರೆಗೆ ಎಲ್ಲಾ ವಿಷಯಗಳನ್ನು ಕಲಿಸುತ್ತಿದ್ದರು. ಈಗ ನೆನೆದುಕೊಂಡರೆ, ಅದು ಆಶ್ಚರ್ಯದ ವಿಷಯ. ನಮ್ಮ ಶಾಲೆಯ ಗೋಡೆಗಳಿಗೆ ಗದಗ ತಾಲೂಕಿನ ನಕಾಶೆ, ಧಾರವಾಡ ಜಿಲ್ಲೆಯ ನಕಾಶೆ ತೂಗು ಹಾಕಿದ್ದರು. ಭೂಗೋಲ ಪುಸ್ತಕದ ಗದಗ ತಾಲೂಕಿನ ಹಳ್ಳಿಗಳ ಹೆಸರುಗಳನ್ನೆಲ್ಲ ಒಪ್ಪಿಸಬೇಕು. ಅವು ಪ್ರಾಸಬದ್ಧವಾಗಿರುತ್ತಿದ್ದವು : ಗದಗ, ಬೆಟಗೇರಿ, ಹೊಂಬಳ, ಡಂಬಳ, ಹುಲಕೋಟೆ-ಕುರ್ತಕೋಟೆ - ಹೀಗೆ. ವಾರ್ಷಿಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು, ಸಾಲಿಸಾಹೇಬರು ಬರುತ್ತಿದ್ದರು. ಮೊದಲನೆಯ ನಂಬರು ಬಂದವರಿಗೆ ಮುಂದಿನ ತರಗತಿಯ ಪುಸ್ತಕ, ಪಾಟಿ, ಪೇಣೆ-ಇತ್ಯಾದಿ ಕೊಡುತ್ತಿದ್ದರು. ನಾನು ಅವುಗಳಿಗೆ ರಟ್ಟುಹಾಕಿ ಇಟ್ಟುಕೊಳ್ಳುತ್ತಿದ್ದೆ.

೩. ಬೀಸುವಾಗ, ಕುಟ್ಟುವಾಗ ಹಾಡುವ ಹಾಡುಗಳು, ಹಂತಿಯ ಹಾಡು, ಹೊಳಿಹುಣ್ಣಿಮೆ ಹಾಡು - ಮೊದಲಾದ ಜಾನಪದ ಹಾಡುಗಳು ನನ್ನ ಮೇಲೆ ಬಹಳ ಪ್ರಭಾವ ಬೀರಿದವು. ಹೋಳೀ ಹುಣ್ಣಿಮೆ ಪದ ಇನ್ನೂ ನನ್ನ ನೆನಪಿನಲ್ಲಿದೆ:-

"ಆ ವರ್ಷ ಹಾಂಗಾತೋ
ಈ ವರ್ಷ ಹೀಂಗಾತೊ
ಹತ್ತಿಯ ಹೊಲದಾಗ ಕೆಲಸಾತೊ||
ಎಲೆ ಹುಡುಗಿ
ತೋಪಿನ ಸೀರೆ ಸೆರಗು ಹೊಲಸಾತೊ||" ಹೀಗೆ

೪. ನಮ್ಮ ತಂದೆಯವರಪ್ರಭಾವವೂ ನನ್ನ ಮೇಲೆ ಸಾಕಷ್ಟಾಗಿದೆ.

ಅವರು ನಸುಕಿನಲ್ಲೆದ್ದು, ಲಾಟಣ ಹಚ್ಚಿಕೊಂಡು, ನಿಜಗುಣ ಶಿವಯೋಗಿ

ಬಾಲ ಲೀಲಾ ಮಹಾಂತ ಶಿವಯೋಗಿಗಳು, ಬರೆದ ಹಾಡುಗಳನ್ನು ರಾಗವಾಗಿ ಹಾಡುತ್ತಿದ್ದರು. 'ಅನುಭವಾಮೃತ' ಓದುತ್ತಿದ್ದರು. ಅವುಗಳನ್ನು ಕೇಳುತ್ತ, ಕೇಳುತ್ತ

ನಸುಕಿನ ಸಕ್ಕರೆಯ ನಿದ್ದೆಯಲ್ಲಿ, ಸವಿಯುತ್ತಿದ್ದೆ. ತಂದೆಯವರ ಸ್ವಭಾವವೆಂದರೆ ಬಹಳ ನಿಷ್ಠೆಯಿಂದ ತಮ್ಮ ಕರ್ತವ್ಯ ನೆರವೇರಿಸುತ್ತಿದ್ದರು.

೫. ಮುಳಗುಂದದಲ್ಲಿ, ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದಾಗ, ತಮ್ಮ ಸಹೋದ್ಯೋಗಿಗಳಾದ, ಚೆನ್ನವೀರಯ್ಯ ಪುರಾಣಿಕಮಠರಿಂದ ಲಿಂಗದೀಕ್ಷೆಯನ್ನು ತೆಗೆದುಕೊಂಡಿದ್ದರು. ಆ ಕಾಲಕ್ಕೇ ಅವರು ತಮ್ಮ ಇಷ್ಟಲಿಂಗ ಪೂಜೆ ಬಿಟ್ಟರೆ, ಯಾವ ದೇವರ ಗುಡಿಗೂ ಹೋಗುತ್ತಿರಲಿಲ್ಲ. ಇಡೀ ಶಿರುಂದ ಗ್ರಾಮಕ್ಕೇ ಅವರು ಗುರುಗಳಂತಿದ್ದರು. ಆ ಶಾಲೆಯಿಂದಲೇ ನಿವೃತ್ತಿ ಹೊಂದಿದರು. ಮೂರು ತಲೆಮಾರಿನ ವಿದ್ಯಾರ್ಥಿಗಳಿಗೂ ಅವರು ಶಿಕ್ಷಕರಾಗಿದ್ದರು. ಹಾಗಾಗಿ, ಆ ಗ್ರಾಮದ ಎಲ್ಲರಿಗೂ, ಅವರನ್ನು ಕಂಡರೆ, ಅಷ್ಟು ಭಕ್ತಿ, ಗೌರವ.

೬. ನಮ್ಮ ಮನೆಯ ಎಡಕ-ಬಲಕ ಒಕ್ಕಲುತನದ ಜನ. ನಮ್ಮ ಹಳ್ಳಿಯ ವೈಶಿಷ್ಟ್ಯ ಏನೆಂದರೆ, ಎಲ್ಲಾ ವೃತ್ತಿಯ ಜನ ಅಲ್ಲಿದ್ದರು. ಒಕ್ಕಲಿಗರಂತೂ ಸರಿಯೆ. ಕಮ್ಮಾರ, ಬಡಿಗ, ಅಕ್ಕಸಾಲಿ, ಮಾದರು, ಒಡ್ಡರು-ಹೀಗೆ ಎಲ್ಲಾ.

ನಮ್ಮ ಊರಿನ ಸಮೀಪದಲ್ಲಿ ಲಂಬಾಣಿ ತಾಂಡೆಗಳಿದ್ದವು. ಅವರ ಹೆಣ್ಣುಮಕ್ಕಳು, ತಮ್ಮದೇ ಉಡುಪು-ತೊಡಪುಗಳಲ್ಲಿ ದಿವಸಾ ಬೆಳಿಗ್ಗೇನೆ, ಕಟ್ಟಿಗೆ ಹೊರೆ ಹೊತ್ತುಕೊಂಡು ಬರೋರು. ಆಗ, ಕಟ್ಟಿಗೆ ಹೊರೆಗೆ ಎರಡಾಣೆ, ನಾಲ್ಕಾಣೆ ಇಷ್ಟೆ. 'ಏಡಿರೆ, ಬಾಪುರೆ' ಎಂದು ಅವರು ದುಂಡಗೆ ಕುಣಿಯುತ್ತ ಹಾಡುತ್ತಿದ್ದರು.

೭. ಹೀಗೆ ಇಡೀ ಹಳ್ಳಿಯ ಜೀವನ, ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದ್ದ ಹಾಗೆ, ನನ್ನ ಅನುಭವದೊಳಗೆ ಇಳಿದ ಹಾಗೆ ಇದೆ. ನಮ್ಮ ಹಳ್ಳಿಗೆ ಮೂರು ಮೈಲು ದೂರ ದಲ್ಲಿದ್ದ, ಶಿರಹಟ್ಟಿ ಪಕ್ಕೀರ ಸ್ವಾಮಿಗಳ ಜಾತ್ರೆ, ಬಹಳ ವೈಭವದಿಂದ ನಡೆಯುತ್ತಿತ್ತು. ಅಲ್ಲಿ ಒಂದು ಕಡೆ, ನಗಾರ ಖಾನೆಯಲ್ಲಿ ಸಕ್ಕರೆ ಓದಿಸೋದು, ಒಂದು ಕಡೆ ಸ್ವಾಮಿಗಳ ಗದ್ದುಗೆಗೆ ಮಂಗಳಾರತಿ ಮಾಡಿ, ಕಾಯಿ ಒಡೆಸೋದು ಎಲ್ಲಾ ಕೂಡಿಯೇ ಜರುಗುತ್ತಿದ್ದವು. ಮಿಣಿ ಹಿಡಿದು ಜಾತ್ರೆಯ ತೇರು ಎಳೆಯಲು ಜನರ ನೂಕು-ನುಗ್ಗಲು.

೮. ಜಾತ್ರೆಯ ತೇರು, ಈಗಲು ಕೂಡ ನನ್ನ ಕವಿತೆಯಲ್ಲಿ, ಒಂದು ಸಾಮೂಹಿಕ ಉತ್ಸಾಹದ ಪ್ರತೀಕವಾಗಿ, ಸಂತೋಷದ ಸಂಕೇತವಾಗಿ, ಅಲ್ಲಲ್ಲಿ ಕಾಣಿಸಿಕೊಂಡಿದೆ.

ಈ ಕುತೂಹಲ, ಸೋಜಿಗ Sense of wonder ಅಂತ ನಾವು ಏನು

ಅಂತೀವಲ್ಲ, ಅದು ನನಗೆ ಬಾಲ್ಯದಿಂದಲೂ ಇರುವಂತಾದ್ದು.

೯. ನಮ್ಮ ಮನೆ ಸಮೀಪವೆ ಕಮ್ಮಾರಶಾಲೆಯಿತ್ತು. ಆ ಕಬ್ಬಿಣ, ತಿದಿಯಲ್ಲಿಟ್ಟು ಕಾಯಿಸಬೇಕು. ಅದನ್ನು ಬಡಿಯೋದು, ಕಿಡಿಹಾರೋದು, ನೋಡ್ ನೋಡ್ತ ಸೊರ್ರಂತ್ ಅದಕ ನೀರುಣಿಸೋದು- ಇವನ್ನ ನೋಡುತ್ತ ನಿಂತು ಬಿಡುತ್ತಿದ್ದೆ.

ಅದೇ ರೀತಿ ಕುಂಬಾರ ಮನೆ:ಅರಲು ತುಳಿಯೋದು ಆ ಮಣ್ಣ ಮುದ್ದೆಯನ್ನು ತಿಗರಿಗೆ ಹಾಕೋರು, ನೋಡ ನೋಡ್ತ ಒಂದು ಅದಕ್ಕ ಒಂದು ರೂಪ, ಕೊಟ್ಟುಬಿಡೋದು, ಆಕಾರ ಸಣ್ಣದು, ದೊಡ್ಡದು ಎರಡು ತರದ್ದು ಇಟ್ಟು ಬಿಡುವಂತ ಕ್ರಿಯೆ. ಆಮೇಲೆ ಅವನ್ನು ಬೆಂಕಿಯಲ್ಲಿ ಹಾಕಿ, ಸುಟ್ಟು ಗಟ್ಟಿ ಮಾಡೋದು ಇದೆಲ್ಲಾ ಒಂದು Creative process- ಹೊಸಾ ಸೃಷ್ಟಿ ಕ್ರಿಯೆ ಅಂತ ನನಗನಿಸಿರಬೇಕು.

೧೦. ಈ ಸಣ್ಣ ಸಂಗತಿಗಳೆಲ್ಲಾ ಮುಂದೆ ಕಾವ್ಯಕ್ಕೆ ಪ್ರೇರಣೆ ನೀಡಿರಬೇಕು ಅಂತ ಅನಸ್ತದ. ನಮ್ಮೂರಲ್ಲಿ ಇರುವಾಗ ಬಡಜನರ ಮುಗ್ಧತೆ, ಕಷ್ಟ-ಅದರಲ್ಲೂ ಸಂತೋಷವಾಗಿ ಇರುವಂತದ್ದು ನೋಡ್ತಿದ್ದೆ ನಾನು. ಒಂದು ಹೊಲದ ಕರಿಕೆ ನಟ್ ಕಡೀಲಿಕ್ಕೆ ಬೆಳಿಗ್ಗೇನ ಹೋಗಿ, ಮಟಮಟ ಮಧ್ಯಾಹ್ನದಲ್ಲಿ ತಿರುಗಿ ಬೆವರು ಹರಿಸಿಕೋತ ಬರೂದು ನನ್ನ ಕಣ್ಣಿಗೆ ಬೀಳುತ್ತಿತ್ತು. ಅದಕ್ಕ ಕೊಡುವ ಕೂಲ ಬರೀ ನಾಲ್ಕಾಣೆ. ಹೆಣ್ಣು ಮಕ್ಕಳು ಹತ್ತಿಹೊಲಕ್ಕೆ ಮುಂಜಾನೇನ ಹೋಗಿ ಸಂಜೆಗೆ ದೊಡ್ಡ ದೊಡ್ಡ ಹತ್ತಿಗಂಟು ಹೊತ್ಕೊಂಡು ಬರೋರು. ನಮ್ಮದು ಮಾಸ್ತರ ಮನೆತನ. ಪಗಾರ ಸಿಪಾಯಿ ಪ್ರತಿತಿಂಗಳು ಬಂದು. ರೋಖ ರೊಕ್ಕ ಕೊಡಾವರು. ಇವರು ಎರಡಾಣೆ ನಾಲ್ಕಾಣೆಗೆ ದುಡೀತಾರಲ್ಲ ಅಂತ ಒಳಗೆಲ್ಲೋ ಅಳುಕು.

೧೧. ನಮ್ಮೂರ ಗೌಡರು ಲಕ್ಷ್ಮಣಗೌಡರು ಅಂತ ದಷ್ಟಪುಷ್ಟ ವ್ಯಕ್ತಿ. ಅವರು ಯಾವಾಗಲೂ ಬಿಳೀ ಅರಿವೆ ತೊಡೋರು. ತಲೆಗೊಂದು ಬಿಳಿಯ ರುಮಾಲು. ಅವರು ಜಾತಿಯಿಂದ ಕುರುಬರು. ಅವರ ಮನೆ ಹತ್ತಿರಾನೇ ಗ್ರಾಮದೇವತೆ ಗುಡಿ ಅಲ್ಲಿ ದಿನಾ ಪೂಜಾ ಇರೋದು ಅದಕ 'ಕಟಗೀರವ್ವ' ಅಂತ ಹೆಸರು. ಅವರ ಮನಿ ನಮ್ಮನಿ ಬೆನ್‌ಬೆನ್ನಿಗೆ ಇದ್ದವು. ಪ್ರತಿ ಮಂಗಳವಾರ ಅಡ್ಡಪಲ್ಲಕ್ಕಿ ಸೇವೆ. ಡೊಳ್ಳು ಬಾರಿಸೋದು ಜಾಗಟೆ, ನಗಾರಿ ಬಾರಿಸೋದು - ಎಲ್ಲಾ ಇರುತಿತ್ತು. ಗ್ರಾಮ ದೇವತೆ ಜಾತ್ರೇನು ಆಗೋದು. ಆಗ ಡೊಳ್ಳು ಬಾರಿಸಿಗೊಂತ ಹಾಡೋರು, ಅದಕ್ಕ 'ಈರಗಾರಪದ' ಅಂತ ಅನ್ನೋರು.

೧೨. ನಮ್ಮ ಮನಿ ಮುಂದ ಒಂದು ಅರಳಿಮರ ಇತ್ತು. ಆ ಅರಳೀಮರದ ಪೊಟರೆಯಲ್ಲಿ ಬಹಳ ಗಿಳಿಗಳು ಇರುತ್ತಿದ್ದವು. ಅವುಗಳ ಪುಚ್ಚ ಬಹಳ ಚಂದ ಇದ್ದವು. ನಮ್ಮೂರಾಗ ಎಲೆ ತೋಟ ಬಹಳ, ಊರ ಹೊರಗಿನ ತೋಟದೊಳಗ ನವಿಲು ಇರುತ್ತಿದ್ದವು ಅವು ಕುಣಿದು ಹೋದ ಮೇಲೆ, ಅದರ ಗರಿಗಳನ್ನು ಆರಿಸಿಕೊಂಡು ಬರೋದು, ತಂದು ನಮ್ಮ ಪುಸ್ತಕದಲ್ಲಿ ಇಡೋದು, ಇಂಥದನ್ನೆಲ್ಲ ಮಾಡತಿದ್ವಿ. ಈಗಲೂ ನೋಡಿ, ನಾನು ಎಷ್ಟೊತ್ತಿಗೆ ಮಲಗಿಕೊಂಡ್ರೂ, ಬೆಳಿಗ್ಗೆ ಆರರೊಳಗೇ ಎಚ್ಚರ ಆಗಿ ಬಿಡ್ತದ. ಎಚ್ಚರ ಆಗೋದು ಹಕ್ಕಿಗಳ ಚಿಲಿಪಿಲಿಯಿಂದ, ಗಡಿಯಾರದ ಆಲರ್ಮ ಬೇಕಾಗೇ ಇಲ್ಲ.

೧೩. ನಮ್ಮ ಊರಾಗ ಬರೇ ನಾಲ್ಕನೇ ಇಯತ್ತೆ. ಅದಕ ನಾನು ಮುಂದೆ ಕಲಿತದ್ದು, ಇಲ್ಲೇ, ಧಾರವಾಡದ ಹತ್ತಿರ ಗರಗದಲ್ಲಿ. ಅಲ್ಲಿ ನಮ್ಮ ಭಾವ ಹೆಡ್‌ಮಾಸ್ತರ್ ಆಗಿದ್ದರು. ನಾನು ಶಿರುಂದ ಶಾಲೆಯಿಂದ Leaving Certificate ತರುವಾಗ ನಾನು ಹುಟ್ಟಿದ್ದು ಜೂನ್ ೨೮, ಅದೇ ಇಸ್ವಿನೂ ಆಗಿ ಬಿಟ್ತು ಇಸ್ವಿ ೧೯೨೬ರ ಬದಲಿ, ೧೯೨೮ ಆಯಿತು. ಇದೆಲ್ಲ ನಜರ್ ಚೂಕಿಯಿಂದ ಆಯ್ತು. ನಮ್ಮ ತಂದೆ ನನ್ನ ಜನ್ಮ ಕುಂಡಲಿ ಬರೆದಿದ್ರು. ಅದರಲ್ಲಿ ನಾನು ಹುಟ್ಟಿದ್ದು ೧೯೨೬ ಅಂತ್ಲೇ ಇದ್ದದ್ದು. ಅಲ್ಲಿಂದ ಇಲ್ಲೀತನಕ ನಾನೂ ೧೯೨೮ ಕಾಯಂ ಆಯ್ತು. ನೀವೊಬ್ಬರಾದರೂ ಸಂದರ್ಶನದ ಪ್ರಾರಂಭದಲ್ಲೇ ನನಗೀಗ ೯೪ ವರ್ಷ ಅಂತ ಅಂದಿರಿ. ಬಾಳ ಚಲೋ ಆತು.

೧೪. ಗರಗದಲ್ಲಿ, ಆ ಹೊತ್ತಿಗಾಗಲೇ ಸ್ವಾತಂತ್ರ್ಯ ಚಳವಳಿ ಸುರುವಾಯ್ತು ೧೯೩೮-೩೯ನೇ ಇಸ್ವಿ. ಆ ಊರಿನ ಭಾಳ ಜನ ಖಾದಿ ತೊಡ್ತಿದ್ದರು. ನನ್ನ ಜೊತೆಗೆ ಸಾಲಿಗೆ ಬರುವ ಹುಡುಗರೂ ಖಾದಿ ತೊಡತಿದ್ದರು. ಧಾರವಾಡಕ್ಕೆ ಬರುವ ಕಾಂಗ್ರೆಸ್ ನಾಯಕರೆಲ್ಲ, ಗರಗಕ್ಕು ಬಂದು ಭಾಷಣ ಮಾಡ್ತಾ ಇದ್ದರು. ಆ ಊರ ಸಾಲಿಯೊಳಗೆ ಆಗಲೇ ಗಾಂಧೀಜಿಯವರ ವರ್ಧಾ ಶಿಕ್ಷಣ ಅಥವಾ ಮೂಲ ಶಿಕ್ಷಣ ಪ್ರಾರಂಭಿಸಿದ್ದರು. ಮೊದಲನೇ ಎರಡು ತರಗತಿಗಳಿಗೆ ಮಾತ್ರ ಆ ಶಿಕ್ಷಣ ನೀಡುತ್ತಿದ್ದರು. ಧಾರವಾಡ ತಾಲೂಕಿನ ೧೮ ಹಳ್ಳಿಗಳ ಶಾಲೆಯಲ್ಲಿ, ವರ್ದಾ ಶಿಕ್ಷಣ ಪ್ರಯೋಗಾತ್ಮಕವಾಗಿ ಪ್ರಾರಂಭ ಆಗಿತ್ತು. ಅವೆಲ್ಲಕ್ಕೂ ಗರಗ ಶಾಲೆಯೇ ಕೇಂದ್ರವಾಗಿತ್ತು, ಮಾದರಿಯಾಗಿತ್ತು.

೧೫. ನಾವು ವಿದ್ಯಾರ್ಥಿಗಳು, ನಮ್ಮ ಶಾಲಾ ಶಿಕ್ಷಕರ ಮಾರ್ಗದರ್ಶನದಲ್ಲಿ, ಪ್ರತಿ ರವಿವಾರ 'ಪ್ರಭಾತಫೇರಿ' ಹೋಗುತ್ತಿದ್ದೆವು. ಆವಾಗ ನಾವು ಹಾಡುವ ಹಾಡುಗಳಲ್ಲಿ, ನನ್ನ ನೆನಪಿನಲ್ಲಿರುವಂತೆ,

'ಎಂಥಾ ಶಾಣ್ಯಾ ಮಹಾತ್ಮಾಗಾಂಧಿ
ಹಿಂದುಸ್ತಾನಕವನೇ ತಂದಿ'
'ಕರುನಾಡು ನಮ್ಮ ನಾಡು
ಚಿನ್ನದಾ ಕರುನಾಡು ನಮ್ಮ ನಾಡು' ಇದ್ದವು.

ಗರಗದಲ್ಲಿ 'ಡೋರ್ ಕೇರಿ' ಇತ್ತು. ಅಲ್ಲಿ ಮಾಂಸ ಮಾರುತ್ತಿದ್ದರು. ನಮ್ಮ ಪ್ರಭಾತ ಫೇರಿಯ ನಾಯಕರು, ಅಲ್ಲಿಗೆ ಹೋಗಿ, ಆ ಸಣ್‌ಸಣ್ ಮಕ್ಕಳಿಗೆಲ್ಲಾ ಜಳಕಾ ಮಾಡಿಸಿ, ಹೊಸ ಅಂಗಿ ತೊಡಿಸುತ್ತಿದ್ದರು. ಗರಗದಲ್ಲಿದ್ದಾಗಲೇ ನಮ್ಮ ಮುಲ್ಕೀ ಪರೀಕ್ಷೆ ಆಯಿತು. ನಾನು ಧಾರವಾಡ ಜಿಲ್ಲಾ ಕೇಂದ್ರಕ್ಕೆ, ೧ನೇ ನಂಬರ ಬಂದೆ. ಆಗ ಜಿಲ್ಲೆಗೊಂದೊಂದೇ ಕೇಂದ್ರ ಇರುತ್ತಿದ್ದವು.

೧೬. ಮುಂದೆ, ಧಾರವಾಡದ ಆರ್.ಎಲ್.ಎಸ್. ಹಾಯ್‌ಸ್ಕೂಲಿನಲ್ಲಿ ನನ್ನ ಶಿಕ್ಷಣ ಮುಂದುವರಿಯಿತು. ನಾನು ಧಾರವಾಡಕ್ಕೆ ೧೯೪೧ರಲ್ಲಿ ಬಂದೆ. ಆಗಲೇ ೬೦ ವರ್ಷ ಕಳೆದವು ನೋಡ್ರಿ. ನನಗೆ ಮುರುಘಾಮಠದಲ್ಲಿ ಪ್ರವೇಶ ದೊರೆಯಿತು. ಮುರುಘಾಮಠದ ಮೃತ್ಯುಂಜಯ ಸ್ವಾಮಿಗಳ ವಿರಕ್ತ ಜೀವನ ನನ್ನ ಮೇಲೆ ಬಹಳ ಪ್ರಭಾವ ಬೀರಿತು. ವಚನ ಸಾಹಿತ್ಯದ ಪ್ರಥಮ ಪರಿಚಯ, ಅಲ್ಲಿ ನನಗಾಯಿತು.

೧೭. ಆರ್.ಎಲ್.ಎಸ್. ಹೈಸ್ಕೂಲಿನ ಹೆಡ್‌ಮಾಸ್ತರ್ ಆದ, ವೀ.ರು. ಕೊಪ್ಪಳ ಅವರು ನನ್ನ ಸಾಹಿತ್ಯದ ಒಲವಿಗೆ ತುಂಬ ಪ್ರೋತ್ಸಾಹಿಸಿದರು. ಹೈಸ್ಕೂಲಿನ ಲೈಬ್ರರಿಯಲ್ಲಿದ್ದ ಬೇಂದ್ರೆ ಅವರ 'ಗರಿ' ಕುವೆಂಪು ಅವರ 'ನವಿಲು' ಕಡೆಂಗೊಡ್ಲು ಶಂಕರ ಭಟ್ಟರ 'ನಲ್ಮೆ' ಸಂಗ್ರಹಗಳನ್ನು ನನಗೆ ಓದಲು ಕೊಡುತ್ತಿದ್ದರು, ಮಧುರಚೆನ್ನರ 'ನನ್ನನಲ್ಲ'ವೂ ಇತ್ತು. ಇವನ್ನೆಲ್ಲ ನಾನು ಓದುವಾಗ ಮಧುರ ಚೆನ್ನರ 'ನನ್ನನಲ್ಲ' ಬಹಳ ಹಿಡಿಸಿಬಿಟ್ಟಿತು. ಹೈಸ್ಕೂಲ್ ಮಿಸಲೆನಿಯಲ್ಲಿ ಆಗಲೇ ನನ್ನ ಕವಿತೆಗಳು ಪ್ರಕಟವಾಗತೊಡಗಿದವು-ಕೊಪ್ಪಳ ಮಾಸ್ತರರ ಪ್ರೋತ್ಸಾಹದಿಂದ.

ನಾನು ಹೈಸ್ಕೂಲು ತರಗತಿಗಳು ಮುಗಿದ ಕೂಡಲೆ, ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿದ್ದ ಶಾಂತೇಶ ವಾಚನಾಲಯಕ್ಕೆ ಹೋಗಿ, ದಿನಪತ್ರಿಕೆ, ವಾರಪತ್ರಿಕೆ, ಮಾಸ ಪತ್ರಿಕೆಗಳನ್ನು ತಿರುವಿ ಹಾಕುತ್ತಿದ್ದೆ. ಬೇಂದ್ರೆಯವರ ಭಾಷಣ ಹಾಗೂ

ಕಾವ್ಯವಾಚನಗಳನ್ನು, ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಕೇಳುತ್ತಿದ್ದೆ. ಬೇಂದ್ರೆಯವರು ತಮ್ಮದೇ ಆದ ಗತ್ತಿನಲ್ಲಿ, ಕವಿತೆಗಳನ್ನೋದುತ್ತಿದ್ದರು. ಹೀಗೆ ಮುರುಘಾಮಠ, ಕರ್ನಾಟಕ ವಿದ್ಯಾವರ್ಧಕ ಸಂಘ, ನನ್ನ ಸಾಹಿತ್ಯಿಕ-ಸಾಂಸ್ಕೃತಿಕ ಜೀವನದಲ್ಲಿ ಬಹಳ ಮಹತ್ವದ ಪಾತ್ರ ವಹಿಸಿದವು.

೧೯. ನಾನು ಹೈಸ್ಕೂಲಿನಲ್ಲಿದ್ದಾಗಲೇ ಸ್ಕಾಲರ್‌ಶಿಪ್ ಪರೀಕ್ಷೆಗೆ ಕೂತಿದ್ದೆ. Intermediateನಲ್ಲಿ ೧ನೇ ನಂಬರು ಬಂದು, ತಿಂಗಳಿಗೆ ೫ ರೂ. ಸ್ಕಾಲರ್‌ಶಿಪ್ ದೊರೆಯಿತು. ನಾನು ಮ್ಯಾಟ್ರಿಕ್ ಪಾಸಾದ ನಂತರ ಕರ್ನಾಟಕ ಕಾಲೇಜಿಗೆ ಸೇರಿಕೊಂಡೆ. ಅಲ್ಲಿಯೂ ಸ್ಕಾಲರ್‌ಶಿಪ್ ಮುಂದುವರಿಯಿತು. ಹೀಗೆ ಮನೆಯವರಿಗೆ ಭಾರವಾಗದಂತೆ ಸ್ಕಾಲರ್‌ಶಿಪ್ ಹಣದಿಂದಲೇ ನನ್ನ ಶಿಕ್ಷಣ ಮುಂದುವರಿಯಿತು. ತಂದೆಯವರಿಗೆ ಇದರಿಂದ ಸಂತೋಷವೇ ಆಯಿತು.

೨೦. ಅಷ್ಟೊತ್ತಿಗೆ, ಬೇಂದ್ರೆಯವರು ಸೊಲ್ಲಾಪುರ ಕಾಲೇಜಿಗೆ, ಕನ್ನಡ ಅಧ್ಯಾಪಕರಾಗಿ ಹೋದರು.

ಪ್ರೊ. ಶಿ.ಶಿ. ಬಸವನಾಳರ 'ಜಯಕರ್ನಾಟಕ' ಬೆಟಗೇರಿ ಕೃಷ್ಣಶರ್ಮರ 'ಜಯಂತಿ' ಮಾಸ್ತಿಯವರ 'ಜೀವನ' ಮಾಸಿಕಗಳಲ್ಲಿ ನನ್ನ ಕವಿತೆಗಳು ಪ್ರಕಟವಾಗತೊಡಗಿದವು. ಹಿರೇಮಲ್ಲೂರು ಈಶ್ವರನ್‌ರು ತಮ್ಮ ಕಲ್ಪನಾಗ್ರಂಥಮಾಲೆಯಲ್ಲಿ ನನ್ನ ಪ್ರಥಮ ಕವನ ಸಂಕಲನ 'ಕಾವ್ಯಾಕ್ಷಿ'ಯನ್ನು ಪ್ರಕಟಿಸಿದರು. ಸೊಲ್ಲಾಪುರದಲ್ಲಿದ್ದ ಬೇಂದ್ರೆಯವರು ಅದಕ್ಕೆ ಮುನ್ನುಡಿ ಬರೆದರು. ಅದು ನಾನು ಜ್ಯೂ. ಬಿ.ಎ. ದಲ್ಲಿದ್ದಾಗ (೧೯೪೯) ಪ್ರಕಟವಾಯಿತು.

೨೧. ನಾನು ಕಾಲೇಜಿನಲ್ಲಿ ಕಲಿಯುವಾಗ, ಕೀರ್ತಿನಾಥಕುರ್ತುಕೋಟಿ, ಶಂಕರ ಮೊಖಾಶಿ ಪುಣೇಕರ, ವಸಂತಕವಲಿ, ಶಿವೇಶ್ವರ ದೊಡ್ಡಮನಿ, ಬಸವರಾಜ ಕಟ್ಟೀಮನಿ-ಮೊದಲಾದ ಸ್ನೇಹಿತರನ್ನು ಕೂಡಿಕೊಂಡು, 'ಕಾವ್ಯಾನುಭವ ಮಂಟಪ'ವನ್ನು, ನನ್ನ ಅಭ್ಯಾಸದ ಕೋಣೆಯಲ್ಲೇ ಪ್ರಾರಂಭಿಸಿದೆವು. ಆಗ ನಾನು ಮಾಳಮಡ್ಡಿಯಲ್ಲಿರುವ ಜೋಗ್ ಬಂಗ್ಲೆಯಲ್ಲಿ ರೂಮಿನಲ್ಲಿ ಬಾಡಿಗೆಗಿದ್ದೆ. ೧೯೫೦ರ ಮೇ ತಿಂಗಳ ಸೂಟಿಯಲ್ಲಿ ಸೊಲ್ಲಾಪುರದಿಂದ ಬೇಂದ್ರೆಯವರು ಕೊಲ್ಲಾಪುರದಿಂದ ಗೋಕಾಕರು ಧಾರವಾಡಕ್ಕೆ ಬಂದು ಎನ್.ಕೆ. ದೀಕ್ಷಿತರ ಮನೆಯಲ್ಲಿ ಇಳಿದುಕೊಂಡಿದ್ದರು.

೨೨. ನಮ್ಮ 'ಕಾವ್ಯಾನುಭವ ಮಂಟಪ'ಕ್ಕೆ ಅತಿಥಿಗಳಾಗಿ ಬರಬೇಕೆಂದು ಕೇಳಿದಾಗ ಅವರು ಒಮ್ಮೆಲೆ ಒಪ್ಪಿಕೊಂಡರು. ಅವರಿಬ್ಬರೂ ನಮ್ಮ ಕೂಡ ೨-೩ ತಾಸು ಕಳೆದು ತಮ್ಮ ಭಾಷಣ, ಕಾವ್ಯ ವಾಚನ ನಮ್ಮ 'ಕಾವ್ಯಾನುಭವಮಂಟಪ' ಸದಸ್ಯರ ಕಾವ್ಯ ವಾಚನ- ಎಲ್ಲಾ ನಡೆಯಿತು. ಮರು ವರ್ಷ ನಾನು ಸೀನಿಯರ್ ಬಿ.ಎ. ದಲ್ಲಿದ್ದಾಗ (೧೯೫೦) ಪ್ರಕಟವಾದ ನನ್ನ 'ಭಾವಜೀವಿ' ಖಂಡಕಾವ್ಯಕ್ಕೆ ಕೊಲ್ಲಾಪುರ ರಾಜಾರಾಮ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಗೋಕಾಕರೇ ದೀರ್ಘವಾದ ಮುನ್ನುಡಿ ಬರೆದರು. ಅದರ ಮುನ್ನುಡಿಯ ಪ್ರಾರಂಭದಲ್ಲಿ ಅವರು ಹೀಗೆ ಹೇಳಿದ್ದಾರೆ: "ಧಾರವಾಡದ ಕಾವ್ಯಾನುಭವಮಂಟಪದ ಶ್ರೀ ಚೆನ್ನವೀರ ಕಣವಿಯವರನ್ನು ನಾನು ಕಳೆದ ಮೇ ತಿಂಗಳಲ್ಲಿ ಕಂಡೆ. ಅವರ ಸಹೃದಯತೆ, ವಿನಯ ಹಾಗೂ ಸೌಜನ್ಯಗಳು ನನ್ನ ಮನಸ್ಸನ್ನು ಆಕರ್ಷಿಸಿದವು. ಸಮಾನ ಧರ್ಮಿಗಳಾದ ಸ್ನೇಹಿತರೊಡನೆ ಬೆರೆತುಕೊಂಡು ಏಕೀಕೃತ ಕರ್ನಾಟಕದ ಎಳೆಯರ ಒಂದು ಮೇಳದಂತೆ, ಆದರ್ಶದೆಡೆಗೆ ನಡೆದ, ಈ ಉತ್ಸಾಹಿಗಳ ಗುಂಪು, ಧಾರವಾಡದಲ್ಲಿಯ ನನ್ನ ಜೀವನವನ್ನು ನೆನಪಿಗೆ ತಂದು, ನನ್ನನ್ನು ಪುಲಕಿತನನ್ನಾಗಿ ಮಾಡಿತು" ಇತ್ಯಾದಿ.

೨೩. ನಾನು Intermediate artsನಲ್ಲಿದ್ದಾಗ (೧೯೪೭) ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು. ಆಗ ಕಾಲೇಜ್ ಮೈದಾನದಲ್ಲಿ, ಶ್ರೀ ದಿವಾಕರ ಅವರ ಅಧ್ಯಕ್ಷತೆಯಲ್ಲಿ ದೊಡ್ಡ ಸಾರ್ವಜನಿಕ ಸಭೆ ನಡೆಯಿತು. ಆಗ ನಾನು 'ಬಂಧದಿಂ ಬಿಡುಗಡೆಗೆ - ಆಗಸ್ಟ ೧೫' ಎಂಬ ಕವಿತೆಯನ್ನೋದಿದೆ. ವಿದ್ಯಾರ್ಥಿ ಸಮೂಹ ಹಾಗೂ ಸಾರ್ವಜನಿಕರು ನನ್ನ ಕಾವ್ಯ ವಾಚನಕ್ಕೆ ದೀರ್ಘ ಚಪ್ಪಾಳೆಯ ಮೂಲಕ, ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿತು. ಇದು ನನ್ನ ಮೊದಲ ಸಾರ್ವಜನಿಕ ಕಾವ್ಯವಾಚನ. ಇದರಿಂದ ನನಗೆ ದೊರೆತ ಪ್ರೋತ್ಸಾಹವನ್ನು ನಾನು ಎಂದೂ ಮರೆಯಲಾರೆ.

೨೪. 'ನಡೆದು ಬಂದ ದಾರಿಯ ಕಡೆಗ, ಕಣ್ಣ ಹೊರಳಿಸಬೇಡ' ಅಂತ ಅಡಿಗರೇನೋ ಬರೆದರು.

ಆದರೆ ಪರಂಪರೆಯನ್ನೇ ಧಿಕ್ಕರಿಸುವದು ಹೇಗೆ? ಅದರಿಂದ ನಮ್ಮ ಅಸ್ತಿತ್ವವೇ ಇಲ್ಲದಂತಾಗುತ್ತದೆ. ನೀವೇನೊ ಕೇಳಿದಿರಿ : 'ಬದುಕಿನ ನಡೆದು ಬಂದ ದಾರಿಯನ್ನು ಹಿಂತಿರುಗಿ ನೋಡಿದಾಗ, ನಿಮಗೇನು ಅನ್ನಿಸುತ್ತದೆ' ಎಂದು. ಅದಕ್ಕೆ ಇಷ್ಟು ದೀರ್ಘವಾಗಿ ಪ್ರಸ್ತಾಪಿಸಬೇಕಾಯಿತು ಇದಕ್ಕೆ ನಿಮಗೆ ಬೇಸರ ವಿಲ್ಲವಷ್ಟೆ? ಇನ್ನು ಮುಂದಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸುತ್ತೇನೆ.

'ಏನಾದರೂ ಇರಲಿ ಹಾಡು ನಿಲ್ಲಿಸಬೇಡ' ಎಂಬ ಕಾವ್ಯಶ್ರದ್ಧೆಯಿಂದ ಬರೆಯುತ್ತ ಬಂದ ನಿಮ್ಮ ಕವಿಸಂವೇದನೆಯ ಜೀವಂತಗತಿಯ ನಿರಂತರತೆಯ ಕುರಿತು ತಿಳಿಸುವಿರಾ?

'ಕಾವ್ಯಾಕ್ಷಿ'ಯ ಮುನ್ನುಡಿಯಲ್ಲಿ, ನನ್ನ ಕಾವ್ಯದ 'ಜೀವಂತಗತಿ'ಯನ್ನು ಮೊದಲು ಗುರುತಿಸಿದವರು ಬೇಂದ್ರೆಯವರು. 'ಕವಿಸಂವೇದನೆ', 'ಕಾವ್ಯದ ನಿರಂತರಗತಿ' ಎಂಬುದು, ನಮ್ಮ ಕಣ್ಣು ಕಿವಿ, ಅನುಭವ, ಅಂತಃಕರಣ - ಎಲ್ಲವೂ ಒಟ್ಟುಗೂಡಿದಾಗ, ಅದಕ್ಕೆ ಪ್ರತಿಕ್ರಿಯೆಯಾಗಿ 'ಸಂವೇದನೆ' ಮೂಡುತ್ತದೆ.

ಕಾವ್ಯ ವೃತ್ತಿಯಾಗದೆ, ಪ್ರವೃತ್ತಿಯಾದಾಗ, ನಿತ್ಯಶ್ವಾಸೋಛ್ವಾಸದಂತೆ ಉಸಿರಾಟವಾಗುತ್ತದೆ. ಹಾಗೆ ಉಸಿರಾಟವಾದಾಗಲೇ ನಿರಂತರತೆ ಮೈದೋರುತ್ತದೆ. 'ಏನಾದರೂ ಇರಲಿ, ಹಾಡು ನಿಲ್ಲಿಸಬೇಡ' ಎಂಬುದು ಹಕ್ಕಿಯ ಹಾಡಿನಂತೆ ಸಹಜವಾಗಿರುತ್ತದೆ. ಮುಂದೆ, 'ದೀಪ ತಟ್ಟನೆ ಆರಿ ಹೋಗಬಹುದು' ಎಂಬ ಸಾಲು ಬರುತ್ತದೆ. ಮೃತ್ಯು ಹೇಳಿ ಕೇಳಿ, ಬರುವದಿಲ್ಲ, ಪಟ್ಟನೆ ಬರುತ್ತದೆ.

ಅದಕ್ಕೇ ಬೇಂದ್ರೆಯವರು 'ಎನ್ನಪಾಡೆನಗಿರಲಿ, ಅದರ ಹಾಡನ್ನಷ್ಟೆ ನೀಡುವೆನು ರಸಿಕ ನಿನಗೆ' ಎಂದದ್ದು.

ನಿಸರ್ಗದ ಕುರಿತು ಕವಿತೆ ಬರೆಯುವದೆಂದರೆ ನವೋದಯಕ್ಕೆ ಹಿಂತಿರುಗಿದಂತೆ ಎಂಬ ಭಾವನೆ ಇವತ್ತಿನ ಕವಿಗಳಲ್ಲಿದೆ. ಆದರೆ ನೀವು ನಿಮ್ಮ ಮೊದಲ ಕವಿತೆ 'ಸೃಷ್ಟಿಯ ಸೊಬಗು' ದಿಂದ ಇಂದಿನವರೆಗೆ ನಿಸರ್ಗವನ್ನು ಕವಿತೆಗಳಲ್ಲಿ ತಂದದ್ದು ಹೇಗೆ?

'ನಿಸರ್ಗ, ಪ್ರಕೃತಿ-ಪರಿಸರ ಕುರಿತು ಬರೆಯುವದು ಇಂದಿನ ಅಗತ್ಯವೆಂದು ನಾನು ಭಾವಿಸಿದ್ದೇನೆ. ನಾವು ಶಾಂತಿ, ನೆಮ್ಮದಿಗೆ ಹೋಗಬೇಕಾದರೆ, ಪ್ರಕೃತಿಯ ಮಡಿಲಿಗೇ ಹೋಗಬೇಕಾಗುತ್ತದೆ. ನವೋದಯದ ನಿಜವಾದ ಕವಿಗಳು ಪ್ರಕೃತಿ ಸೌಂದರ್ಯವಷ್ಟೇ ಕುರಿತು ಕಾವ್ಯ ರಚನೆ ಮಾಡಲಿಲ್ಲ ಅದರ ರುದ್ರ-ಭಯಂಕರತೆಯನ್ನೂ ಕುರಿತು ಬರೆದರು. ನಿರ್ಸಗವನ್ನು ಅವರು ನಾನಾ ದೃಷ್ಟಿಯಲ್ಲಿ ನೋಡಬಯಸಿದರು.

ನಿಸರ್ಗವನ್ನು ಕವಿತೆಗಳಲ್ಲಿ 'ತಂದದ್ದು' ಅಲ್ಲ, ಅದೇ ಸ್ವಾಭಾವಿಕವಾಗಿ ಬರುತ್ತದೆ. 'ಸೃಷ್ಟಿಯ ಸೊಬಗು' ಕವಿತೆ, ನಾನು ಹೈಸ್ಕೂಲಿನಲ್ಲಿದ್ದಾಗ ಬರೆದದ್ದು. ಅಲ್ಲಿಂದ ಹಿಡಿದು, ಇಲ್ಲಿಯವರೆಗೂ ನನಗೆ ಶಕ್ತಿಯನ್ನೂ ಸಾಂತ್ವನವನ್ನೂ ಪ್ರಕೃತಿ ನನಗೆ ನೀಡಿದೆ.

ಪ್ರಗತಿಶೀಲ ಸಾಹಿತ್ಯದ ಸಂದರ್ಭದಲ್ಲಿಯೂ ಭಾವಗೀತ ಬರೆದವರಿದ್ದಾರೆ.

ಸು.ರಂ. ಯಕ್ಕುಂಡಿಯವರನ್ನು ನಾವು ಈ ಸಂದರ್ಭದಲ್ಲಿ ಸ್ಮರಿಸಬೇಕು.

'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ ಕಣ್ಣೀಗು ಕಣ್ಣಾಗಿ ಒಳಗಿಹುದು' ಅಂತ ಬೇಂದ್ರೆ ಹೇಳಿದರು. ಅದು ನಮ್ಮ ದೃಷ್ಟಿಗೆ ಹೊಸ ದೃಷ್ಟಿಯನ್ನು ಕೊಡುತ್ತದೆ.

ನೀವು ಕವಿತೆ ಬರೆಯಲು ಆರಂಭಿಸಿದಾಗ ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳಿ ಜೋರಾಗಿತ್ತು. ಆದರೆ ಭಾವಗೀತೆ ನಿಮ್ಮನ್ನು ಆಕರ್ಷಿಸಲು ಕಾರಣವೇನು?

ಸ್ವತಃ ಅ.ನ.ಕೃ. ಅವರೇ ಪ್ರಗತೀಶೀಲ ಕವಿತೆಗಳ ಸಂಗ್ರಹಕ್ಕೆ 'ರಸಋಷಿ' ಅಂತ ಹೆಸರು ಕೊಟ್ಟಿದ್ದಾರೆ. ಪ್ರಗತಿಶೀಲ ಸಾಹಿತ್ಯಕ್ಕೆ ಇದು ವಿರುದ್ಧವಾದದ್ದು. ಮೊದಲ ಪ್ರಣಯ ಗೀತೆಗಳ ಸಂಕಲನವನ್ನೇ ಅ.ನ.ಕೃ. ಅವರು ಕೊಟ್ಟವರು. ಈಗ ಭಾವಗೀತಕ್ಕೆ ಮತ್ತೆ ಪೂರ ಬಂದಿದೆ. ಮನುಷ್ಯನಿಗೆ ಭಾವವಿರುವತನಕ ಭಾವಗೀತ ಇದ್ದದ್ದೇ. ನವ್ಯ ಕವಿಗಳೆನ್ನುವವರೆಲ್ಲ ಭಾವಗೀತೆ ಬರೆದಿದ್ದಾರೆ. ಅದರಲ್ಲಿಯೇ ವಿವಿಧ ಪ್ರಯೋಗಗಳನ್ನು ಮಾಡಿದ್ದಾರೆ. ರಾಮಚಂದ್ರ ಶರ್ಮಾರೊಬ್ಬರೇ ಇದಕ್ಕೆ ಅಪವಾದ. ಅಡಿಗರು 'ಮೋಹನಮುರಲಿ'ಯಂಥ ಅತ್ಯುತ್ತಮ ಭಾವಗೀತವನ್ನು ಬರೆದಿದ್ದಾರೆ. 'ಯಾವ ಬೃಂದಾವನವು ಕರೆಯಿತು ನಿನ್ನ ಕಣ್ಣಿನ ನುಣ್ಣನು' ಎಂಬ ಸಾಲಿನಲ್ಲಿ ಕೆಲವರು ಅಧ್ಯಾತ್ಮವನ್ನೂ ಅರಸಬಹುದು. ಕೆಲವರು ಕವಿಗಳು ಭಾವಗೀತಗಳ ಧ್ವನಿಸುರುಳಿಯನ್ನು, ಸಿ.ಡಿ.ಗಳನ್ನು ತಂದಿದ್ದಾರೆ.

ಆಧುನಿಕ ಕನ್ನಡ ಕಾವ್ಯದ ಮುಖ್ಯ ವಸ್ತುಗಳಾದ ಕಾಲ, ನಿಸರ್ಗ, ಪ್ರೇಮ, ಅಧ್ಯಾತ್ಮ ಇವುಗಳಲ್ಲಿ ಕವಿತೆ ರಚಿಸುತ್ತ ಬಂದ ನಿಮ್ಮ ಪ್ರಧಾನ ಕಾಳಜಿ ಯಾವುದು?

ಅವೆಲ್ಲವೂ ನನ್ನ ಪ್ರಧಾನ ಕಾಳಜಿಗಳೇ. ನನ್ನ 'ಕಾಲನಿಲ್ಲುವ ದಿಲ್ಲ' ಎನ್ನುವ ಕವಿತೆ ಇದಕ್ಕೆ ಸಾಕ್ಷಿ. 'ಕಾಲ' ನಿಜಕ್ಕು ಒಂದು ಸಾಕ್ಷಿ. ಎಲ್ಲವನ್ನೂ ಅದು ಕಣ್ತೆರೆದು ನೋಡುತ್ತದೆ. 'ನರ್ತನೆಯ ವರ್ತನಕೆ ಪರಿವರ್ತನೆಯ ಸೊಬಗು' ಬದಲಾವಣೆಯು ಜೀವನದಲ್ಲಿ ಸಹಜವಾಗಿ ಬರುತ್ತದೆ. ಅದು ನಮಗಾಗಿ ಕಾಯುವದಿಲ್ಲ. 'ಕಾಲ' 'ನಿಸರ್ಗ' 'ಕಾಮ' ಅಧ್ಯಾತ್ಮ' ಇವೆಲ್ಲ ಪರಸ್ಪರ ಪೋಷಕಗಳೇ ಎಂದು ನಾನು ಭಾವಿಸಿದ್ದೇನೆ.

ಕನ್ನಡದಲ್ಲಿ ಬಹುಸಂಖ್ಯೆಯ ಸುನೀತಗಳನ್ನು ಬರೆದ ನೀವು ಸುನೀತಗಳ ಸಾಮ್ರಾಟರೆಂದೇ ಖ್ಯಾತರು. ಸುನೀತಗಳಲ್ಲಿ ಪ್ರಯೋಗಶೀಲತೆಯನ್ನೂ, ಅಭಿವ್ಯಕ್ತಿ ನಾವೀನ್ಯತೆಯನ್ನೂ ನೀವು ಸಾಧಿಸಿದ್ದೀರಿ, ಸುನೀತಗಳ ಸೌಷ್ಠವ ನಿಮಗೆ ಪ್ರಿಯವಾಗಲು ಕಾರಣವೇನು?

ನಾನು ಬರೆದ ಸಾನೆಟ್ಟುಗಳಲ್ಲಿ ಮೂರು ಮುಖ್ಯ ವಸ್ತುಗಳಿವೆ.

ವ್ಯಕ್ತಿಚಿತ್ರಗಳು, ನಿಸರ್ಗಸ್ಪಂದನ, ಜಿಜ್ಞಾಸೆ. ಈಚೆಗಂತೂ ಹೆಚ್ಚಾಗಿ ಜಿಜ್ಞಾಸೆಯನ್ನು ಗುರುತಿಸಬಹುದು. 'ಸಾನೆಟ್ಟುಗಳ ಮೂಲಕ, ಸಾಹಿತ್ಯ ಚರಿತ್ರೆಯನ್ನೇ ಕಟ್ಟಿ ಬಿಟ್ಟದಿರಾ' ಎಂದು ಶಿವರುದ್ರಪ್ಪನವರು ಒಮ್ಮೆ ಹೇಳಿದರು.

ಅಂದಂತೆ ನಾನು ಹಳಕಟ್ಟಿ, ಗೋವಿಂದಪೈ, ಮುದ್ದಣ, ಆಲೂರುವೆಂಕಟರಾರು, ಬೇಂದ್ರೆ, ಗೋಕಾಕ, ಮುಗಳಿ, ಕರ್ಕಿ ಮುಂತಾದ ಎಲ್ಲರ ಬಗ್ಗೆ ಬರೆದಿದ್ದೇನೆ. ಜಿ.ವಿ. ಅತ್ರಿಯವರು ಏರ್ಪಡಿಸಿದ ಒಂದು ಅಭಿನಂದನ ಸಮಾರಂಭದಲ್ಲಿ ಅವರೇ ನನಗೆ, 'ಸುನೀತ ಸಾಮ್ರಾಟ' ಎಂಬ ಬಿರುದನ್ನೂ ಕೊಟ್ಟರು.

ಶ್ರೀಯವರ 'ಇಂಗ್ಲಿಷ್ ಗೀತಗಳು' ಕಾವ್ಯದ ಬಗ್ಗೆ ನನ್ನಲ್ಲಿ ಕೇವಲ ಆಸಕ್ತಿ ಮೂಡಿಸಿತು. ಆದರೆ ಅದು ಅಷ್ಟು ಪ್ರಭಾವವನ್ನು ಬೀರಲಿಲ್ಲ. ನಿಜವಾಗಿಯೂ ಹೆಚ್ಚು ಪ್ರಭಾವಿಸಿದ್ದು ಶ್ರೀಯವರ ಸಂಪಾದನೆ ಮಾಡಿದ 'ಕನ್ನಡದ ಬಾವುಟ' ನಾನು ಹೈಸ್ಕೂಲಿನಲ್ಲಿದ್ದಾಗ ನನಗೆ ಅದು ಬಹುಮಾನವಾಗಿ ಬಂದಿತು. ನಮ್ಮ ಇಡೀ ಕನ್ನಡ ಕಾವ್ಯಪರಂಪರೆಯೆ - ಶಾಸನಗಳನ್ನು ಹಿಡಿದುಕೊಂಡು, ಹಿಂದಿನ ಕವಿಗಳ ಕಾವ್ಯಭಾಗಗಳನ್ನೊಳಗೊಂಡು, ಹೊಸಗನ್ನಡ ಕವಿತೆಯಲ್ಲಿ ಪ್ರಮುಖರಾದವರು - ಎಲ್ಲರದೂ ಇದೆ. ಕಾವ್ಯದ ಬಗ್ಗೆ ಒಟ್ಟು ಕಲ್ಪನೆಯೆ ನಮ್ಮ ಕಣ್ಣೆದುರಿಗೆ ಬರುತ್ತದೆ. ಈ ಸಂಪಾದನೆಯಲ್ಲಿ ಏನೋ ಹೊಸ ರೀತಿ ಇತ್ತೆಂದು ನನ್ನ ಭಾವನೆ

ಆ ಹೊತ್ತಿಗೆ, ಗೋವಿಂದ ಪೈಗಳು ಸಾನೆಟ್ ಬರೆದಿದ್ದರು. ಅದಕ್ಕೆ 'ಚತುರ್ದಶಪದಿ' ಎಂದು ಹೆಸರಿಟ್ಟಿದ್ದರು. ಮಾಸ್ತಿಯವರ 'ಮಲಾರ' ಇತ್ತು. ಬೇಂದ್ರೆಯವರ 'ಉಯ್ಯಾಲೆ' ಬಂದಿತ್ತು. ಕುವೆಂಪು, ಗೋಕಾಕ್, ಪು.ತಿ.ನ. ಸಾನೆಟ್ ಬರೆದಿದ್ದರು. ಇಂಗ್ಲಿಷಿನಲ್ಲಿಯೂ ನಾನು ವರ್ಡ್ಸ್‌ವರ್ಥ್‌ನ ಸಾನೆಟ್ಟುಗಳನ್ನು ಓದಿದ್ದೆ. ಇದೆಲ್ಲಾ ನೋಡಿಕೊಂಡಾಗ, ನನಗೆ ಕುವೆಂಪುರವರ 'ಕೃತ್ತಿಕೆ' ಬೇಂದ್ರೆಯವರ 'ಉಯ್ಯಾಲೆ' ಬಹಳ ಮನಸ್ಸಿಗೆ ಹಿಡಿಸಿದವು.

ಸಾನೆಟ್ಟಿನಲ್ಲಿ ಪ್ರಾಸದ ಕಟ್ಟುನಿಟ್ಟುಗಳೇನಿವೆಯಲ್ಲ, ಅವನ್ನೆಲ್ಲ ಕುವೆಂಪು ಪಾಲಿಸಿಕೊಂಡು ಬಂದಿದ್ದಾರೆ.

ಬೇಂದ್ರೆಯವರು ಸ್ವಲ್ಪ ಸ್ವಾತಂತ್ರ್ಯವಹಿಸಿದ್ದಾರೆ. ೮+೬ ಸಾಲುಗಳನ್ನಿಟ್ಟು ಅವರು 'ಅಷ್ಟ ಷಟ್ಪದಿ' ಎಂದದ್ದು. ಮಾಸ್ತಿಯವರು ಅದಕ್ಕೆ 'ಸುನೀತ' ಎಂದು ಕರೆದರು. 'ಸುನೀತ' ಸಾನೆಟ್ಟಿನ ತದ್ಭವ ದಂತಿದೆ. ಮೊದಲಿನಿಂದಲೂ ನಾನು ಏನು ಪ್ರಯತ್ನ ಮಾಡಿದ್ದೆ, ಅಂದರೆ ಈ ಭಾವಗೀತೆಗಳು ಭಾವೋದ್ರೇಕಕ್ಕೆ ಒಳಗಾಗಬಾರದು. ಅದನ್ನು ಹಿಡಿತದಲ್ಲಿಡಬೇಕು ಅಂತ.

ಯಾವಾಗ ನಾನು ಸಾನೆಟ್ ಬರೆಯಲಿಕ್ಕೆ ಪ್ರಾರಂಭಮಾಡಿದೆ, ಇದು ತಾನೇ ತಾನಾಗಿ ಕಂಟ್ರೋಲ್ ಮಾಡಲಿಕ್ಕೆ ಹತ್ತಿಬಿಟ್ಟಿತು.

ಭಾವ-ಬುದ್ಧಿಯ ಒಂದು ಸಮನ್ವಯವಾಗಿ ಹೇಳಬೇಕಾದ್ದನ್ನು ಸಂಕ್ಷಿಪ್ತವಾಗಿ, ಸಾರವಾಗಿ ಆದಷ್ಟು ಸಮಗ್ರವಾಗಿ, ಹೇಳಬೇಕು. ಕಾವ್ಯದ ಕಸಬುಗಾರಿಕೆಗೆ ಸಾನೆಟ್ಟಿನಲ್ಲಿ

ಹೆಚ್ಚು ಅವಕಾಶವಿದೆ. ನನ್ನ ಮೊದಲ ಕವನ ಸಂಕಲನ 'ಕಾವ್ಯಾಕ್ಷಿ'ಯಲ್ಲಿಯೇ ಏಳೆಂಟು ಸಾನೆಟ್ಟುಗಳಿವೆ. ಉಳಿದ ಸಂಗ್ರಹಗಳಲ್ಲಿಯೂ ಸಾಕಷ್ಟಿವೆ. ಈಗಲೂ ನಾನು ಆಗಾಗ ಸಾನೆಟ್ ಬರೆಯುತ್ತೇನೆ. ಬೇಂದ್ರೆಯವರು 'ಉಯ್ಯಾಲೆ'ಯ ನಂತರವೂ ಸಾನೆಟ್‌ಗಳನ್ನು ಯಶಸ್ವಿಯಾಗಿಯೇ ಬರೆದರು.

ಅವನ್ನೇ ನನ್ನ ಒಂದು ಸಂಗ್ರಹವಾಗಿ ಲೋಹಿಯಾ ಪ್ರಕಾಶನದ ಚೆನ್ನಬಸವಣ್ಣ, 'ಸುನೀತ ಸಂಪದ' ಎನ್ನುವ ಹೆಸರಿನಲ್ಲಿ ಪ್ರಕಟಿಸಿದರು. ಅದು ಈಗ ಎರಡು ಮುದ್ರಣಗಳನ್ನು ಕಂಡಿದೆ. ಸುನೀತಗಳ ಬಗ್ಗೆ ಆಕರ್ಷಣೆಯಾಗಲು ಇದೇ ಕಾರಣ. ಈಚೆಗೆ ಎಚ್.ಎಸ್. ವೆಂಕಟೇಶಮೂರ್ತಿಯವರು, ಸಾಲುಗಳಲ್ಲಿಯ ಮಾತ್ರೆಗಳನ್ನು ಹೆಚ್ಚು ಕಡಿಮೆಮಾಡಿ, ಸಂಗೀತಕ್ಕೆ ಹೊಸದಾರಿ ತೆರೆದಿದ್ದಾರೆ.

ಕರ್ನಾಟಕ ಸರಕಾರ ಕಣವಿ ಕಾವ್ಯ ಭಂಡಾರ ಮತ್ತು ಕಣವಿ ಗದ್ಯಭಂಡಾರದ ಎರಡೆರಡು ಸಂಪುಟಗಳನ್ನು ಪ್ರಕಟಿಸಿದೆ. ಇತ್ತೀಚೆ ನಿಮ್ಮ ಗದ್ಯ ಕೃತಿಗಳು ಹೆಚ್ಚಾಗಿ ಬರುತ್ತಿವೆ. ಗದ್ಯ ಬರಹಗಳತ್ತ ಒಲವು ಬೆಳೆಯಲು ಕಾರಣವೇನು?

ನಾನು ಗದ್ಯದಲ್ಲಿಯೂ ಸಾಕಷ್ಟು ಬರೆದಿದ್ದೇನೆ-ಪ್ರಬಂಧ, ವಿಮರ್ಶೆ ಇತ್ಯಾದಿ. ಒಟ್ಟು ೧೨ ಸಂಗ್ರಹಗಳು ಪ್ರಕಟವಾಗಿವೆ. ಸಂಪಾದಿತ ಕೃತಿಗಳು ಹಲವಾರಿವೆ.

ಮುನ್ನುಡಿಗಳ ಸಂಗ್ರಹವೂ ಬಂದಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅದನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ('ಕಣವಿ ಸಮಗ್ರ ಗದ್ಯ' ಎಂಬ ಹೆಸರಿನಲ್ಲಿ)

ಕವಿತೆಗಳನ್ನು 'ಕಣವಿ ಕಾವ್ಯ ಭಂಡಾರ' ಎರಡು ಸಂಪುಟಗಳನ್ನು ಅವರೇ ಪ್ರಕಟಿಸಿದ್ದಾರೆ. ನಂತರ, ಮೈಸೂರಿನ 'ಸಂವಹನ ಪ್ರಕಾಶನ' 'ಕಣವಿ ಸಮಗ್ರ ಕಾವ್ಯ'ದ ೫ನೇ ಆವೃತ್ತಿ ತಂದಿದೆ. ತ.ವೆಂ. ಸ್ಮಾರಕ ಗ್ರಂಥಮಾಲೆಯ ಛಾಯಾಪತಿಯವರು ನನ್ನ ಎಲ್ಲ ಕವನ ಸಂಗ್ರಹಗಳ ಬಿಡಿ ಬಿಡಿ ಪ್ರತಿಗಳನ್ನು ಹೊರತಂದಿದ್ದಾರೆ. ಕೊಳ್ಳುವವರಿಗೆ ಅನುಕೂಲವಾಗಲಿ ಎಂದು.

ನೀವು ಸ್ವಾತಂತ್ರ್ಯೋತ್ತರ ಭಾರತ ಪ್ರಮುಖ ಕವಿ. ಭಾರತದ ಉಜ್ವಲ ಭವಿಷ್ಯದ ಚಿಂತಕರಾದ ನಿಮ್ಮನ್ನು ಬಹುವಾಗಿ ಕಾಡುತ್ತಿರುವ ರಾಷ್ಟ್ರೀಯ ಸಮಸ್ಯೆಗಳು ಯಾವವು?

೧ನೆಯದು ನದೀ ವಿವಾದ

ಹಿಂದೆ, ಅಟಲ್‌ಜೀಯವರು ಪ್ರಧಾನಮಂತ್ರಿಯಿದ್ದಾಗ ಸಾಧ್ಯವಿರುವ ದೇಶದ ಎಲ್ಲ ನದಿಗಳನ್ನು ಒಂದಕ್ಕೊಂದು ಕೂಡಿಸುವ ಯೋಜನೆಯನ್ನಿಟ್ಟುಕೊಂಡಿದ್ದರು.

ಅದು ಮುಂದುವರಿಯಲಿಲ್ಲ.

ಈಗ ಮಹದಾಯಿ ನದಿ ವಿವಾದ ನಡೆದಿದೆ. ರಾಷ್ಟ್ರೀಯ ಜಲನೀತಿಯೊಂದನ್ನು ಜಾರಿಗೆ ತರುವದು ಅವಶ್ಯವಿದೆ.

ಮೂರನೆಯದು ಗಡಿವಿವಾದ. ಯಾವ ದೇವರು ಬಂದರೂ ಒಂದು ಭಾಷೆಯ ರಾಜ್ಯದ ಗಡಿಗಳನ್ನು ಸರಿಯಾಗಿ ಕೊರೆಯಲಾರರು. ಕನ್ನಡದ ಮಟ್ಟಿಗೆ ಮಹಾಜನ ವರದಿಯೇ ಕೊನೆಯದು. ಇನ್ನೊಂದು ರೈತರ ಆತ್ಮಹತ್ಯೆಯನ್ನು ತಡೆಯುವದು. ಅನ್ನದಾತರಿಗೆ ಅನ್ಯಾಯವಾಗಬಾರದು.

ನೀವು ಕವಿತೆಯ ಸೃಜನಶೀಲತೆ ಮತ್ತು ವಿಮರ್ಶೆಯ ವಿನಯದ ಸಮತೋಲನ ಸಾಧಿಸಿದ್ದು ಹೇಗೆ?

ಪ್ರತಿಯೊಬ್ಬ ಕವಿಯ ಹೊಟ್ಟೆಯಲ್ಲಿ ಒಬ್ಬ ವಿಮರ್ಶಕನಿದ್ದಾನೆ.

ಸ್ವಂತ ಕಾವ್ಯ ವಿಮರ್ಶೆಗೆ ಅದು ರಹದಾರಿ. ವಿಮರ್ಶೆಯಲ್ಲಿಯೂ ಸೃಜನಶೀಲ ಅಂಶಗಳಿವೆ, ಅದನ್ನು ದುಡಿಸಿಕೊಳ್ಳಬೇಕು. ಅದರಿಂದ ಸಮತೋಲನತೆಯನ್ನು ಸಾಧಿಸುವದು ಸಾಧ್ಯವಿದೆ.

ಹಿಂದೆ ಗಮಕಿಗಳ ಮೂಲಕ ಕನ್ನಡ ಕಾವ್ಯ ಜನರ ಹೃದಯಕ್ಕೆ ಹತ್ತಿರವಾಗುತ್ತಿತ್ತು. ಈಗ ಸುಗಮಸಂಗೀತದ ಮೂಲಕ ಕನ್ನಡ ಕವಿಗಳ ಕವಿತೆ ಪ್ರಚಾರ ಪಡೆಯುತ್ತಿದೆ. ಈಗ ದಲಿತಬಂಡಾಯ ಕವಿಗಳೂ ಸುಗಮ ಸಂಗೀತದ ಮೂಲಕ ಜನತೆಯ ಹತ್ತಿರ ಹೋಗಲು ಹವಣಿಸುತ್ತಿದ್ದಾರೆ. ಕನ್ನಡ ಕಾವ್ಯ ಈಗ ಬದಲಾವಣೆಯ ಹಾದಿಯಲ್ಲಿದೆಯೇ?

ಸುಗಮ ಸಂಗೀತದಿಂದ ಶ್ರೀ ಸಾಮಾನ್ಯರ ಹತ್ತಿರ ಕಾವ್ಯ ಹೋಗುವ ಸಾಧ್ಯತೆಯಿದೆ. ದಲಿತ-ಬಂಡಾಯದ ಕವಿಗಳೂ ಹಾಡುಗಳನ್ನು ಬರೆದಿದ್ದಾರೆ. ಸಮಕಾಲೀನ ಸಮಸ್ಯೆಗಳಿಗೆ ತಕ್ಕಂತೆ ಕಾವ್ಯದಲ್ಲಿಯೂ ಬದಲಾವಣೆ ಆಗಬೇಕು. ಅದು ಅನಿವಾರ್ಯ. ಸುಗಮಸಂಗೀತಕ್ಕೆ ನಮ್ಮ ಕಡೆ 'ಕಾವ್ಯಗಾಯನ' ಎನ್ನುತ್ತಿದ್ದರು.

ಹಿಂದೆ, ಗಮಕ ವಾಚನದಿಂದ, ಕಾವ್ಯಗಳನ್ನು ಜನರ ಹತ್ತಿರಕ್ಕೆ ತರುತ್ತಿದ್ದು. ಒಟ್ಟು ಕಾವ್ಯ, ಜನಸಾಮಾನ್ಯರಿಂದ ದೂರವಿರಬಾರದು. ಕನ್ನಡ ಸಾಹಿತ್ಯ ಪರಿಷತ್ತಿನ ಸಮಾನವಾಗಿ ಈಗ ಸುಗಮಸಂಗೀತ ಪರಿಷತ್'ನ್ನು ೧೪ ವರ್ಷಗಳ ಹಿಂದೆ ಸ್ಥಾಪಿಸಲಾಯಿತು. ಅದು ಚೆನ್ನಾಗಿ ಕೆಲಸ ಮಾಡುತ್ತಿದೆ.

ಕಾವ್ಯ ಈಗ ಬದಲಾವಣೆಯ ಹಂತದಲ್ಲಿದೆ. ಹೊಸ ಹೊಸ ಕವಿಗಳು ಹೊಸ ಮನೋಧರ್ಮದಿಂದ ಬರುತ್ತಿದ್ದಾರೆ. ಇದು ಸ್ವಾಗತಾರ್ಹ. ಕಾಯ್ದುನೋಡಬೇಕು

ನೀವು ಗೋಕಾಕ ಚಳವಳಿಯಲ್ಲಿ ಭಾಗವಹಿಸಿ ಕನ್ನಡಕ್ಕಾಗಿ ಜೇಲಿಗೂ ಹೋದವರು. ಕನ್ನಡ ಶಕ್ತಿಕೇಂದ್ರ ಹಾಗೂ ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸಿದವರು. ಇಂದಿನ ಶಿಕ್ಷಣದಲ್ಲಿ ಕನ್ನಡಕ್ಕೆ ಕುತ್ತು ಬಂದಿದೆ. ರಾಜ್ಯದಲ್ಲಿ ಕನ್ನಡ ಶಾಲೆಗಳು ಮುಚ್ಚುತ್ತಿವೆ. ಇಂಗ್ಲೀಷ್ ಆಕ್ರಮಣದಿಂದ ದೇಶ ಭಾಷೆಗಳಿಗೆ ಗಂಡಾಂತರ ಉಂಟಾಗಿದೆ. ಕನ್ನಡಕ್ಕೆ ಪ್ರತಿಷ್ಠೆ ಮನ್ನಣೆ ತಂದಕೊಡುವದು ಹೇಗೆ? ಶಿಕ್ಷಣದಲ್ಲಿ ಕನ್ನಡಕ್ಕೆ ಸ್ಥಾನವಿಲ್ಲದಿದ್ದರೆ ಕನ್ನಡ ಸಾಹಿತ್ಯವನ್ನು ಓದುವವರು ಯಾರು? ಸಾಹಿತಿಗಳು ಏನು ಮಾಡಬೇಕು? ಭಾಷಾ ಸಮಸ್ಯೆಗೆ ಪರಿಹಾರವೇನು?

ಗೋಕಾಕ್ ಚಳವಳಿಯಿಂದಾಗಿ ಕನ್ನಡಕ್ಕೆ ಸಾರ್ವಭೌಮ ಸ್ಥಿತಿ ಒದಗಿದ್ದೇನೂ ಸುಳ್ಳಲ್ಲ. ಕಳೆದ ಒಂದೆರಡು ದಶಕಗಳಿಂದ, ಕನ್ನಡಕ್ಕೆ ಎಲ್ಲ ದೃಷ್ಟಿಯಿಂದಲೂ ಸಿಗಬೇಕಾದ ಮನ್ನಣೆ ಸಿಗುತ್ತಿಲ್ಲ. ನೀವೆಂದಂತೆ ಕನ್ನಡಕ್ಕೆ 'ಕುತ್ತು ಬಂದಿದೆ' ಇಂಗ್ಲಿಷ್ ಮಾಧ್ಯಮಕ್ಕೆ ಪುರಸ್ಕಾರ ದೊರೆಯುತ್ತಿದೆ.

ಇಂಗ್ಲಿಷ್ ಆಕ್ರಮಣದಿಂದ ಪ್ರಾದೇಶಿಕ ಭಾಷೆಗಳಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಸಾಹಿತಿಗಳೆಲ್ಲ ಸಮಾಲೋಚಿಸಿ ಪ್ರತಿಭಟಿಸಬೇಕಾಗಿದೆ.

ಕನ್ನಡ ಓದುಗರೇ ಇಂದು ಕಾಣದಾಗಿದ್ದಾರೆ. ಸಾಹಿತಿಗಳು ಎಷ್ಟು ಪುಸ್ತಕ ಬರೆದರೂ ಪ್ರಯೋಜನವೇನು? ಕನ್ನಡಕ್ಕೆ ಪ್ರತಿಷ್ಠೆಯನ್ನುತಂದುಕೊಡಲು ಕನಿಷ್ಠ ನಾಲ್ಕು ಇಯತ್ತೆಗಳವರೆಗಾದರೂ ಕನ್ನಡ ಶಿಕ್ಷಣ ಮಾಧ್ಯಮವಾಗುವದೊಂದೇ ದಾರಿ. ಕನ್ನಡ ಚಿತ್ರಗಳನ್ನು ನೋಡುವದು, ಕನ್ನಡ ಪತ್ರಿಕೆಗಳನ್ನೋದುವದು, ಕನ್ನಡದಲ್ಲಿಯೇ ಮಾತನಾಡುವದು, ಒಟ್ಟು ಕನ್ನಡ ವಾತಾವರಣ ಸೃಷ್ಟಿಯಾಗಬೇಕು.

ಮನೆಯಲ್ಲಿ 'ಮಮ್ಮಿಡ್ಯಾಡಿ' ಸಂಸ್ಕೃತಿ ಮೊದಲು ತೊಲಗಬೇಕು. ಮೊದಲು ಕನ್ನಡ, ಆಮೇಲೆ ಇಂಗ್ಲಿಷ್ ಮೊದಲಾದ ಭಾಷೆಗಳು ಜಗತ್ತಿನ ಎಲ್ಲ ಶಿಕ್ಷಣವೇತ್ತರು ಮಾತೃಭಾಷೆಯಲ್ಲಿ ಮಾತ್ರ ವಿಷಯ ಚೆನ್ನಾಗಿ ತಿಳಿಯುವೊಂದು ಹೇಳಿದ್ದಾರೆ. ಗಾಂಧೀಜಿಯವರು ಕೂಡ ಅದನ್ನೇ ಹೇಳಿದ್ದಾರೆ. ಆದರೂ ಮೇಲಿಂದ ಹಿಂದಿ ಹೇರುತ್ತಿದ್ದಾರೆ. ಇವುಗಳ ನಡುವೆ ಕನ್ನಡ ಅಪ್ಪಚ್ಚಿಯಾಗಿ ಹೋಗುತ್ತಿದೆ.

ಉನ್ನತ ಶಿಕ್ಷಣದಲ್ಲಿ ಅನೇಕ ಸಮಸ್ಯೆಗಳೂ ಸವಾಲುಗಳೂ ಇವೆ. ಉನ್ನತ ಶಿಕ್ಷಣದಲ್ಲಿ ಮೂಲಭೂತವಾದ ಪರಿವರ್ತನೆ ತಂದು ವರ್ತಮಾನದ ಸಂದರ್ಭದಲ್ಲಿ ಮೌಲ್ಯಾಧಾರಿತ ಶಿಕ್ಷಣವನ್ನಾಗಿ ಮಾಡುವ ಬಗೆ ಹೇಗೆ?

ಪಿಎಚ್.ಡಿ. ಪದವಿ ಪಡೆಯುವದು ಪದೋನ್ನತಿಗೆ ಸಹಾಯ ಮಾಡುವದನ್ನು ಮೊದಲು ನಿಲ್ಲಿಸಬೇಕು.

ಕನ್ನಡದಲ್ಲಿ ಮತ್ತು ಇಂಗ್ಲಿಷಿನಲ್ಲಿ ಹಿಂದೆ ಪಿಎಚ್.ಡಿ. ಪಡೆಯದವರೂ ಸಂಶೋಧನೆಗೆ ಮಾರ್ಗದರ್ಶನ ಮಾಡುತ್ತಿದ್ದರು.

ಮೊದಲು, ಪ್ರಾಥಮಿಕ ಶಿಕ್ಷಣದ ತಳಹದಿ ಗಟ್ಟಿಯಾಗಬೇಕು.

ಮ್ಯಾಟ್ರಿಕ್ ಮುಗಿಸಿದ ಕೂಡಲೆ ಸರಿಯಾದ ತರಬೇತಿ ಕೇಂದ್ರಗಳಲ್ಲಿ ವಿದ್ಯಾರ್ಥಿಗಳನ್ನು ತರಬೇತಿಗೊಳಿಸಿ ಬೇರೆ ಬೇರೆ ಕ್ಷೇತ್ರಗಳಿಗೆ ಪ್ರವೇಶ ದೊರೆಯುವಂತೆ ಯೋಜನೆ ಹಾಕಿಕೊಳ್ಳಬೇಕು.

ಉನ್ನತ ಶಿಕ್ಷಣದ ಆಯ್ಕೆಗೆ ಶ್ರೇಷ್ಠತೆಯನ್ನು ಗಮನಿಸುವದು ಒಳ್ಳೆಯದು.

ಇಂದು ಕವಿತೆ ಬರೆಯುವವರು ಹೆಚ್ಚಾಗಿದ್ದಾರೆ. ಆದರೆ ಓದುಗರು ಕಡಿಮೆಯಾಗುತ್ತಿದ್ದಾರೆ. ಈ ಅಸಮತೋಲನವನ್ನು ಸರಿಪಡಿಸುವದು ಹೇಗೆ? ಸಾಹಿತ್ಯ ಜನಸಮೂಹದಿಂದ ದೂರ ಸರಿಯದಂತೆ ಮಾಡುವ ಬಗೆ ಹೇಗೆ?

ಕಾವ್ಯಕ್ಕೆ ಯಾವಾಗಲೂ ಓದುಗರು ಕಡಿಮೆಯೇ ಇದಕ್ಕೆ ಮೇಲಿಂದ ಮೇಲೆ ಕಾವ್ಯವಾಚನ ಗೋಷ್ಠಿಗಳನ್ನು ಏರ್ಪಡಿಸಿ ಜನಸಾಮಾನ್ಯರಲ್ಲಿ ಕಾವ್ಯಾಭಿರುಚಿಯನ್ನು ಹುಟ್ಟಿಸಬೇಕು. ಕವಿ ಗೋಷ್ಠಿಗಳಲ್ಲಿ, ಕವಿಗಳು ಸರಿಯಾಗಿ ಕಾವ್ಯವಾಚನ ಮಾಡಬೇಕು.

ಪ್ರತಿಯೊಂದು ಸಾಲನ್ನು ಪುನರುಕ್ತಿಗೊಳಿಸುವದು ಬೇಡ. ನಿಧಾನವಾಗಿ ಅರ್ಥವತ್ತಾಗಿ ಓದಬೇಕು.


ನವೋದಯ ಕಾಲದಲ್ಲಿ ಬೇಂದ್ರೆ, ಕುವೆಂಪು, ಮುಗಳಿ, ಜಿ.ಪಿ. ರಾಜರತ್ನಂ - ಇಂಥವರು ಓದುವದನ್ನು ಕೇಳುವದೇ ಒಂದು ಸೊಗಸು ಆಗಿತ್ತು. ಹಿಂದೆ, ಉಪನ್ಯಾಸದ ಕಾರ್ಯಕ್ರಮದ ನಂತರ ಕಾವ್ಯಗಾಯನ ಕಾರ್ಯಕ್ರಮ ಇದ್ದೇ ಇರುತ್ತಿತ್ತು. ಪಿ. ಕಾಳಿಂಗರಾವ್ ಅವರಂಥ ಅಶ್ವತ್ಥರಂಥ, ಅನಂತಸ್ವಾಮಿಯವರಂಥ ಬಾಳಪ್ಪ ಹುಕ್ಕೇರಿ ಅವರಂಥ ಕಾವ್ಯಗಾಯಕರು ಹಾಡಿದ ಮೇಲೆ ಜನತೆಯಲ್ಲಿ ಕಾವ್ಯಾಭಿರುಚಿ ತಾನೇ ತಾನಾಗಿ ತಲೆದೋರುತ್ತಿತ್ತು.

ಪ್ರತಿಯೊಂದು ಪ್ರಾಥಮಿಕ ಶಿಕ್ಷಣ ಶಾಲೆಯಲ್ಲಿ, ಹೈಸ್ಕೂಲಿನಲ್ಲಿ ಗ್ರಂಥಾಲಯಗಳು, ಅಥವಾ ವಾಚನಾಲಯಗಳು ಇದ್ದೇ ಇರಬೇಕು.

ಪುಸ್ತಕಗಳು ಕಣ್ಣೆದುರಿಗಿದ್ದರೆ, ಓದಲು ತಾನೇ ಮನಸ್ಸು ಬರುತ್ತದೆ

'ಟಿ ವಿ ಬಿಡಿ, ಪುಸ್ತಕ ಹಿಡಿ' ಚಳವಳಿ ಪ್ರಾರಂಭವಾಗಬೇಕು

ನಮಸ್ಕಾರ.



ಕನ್ನಡದ ಶ್ರೇಷ್ಠಕವಿ ನಾಡೋಜ ಚೆನ್ನವೀರ ಕಣವಿ ಅವರ ತೊಂಬತ್ನಾಲ್ಕರ ಸಂಭ್ರಮದಲ್ಲಿ ಅವರ ಹೊಸ ಪುಸ್ತಕ 'ಅಭಿನಂದನ' ಶೀರ್ಷಿಕೆಯ ಗದ್ಯಬರಹಗಳ ಸಂಚಯ ಪ್ರಕಟವಾಗುತ್ತಿರುವುದು ಅವರ ಸಾಹಿತ್ಯದ ಜೀವಂತಗತಿಯ ಪ್ರತೀಕವಾಗಿದೆ. ಅರವತ್ತೆರಡು ಲೇಖನಗಳ ಈ ಅಭಿನಂದನ ಕೃತಿಯಲ್ಲಿ ಕನ್ನಡ ಸಾಂಸ್ಕೃತಿಕಲೋಕದ ಸಾಧಕರ ಗೌರವಗ್ರಂಥಗಳಿಗೆ ಬರೆದ ಲೇಖನಗಳು, ಮುನ್ನುಡಿ ಬೆನ್ನುಡಿಗಳು, ಕೃತಿಚಿಂತನ, ಸ್ವತಂತ್ರ ಲೇಖನಗಳು, ಭಾಷಣ, ಸಂದರ್ಶನಗಳೂ ಸೇರಿವೆ, ಚೆನ್ನವೀರ ಕಣವಿಯವರು ಸಮಕಾಲೀನ ಸಾಹಿತ್ಯ, ಸಾಹಿತಿಗಳಿಗೆ ನಿರಂತರ ಉತ್ತೇಜನ, ಮಾರ್ಗದರ್ಶನ ಮಾಡುತ್ತಾ ಬಂದ ಹಿರಿಯಕವಿಯಾಗಿದ್ದಾರೆ. ಅವರು ಪ್ರತಿಯೊಬ್ಬರಲ್ಲೂ ಗುಣಾತ್ಮಕ ಮೌಲ್ಯಗಳನ್ನು ಪ್ರಧಾನವಾಗಿ ಗುರುತಿಸುತ್ತಾರೆ, ದೋಷ ದೌರ್ಬಲ್ಯಗಳನ್ನು ನಿರ್ಲಕ್ಷಿಸಿ ಅಂತರಂಗದ ಸಂಪನ್ನತೆಯನ್ನು ಪರಿಭಾವಿಸುತ್ತಾರೆ, ಮೃದುವಚನ ಮೂಲೋಕ ಗೆಲ್ಲುವದೆಂಬ ವಿಶಿಷ್ಟ ಜೀವನದೃಷ್ಟಿ ಕಣವಿಯವರ ಸಾಹಿತ್ಯದಲ್ಲಿಯೂ ಅಂತಸ್ಥವಾಗಿದೆ. ಕಣವಿಯವರ ಸದ್ಭಾವ, ಸದಭಿರುಚಿ, ಸಮತೋಲನ, ಸಹೃದಯತೆ, ಸ್ನೇಹಪ್ರೀತಿಗಳು ಈ ಗ್ರಂಥದ ಲೇಖನಗಳಲ್ಲಿ ಹೂವಾಗಿ ಅರಳಿವೆ. ಅವರ ಭಾಷಣ ಸಂದರ್ಶನಗಳಲ್ಲೂ ಕವಿಕಾವ್ಯದೃಷ್ಟಿ ಮತ್ತು ವಿಶಿಷ್ಟ ಅರಿವಿನ ಸ್ಪಂದನವಿದೆ. ವಿಶ್ವಾತ್ಮಕ ಭಾವನೆಯ ಪ್ರಸಾರವನ್ನು ನಿರಂತರವಾಗಿ ಮಾಡುತ್ತಾ ಬಂದ ಕಣವಿಯವರ ನಿರ್ವ್ಯಾಜ ಪ್ರೀತಿ, ಕನ್ನಡದ ಹೊಸ ಪ್ರತಿಭೆಗಳನ್ನು ಹುರುದುಂಬಿಸುವ ಅಪರಂಜಿ ವ್ಯಕ್ತಿತ್ವದ ದರ್ಶನ ಈ 'ಅಭಿನಂದನ' ಗ್ರಂಥದ ಲೇಖನಗಳಲ್ಲಿದೆ.

– ಡಾ.ಜಿ.ಎಂ. ಹೆಗಡೆ

ಸಂವಹನ
೧೩/೧ಎ, ಈವನಿಂಗ್ ಬಜಾರ್ ಹಿಂಭಾಗ
ಶಿವರಾಂಪೇಟೆ, ಮೈಸೂರು-೫೭೦೦೦೧